# ಜಾನಪದದ ತುಂಬುಹೊಳೆ

ಸಂಪಾದಕರು
ಪ್ರೊ. ಕಾಳೇಗೌಡ ನಾಗವಾರ
ಜಿ ವಿ ಆನಂದಮೂರ್ತಿ

# ಜಾನಪದದ ತುಂಬು ಹೊಳೆ



ಸಹಸ್ರಮಾನ ಜಾನಪದ : ೮

# ಜಾನಪದದ ತುಂಬುಹೊಳೆ

ಸಂಪಾದಕರು

ಪ್ರೊ. ಕಾಳೇಗೌಡ ನಾಗವಾರ

ಜಿ ವಿ ಆನಂದಮೂರ್ತಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಕನ್ನಡ ಭವನ, ಜೆ ಸಿ ರಸ್ತೆ, ಬೆಂಗಳೂರು -೫೬೦ ೦೦೨




*JANAPADADA THUMBUHOLE*

*Research notes of Folklorists of Karnataka*

*Edited by*

***Prof. Kalegowda Nagavara***

***G.V. Ananda Murthy***

*Published by*

***Registrar***

*Karnataka Janapada and Yakshagana Academy*

*Kannada Bhavana, J.C. Road, Bangalore-560 002.*

*Ph: 080-2215509*

*Pages : XVIII+174* ***Rs : 90/-***



© *Karnataka Janapada and Yakshagana Academy*



ಸಂಪಾದಕರು : ಪ್ರೊ. ಕಾಳೇಗೌಡ ನಾಗವಾರ, ಜಿ ವಿ ಆನಂದಮೂರ್ತಿ

ರೇಖಾ ಚಿತ್ರ ಕೃಪೆ : ಕೆ ಕೆ ಹೆಬ್ಬಾರ್, ಕೆ ಕೆ ಮಕಾಳಿ

ಮುಖಪುಟ : ಎಂ ಎಸ್ ಮೂರ್ತಿ

ಪ್ರಕಾಶಕರು

ರಿಜಿಸ್ಟ್ರಾರ್

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

ಮುದ್ರಣ

ಪ್ರಿಂಟ್ ಸ್ಮಾರ್ಟ್

ಬೆಂಗಳೂರು


## ನಮ್ಮ ಸುತ್ತಣ ಅಸಲೀ ಸೂಕ್ಷ್ಮಗಳು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ನಾಡಿನ ಎಲ್ಲ ಬಗೆಯ ಜನಪದ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ತುಂಬು ಹಂಬಲವನ್ನುಳ್ಳ ಸಾಂಸ್ಕೃತಿಕ ಸಂಸ್ಥೆಯಾಗಿದೆ. ಪ್ರಕೃತಿಯ ಕಂದಮ್ಮಗಳಾದ ಹಳ್ಳಿಗಾಡಿನ ಜನತೆಯು ಹೃದಯವಂತಿಕೆಯಿಂದ ರೂಪಿಸಿರುವ ಈ ಜಗತ್ತು ಅತ್ಯಂತ ಮಹತ್ವಪೂರ್ಣವೂ, ವೈವಿಧ್ಯಮಯವೂ ಆಗಿರುವ ಸೂಕ್ಷ್ಮತಮ ಸಾಂಸ್ಕೃತಿಕ ಸಂಪತ್ತನ್ನು ಹೊಂದಿದೆ. ನೂರಾರು ಪ್ರದರ್ಶನ ಕಲೆಗಳು, ಚೇತೋಹಾರಿಯಾದ ದೃಶ್ಯಕಲೆಗಳು, ವಸ್ತ್ರವಿನ್ಯಾಸ, ಅಪೂರ್ವ ಗುಡಿಕೈಗಾರಿಕೆಗಳು, ದಟ್ಟ ಅರಣ್ಯದ ನಡುವೆ ಇರುವ ಗಿರಿಜನರ ಬದುಕು ಹಾಗೂ ಜೀವವೈವಿಧ್ಯತೆಯಿಂದ ನಿತ್ಯಸಮೃದ್ಧವಾಗಿರುವ ನಮ್ಮ ಜನಪದ ಸಂಸ್ಕೃತಿಯ ಸೃಜನಶೀಲತೆಗೆ ವಿಚಿತ್ರತರ ಆಧುನಿಕತೆಯಿಂದಾಗಿ ಧಕ್ಕೆಯುಂಟಾಗತೊಡಗಿದೆ.

ಈ ಸಂದಿಗ್ಧ ಕಾಲಘಟ್ಟದಲ್ಲಿ ದುಡಿಮೆಗಾರರ ಲೋಕದ ದಟ್ಟ ಜೀವನಪ್ರೀತಿಯ ತಿರುಳಾಗಿರುವ ಚೈತನ್ಯಪೂರ್ಣ ಅಂಶಗಳಿಗಾಗಿ ಹಾರೈಸಿ ಅರ್ಥವತ್ತಾದುದನ್ನು ಕಟ್ಟಕ್ಕರೆಯಿಂದ ನಾವೆಲ್ಲ ಉಳಿಸಿಕೊಂಡು ಜೀವಂತವಾಗಿ ಬೆಳೆಯಬೇಕಾಗಿದೆ. ಈ ಬಗೆಯ ಆರೋಗ್ಯಕರ ಸಾಂಸ್ಕೃತಿಕ ವಾತಾವರಣದ ಹೆಮ್ಮೆಯ ಸಂಗಾತಿಗಳಾಗಿ ಪರಸ್ಪರ ದುಡಿಯಬೇಕೆಂಬ ಸಾಮೂಹಿಕ ಹೊಣೆಗಾರಿಕೆಯು ನಮ್ಮೆಲ್ಲರ ಕಣ್ಣಮುಂದಿನ ಆದರ್ಶವಾಗಬೇಕಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿಯು ಕೇವಲ ಕನ್ನಡ ಜಾನಪದಕ್ಕಷ್ಟೇ ಸೀಮಿತವಾದುದಲ್ಲ ; ಹಿಂದಿನಿಂದಲೂ

ಕನ್ನಡ ನೆಲದ ಅವಿಭಾಜ್ಯ ಅಂಗವಾಗಿಯೇ ನೆಲೆಗೊಂಡಿರುವ ಇಲ್ಲಿನ ತುಳು, ಕೊಡವ, ಕೊಂಕಣಿ, ಉರ್ದು, ಲಂಬಾಣಿ ಮುಂತಾದ ಬಹುಭಾಷಿಕ ಸಮುದಾಯದ ಸಾಂಸ್ಕೃತಿಕ ವಲಯದಲ್ಲಿನ ಸೂಕ್ಷ್ಮಗಳು ಹಾಗೂ ಪರಸ್ಪರ ಕೊಳು-ಕೊಡುಗೆಗಳನ್ನು ಕುರಿತು ಅಧ್ಯಯನ ನಡೆಸುವುದು ನಮ್ಮ ಪ್ರಮುಖ ಕರ್ತವ್ಯವಾಗಿದೆ.

ಜನತೆಯ ಅನುಭವದ ಸಂಪತ್ತಿನ ಹಿನ್ನೆಲೆಯಲ್ಲಿ ರೂಪುಗೊಂಡಿರುವ ಈ ಜ್ಞಾನನಿಧಿಯಲ್ಲಿ ಒಂದು ನಾಡಿನ ಮೌಲ್ಯ, ವಿವೇಕ ಮತ್ತು ಆದರ್ಶಗಳು ಅಡಗಿರುತ್ತವೆ. ಆದರೆ, ಆಧುನಿಕತೆಯ ಅತಿಯಾದ ಧಾವಂತದಲ್ಲಿರುವ ನಮ್ಮಿಂದಾಗಿ, ಪಂಚಭೂತಗಳ ತಾಯ್ತನದ ಮಡಿಲಾಗಿರುವ ಜನಪದ ಸಂಸ್ಕೃತಿಯು ತತ್ತರಿಸತೊಡಗಿದೆ. ವಿಸ್ಮೃತಿಗೆ ಒಳಗಾಗುತ್ತಿರುವ ಸಮುದಾಯಕ್ಕೆ ಸ್ಥಳೀಯ ಜ್ಞಾನಸಂಪತ್ತಿನ ಮಹತ್ವವನ್ನು ಮನದಟ್ಟು ಮಾಡಬೇಕಾದ ಅವಶ್ಯಕತೆಯು ಇದೀಗ ಎಂದಿಗಿಂತ ಹೆಚ್ಚಾಗಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಮತ್ತು ವಿವೇಚನೆಯ ದಾರಿಯಲ್ಲಿ ಒಂದುನೂರು ವರ್ಷಗಳನ್ನು ಸವೆಸಿರುವ ನಾವು, ಒಂದು ನಿರ್ಣಾಯಕ ಘಟ್ಟಕ್ಕೆ ಬಂದು ತಲುಪಿದ್ದೇವೆ. ಜಾಗತೀಕರಣ, ಕಂಪ್ಯೂಟರ್ ನಾಗರೀಕತೆ ಹಾಗು ಹುಸಿಮೌಲ್ಯಗಳನ್ನು ಎಡಬಿಡದೆ ಬಿತ್ತುತ್ತಿರುವ ಮಾಧ್ಯಮಗಳ ತೀವ್ರತರವಾದ ದಾಳಿಯ ನಡುವೆ ಕನ್ನಡವೂ ಸೇರಿದಂತೆ ಜಗತ್ತಿನ ಎಲ್ಲ ದೇಶೀ ಸಂಸ್ಕೃತಿಯ ಅಕ್ಕರೆಯ ಕುರುಹಾದ ಸಹಜ ಮೌಲ್ಯಗಳು ನುಚ್ಚು ನೂರಾಗುತ್ತಿರುವುದನ್ನು ನಮ್ಮ ಕಣ್ಣೆದುರೇ ಕಾಣುತ್ತಿದ್ದೇವೆ. ಇಂಥ ಹೊತ್ತಿನಲ್ಲಿ ಸಮುದಾಯದ ಹಿತಕ್ಕಿಂತ, 'ಅಹಂ' ಕೇಂದ್ರಿತವೂ, ವೈವಿಧ್ಯತೆಗೆ ಮಾರಕವೂ ಆಗಿರುವ ಏಕರೂಪ ಸಂಸ್ಕೃತಿಯ ಹಲ್ಲೆಯಿಂದ ನಾವು ಪಾರಾಗುವ ದಾರಿಗಳನ್ನು ನಾವೇ ಹಠದಿಂದ ಹುಡುಕಿಕೊಳ್ಳಬೇಕಾಗಿದೆ.

ಭಾರತದಲ್ಲಿರುವ ಅಲೆಮಾರಿ, ಬುಡಕಟ್ಟು ಜನಾಂಗಗಳನ್ನು ಒಳಗೊಂಡ ಅನಕ್ಷರಸ್ಥ ಲೋಕದ ಚೈತನ್ಯವಾದ ಜನಪದ ಸಂಸ್ಕೃತಿಯು, ನೂರಾರು ವರ್ಷಗಳಿಂದ ವೈದಿಕ ಸಂಸ್ಕೃತಿಯ ನಿರಂತರ ದಾಳಿಯಿಂದ ಪಾರಾಗುವುದರಲ್ಲಿ ನಿಸ್ಸೀಮತನವನ್ನೇ ತೋರಿದೆ. ಈ ಸಂಸ್ಕೃತಿಯಲ್ಲಿ ಇಂದಿಗೂ ಬಳಕೆಯಲ್ಲಿರುವ ವಿವಿಧ ಜಾನಪದೀಯ ಆಚರಣೆಗಳು, ನಂಬಿಕೆಗಳು ಹಾಗು ಮಹಾಕಾವ್ಯ - ಕಾವ್ಯ-ಗೀತೆ - ಕಥೆ - ಗಾದೆ - ಒಗಟುಗಳು ಮುಂತಾದ ಅಭಿವ್ಯಕ್ತಿ ಪ್ರಕಾರಗಳು ವೈದಿಕ ನಂಬಿಕೆ - ಆಚರಣೆ - ಪುರಾಣಗಳಿಗಿಂತಲೂ ಸಮೃದ್ಧವೂ, ಅನನ್ಯವೂ ಆಗಿರುವ ಲೋಕವನ್ನೇ ಒಳಗೊಂಡಿವೆ. ಆಳದಲ್ಲಿ ದೇಶೀ ಸಂಸ್ಕೃತಿಯ ಎಲ್ಲ ಬಗೆಯ ಉದಾತ್ತ ಮೌಲ್ಯಗಳನ್ನು ಕಾಪಾಡಿಕೊಂಡು ಬಂದಿವೆ.

ಹೀಗಿದ್ದೂ ನಮ್ಮ ಪರಂಪರೆಯಲ್ಲಿ ಜನಸಂಸ್ಕೃತಿಗಳು, ಕಾಲಕಾಲಕ್ಕೆ ಈ ಬಗೆಯಾದ ಸಾಂಸ್ಕೃತಿಕ ಯಜಮಾನತ್ವದ ದಾಳಿಯಿಂದ ಪಾರಾಗಲು ಕಂಡುಕೊಂಡ ಸಹಜ ಹೊರದಾರಿಗಳಾಗಬಲ್ಲವೇ! ಇಂದೂ ನಮಗೆ ಮಾದರಿಯಾಗಬಲ್ಲವೇ ? ಪರಸ್ಪರ ಚರ್ಚೆ, ಆಲೋಚನೆ - ಪುನರಾಲೋಚನೆಗಳ ಮೂಲಕ ಇದಕ್ಕೆಲ್ಲ ಉತ್ತರವನ್ನು ಕಂಡುಕೊಳ್ಳಬೇಕಾದ ಸಾಮೂಹಿಕ ಹೊಣೆಗಾರಿಕೆಯು ನಮ್ಮೆಲ್ಲರ ಮೇಲಿದೆ. ಈ ಮೂಲಕ ಮಾನವನ ಸೃಜನಶೀಲ ಪ್ರತಿಭೆಗೆ ಧಕ್ಕೆಬಾರದ, ನಮ್ಮದೇ ಆದ ಸ್ವಾವಲಂಬೀ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ತಂತ್ರಜ್ಞಾನ ಹಾಗು ಪರಿಸರ ಸಂಬಂಧಿಯಾದ ಯೋಜನೆಗಳನ್ನು ರೂಪಿಸಿಕೊಳ್ಳುವ ತವಕಗಳು ನಮ್ಮ ಸಮುದಾಯದಲ್ಲಿ ಅಂಕುರಿಸಬೇಕಾಗಿದೆ.

ಈ ಬಗೆಯ ನಮ್ಮ ಆಲೋಚನೆಗಳ ಹಿನ್ನೆಲೆಯಲ್ಲಿ ಜಾನಪದ ಅಧ್ಯಯನವು ತನ್ನ ಮಡಿವಂತಿಕೆಯ ಒಣ ಚೌಕಟ್ಟುಗಳನ್ನು ಸಡಿಲಗೊಳಿಸಿಕೊಂಡು, ಮನುಕುಲವನ್ನು ಅರ್ಥಪೂರ್ಣವಾದ ಹೊಸ ವ್ಯವಸ್ಥೆಯ ಕಡೆಗೆ ಸಾಮೂಹಿಕವಾಗಿ ಕೊಂಡೊಯ್ಯುವ ಅಧ್ಯಯನಕ್ಕಾಗಿ ತನ್ನನ್ನು ವಿಸ್ತರಿಸಿಕೊಳ್ಳಬೇಕಾಗಿದೆ. ಕರ್ನಾಟಕ ಜಾನಪದಕ್ಕೆ ಸಂಬಂಧಪಟ್ಟ ಅಧ್ಯಯನವು ಸ್ವಾತಂತ್ರ್ಯ ಪೂರ್ವದಿಂದಲೇ ನಮ್ಮಲ್ಲಿ ನಡೆದಿದೆ. ಹಲಸಂಗಿ ಗೆಳೆಯರು, ಅರ್ಚಕ

ರಂಗಸ್ವಾಮಿ, ಗದ್ದಗೀಮಠ, ಫ್ಲೀಟ್ ಮುಂತಾದವರ ಈ ಬಗೆಗಿನ ದುಡಿಮೆ ಬೆಲೆಯುಳ್ಳದ್ದು. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಗ್ರಾಮೀಣ ಪ್ರದೇಶದಿಂದ ಬಂದ ಅನೇಕ ಪ್ರತಿಭಾವಂತ ಸಾಹಿತಿ - ಸಂಶೋಧಕ - ಆಸಕ್ತರ ತಂಡಗಳು ಜಾನಪದದ ಕನ್ನೆನೆಲವನ್ನು ಹೊಕ್ಕು ಸಂಗ್ರಹ ಮತ್ತು ಅಧ್ಯಯನಕ್ಕೆ ತೊಡಗಿದ್ದು ನಮ್ಮ ಕಣ್ಣಮುಂದಿನ ಇತಿಹಾಸದ ಭಾಗವೇ ಆಗಿದೆ.

ಸತ್ಯ ಮತ್ತು ಸೌಂದರ್ಯಕ್ಕಾಗಿ ನಿರಂತರವಾಗಿ ಹಾರೈಸಿದ ಮತ್ತು ಆ ಮೂಲಕ ತಮ್ಮ ಸಮಸ್ತ ಬದುಕನ್ನೇ ಇನ್ನಿಲ್ಲದಷ್ಟು ಆನಂದಮಯವನ್ನಾಗಿಸಿಕೊಂಡ ನಮ್ಮ ಜನಪದ ಕಲಾವಿದರು, ವಾಸ್ತವವಾಗಿ ಗಂಧರ್ವಲೋಕದ ಗೆಣೆಕಾರರಾಗಿದ್ದಾರೆ. ತಾಯಿಯ ಮಡಿಲಿನ ಅಕ್ಕರೆ ನೀಡಿರುವ ಇವರ ಸುತ್ತಣ ಜಗತ್ತು ಗಂಧವತಿ ಪೃಥ್ವಿಯ ಸಕಲ ಸಲ್ಲಕ್ಷಣಗಳನ್ನು ಒಳಗೊಂಡಿರುವ ಪಂಚಭೂತಗಳ ವಂಚನೆರಹಿತ ಗುಣಧರ್ಮದ ಆಗರವಾಗಿದೆ. ನೂರಾರು ವರ್ಷಗಳ ಹಿಂದಿನಿಂದಲೂ ಬಾಯಿಂದ ಬಾಯಿಗೆ ಹರಿದು ಬರುತ್ತಿರುವ ಈ ಕಲಾವಿದರ ಸಾಹಿತ್ಯವು ನಮ್ಮ ಸುತ್ತಲೂ ಪರಿಶುದ್ಧ ನೀಲಾಕಾಶದಂತೆ ವ್ಯಾಪಿಸಿರುವುದು ಆನಂದದ ಸಂಗತಿಯಾಗಿದೆ.

ಮಾನವ ಬದುಕಿನ ವಿವಿಧ ಕಾಲಘಟ್ಟಗಳಲ್ಲಿ ರೂಪುಗೊಂಡ ಪರಂಪರಾನುಗತವಾದ ಜ್ಞಾನ, ವಿಸ್ತಾರವಾದ ಅನುಭವದ ಒಡಲಿನಿಂದ ಮೂಡಿಬಂದ ಸೂಕ್ಷ್ಮಾತಿಸೂಕ್ಷ್ಮ ಚಿಂತನೆ, ಬದುಕಿನಂಗಣದಲ್ಲಿ ಚಿರಂತನ ಮೌಲ್ಯಗಳ ತಡಕಾಟ ಹಾಗು ಆಕಾಶದ ಕೆಳಗಿನ ಎಲ್ಲ ಬಗೆಯ ವೈವಿಧ್ಯತೆಯ ಅಪರೂಪದ ಸಂಗತಿಗಳಿಗೂ ಕಾಲಕಾಲಕ್ಕೆ ಅಭಿವ್ಯಕ್ತಿ ನೀಡುತ್ತಾ ಬಂದಿರುವ ಅಪೂರ್ವ ಕಥೆ-ಕಾವ್ಯರೂಪಗಳು ಹಾಗು ಕನ್ನಡ ಜಾನಪದ ಅಧ್ಯಯನವು ಕಳೆದ ಶತಮಾನದಿಂದ ಇಂದಿನವರೆಗೂ ನಡೆದುಬಂದ ದಾರಿಯಲ್ಲಿನ ಹಲವಾರು ರೀತಿಯ ವೈಶಿಷ್ಟ್ಯಗಳ ದರ್ಶನವು ಈ **ಜಾನಪದದ ತುಂಬುಹೊಳೆ** ಹೊತ್ತಗೆಯ ಮೂಲಕ ನಮಗೆ ಸ್ಪಷ್ಟವಾಗಿ ದೊರೆಯುತ್ತದೆ.

ಜಾನಪದದ ಬಗೆಗಿನ ಆಸಕ್ತರಿಗೆ, ವಿದ್ಯಾರ್ಥಿಗಳಿಗೆ ಹಾಗು ಈ ವೈವಿಧ್ಯಮಯ ಲೋಕಕ್ಕೆ ಅಡಿಯಿಡುವ ಹೊಸ ತಲೆಮಾರಿನ ಮನಸ್ಸುಗಳಿಗೆ ಒಂದು ಪ್ರವೇಶಿಕೆಯಂತಿರಲಿ, ಎಂಬ ಹಂಬಲದಿಂದ **ಜಾನಪದದ ತುಂಬುಹೊಳೆ** ಗ್ರಂಥವನ್ನು ಸಿದ್ಧಪಡಿಸಲಾಗಿದೆ. ಇದರ ಪ್ರಯೋಜನ ಕನ್ನಡಿಗರೆಲ್ಲರಿಗೂ ಆಗಲೆಂದು ನಾನು ತುಂಬು ಹೃದಯದಿಂದ ಹಾರೈಸುತ್ತೇನೆ.

ದೀಪಾವಳಿಯ ಶುಭಾಶಯಗಳೊಡನೆ,

**ಪ್ರೊ. ಕಾಳೇಗೌಡ ನಾಗವಾರ**
ಅಧ್ಯಕ್ಷರು
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
೨೮-೧೦-೨೦೦೦

## ಹೊಳೆಸಾಲಿನ ತಂಪು ನೆರಳು....

ಸರಿಸುಮಾರು ಒಂದುನೂರು ವರ್ಷಗಳ ಸುಧೀರ್ಘ ಅವಧಿಯಲ್ಲಿ ಸಾಗಿಬಂದಿರುವ ನಮ್ಮ ಕನ್ನಡ ಜನಪದ ಸಾಹಿತ್ಯದ ಕ್ಷೇತ್ರಕಾರ್ಯಸಂಗ್ರಹ, ಅಧ್ಯಯನಗಳು ಹಲವಾರು ಹಂತಗಳನ್ನು ಕಂಡಿವೆ. ಹಾಗೆಯೇ ವಿವಿಧ ಜ್ಞಾನಶಿಸ್ತುಗಳನ್ನು ತನ್ನ ಅಧ್ಯಯನಕ್ಕೆ ಒಳಪಡಿಸಿಕೊಳ್ಳುತ್ತಾ, ಸಾಹಿತ್ಯ ಮತ್ತು ಸಂಸ್ಕೃತಿಯ ಚರ್ಚೆಯಲ್ಲಿ ಮುನ್ನೆಲೆಗೆ ಬರುತ್ತಿರುವುದು ಕನ್ನಡ ಜನಪದ ಸಂಸ್ಕೃತಿಯ ಅನನ್ಯತೆಯೇ ಆಗಿದೆ.

ನವೋದಯ ಕಾಲಘಟ್ಟದಿಂದ ಮೊದಲುಗೊಂಡು ಇಂದಿನವರೆಗೂ ವಿವಿಧ ರೂಪ-ಧ್ವನಿಗಳನ್ನು ಪಡೆದುಕೊಂಡ ಕನ್ನಡದ ಸೃಜನಶೀಲ ಸಾಹಿತ್ಯ, ಹಿಂದೆಂದೂ ಇಲ್ಲದಷ್ಟು ಸಾಂಸ್ಕೃತಿಕ ಸಮೃದ್ಧಿಯನ್ನು ಪಡೆದುಕೊಂಡಿತು. ಹೊಸ ಆಶಯಗಳ ಸಾಹಿತ್ಯಕ ಚಳವಳಿಗಳಿಗೆ ಒಟ್ಟು ಸಮಾಜ ವ್ಯವಸ್ಥೆಯ ಅಲಕ್ಷಿತ ಜನವರ್ಗಗಳು ತಮ್ಮ ಅಪಾರವಾದ ಅನುಭವಗಳೊಂದಿಗೆ ಬಂದು ಸಾಹಿತ್ಯಕ್ಕೆ ಹೊಸ ನುಡಿಗಟ್ಟನ್ನು ತಂದುಕೊಟ್ಟಿರುವುದು ಕಣ್ಣಮುಂದಿನ ಸತ್ಯವೇ ಆಗಿದೆ.

ಹೆಚ್ಚುಕಡಿಮೆ ಕನ್ನಡ ನವೋದಯದ ಕಾಲಘಟ್ಟದಲ್ಲೇ ಆರಂಭಗೊಂಡ ಜನಪದ ಸಾಹಿತ್ಯದ ಅಧ್ಯಯನಗಳು ಈ ಬಗೆಯ ವೈವಿಧ್ಯತೆ ಹಾಗು ಅಧ್ಯಯನದ ಸ್ವರೂಪದಲ್ಲಿ ಮಹತ್ವದ ತಿರುವುಗಳನ್ನು ಪಡೆದುಕೊಳ್ಳಲಾಗಲಿಲ್ಲ ಎಂಬುದು ಕಟುಸತ್ಯವೂ ಆಗಿದೆ. ಇದಕ್ಕೆ ಕಾರಣ ನವೋದಯ ಕಾಲಘಟ್ಟದಿಂದ ಮೊದಲುಗೊಂಡು ಎಪ್ಪತ್ತರ ದಶಕದವರೆಗೂ ನಮ್ಮ ಸೃಜನಶೀಲ ಲೇಖಕರೇ ಜಾನಪದದ ಭಾಷಿಕ ಅಭಿವ್ಯಕ್ತಿಗಳ ಸೌಂದರ್ಯ - ಭಾಷೆಯ ಬೆಡಗು ಹಾಗೂ ಚೆಲುವಿಕೆಗೆ ಮಾರುಹೋಗಿ ಸಂಗ್ರಹ ಕಾರ್ಯದಲ್ಲಿ ತೊಡಗಿದ್ದು, ಇವರಿಗೆ ಜನಪದ ಸಾಹಿತ್ಯದ ಸಂಗ್ರಹ - ಅಧ್ಯಯನಕ್ಕೆ ಬೇಕಾಗುವಷ್ಟರ ಮಟ್ಟಿನ ಆದ್ಯತೆಯ ಪ್ರಮಾಣ ಕಡಿಮೆ ಇದ್ದದ್ದೂ ಕಾರಣ ಇರಬಹುದು ! ಆದರೂ ಜನಪದ ಸಾಹಿತ್ಯದ ಬಗೆಗೆ ಅವರಿಗಿದ್ದ ಅಕ್ಕರೆ, ಒಳನೋಟಗಳು, ಕಾಳಜಿಗಳು ಇಂದಿಗೂ ಬೆಲೆಯುಳ್ಳದ್ದಾಗಿವೆ. ಹಾಗೆ ನೋಡಿದರೆ ಕನ್ನಡದಲ್ಲಿ ಇದುವರೆಗೂ ನಡೆದಿರುವ ಜಾನಪದವನ್ನು ಕುರಿತಾದ ಅಧ್ಯಯನವು, ಭಾರತದ ಯಾವ ಭಾಷೆಯಲ್ಲೂ ನಡೆದಿಲ್ಲ ಎಂಬುದನ್ನು ನಮ್ಮ ವಿದ್ವಾಂಸರು ಒಮ್ಮತದಿಂದ ಒಪ್ಪುತ್ತಾರೆ.

ಈ ಬಗೆಯ ತೀವ್ರಾಸಕ್ತಿಯ ಜಾನಪದದ ಮಹಾಯಾನವು ಸಮೃದ್ಧಿಯನ್ನು ಕಂಡದ್ದು ಜೀಶಂಪ ಅವರು ಸಂಗ್ರಹಕಾರ್ಯಕ್ಕೆ ತೊಡಗಿದ ಮೇಲೆಯೇ ಆಗಿದೆ. ಉಳಿದ ಮಹನೀಯರ ಸಂಗ್ರಹ ಕಾರ್ಯವನ್ನು ಗೌರವದಿಂದ ನೆನೆಯುತ್ತಲೇ ಈ ಮಾತನ್ನು ಹೇಳಬೇಕಾಗಿದೆ. ಅದೇ ಹೊತ್ತಿಗೆ ಮೈಸೂರು ವಿಶ್ವವಿದ್ಯಾಲಯವು ಜಾನಪದ ವಿಭಾಗವನ್ನು ಆರಂಭಿಸಿದ ನಂತರದಲ್ಲಿ ಜಾನಪದ ಅಧ್ಯಯನ ಸ್ವಲ್ಪಮಟ್ಟಿಗೆ ತೀವ್ರತೆಯನ್ನು ಪಡೆಯಿತು.

ಆನಂತರ ಎಂಬತ್ತರ ದಶಕದಿಂದೀಚೆಗೆ ಗ್ರಾಮೀಣ ಭಾಗಗಳಿಂದ ಬಂದ ಹೊಸ ತಲೆಮಾರಿನ ತರುಣರ ಪಡೆಯು, ಜಾನಪದ ಅಧ್ಯಯನಕ್ಕೆ ಹೊಸಬಗೆಯ ಮೊನಚನ್ನು ತಂದುಕೊಟ್ಟಿತು. ಇದೆಲ್ಲದರ ನಡುವೆ ಕೂಡ, ವೈವಿಧ್ಯಮಯ ಜನಪದ ಸಾಹಿತ್ಯದ ರೂಪಗಳು ಕಣ್ಣೆದುರಿಗಿದ್ದರೂ ; ನಮ್ಮ ನೆಲದ್ದೇ ಆದ ದೇಶೀ ಅಧ್ಯಯನ ಮಾದರಿಗಳು ಹಾಗು ಸೈದ್ಧಾಂತಿಕ ವಿಚಾರಗಳನ್ನು ರೂಪಿಸಿಕೊಳ್ಳುವಲ್ಲಿ ನಮ್ಮ ದೊಡ್ಡ ಪ್ರಯತ್ನಗಳು ನಡೆದಿಲ್ಲ. ಈ ಬಗೆಯ ಕೊರತೆಗಳ ನಡುವೆಯೂ ಕನ್ನಡ ಜಾನಪದ ಅಧ್ಯಯನ ಜೀಶಂಪ ಅವರ ಬರಹಗಳ ಮೂಲಕ ಒಂದು ನಿರಾಕಾರ ಸ್ವರೂಪದ ದೇಶೀ ಮಾದರಿಗಳತ್ತ ತುಯ್ಯುತ್ತಿರುವುದನ್ನು, ಅವರ ಒಟ್ಟು ಅಧ್ಯಯನಗಳು ಸ್ಪಷ್ಟಪಡಿಸುತ್ತವೆ. ಹೀಗೆ ಜೀಶಂಪ ಅವರ ಬರಹಗಳಲ್ಲಿ ಬೀಜ ರೂಪದಲ್ಲಿ ಕಾಣಿಸಿಕೊಂಡಿರುವ ದೇಶೀ ಅಧ್ಯಯನದ ಮಾದರಿಗಳಿಗೆ ಇನ್ನಷ್ಟು ಆಕಾರ ನೀಡಿ, ವಿಸ್ತರಿಸುವ ಹೊಣೆಗಾರಿಕೆಯು ನಮ್ಮೆಲ್ಲರ ಎದುರಿಗಿದೆ.

ಈವರೆಗಿನ ನಮ್ಮ ಜನಪದ ಸಾಹಿತ್ಯ ಸಂಗ್ರಹದ ಸ್ವರೂಪವನ್ನು ನೋಡಿದಾಗ ಕೆಲವು ವೈಶಿಷ್ಟ್ಯಗಳನ್ನು ಗುರುತಿಸಬಹುದಾಗಿದೆ :

(i) ಕಣ್ಮರೆಯಾಗುತ್ತಿರುವ ಜನಪದ ಸಂಸ್ಕೃತಿಯ ಎಲ್ಲ ಬಗೆಯ ಸಾಹಿತ್ಯ ಹಾಗು ಗ್ರಾಮೀಣ ಸಮಾಜದಲ್ಲಿ ಪರಂಪರೆಯಿಂದಲೂ ಬಳಕೆಯಲ್ಲಿದ್ದು ಭೌತಿಕ ವಸ್ತುಗಳನ್ನು ಆದಷ್ಟೂ ಬೇಗ ಸಂಗ್ರಹಿಸಬೇಕೆನ್ನುವ ತೀವ್ರ ತುಡಿತ.

(ii) ಜನಪದ ಸಾಹಿತ್ಯದಲ್ಲಿರುವ ಸಾಹಿತ್ಯಕ ಸೌಂದರ್ಯ ಗುಣಗಳಿಗೆ ಮನತೆತ್ತು ಮೂಡಿರುವ ರೂಪನಿಷ್ಠ ಅಧ್ಯಯನ.

(iii) ಒಟ್ಟು ಜನಪದ ಸಾಹಿತ್ಯವನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಮರ್ಶೆಯ ಅಧ್ಯಯನಕ್ಕೆ ಒಳಪಡಿಸಿ, ಆ ಮೂಲಕ ಜನಪದ ಸಾಹಿತ್ಯವನ್ನು ಸಮಕಾಲೀನ ವಿವಿಧ ಜ್ಞಾನಶಿಸ್ತುಗಳ ಮೂಲಕ ಗ್ರಹಿಸುವ ಪ್ರಯತ್ನ.

ಈ ಬಗೆಯ ಅಧ್ಯಯನಗಳ ಮಾದರಿಯ ಮುಂದುವರಿಕೆಯಾಗಿ, ಈಚಿನ ದಿನಗಳಲ್ಲಿ ಜನಪದ ಮಹಾಕಾವ್ಯಗಳ ಸಂಗ್ರಹ ಮತ್ತು ಅಧ್ಯಯನ, ಜನಪದ ಕಲೆಗಳ ಕೋಶ, ಜಾನಪದ ವಿಶ್ವಕೋಶ, ಜಾನಪದ ಕೈಪಿಡಿ, ಜನಪದ ಆಚರಣೆಗಳ ಅಧ್ಯಯನ, ಅಲೆಮಾರಿ ಮತ್ತು ಬುಡಕಟ್ಟು ಸಂಸ್ಕೃತಿಗಳ ಅಧ್ಯಯನ, ಗ್ರಾಮಗಳ ಜಾನಪದೀಯ ಅಧ್ಯಯನ, ಜನಪದ ರಂಗಭೂಮಿಯನ್ನು ಕುರಿತಾದ ಸಂಶೋಧನೆ, ಇವೇ ಮೊದಲಾದ ಜನಪದ ಸಂಸ್ಕೃತಿಯ ವಿವಿಧ ಘಟಕಗಳ ಬಗೆಗಿನ ಅಧ್ಯಯನಗಳು ಆರಂಭಗೊಂಡಿರುವುದು, ಇವುಗಳು ಅರ್ಥಪೂರ್ಣ ಸೃಜನಶೀಲ ವಿಕಾಸವನ್ನು ಪಡೆಯುತ್ತಿರುವುದು ನಿಚ್ಚಳವಾಗಿದೆ. ಈ ಮೂಲಕ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನು ಇಂದು ಲಭ್ಯವಿರುವ ಮೌಖಿಕ ಪರಂಪರೆಯ ಒಟ್ಟು ಅಭಿವ್ಯಕ್ತಿ ಪ್ರಕಾರಗಳ ಮೂಲಕ ನೋಡಬೇಕಾದ ಅಗತ್ಯವು ಇಂದು ನಮ್ಮೆದುರಿಗಿದೆ.

ಕನ್ನಡ ಜನಪದ ಸಾಹಿತ್ಯದ ಬೆಳವಣಿಗೆಯ ಸ್ವರೂಪವನ್ನು ಸಂಕ್ಷಿಪ್ತ ರೂಪದಲ್ಲಿ ಒಳಗೊಂಡಿರುವ ಕೃತಿ ಈ ಜಾನಪದದ ತುಂಬುಹೊಳೆ. ಜಾನಪದವನ್ನು ಕುರಿತು ನಮ್ಮ ಹಿರಿಯ ತಲೆಮಾರಿನ ಲೇಖಕರಿಂದ ಮೊದಲುಗೊಂಡು ಈತನಕದ ವಿವಿಧ ಲೇಖಕರು- ವಿದ್ವಾಂಸರ ಚಿಂತನೆಗಳನ್ನು ಟಿಪ್ಪಣಿ ರೂಪದಲ್ಲಿ ಈ ಕೃತಿಯಲ್ಲಿ ಕೊಡಲಾಗಿದೆ. ಹಾಗೆಯೇ ಕೆಲವು ಆಯ್ದ ಜನಪದ ಸಾಹಿತ್ಯದ ವಿವಿಧ ರೂಪಗಳನ್ನು ಈ ಕೃತಿಯು ಒಳಗೊಂಡಿದೆ. ಇವುಗಳೆಲ್ಲದರ ಒದು ವಿಸ್ತಾರವಾದ ಜಾನಪದ ಲೋಕಕ್ಕೆ ಪ್ರವೇಶಿಸುವ ಆಸಕ್ತರಿಗೆ ವಿದ್ಯಾರ್ಥಿಗಳಿಗೆ, ಸಹಾಯಕವಾಗಲಿ ಎಂಬುದು ನಮ್ಮ ಹಂಬಲವಾಗಿದೆ.


ಈ ಕೃತಿಯನ್ನು ಸಿದ್ಧಪಡಿಸಲು ನೆರವಾದ ಎಲ್ಲ ಗೆಳೆಯರಿಗೆ, ಡಿ.ಟಿ.ಪಿ. ಮಾಡಿಕೊಟ್ಟ ಶ್ರೀಮತಿ ಲಕ್ಷ್ಮಿ, ಅಂದವಾಗಿ ಮುದ್ರಿಸಿಕೊಟ್ಟ ಪ್ರಿಂಟ್ ಸ್ಮಾರ್ಟ್ ಅಚ್ಚಿನ ಮನೆಯ ಎಲ್ಲಾ ಬಂಧುಗಳಿಗೆ, ರೇಖಾಚಿತ್ರಗಳನ್ನು ಬರೆದುಕೊಟ್ಟ ಕಲಾವಿದ ಗೆಳೆಯ ಕೆ.ಕೆ. ಮಕಾಳಿ, ಜಾನಪದದ ತುಂಬುಹೊಳೆಗೆ ಅರ್ಥಪೂರ್ಣ ಕಲಾಕೃತಿಯನ್ನು ಮುಖಪುಟಕ್ಕೆ ಒದಗಿಸಿಕೊಟ್ಟ ಖ್ಯಾತ ಕಲಾವಿದರೂ ಆತ್ಮೀಯರೂ ಆದ ಎಂ.ಎಸ್. ಮೂರ್ತಿ ಅವರಿಗೆ ನನ್ನ ಪ್ರೀತಿಯ ನೆನೆಕೆಗಳು ಸಲ್ಲುತ್ತವೆ.


ಶುಭಾಶಯಗಳೊಡನೆ,

**ಜಿ ವಿ ಆನಂದಮೂರ್ತಿ**

# ತುಂಬು ಹೊಳೆಯಲ್ಲಿ...


ನಮ್ಮ ಸುತ್ತಣ ಅಸಲೀ ಸೂಕ್ಷ್ಮಗಳು V
ಹೊಳೆಸಾಲಿನ ತಂಪು ನೆರಳು X
ಬಿ.ಎಂ.ಶ್ರೀ ೧
ದ.ರಾ. ಬೇಂದ್ರೆ ೩
ಬೆಟಗೇರಿ ಕೃಷ್ಣಶರ್ಮ ೪
ಮಾಸ್ತಿ ೫
ಡಿ.ಆರ್. ನಾಗರಾಜ ೭
ಜೀಶಂಪ ೮
ಕಾಳೇಗೌಡ ನಾಗವಾರ ೧೦
ಚಂದ್ರಶೇಖರ ಕಂಬಾರ ೧೨
ಹಿ.ಚಿ. ಬೋರಲಿಂಗಯ್ಯ ೧೪
ಮುದೇನೂರ ಸಂಗಣ್ಣ ೧೬
ರವೀಂದ್ರನಾಥ ಠಾಗೂರ್ ೧೯
ಬಿ.ಎ. ಸನದಿ ೨೦
ಗೊರೂರು ರಾಮಸ್ವಾಮಿ ಅಯ್ಯಂಗಾರ್ ೨೧
ದೇವುಡು ೨೨
ಪಿ.ಆರ್. ತಿಪ್ಪೇಸ್ವಾಮಿ ೨೩
ಶಿವರಾಮ ಕಾರಂತ ೨೪
ಬಿ.ಎ. ವಿವೇಕ ರೈ ೨೫
ಹಿ.ಶಿ. ರಾಮಚಂದ್ರೇಗೌಡ ೨೬
ವೆರಿಯರ್ ಎಲ್ವಿನ್ ೨೮
ಮಧುರಚೆನ್ನ ೨೯
ಬಿ.ಎಸ್. ಗದ್ದಗೀಮಠ ೩೦
ಕುವೆಂಪು ೩೧
ಎ.ಕೆ. ರಾಮಾನುಜನ್ ೩೨
ದೇಜಗೌ ೩೩




ಅಗ್ರಹಾರ ಕೃಷ್ಣಮೂರ್ತಿ ೩೪
ಎಚ್. ಎಲ್. ನಾಗೇಗೌಡ ೩೬
ಕೆ.ವಿ. ನಾರಾಯಣ ೩೭
ಸಿದ್ಧಲಿಂಗಯ್ಯ ೩೮
ಹಾ.ಮಾ. ನಾಯಕ ೩೯
ಸುಜನಾ ೪೦
ಜಿ.ಎಸ್. ಸಿದ್ಧಲಿಂಗಯ್ಯ ೪೧
ಕೆ.ಎಸ್. ನರಸಿಂಹಸ್ವಾಮಿ ೪೨
ಜಿ.ಎಸ್. ಶಿವರುದ್ರಪ್ಪ ೪೩
ಈಶ್ವರಚಂದ್ರ ಚಿಂತಾಮಣಿ,
ಸಿಂಪಿ ಲಿಂಗಣ್ಣ ಚಡಚಣ ೪೪
ಗೌರೀಶ ಕಾಯ್ಕಿಣಿ ೪೫
ಎನ್. ಬಸವಾರಾಧ್ಯ,
ಉತ್ತಂಗಿ ಚೆನ್ನಪ್ಪ, ತೀ.ನಂ.ಶ್ರೀ ೪೬
ಗಣನಾಯ್ಕ ೪೭
ಬಿದಿರು ೪೮
ಅಡ್ಡಗುಡ್ಡವ ದಾಟಿ ೪೯
ಜವರಾಯ ೫೪
ಸಂತೆಯ ಮನೆಯೊಳು ೫೫
ತೊಳೆದ ಮುತ್ತನು ಕಂಡೆ ೫೬
ದೀಪಾವಳಿ ೫೮
ಬಾಲಗೋಪಾಲ ೫೯
ಹರುಳಯ್ಯ ಹಾಡು ೬೦
ರಾಗಿ ಬೀಸೋ ಕಲ್ಲೆ ೬೨
ಭೂಮಿತಾಯಿ ೬೩
ನಲ್ಲನ ನೆನಪು ೬೪
ಧಾರೆ ೬೫
ಅಚ್ಚಚ್ಚ ಬೆಳದಿಂಗಳೆ ೬೭
ತನುವಿನೊಳಗೊಂದು ೬೮
ಸಂಗಾತಿ ೬೯

ಈ ನೆಲದ ಗಾದೆಗಳು ೭೧
ಒಗಟುಗಳು ೭೪
ಶಿಶುಪ್ರಾಸಗಳು ೭೭
ಗೋವಿನ ಹಾಡು ೮೩
ಕೆರೆಗೆಹಾರ ೮೮
ಕಲ್ಲುಸಕ್ಕರೆ ಸವಿ ೯೩
ಕುಲದ ನೆಲೆ ೯೪
ಮನೆಯ ಮಾಳಿಗೆ ೯೫
ನೇಗಿಲಯೋಗಿ ೯೬
ಅವ್ವ ೯೭
ಕನ್ನಡ ಮಾಧ್ಯಮ ೯೯
ಹೂವಾದ ಹುಡುಗಿ ೧೦೧
ಕ್ಷೇತ್ರಕಾರ್ಯದ ಅನುಭವಗಳು ೧೧೩
ದಾನಮ್ಮನ ಸಂದರ್ಶನ ೧೨೩
ಫಕೀರವ್ವ ಗುಡಿಸಾಗರ ೧೩೧
ಹಿರಿಯಡ್ಕ ಗೋಪಾಲರಾವ್ ೧೩೪
ಸುಕ್ರಿ ಬೊಮ್ಮಗೌಡ ೧೩೮
ಪಿ. ಕಾಳಿಂಗರಾವ್ ೧೪೩
ಬಾಳಪ್ಪ ಹುಕ್ಕೇರಿ ೧೪೬
ಬಣ್ಣದ ಮಾಲಿಂಗ ೧೪೯
ಕೆರೆಮನೆ ಶಿವರಾಮ ಹೆಗಡೆ ೧೫೩
ಹಾದಿಬದಿಯ ಜಾದೂಗಾರ ೧೫೭
ಮಹಾಕಾವ್ಯದ ಪ್ರತಿಭೆ ೧೬೦
ಗೋಡೆ ನಾರಾಯಣ ಹೆಗಡೆ ೧೬೩
ಜುಂಜಪ್ಪನ ಪದಗಳ ಗಿಡ್ಡಜ್ಜ ೧೬೬
ಸಂಪಾದಕರು :
ಪ್ರೊ. ಕಾಳೇಗೌಡ ನಾಗವಾರ ೧೭೦
ಜಿ ವಿ ಆನಂದಮೂರ್ತಿ ೧೭೨


# ಜಾನಪದದ ತುಂಬು ಹೊಳೆ

ಆಲೋಚನೆ - ಪುನರಾಲೋಚನೆಗಳ ನಡುವೆ ಜಾನಪದದ ಅಂತರಂಗಕ್ಕೆ ವಿಶಾಲವಾದ ಅರ್ಥದಲ್ಲಿ ಸಂಕೇತವಾಗಬಲ್ಲ ಲಾಂಛನವನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ರೂಪಿಸಿತು: ವಾಸ್ತವವಾಗಿ ಜಾನಪದವು ಗಂಧವತಿ ಪೃಥ್ವಿಯ ಸಕಲ ಸಲ್ಲಕ್ಷಣಗಳನ್ನು ಒಳಗೊಂಡಿರುವ, ಪಂಚಭೂತಗಳ ವಂಚನೆರಹಿತ ಗುಣಧರ್ಮದ ಆಗರವಾಗಿದೆ. ಭರತಖಂಡದ ಪ್ರಾಚೀನತಮ ಜಾನಪದದ ತುಂಬುಮನಸ್ಸು ನಿರ್ಮಿಸಿರುವ ನಿತ್ಯಮಂಗಳಕರವಾದ ಶಿವತತ್ತ್ವದ; ಅರ್ಧನಾರೀಶ್ವರ ಗುಣದ, ಸಕಲ ಜೀವರಾಶಿಗಳ ಬಗೆಗಿನ ಅಪಾರ ಅಂತಃಕರಣದ ಶಿವ ಮತ್ತು ಜಾನಪದದ ವೈವಿಧ್ಯಮಯ ಸೂಕ್ಷ್ಮಗಳನ್ನು ಒಂದೇ ಸಮನೆ ಧ್ಯಾನಿಸಿದ ಪರಿಶುದ್ಧ ಮನಸ್ಸಿನ ಅಂತರಾಳದಿಂದ ಹೊರಹೊಮ್ಮುವ ವಿಶಾಲ ಪ್ರಸನ್ನತೆಯ ಸಾಕ್ಷಾತ್ ಪ್ರತೀಕವಾದ ಬುದ್ಧದೇವ ಹಾಗೂ ಕಾಡಿನ ಬೇಡರ ಹುಡುಗನಾಗಿ ಹುಟ್ಟಿ-ಬೆಳೆದು, ಜ್ಞಾನದ ಬಗೆಗಿನ ಅಪರಿಮಿತ ಆಕಾಂಕ್ಷೆಯಿಂದ ನಿರಂತರ ಶ್ರಮ ಮತ್ತು ಪ್ರತಿಭಾಸಂಪನ್ನತೆಯ ಹಾದಿಯಲ್ಲಿ ಸಾಗಿ ತುತ್ತತುದಿಯನ್ನು ತಲುಪಿದ, ನಮ್ಮ ಸಮಾಜದ ಎಲ್ಲ ತಬ್ಬಲಿಗಳ ಪ್ರತಿನಿಧಿಯಾದ ಏಕಲವ್ಯನನ್ನು ನೆನಪಿಸುವ, ಜಾನಪದದ ಮಹತ್ವವನ್ನು ನಿರಂತರವಾಗಿ ವಿಸ್ತರಿಸುತ್ತಿರುವ ಸೃಜನಶೀಲ ರೂಪಕ ಇದಾಗಿದೆ.

– ಕಾಳೇಗೌಡ ನಾಗವಾರ

ಮೈತ್ರಿ ಮತ್ತು ಕರುಣಾಭಾವಗಳಿಂದ ಲೋಕದ ಸಕಲ ಜೀವಿಗಳ ಹಿತಕ್ಕಾಗಿ ಧ್ಯಾನಸ್ಥವಾಗಿರುವ ಪ್ರಸನ್ನ ಮುಖಭಾವ, ಸೃಷ್ಟಿಶೀಲತೆಯ ಸಂಕೇತವಾದ ವೃಕ್ಷ, ಲೋಕವನ್ನು ಸದಾ ಬೆಳಗುವ ಸೂರ್ಯ-ಚಂದ್ರ, ಜನಪದರ ಸಂಭ್ರಮದಲ್ಲಿ ಪಾಲ್ಗೊಂಡ ಅವರ ನಿತ್ಯಸಂಗಾತಿಗಳಾದ ಸಕಲ ಜೀವರಾಶಿಗಳು ಸೂಕ್ಷ್ಮ ವಿನ್ಯಾಸಗಳೊಂದಿಗೆ ಈ ಪ್ರತೀಕದಲ್ಲಿ ಅಪೂರ್ವವಾಗಿ ಸಂಯೋಜಿಸಲ್ಪಟ್ಟಿವೆ. ಪ್ರಕೃತಿಯಂತೆ ನಿತ್ಯವೂ ಹೊಸತಾಗುವ ಸತ್ವಗಳನ್ನು ಒಳಗೊಂಡು, ತುಳುಕುವ ಹೊಳೆಯಂತೆ ವಿಸ್ತಾರವೂ ಪಾರದರ್ಶಕವೂ ಆಗಿರುವ ಈ ಪ್ರತೀಕವು, ಎಲ್ಲ ಮನಸ್ಸುಗಳ ಏಕತೆಯನ್ನು ಸಂಕೇತಿಸುತ್ತದೆ. ಮಾನವೀಯ ತಳಹದಿಯ ಮೇಲೆ ರೂಪುಗೊಂಡಿರುವ ಲಾಂಛನವು ಅಕಾಡೆಮಿಯ ಚಟುವಟಿಕೆಗಳ ವಿಕಾಸಶೀಲ ಪ್ರತಿಮೆಯಾಗಿದೆ.

– ಜಿ ವಿ ಆನಂದಮೂರ್ತಿ



ಮೊದಲು ಹುಟ್ಟಿದುದು ಜನವಾಣಿ. ಅದು ಬೆಳೆದು, ಪರಿಷ್ಕೃತವಾಗಿ ವೃದ್ಧಿಯಾದುದು ಕವಿವಾಣಿ. ಜನವಾಣಿ ಬೇರು: ಕವಿವಾಣಿ ಹೂವು. ಕಾಡುಜನರೂ, ಒಕ್ಕಲಿಗರೂ, ಹೆಂಗಸರೂ, ಮಕ್ಕಳೂ-ಶಾಸ್ತ್ರಕಾವ್ಯಗಳ ಪರಿಚಯವೇ ಇಲ್ಲದ ಜನಸಾಮನ್ಯರೆಲ್ಲರೂ, ಹಾಡಿನ ಮಟ್ಟನ್ನು ಎಂದರೆ ಅಷ್ಟುಮಟ್ಟಿಗೆ ಛಂದಸ್ಸನ್ನು ಬಲ್ಲರು. ಹಿಂದಿನಿಂದ ಬಂದ ಹಾಡನ್ನು ತಲೆಮೊರೆಯಾಗಿ ಕಲಿತು ಹೇಳುವುದಲ್ಲದೆ, ಹೊಸ ಹಾಡನ್ನೂ ಕಟ್ಟಬಲ್ಲರು. ಆದಿಕಾಲದಲ್ಲಿ ಇನ್ನೂ ಕವಿತ್ವವೂ ಶಾಸ್ತ್ರವೂ ಶೈಶವದೆಶೆಯಲ್ಲಿದ್ದಾಗ, ಹಳ್ಳಿಯಲ್ಲಿ ಹೊಲದ ಕಣದಲ್ಲಿ, ಹಬ್ಬ-ಹುಣ್ಣಿಮೆಗಳಲ್ಲಿಯೂ ಸುಖ-ದುಃಖದ ಸಂದರ್ಭಗಳಲ್ಲಿಯೂ ಜನರು ಸೇರಿ ತಮ್ಮ ರಸಭಾವಗಳನ್ನು ಹಾಡಿಕೊಂಡು ಕುಣಿಯುತ್ತಿದ್ದರು. ಕುಣಿತದ ಹೆಜ್ಜೆಗಳೇ ತಾಳ ; ಹಾಡಿನ ಅಭಿನಯವೇ ಕುಣಿತ. ಇದೇ ಜನರ "ಆಟಪಾಟ". ಕುಯಿಲು, ಕುಡಿತ, ಕೋಲಾಟ, ಬೇಟೆ, ಮದುವೆ, ಸಾವು, ಕಾಳಗದ ಸೋಲುಗೆಲವುಗಳು, ಬಾಳಿಕೆಯ ಕಷ್ಟಸುಖಗಳು,

ವೀರರ ಸಾಹಸಕಾರ್ಯಗಳು, ದೈವಾನುಭವ, ದೈವಭಕ್ತಿ ಇವೇ ಮೊದಲಾದ ಎಲ್ಲರೂ ಬಲ್ಲ ವಿಷಯಗಳನ್ನು ಕುಣಿಯುತ್ತಾ ಹಾಡು ಕಟ್ಟುತ್ತಿದ್ದರು. ಹೆಂಗಸರೂ, ಕೆಲಸಗಾರರೂ ಕೆಲಸದ ಬಳಲಿಕೆಯನ್ನು ಈ ಹಾಡಿನ ರಾಗದಲ್ಲಿ, ಈ ಗೀತದ ಆನಂದದಲ್ಲಿ ಮರಸುತ್ತಿದ್ದರು. ಕುಟ್ಟುವಾಗ, ಬೀಸುವಾಗ, ಮಗುವನ್ನು ತೂಗುವಾಗ, ಮದುವೆಯಾಗಿ ನಲಿಯುವಾಗ, ಸಾವಿಗಾಗಿ ಅಳುವಾಗ, ಭಾರವನ್ನೆತ್ತುವಾಗ, ಬಂಡಿಯನ್ನು ಹೊಡೆಯುವಾಗ, ದೋಣಿಯನ್ನು ನಡೆಸುವಾಗ, ಕಾಳಗದ ಸಾಧನೆಗಳನ್ನು ಅಭ್ಯಾಸ ಮಾಡುವಾಗ, ಹೆಂಗಸರೂ ಗಂಡಸರೂ ಈ ಹಾಡುಗಳನ್ನು ಹೇಳುತ್ತಿದ್ದರು ; ಕಟ್ಟುತ್ತಿದ್ದರು. ಹೀಗೆ ನೃತ್ಯದ ಉಲ್ಲಾಸವನ್ನು ಪ್ರಕಾಶಗೊಳಿಸುತ್ತಾ ಉದ್ಯೋಗದ ಆಯಾಸವನ್ನು ಪರಿಹಾರ ಮಾಡುತ್ತಾ ಆಗ್ಗೆ ಏಳುವ ಉಸಿರಿಗೆ ತಕ್ಕ ಹಾಗೆ ರಾಗವನ್ನು (ಛಂದಸ್ಸನ್ನು) ಹೊಂದಿಸುತ್ತಾ, ಜನರ ಸರ್ವಸಾಧಾರಣವಾದ ಮನೋಭಾವವನ್ನು ವಿಶದಗೊಳಿಸುತ್ತಾ ಹುಟ್ಟಿದುವು ಈ ಹಾಡುಗಳು.

ಈ ಹಾಡುಗಳು ಒಂದೊಂದು ಬಿಡಿ ಪದ್ಯಗಳಾಗಿ ಯಾವುದಾದರೂ ಒಂದು ಭಾವವನ್ನೋ ಸನ್ನಿವೇಶವನ್ನೋ ತಿಳಿಸುವುದೇ ಹೆಚ್ಚು. ಆದರೆ ಹಲವು ಪದ್ಯಗಳಲ್ಲಿ ಕಥೆ, ಭಾವವಿವರಣೆ, ಆಟಪಾಟ, ಬೇಟೆ-ಕಾಳಗಗಳ ವರ್ಣನೆ, ಒಗಟುಗಳ ಮೇಲಾಟ, ಕುಣಿತದ ಹಾರಾಟ ಮುಂತಾದುವನ್ನೂ ಹೇಳುವುದುಂಟು. ನಾಗರಿಕತೆಯ ಕಾಲದಲ್ಲಿ ಇತಿಹಾಸ ಪುರಾಣಗಳ ಸಾರವನ್ನು ಜನರ ಮುಟ್ಟಕ್ಕಿಳಿಸುವುದೂ, ಚರಿತ್ರೆಯಲ್ಲಿ ನಡೆದ ಮರೆಯಲಾಗದ ಸಂಗತಿಗಳನ್ನು ಜನರ ನೆನಪಿನಲ್ಲಿ ನಿಲ್ಲಿಸುವುದೂ, ಭಕ್ತಿ - ಜ್ಞಾನ - ವೈರಾಗ್ಯಗಳನ್ನು ಮನೆಮನೆಗೂ ಬೀರುವುದೂ ಈ ಜನಪದ ಸಾಹಿತ್ಯದ ಕೆಲಸ. ಜನರಿಂದ ಹುಟ್ಟಿ, ಜನರಲ್ಲಿಯೇ ಪಳಗಿ, ಜನರ ಪ್ರೇಮವನ್ನು ಸೂರೆಗೊಂಡು, ಜನರ ಜೀವನದ ಸಾರವನ್ನೂ ಹೆಂಗಸರ ಮಧುರಕಂಠದ ಗಾನವನ್ನೂ ಸುರಿಸುವ ಈ ಸಾಹಿತ್ಯವನ್ನು ಒಣ ಕವಿಗಳೂ ಅಹಂಕಾರ ಮುಗ್ಧರಾದ ಪಂಡಿತರೂ ಅಲ್ಲಗಳೆಯಬಹುದೇ ಹೊರತು; ನಿಸರ್ಗಕವಿಗಳೂ ರಸಜ್ಞರೂ ಜನತಾವತ್ಸಲರೂ ಎಂದಿಗೂ ತಿರಸ್ಕರಿಸಲಾರರು.

-ಬಿ ಎಂ ಶ್ರೀ






ಸಾಹಿತ್ಯವಿಲ್ಲದ ಜೀವನವಿಲ್ಲ. ಜೀವನದ ತಿರುಳಿನಲ್ಲಿ ಕೀಳು ಮೇಲೆಂದಿಲ್ಲ. ಎಲ್ಲ ಜೀವನವೂ ಅದ್ಭುತವಾದ ರಸಾಯನವು. ಅದನ್ನು ಉಣ್ಣದಿದ್ದವರಿಲ್ಲ. ಶಬ್ದಮಾತ್ರವಲ್ಲ ಕಾವ್ಯವೆಂದೂ, ಜೀವಮಾತ್ರವಲ್ಲ ಕಾವ್ಯವೆಂದೂ ಒಬ್ಬ ಜ್ಞಾನಿಯು ಹೇಳಿದ್ದಾನೆ. ಆದರೆ ಜೀವನು ಆತ್ಮನಿದ್ದೂ ಅದರ ಅರಿವಿಲ್ಲದುದರಿಂದ ಪರಿವೆಯಿಲ್ಲದುದರಿಂದ ತೊಳಲಿ ಬಳಲುವಂತೆ, ಜೀವನವೊಂದು ಕಾವ್ಯ, ನಾಟಕ, ಎಂಬ ಅನುಭವವಿಲ್ಲದೆ ಸಂಸಾರವನ್ನು ಅಸಾರವತ್ತಾಗಿ ಕಾಣುತ್ತಲಿದ್ದಾನೆ. ಜನಪದ ಸಾಹಿತ್ಯದ ಅಂತಃಸ್ಫೂರ್ತಿಯು ಈ ಶ್ರದ್ಧೆಯಲ್ಲಿದೆ. ಅದರ ದೃಷ್ಟಿಯಲ್ಲಿ ಜೀವನವೇ ಕಾವ್ಯ. ಆ ಜೀವನ-ಈ ಜೀವನ ಎಂಬ ಭೇದವು ಅದಕ್ಕಿಲ್ಲ. ಅದಕ್ಕಾಗಿಯೆ ನಾಯಕ-ನಾಯಿಕೆಯರ ಮಹತ್ತ್ವವಾಗಲಿ, ಕಥಾವಸ್ತುವಿನ ಗುರುತ್ವವಾಗಲಿ ಅದಕ್ಕೆ ಬೇಕಾಗಿಲ್ಲ. ರಾಮ-ಕೃಷ್ಣರೇ ಬೇಕೆಂದಿಲ್ಲ; ರಾವಣ-ದುರ್ಯೋಧನರೇ ಅಗತ್ಯ ಎಂತಲ್ಲ; ಸೀತಾ ವನವಾಸ, ದ್ರೌಪದೀ ವಸ್ತ್ರಹರಣವು ಅವಶ್ಯವಾಗಿಲ್ಲ. ಎಲ್ಲ ಜೀವನವೇ ಎಲ್ಲಿ ಕಾವ್ಯವಾಗಿದೆಯೋ ಅಲ್ಲಿ ಗುರುಲಘುಗಳ ಭೇದವೇಕೆ? ಈ ರಹಸ್ಯವನ್ನು ನಾವು ಜನಪದ ಸಾಹಿತ್ಯದಲ್ಲಿ ಕಾಣಬಹುದು.

-ದ ರಾ ಬೇಂದ್ರೆ

ಬೀಸುವ ವೇಳೆಯೆಂದರೆ ಸಾಮಾನ್ಯವಾಗಿ ರಾತ್ರಿಯ ಕೊನೆಯ ಜಾವದ ಸಮಯ. ಆಗ ಎಲ್ಲೆಲ್ಲಿಯೂ ಶಾಂತತೆಯ ಸಾಮ್ರಾಜ್ಯವು ನೆಲೆಗೊಂಡಿರುವುದು; ಎಲ್ಲ ಪ್ರಾಣಿಗಳಿಗೂ ಸಕ್ಕರೆನಿದ್ದೆಯ ಕಾಲವದು. ಆಗಲೇ, ಹಳ್ಳಿಯ ಹೆಂಗಸರು ಎದ್ದು ಬೀಸುವುದಕ್ಕೆ ಮೊದಲು ಮಾಡುವರು. ಸೃಷ್ಟಿಯು ತನ್ನ ನೈಸರ್ಗಿಕ ಸಂಗೀತಮಯ ವಾತಾವರಣದಿಂದ ಮೊದಲೇ ಕೂಡಿಕೊಂಡಿರುವುದು. ಅದರಲ್ಲಿಯೇ ಬೀಸುವ ಕಲ್ಲು ಎಡಬಿಡದೆ ಮಂದ್ರ ಷಡ್ಜದಲ್ಲಿ ಸ್ವರವನ್ನು ಹಿಡಿದು ನಡೆದಿರುವುದು. 'ನಾಗರಹೆಡೆಯಂತೆ ನಲಿನಲಿದು ಬೀಸುವ' ನಾರಿಯರು ಆ ಸ್ವರದಲ್ಲಿ ಸ್ವರವನ್ನು ಬೆರೆಯಿಸಿ, ಕೈ ಬಳೆಗಳ 'ಗಲಕು ಗಲಕು' ಎಂಬ ಸಪ್ಪುಳವೇ ತಾಳಗಳನ್ನು ಹಾಕುತ್ತಿರಲು, ವೀಣೆ, ಕೊಳಲುಗಳನ್ನು ಮೂದಲಿಸುವ ಮಂಜುಳ ಕಂಠದಿಂದ ಚೆಲವು ಒಲವುಗಳನ್ನು ಬಣ್ಣಿಸಿ ಹಾಡುತ್ತಿರುವರು. ಅಂತಹ ಸಂಗೀತ ಸಂಯೋಗವು ಅದಾರ ಮನವನ್ನು ಸೆಳೆದುಕೊಳ್ಳದಿರುವುದು ? ಅಳುತಿರುವ ಎಳೆಯ ಹಸುಳೆಗಳು ಆ ಸಂಗೀತವನ್ನು ಕೇಳಿ ಅಳುವುದನ್ನು ನಿಲ್ಲಿಸಿ ಸಮಾಧಾನಗೊಂಡು ನಿದ್ದೆ ಹೋಗುವವು. ಅರೆನಿದ್ದೆಯಲ್ಲಿರುವವರು ಆ ಸಂಗೀತದಿಂದ ಸೂಸುತ್ತಿರುವ ಸಂತೋಷ ತರಂಗದಲ್ಲಿ ಓಲಾಡಿ ಓಲಾಡಿ ಮೈಮರೆಯುತ್ತಲಿರುವರು. ಮನಸ್ಸಿನ ದುಗುಡವನ್ನು ಹೊಡೆದೋಡಿಸಿ ಅದನ್ನು ಪ್ರಸನ್ನತೆಯ ಕಡೆಗೆ ತಿರುಗಿಸುವುದಾ ಮೋಹಿನೀ ಮಂತ್ರವು. ಇಂತಹ ಸಂತೋಷವನ್ನು ನಿತ್ಯನಿತ್ಯವೂ ಅನುಭವಿಸುತ್ತಿರುವವರೆಂತಹ ಪುಣ್ಯಶಾಲಿಗಳೋ ! ಜೀವಿತಕಾಲದಲ್ಲಿ ಒಮ್ಮೆಯಾದರೂ ನಾವದನ್ನು ಅನುಭವಿಸಿಯೇ ತೀರಬೇಕು.


-ಬೆಟಗೇರಿ ಕೃಷ್ಣಶರ್ಮ





ನಾನು ಒಂದು ಸಲ ಮಲೆನಾಡಿನಲ್ಲಿ ಸುತ್ತುತ್ತ ಒಂದು ಹಳ್ಳಿಗೆ ಹೋದೆನು. ಆ ಕಾಡು ಹಳ್ಳಿಯಲ್ಲಿ ಮಧ್ಯೆ ಒಂದು ದೊಡ್ಡ ಮನೆ. ಇದು ಯಾರದೆಂದೆ. ಚೆನ್ನೇಗೌಡನದು ಎಂದೋ ಏನೋ ಹೆಸರು ಹೇಳಿದರು. ನಾವು ಮಾತನಾಡುವುದನ್ನು ಕೇಳಿ ಮನೆಯ ಮುದುಕಿ ಹೊರಗೆ ಬಂದರು. ಒಂದೆರಡು ಮಾತಾದಮೇಲೆ "ಇದು ಚೆನ್ನೇಗೌಡರ ಮನೆಯೇ" ಎಂದೆ. "ಹೌದು". "ಚೆನ್ನೇಗೌಡರು ಎಲ್ಲಿ?" "ಶಿವನಪುರಿಗೆ ಹೋಗ್ಯಾರೆ". ನನಗೆ ಅರ್ಥವಾಗಲಿಲ್ಲ. ನಾನು "ಶಿವನಪುರಿ ಎಲ್ಲಿದೆ?" ಎಂದೆ. ಹತ್ತಿರ ಇದ್ದವರು ಚೆನ್ನೇಗೌಡ ತೀರಿಹೋಗಿದ್ದಾರೆಂದು ತಿಳಿಸಿದರು. ನಾನು "ಅಯ್ಯೋ ಪಾಪ" ಎಂದು "ನಿಮ್ಮ ಮಾತು ತಿಳಿಯಲಿಲ್ಲಮ್ಮಾ" ಎಂದೆ. ಮುದುಕಿ "ಅಯ್ಯೋ ನನ್ನಪ್ಪಾ ಏನು ಮಾತು ತಿಳಿಯೋಕೆ ಬಿಡಿ. ಅವರು ಹೋಗಿ ಹತ್ತುವರುಷ ಆಯಿತು" ಎಂದರು. "ಶಿವನಪುರಿಗೆ ಹೋಗಿದ್ದಾರೆ !" ಮತ್ತೆ ನೋಡುವ ಭರವಸೆ ಉಂಟು ಎಂದು ಅರ್ಥ ಕಾಣುತ್ತದೆ. ಈ ಅರ್ಥ ಆಕೆಯ ಮನಸ್ಸಿನಲ್ಲಿತ್ತೆ ಎಂದು ಸಂದೇಹ ಅವಶ್ಯಕವಿಲ್ಲ. ಮಾತು ಹುಟ್ಟಿ ಅರ್ಥ ಬರಲಿಲ್ಲ; ಅರ್ಥವಿದ್ದದ್ದರಿಂದ ಮಾತು ಬಂತು.


ಇದೇ ರೀತಿಯ ನಯವನ್ನು ನಮ್ಮ ಗ್ರಾಮಗಳ ಜೀವನದಲ್ಲಿಯೂ ನಾವು ನೋಡಬಹುದು. ನವನಾಗರಿಕತೆಯ ಬಡಿತದಿಂದ ಈಗ ನಮ್ಮ ಊರುಗಳ ಬದುಕಿನ ಕಟ್ಟು ಸಡಿಲವಾಗಿದೆ. ಈಗ ಕೆಲವು ವರುಷಗಳ ಹಿಂದೆ ಅದು ತಕ್ಕಮಟ್ಟಿಗೆ ಭದ್ರವಾಗಿತ್ತು. ನಮ್ಮ ಜನರಲ್ಲಿ ರಾಜ್ಯವೆಂಬ ಭಾವನೆಯು ಹೆಚ್ಚಾಗಿರಲಿಲ್ಲ; ಇದು ನಮ್ಮ ದೇಶದ ಚರಿತ್ರೆಯ ಫಲ; ದಿನಕ್ಕೆ ಒಬ್ಬನು ನಾಯಕನೆಂದರೆ, ರಾಮನಿಗೆ ರಾಜ್ಯವಾದರೇನು



ರಾವಣನಿಗೆ ರಾಜ್ಯವಾದರೇನು ರಾಗಿ ಬೀಸುವುದು ತಪ್ಪಲಿಲ್ಲ ಎಂಬ ಭಾವನೆ ಹುಟ್ಟುವುದು ಸ್ವಭಾವ. ಆದರೆ ಊರೆಂದರೆ ಯಾರೂ ಅಸಡ್ಡೆ ಮಾಡುವಂತಿರಲಿಲ್ಲ. ಜನನಾಡಿಗೆ ಅಂಟಿದ್ದಿತು: ಆದ್ದರಿಂದ ಇವರಿಗೆ ತಮ್ಮ ಹಳ್ಳಿಗಳಲ್ಲಿ ಮಮತೆ ಹೆಚ್ಚು. ಊರ ಜನ ಅದರ ಬಳಿ ತೋಪು, ಕೊಳ, ಗುಡಿ, ಮಂಟಪ ಮುಂತಾದುವನ್ನು ಮಾಡಿಕೊಂಡಿದ್ದರು. ಹತ್ತು ಜನಕ್ಕೆ ಸಹಾಯವಾಗುವ ಕೆಲಸವೆಂದರೆ ಪುಣ್ಯವೆಂದು ಭಾವನೆ. ರಂಗಪ್ಪನ ತೋಪು, ಗಿರಿಯಪ್ಪನ ಬಾವಿ ಎಂದು ರಂಗಪ್ಪ ಹಾಕಿಸಿದ ತೋಪನ್ನೂ ; ಗಿರಿಯಪ್ಪನು ಮಾಡಿಸಿದ ಬಾವಿಯನ್ನೂ ಕರೆಯುವರು. ಊರಿನ ಮುಂದೆ ರಚ್ಚೆಗಳು ; ದಾರಿಗಳಲ್ಲಿ ಹೊರೇಕಲ್ಲುಗಳು, ಜಲಸಂದ್ರಗಳು; ಬಿಸಿಲ ದಿನದಲ್ಲಿ ಅರವಟ್ಟಿಗೆಗಳು. ಊರ ದೇವಾಲಯದಲ್ಲಿ ಉತ್ಸವಕಾಲದಲ್ಲಿ ದಿನ ದಿನವೂ ಒಬ್ಬರಲ್ಲದಿದ್ದರೆ ಒಬ್ಬರ ಸೇವೆ. ಕಾಲ ಕಾಲದಲ್ಲಿ ಆಯುಧಪೂಜೆ; ಬಿತ್ತುವಂದು ಭೂಮಿಯ ಪೂಜೆ. ಹೊಲ ಗದ್ದೆಗಳ ಕೆಲಸಗಳಲ್ಲಿ ಒಬ್ಬರಿಗೊಬ್ಬರು ನೆರವು. ಊರ ಹುಡುಗರಿಗಾಗಿ ಉಪ್ಪರಪಟ್ಟೆ, ಗುಡುಗಿನಾಟ ಮುಂತಾದ ಆಟಗಳು. ಹಬ್ಬಗಳು. ಊರ ಜಗಳದ ನ್ಯಾಯಕ್ಕೆ ಬೇರೆಯವರನ್ನು ಕರೆಯುವುದಿಲ್ಲ. ಊರ ಜನರೆ ಅಂತಸ್ಸಾಕ್ಷಿಯು ಊರ ಚಾವಡಿಯಲ್ಲಿತ್ತು. ಈಗ ಅದು ನಾಡಿನ ಅಂತಸ್ಸಾಕ್ಷಿಯಲ್ಲಿ ಲೀನವಾಗಿ ನಮ್ಮ ನ್ಯಾಯಸ್ಥಾನಗಳಲ್ಲಿ ಜನರಿಗೆ ಗುರುತು ಸಿಕ್ಕದೆ ಮರೆಯಾಗಿದೆ. ಅದು ಚಾವಡಿಯಲ್ಲಿದ್ದಾಗ ಜನರು ಅವರೆದುರಿಗೆ ಸುಳ್ಳು ಹೇಳುವುದಕ್ಕೆ ಹಿಂಜರಿಯುತ್ತಿದ್ದರು. ಹೀಗೆ ಒಂದೊಂದು ಗ್ರಾಮವೂ ಒಂದೊಂದು ಸಂಸಾರದಂತೆ ಇರುತ್ತಿತ್ತು.

-ಮಾಸ್ತಿ





..........ಜೀವನ ಪ್ರೇಮವನ್ನು ಕುಗ್ಗಿಸುವ ಎಲ್ಲ ಪ್ರತಿಷ್ಠಿತ ಶಿಷ್ಟ ಮೌಲ್ಯಗಳ ಬಗ್ಗೆ ಜಾನಪದದಾಳದಲ್ಲಿ, ಸದಾ ಅಸಹನೆಯ ಧಿಕ್ಕಾರದ ತೊರೆಯೊಂದು ಸದಾ ಹರಿಯುತ್ತಿರುತ್ತದೆ. ಇದನ್ನೇ 'ಪ್ರತಿಭಟನೆ'ಯ ಧಾರೆ ಎಂದು ಕರೆಯುತ್ತಾರೆ. ದಮನಕಾರಿ ಶಕ್ತಿಗಳನ್ನು ಧಿಕ್ಕರಿಸುವ ಮಾನವೀಯ ಧ್ವನಿ.

........ಆದರೆ ಇಲ್ಲೂ ಪರಂಪರೆಯ ಭದ್ರ ಚೌಕಟ್ಟು ಇರುವದರಿಂದ ಮೇಲುನೋಟಕ್ಕಂತೂ ಸಾಂಪ್ರದಾಯಿಕ ಮೌಲ್ಯಗಳ ಒಪ್ಪಿಗೆ ಇದೆ; ಒಳಗಡೆ ಅಸಹನೆ ಇದೆ. ಜಾನಪದ ಒಂದು ರೀತಿಯಲ್ಲಿ ಚಾರಿತ್ರಿಕ ನೆನಪುಗಳ ಅಧ್ಯಯನ ಎಂದು ವಿದ್ವಾಂಸರು ಕರೆದಿರುವುದು ಈ ಹಿನ್ನೆಲೆಯಲ್ಲಿಯೇ.

-ಡಿ ಆರ್ ನಾಗರಾಜ

**ಕ**ನ್ನಡ ಜನಪದ ಕಾವ್ಯಪ್ರಪಂಚ ಇಷ್ಟೊಂದು ವಿಸ್ತಾರವಾಗಿ ಕಂಡುಬಂದಿರುವಾಗ ಅವುಗಳನ್ನು ತಲೆಮಾರಿನಿಂದ ತಲೆಮಾರಿಗೆ ಹಾಡಿಕೊಂಡು ಬಂದಿರುವ ಬೇರೆ ಬೇರೆ ಸಂಪ್ರದಾಯದ ಗಾಯಕರ ಬಗ್ಗೆಯೂ ಕೆಲವು ಮಾತುಗಳನ್ನು ಹೇಳುವುದು ಇಲ್ಲಿ ಅಗತ್ಯ. ಈ ಗಾಯಕವರ್ಗವನ್ನು ಸರಿಯಾಗಿ ವಿಭಜಿಸಿಕೊಂಡು, ಅವರ ಹಾಡುಗಾರಿಕೆಯ ಸಂಪ್ರದಾಯದ ಹಿನ್ನೆಲೆಯನ್ನು ಅರಿಯಬೇಕಾದುದು ಅಗತ್ಯ. ಈ ನಿಟ್ಟಿನಲ್ಲಿಯೂ ಜಾನಪದ ಸಂಗ್ರಹಕರು ಪ್ರಯತ್ನಶೀಲರಾಗಿ ಅನೇಕ ಬಗೆಯ ಗಾಯಕರನ್ನು ಬೆಳಕಿಗೆ ತಂದಿದ್ದಾರೆ.

ಜನಪದ ಕಾವ್ಯಗಳನ್ನು ಹಾಡುವುದನ್ನೇ ಒಂದು ವಿಶೇಷ ಹವ್ಯಾಸವನ್ನಾಗಿ ಬೆಳೆಸಿಕೊಂಡು ಬಂದ ಗಾಯಕವರ್ಗ ಎಲ್ಲ ಸಂಸ್ಕೃತಿಗಳಲ್ಲೂ ಕಂಡುಬರುತ್ತದೆ. ಇದು ಅವರ ಪಾಲಿಗೆ ಜೀವನೋಪಾಯದ ಒಂದು ಮಾರ್ಗವೂ ಆಗಬಹುದು. ಜನರು ಇವರು ಹಾಡುವ ಕಾವ್ಯಗಳನ್ನು ಕೇಳಿ ನಲಿದು ಅವರಿಗೆ ಸೂಕ್ತ ಉಡುಗೊರೆಗಳನ್ನೂ ದವಸ ಧಾನ್ಯಗಳನ್ನೂ ಹಣವನ್ನೂ ನೀಡಬಹುದು. ಈ ಪರಸ್ಪರ ವಿನಿಮಯದೃಷ್ಟಿ ವೃತ್ತಿಗಾಯಕ ಪರಂಪರೆಗೆ ಮೂಲವಾಗಿ ಪರಿಣಮಿಸಿದೆ. ಸಾಮಾನ್ಯವಾಗಿ ಸುದೀರ್ಘವಾದ ಕಾವ್ಯಗಳನ್ನು ಹಾಡುತ್ತಾ ತಲೆಮಾರಿನಿಂದ ತಲೆಮಾರಿಗೆ ಆ ಕಾವ್ಯಗಳನ್ನು ಒಯ್ಯುತ್ತಾ ತಮ್ಮದೇ ಆದ ಹಾಡುಗಾರಿಕೆಯ ಸಂಪ್ರದಾಯವನ್ನೂ ಕಾವ್ಯ ಪರಂಪರೆಯನ್ನೂ ಹೊಂದಿರುವ ಗಾಯಕ ಸಮೂಹವೇ "ವೃತ್ತಿಗಾಯಕರು" ಎನಿಸಿಕೊಳ್ಳುತ್ತದೆ. ಇವರು ಸಾಮಾನ್ಯ ಗಾಯಕರಿಗಿಂತ ಕೆಲವು ಅಂಶಗಳಲ್ಲಿ ಭಿನ್ನರಾಗಿ ನಿಲ್ಲುತ್ತಾರೆ. ಸಾಮಾನ್ಯ ಗಾಯಕರು ತಾವು ಕಲಿತ ಹಾಡನ್ನು ತಮ್ಮತಮ್ಮಲ್ಲೇ ಹಾಡಿಕೊಳ್ಳುತ್ತಾರೆ. ಅವರಿಗೆ ನಿರ್ದಿಷ್ಟವಾದ ಶ್ರೋತೃವರ್ಗ ಇರುವುದಿಲ್ಲ.

ವೃತ್ತಿಗಾಯಕರು ಸಂಪೂರ್ಣವಾಗಿ ತಮ್ಮ ಕಲೆಯನ್ನೇ ಅವಲಂಬಿಸಿ ಬದುಕುವವರು. ಸುದೀರ್ಘವಾದ ಕಾವ್ಯಗಳನ್ನೂ, ಲಘು ಲಾವಣಿಗಳನ್ನೂ ಇವರು ಗುರುಮೂಲದಿಂದ ಅಭ್ಯಾಸ ಮಾಡಿರುತ್ತಾರೆ. ಇವರ ಹಾಡನ್ನು, ಕಥೆಯನ್ನು ಕೇಳಲು ಜನ ಇಚ್ಛಿಸುತ್ತಾರೆ. ಇವರನ್ನು ಆಗಾಗ ತಾವೇ ಆಹ್ವಾನಿಸಿ ಹಾಡುವ ಅವಕಾಶವನ್ನು ಜನ





ಕಲ್ಪಿಸಬಹುದು. ಇಲ್ಲವೇ ವೃತ್ತಿಗಾಯಕರೇ ತಮ್ಮ ಅಗತ್ಯಕ್ಕೆ ಅನುಗುಣವಾಗಿ ಹಾಡುತ್ತಾ ಸಂಚಾರಶೀಲರಾಗಬಹುದು.

ಒಂದೇ ಸ್ಥಳದಲ್ಲಿ ಹತ್ತಾರು ದಿನ ಬೇರೆ ಬೇರೆ ಕಥೆಗಳನ್ನು ಹಾಡುವಷ್ಟು ದೊಡ್ಡ ಕಣಜ ಇವರ ಬಳಿ ಇರುತ್ತದೆ. ಸಂಗೀತ, ಸಾಹಿತ್ಯ, ನೃತ್ಯ ಜೊತೆಗೆ ಇವರ ಆಕರ್ಷಕ ವೇಷಭೂಷಣ ಇವುಗಳಿಂದಾಗಿ ಇವರು ಸಾಮಾನ್ಯ ಗಾಯಕರಿಗಿಂತ ಭಿನ್ನವೆನಿಸುತ್ತಾರೆ; ಬೇರೆಯಾಗಿ ನಿಲ್ಲುತ್ತಾರೆ. ಸಾಮಾನ್ಯ ಗಾಯಕರಲ್ಲಿ ಸಾಧಾರಣ ರೂಪದಲ್ಲಿ ಕಾಣಿಸಿಕೊಳ್ಳುವ ಕಥೆಗಳು ಇವರಲ್ಲಿ ಪರಿಷ್ಕೃತ ರೂಪದಲ್ಲಿ, ವಿಸ್ತೃತ ರೂಪದಲ್ಲಿ ಬೆಳವಣಿಗೆಯನ್ನು ಸಾಧಿಸಿಕೊಂಡಿರುತ್ತವೆ. ಸಾಧಾರಣ ಜನಪದ ಕಥೆಯೊಂದು ವೃತ್ತಿಗಾಯಕರಲ್ಲಿ ವಿಸ್ತಾರವಾದ ವಿವರಗಳನ್ನು ತುಂಬಿಕೊಂಡು ಕಾವ್ಯವಾಗಿ ರೂಪುಗೊಳ್ಳುತ್ತದೆ.

-ಜೀ ಶಂ ಪ

ಜಗತ್ತಿನಾದ್ಯಂತ ಜನಪದ ಗೀತೆಗಳು-ಮಾನವ ಚೇತನಗಳ ನಡುವಣ ಪರಸ್ಪರ ಪ್ರೇಮಕ್ಕೆ, ಸ್ನೇಹಕ್ಕೆ ಜೀವನಪೂರ್ತಿ ಹಂಬಲಿಸಿ ಹಣ್ಣಾಗುತ್ತಾ ನಡೆದ ತುಂಬು ಮನಸ್ಸುಗಳ ಸೃಷ್ಟಿಯಾಗಿವೆ. ವಾಸ್ತವವಾಗಿ ಜನಸಮುದಾಯದ ಒಟ್ಟು ಬದುಕನ್ನು ಒಳಗೊಂಡಂತೆ ತೀವ್ರ ಆಶಾವಾದದ, ಅಲ್ಲಿನ ಸೋಲುಗಳನ್ನೇ ಮೆಟ್ಟಿಲಾಗಿಸಿಕೊಂಡ ಕನಸುಗಳ, ಹಲವು ಹತ್ತು ದುರಂತಗಳ ನಡುವೆಯೂ ಬೇಕುಗಳ ಪಟ್ಟಿಯ ಕೊನೆಗಾಣದ ಬಯಕೆಗಳನ್ನು ಸಂಕೇತಿಸುವ ವೈಶಿಷ್ಟ್ಯಪೂರ್ಣ ಯಶಸ್ವೀ ಪ್ರಯತ್ನಗಳನ್ನು ಈ ಗೀತೆಗಳಲ್ಲಿ ಎಡೆಬಿಡದೆ ಕಾಣುತ್ತೇವೆ.

ಕನ್ನಡ ಜನಪದ ಗೀತೆಗಳಲ್ಲಿನ ಹೆಂಗಸರ ಹಾಡುಗಳಲ್ಲಿ ಕಾಣುವ ವೈವಿಧ್ಯ ಅಸಾಧಾರಣವಾದುದು. ಈ ಹಾಡುಗಳ ಅಧ್ಯಯನವು-ಜೀವನದುದ್ದಕ್ಕೂ ನೋವು, ತಿರಸ್ಕಾರ ಮತ್ತು ಅಪಮಾನಗಳಿಗೆ ಬಲಿಯಾದ ಜನವರ್ಗವೊಂದರ ಆವರಣದಲ್ಲಿನ ಸೂಕ್ಷ್ಮ ವಿವರಗಳನ್ನು ಅರ್ಥೈಸಿಕೊಳ್ಳುವ ದೃಷ್ಟಿಯಿಂದ ತುಂಬಾ ಕುತೂಹಲಕರವೂ, ಉಪಯುಕ್ತವೂ ಆಗಿದೆ. ಏಕೆಂದರೆ ವರ್ಗ, ವರ್ಣ, ಜಾತಿ, ಅಸ್ಪೃಶ್ಯತೆಗಳ ಹಲವಾರು ವಿಕಾರಗಳನ್ನೂ ಮೀರಿಸುವ ಅನಾರೋಗ್ಯಕರ ಚಟುವಟಿಕೆಗಳಿಗೆ ಲಿಂಗಭೇದನೀತಿಯೂ ಫಲವತ್ತಾದ ನೆಲೆಯಾಗಿರುವುದನ್ನು ನಾವು ಕಾಣುತ್ತೇವೆ. ಶಿಷ್ಟಸಾಹಿತ್ಯದಲ್ಲಿ ಕೇವಲ ಗಂಡಿನ ಚಿಂತನೆ, ಆಶಯಗಳಷ್ಟೇ ಈ ತನಕ ಪ್ರಕಟಗೊಂಡು ಅದು ಅಲ್ಲಿನ ಮಿತಿಗಳನ್ನೂ ಸೂಚಿಸುತ್ತದೆ. ಮನುಷ್ಯ ಸಹಜವಾದ ಹಕ್ಕು ಅವಕಾಶಗಳನ್ನೇ ಹತ್ತಿಕ್ಕಲಾದ ಸಂದರ್ಭದಲ್ಲಿ ನಿರಾಳವಾದ ಅನಿಸಿಕೆ, ಲವಲವಿಕೆಗಳಿಗೆ ಜಾಗ ಇನ್ನೆಲ್ಲಿರುತ್ತದೆ ? ಆದರೆ ಕಾಲ ಕಾಲಕ್ಕೆ ಜಗತ್ತಿನಾದ್ಯಂತ ಸಮಾಜದ ಪ್ರತಿಷ್ಠಿತ ಮೌಲ್ಯಗಳ ಇಕ್ಕಟ್ಟಿನಲ್ಲಿ ನರಳುತ್ತಲೇ ನಾನಾ ಬಗೆಗಳಲ್ಲಿ ಆ ಒರಟು ಚೌಕಟ್ಟಿಗೆ ಕೂಡ ಪ್ರತಿಕ್ರಿಯೆ ಸೂಚಿಸುತ್ತಾ, ಅಲ್ಲಲ್ಲಿ ಅದಕ್ಕೆ ಹೊರತಾಗಿ ಬದುಕುತ್ತಾ ಬಂದ ಮೂಕ ಜನವರ್ಗಗಳು ತಮ್ಮೆಲ್ಲ ಬವಣೆ, ಆಶೋತ್ತರಗಳನ್ನು ಎರಕ ಹೊಯ್ಯುತ್ತಾ ಅದನ್ನೆಲ್ಲಾ ತಿದ್ದುತ್ತಾ, ತೂಗುತ್ತಾ; ಹಲವೊಮ್ಮೆ ಮೈಮರೆಯುತ್ತಾ, ದಿಕ್ಕುತಪ್ಪುತ್ತಾ ಸಾಗಿಬಂದ ವಿವಿಧ ಪ್ರಮಾಣದ ಸಂಪೂರ್ಣ ದೀರ್ಘಕಥನ ಜಾನಪದದ ವಿವರಗಳಲ್ಲಿ ಅಡಗಿದೆ. ಅದೇ ರೀತಿಯಲ್ಲಿ ಇಂಡಿಯಾದ ಪರಿಸ್ಥಿತಿಯಲ್ಲಿ ಸುಮಾರು ಐದುಸಾವಿರ ವರ್ಷಗಳಿಂದ ಮಾತು ಕಳೆದುಕೊಂಡ ಶೂದ್ರಾತಿಶೂದ್ರ ವರ್ಗಗಳ ಹಿಂಚೂಣಿಯಲ್ಲಿ ನಿಂತ ಸ್ತ್ರೀ ಸಮೂಹ ಕೂಡ ತನ್ನ ಎದೆಯಾಳದ ದಾಖಲೆಗಳನ್ನು ಭಾರತೀಯ ಭಾಷೆಗಳ ಜನಪದ ಸಾಹಿತ್ಯದಲ್ಲಿ





ಕೂಡಿಟ್ಟುಕೊಂಡಿದೆ. ಈ ಅಮೂಲ್ಯ ಭಂಡಾರದ ಮುದ್ರೆಯನ್ನೊಡೆದು ಅಲ್ಲಿನ ಸಂಪತ್ತನ್ನು ಕಾಣುವ, ಸಾಧ್ಯವಾದಲ್ಲಿ ಹೊಸ ಸಾಂಸ್ಕೃತಿಕ ಚೌಕಟ್ಟಿನ ಗಟ್ಟಿತನಕ್ಕೆ ಅದರಿಂದ ಅಗತ್ಯ ನೆರವು ಪಡೆಯುವ ಮುಖ್ಯ ಕಾರ್ಯದಲ್ಲಿ ನಾವು ತೊಡಗಬೇಕಾಗಿದೆ.


ನಮ್ಮ ಒಟ್ಟು ಜನಸಂಖ್ಯೆಯ ಅರ್ಧದಷ್ಟು ಜನರು ಪ್ರಕೃತಿದತ್ತವಾದ ದೈಹಿಕ ರಚನೆಯಲ್ಲಿ ಗಂಡಿಗಿಂತ ಭಿನ್ನರೂ, ಮೊಲೆಮುಡಿಯುಳ್ಳವರೂ ಆಗಿರುವ ವೈಶಿಷ್ಟ್ಯಪೂರ್ಣ ಕಾರಣಕ್ಕಾಗಿಯೇ ಉಳಿದ ಮಾನವ-ಜೀವಿಗಳೊಡನೆ ಸಮಾನತೆ, ಸಹಭಾಗಿತ್ವವನ್ನು ಪಡೆದುಕೊಳ್ಳಲು, ಗಂಡಿನೊಡನೆ ಹಂಚಿಕೊಳ್ಳಲು ಸಾಧ್ಯವಾಗದೆ ಹೋದ ಅನೇಕ ವಿವರಗಳನ್ನು ಅದರ ಬೆಳವಣಿಗೆಯ ಕ್ರಮವನ್ನು ಇಲ್ಲಿ ಗುರುತಿಸಬಹುದಾಗಿದೆ. ಇದರ ಫಲವಾಗಿಯೇ ನಮ್ಮ ಕಲೆ, ಸಾಹಿತ್ಯ, ತತ್ತ್ವಜ್ಞಾನ ಮತ್ತಿತರ ಕ್ಷೇತ್ರಗಳು ಸಾಕಷ್ಟು ಪ್ರಮಾಣದಲ್ಲಿ ಅಪೂರ್ಣವೂ, ಏಕಮುಖವೂ, ಉಪಾಧಿಗ್ರಸ್ತವೂ ಆಗಿದ್ದು ಅನೇಕ ಮಿತಿಗಳನ್ನು ತಂತಾನೆ ಸ್ಥಾಪಿಸಿಕೊಂಡಿರುವ ದಾಖಲೆಗಳನ್ನು ಕುರಿತು ನಾವೀಗ ಚರ್ಚಿಸಬೇಕಾಗಿದೆ.

-ಕಾಳೇಗೌಡ ನಾಗವಾರ

ಬಯಲಾಟದ ಹುಟ್ಟು ಆರಾಧನೆಯಲ್ಲಿದೆಯೆಂಬುದಕ್ಕೆ ಈಗ ಆಧಾರಗಳ ಅಗತ್ಯವಿಲ್ಲ. ಯಾವುದೇ ಆರಾಧನೆಯನ್ನು ನೋಡಿದರೂ ಈ ಮಾತು ಖಾತ್ರಿಯಾಗುತ್ತದೆ. ಆರಾಧನೆಯ ಸುರುವಿನಲ್ಲಿ ದೇವರ ಆವಾಹನೆ, ಅಂತ್ಯದಲ್ಲಿ ವಿಸರ್ಜನೆಯಿರುತ್ತದೆ. ಆವಾಹನೆ ಒಂದು ಪೂಜೆಯಾದರೆ, ವಿಸರ್ಜನೆ ಇನ್ನೊಂದು ಪೂಜೆ. ಈ ಎರಡು ಪೂಜೆಗಳ ನಡುವಿನ ಕ್ರಿಯಾ ಪರಂಪರೆಯೇ ಆರಾಧನೆ. ಈ ಶಿಲ್ಪ ಬಯಲಾಟಗಳಲ್ಲೂ ರಿಪೀಟಾಗುತ್ತದೆ. ಪ್ರಾರಂಭದಲ್ಲಿ ಗಣೇಶಸ್ತುತಿ, ಅಂತ್ಯದ ಮಂಗಳ ಈ ಎರಡು ಪೂಜೆಗಳ ನಡುವಿನ ಕ್ರಿಯಾ ಪರಂಪರೆಯೇ ಬಯಲಾಟ.

ಉತ್ತರ ಕರ್ನಾಟಕದ ಬಯಲಾಟಗಳು ಜನಪದಸಾಹಿತ್ಯದ ಉತ್ಕೃಷ್ಟ ಕೃತಿಗಳಾಗಿವೆ. ಕುರಿತೋದದೆಯೂ ಕಾವ್ಯಪ್ರಯೋಗ ಪರಿಣಿತಮತಿಗಳಾದ ಇವರು ತಮ ಸಮಕಾಲೀನತೆಯನ್ನು ಪ್ರಾಮಾಣಿಕವಾಗಿ ಸೆರೆಹಿಡಿದಿದ್ದಾರೆ. ಶಿಷ್ಟ ಸಾಹಿತ್ಯವನ್ನು ತಾಡೋಲೆ ಪೋಷಿಸಿಕೊಂಡು ಬಂದಂತೆ, ಈ ಸಾಹಿತ್ಯವನ್ನು ಇವರು ನಾಲಗೆಯಲ್ಲಿಟ್ಟುಕೊಂಡು ಕಾಪಾಡಿದರು. ಪ್ರಬುದ್ಧರ ತತ್ತ್ವಜ್ಞಾನ, ವಿಚಾರ-ವೈಖರಿ, ಜೀವನ-ದೃಷ್ಟಿಗಳಿಂದ ಇವರು ಪ್ರಭಾವಿತರಾದದ್ದು ನಿಜ. ಅವರ-ನಿರ್ಗುಣ ತತ್ತ್ವಗಳೆಲ್ಲ ಇಲ್ಲಿ ಸಗುಣವಾದದ್ದೂ ನಿಜ. ಹೀಗೆ ಬೆನ್ನುಹತ್ತುವಲ್ಲಿ ತಮ್ಮ ವ್ಯಕ್ತಿತ್ವದ ತುಸು ಭಾಗವನ್ನು ಮಂದ ಮಾಡಿಕೊಂಡರೂ ತಮ್ಮ ಸಮಸ್ಯೆಗಳಿಗೆ ಅಲಕ್ಷ್ಯವನ್ನೆಂದೂ ತೋರಲಿಲ್ಲ. ತತ್ತ್ವಜ್ಞಾನದ ವಿಷಯ ಬಂದಾಗಲೆಲ್ಲ ಯಾವನಾದರೂ ಹಿಂದಿನ ದೊಡ್ಡ ವ್ಯಕ್ತಿ ಇವರ ಬಾಯ ಮೂಲಕ ಮಾತಾಡಿರಬಹುದು. ಆದರೆ ತಾವು ಬದುಕಿದ ಜೀವನದ ಮಾತು ಬಂದಾಗ ಸ್ವಂತ ವ್ಯಕ್ತಿತ್ವವನ್ನೇ ಮೆರೆದಿದ್ದಾರೆ. ಇವರ ಜೀವನ-ದೃಷ್ಟಿಗೂ ಆದರ್ಶವೇ ಗಮ್ಯವಾದರೂ ಆದರ್ಶದ ಎತ್ತರಗಳನ್ನು ನಿರ್ಧರಿಸುವಾಗ ತಮ್ಮ ಮಿತಿಗಳನ್ನೆಂದೂ ಕಡೆಗಣಿಸಲಿಲ್ಲ, ತಾವು ಮಾನವರೆಂಬುದನ್ನು ಮರೆಯಲಿಲ್ಲ. ಇವರ ಬದುಕಿನ ಅನುಭವ ಸಾಕಷ್ಟು





ವಿಸ್ತಾರವಾಗಿರುವುದರಿಂದ ಕೂದಲೆಳೆಯಂಥ ವಿವರಗಳಿಗಾಗಿ, ತಮ್ಮ ನಂಬುಗೆಯ ಮೇರೆಯನ್ನು ದಾಟಿ ಇದ್ದ ಸತ್ಯಕ್ಕಾಗಿ ಹಂಬಲಿಸಲಿಲ್ಲ. ಬಾಯಿಬಿಟ್ಟು ಹೇಳದಿದ್ದರೂ, ಪ್ರೇಕ್ಷಕರಲ್ಲಿ ರಸೋತ್ಪಾದನೆ ಮಾಡುವುದೇ ಗುರಿಯಾಗಿರುವುದರಿಂದ ಅದಕ್ಕೆ ಅವಶ್ಯವಿದ್ದ ಎಲ್ಲ ಪ್ರಯತ್ನಗಳನ್ನೂ ಮಾಡಿದರು. ಸಮಕಾಲೀನ ವಿಚಾರ-ಧೋರಣೆಗಳ ಪ್ರಚಾರಕ್ಕಾಗಿ ಬಹಳಷ್ಟು ಕಥೆಗಳು ಹುಟ್ಟಿಕೊಂಡಿರಬಹುದು. ಆಯಾಕಾಲಕ್ಕೆ ಇಚ್ಛಿತ ಉದ್ದೇಶ ಈಡೇರಿರಲೂಬಹುದು. ಆ ಎಲ್ಲ ಕಾವು ಹೋದನಂತರ ಮತ್ತೆ ರಸವೊಂದೇ ಇವುಗಳ ಗಮ್ಯವಾದುದನ್ನೂ ಗಮನಿಸಬೇಕು.

-ಚಂದ್ರಶೇಖರ ಕಂಬಾರ



ರಾಮಾಯಣ ಮತ್ತು ಮಹಾಭಾರತಗಳು ಮಾತ್ರ ನಮ್ಮ ದೇಶದ ಮಹಾಕಾವ್ಯಗಳು ಎಂಬ ಸಾರ್ವತ್ರಿಕ ಅಭಿಪ್ರಾಯ ನಮ್ಮದಾಗಿತ್ತು. ಈ ಎರಡು ಮೇರು ಕೃತಿಗಳಷ್ಟೇ ಇಡೀ ಭರತಖಂಡದ ಸಂಸ್ಕೃತಿಯನ್ನು ಪ್ರತಿನಿಧಿಸುವಂಥ ಶಕ್ತಿಯನ್ನು ಪಡೆದುಕೊಂಡಿವೆ ಎಂಬ ನಂಬಿಕೆ ನಮ್ಮದಾಗಿತ್ತು. ಭಾರತದಾದ್ಯಂತ ಅನೇಕ ಬುಡಕಟ್ಟುಗಳು ತಮ್ಮದೇ ಆದ ರಾಮಾಯಣ-ಮಹಾಭಾರತಗಳನ್ನು ಹಾಡಿಕೊಳ್ಳುತ್ತಿದ್ದರಾದರೂ ಸ್ಥಾಪಿತ ಮೌಲ್ಯಗಳಿಗೆ ಅವು ವಿರುದ್ಧವಾಗಿದ್ದುದರಿಂದಾಗಿ ಅವುಗಳನ್ನು ಮಾನ್ಯಮಾಡಲಿಲ್ಲ. ಮಹಾಕಾವ್ಯವೆಂದರೆ ಅದು ನೂರಾರು ಘಟನೆಗಳ ಮೊತ್ತವಾದ್ದರಿಂದ ಅಕ್ಷರ ಬಲ್ಲವನು ಮಾತ್ರ ಅಂಥದ್ದನ್ನು ರಚಿಸಬಲ್ಲನೆಂಬ ತಿಳುವಳಿಕೆಯೂ ಈ ನಿರ್ಲಕ್ಷ್ಯಕ್ಕೆ ಕಾರಣವಿರಬಹುದು. ಇಡೀ ಭಾರತಕ್ಕೆ ಒಂದು ಸಂಸ್ಕೃತಿ ಇದೆ, ಅದೇ 'ಭಾರತೀಯ ಸಂಸ್ಕೃತಿ' ಎಂಬ ಏಕಮುಖೀ ಚಿಂತನೆ ಈ ಅಭಿಪ್ರಾಯಕ್ಕೆ ಕಾರಣವಾಗಿರಬಹುದು. ಆದರೆ, ಈಗ ಒಂದು ದೇಶಕ್ಕೆ ಒಂದೇ ಸಂಸ್ಕೃತಿ ಎಂಬುದಿರುವುದಿಲ್ಲ, ಅದರಲ್ಲೂ ಭಾರತದಂಥ ದೇಶ ಬಹುಮುಖೀ ಸಂಸ್ಕೃತಿಯನ್ನು ಪ್ರತಿನಿಧಿಸುವ ಒಂದು ಸಂಕೀರ್ಣ ಭೂಪ್ರದೇಶವಾಗಿದ್ದು ಕೆಲವರು ಊಹಿಸುವಂಥ ಒಂದೇ ಸಂಸ್ಕೃತಿ ಇರಲು ಸಾಧ್ಯವಿಲ್ಲ ಎಂಬ ತಿಳುವಳಿಕೆ ಗಟ್ಟಿಗೊಳ್ಳುತ್ತಿದೆ. ಪ್ರತಿಯೊಂದು ನೆಲದ ವಿವಿಧ ಭಾಷೆಗಳು, ಅಲ್ಲಿನ ಜನ, ಅವರ ಆಚಾರ-ವಿಚಾರಗಳು, ರೂಢಿಸಿಕೊಂಡ ಮೌಲ್ಯ, ಅವರ ಲೋಕದೃಷ್ಟಿ ಇತ್ಯಾದಿಗಳನ್ನು ಅವಲೋಕಿಸಿದಾಗ ಸಾವಿರಾರು ಸಂಸ್ಕೃತಿ ವಿಶೇಷಗಳು ಕಣ್ಣ ಮುಂದೆ ತಾಕಲಾಡಿ ನಮ್ಮಲ್ಲಿ ದಿಗ್ಭ್ರಮೆ ಹುಟ್ಟಿಸುತ್ತವೆ. ವಾಸ್ತವವಾಗಿ ಸ್ಥಳೀಯವಾದ, ನೆಲದ ಗುಣ ಪಡೆದ, ಆಯಾ ಜನತೆಯ ಉಸಿರಿನೊಡನೆ ಬೆಳೆದು ಬಂದ ಈ ಸಾಂಸ್ಕೃತಿಕ ವಿಶೇಷಗಳು ಭಾರತೀಯ ಸಂಸ್ಕೃತಿಯ ಜೀವಕೋಶಗಳೇ ಹೊರತು 'ಭಾರತಕ್ಕೆ ಒಂದೇ ಸಂಸ್ಕೃತಿ' ಎಂಬುದು ಸುಳ್ಳು ಎಂದೇ ಹೇಳಬೇಕಾಗುತ್ತದೆ.

ಆದರೆ ಇದಕ್ಕೆ ಪ್ರತಿಯಾಗಿ ಸ್ಥಳೀಯ ಸಾಂಸ್ಕೃತಿಕ ವೀರರ ಕಥನಗಳನ್ನು,



ಪವಾಡ ಪುರುಷರು, ಬೈರಾಗಿಗಳು, ಸಾಧಕರ ಮಹಿಮೆಗಳನ್ನು, ಅವರ ಜೀವನ ಪ್ರೀತಿಯ ವಿಶೇಷಗಳೆನಿಸಿದ ಮದ್ಯ, ಮಾಂಸ, ಮೈಥುನ, ಭಂಗಿ ಸೇವನೆಯಂಥ ನಿರಾಕರಿಸಲಾಗದ ವಿಚಾರಗಳನ್ನು, ಸ್ತ್ರೀ ಪ್ರಧಾನವಾದ ದ್ರಾವಿಡ ಮೂಲ ಮೌಲ್ಯಗಳನ್ನು ಹಾಗೂ ಈ ಮೂಲಕ ತಮ್ಮದೇ ನೆಲದ ಗುಣವನ್ನು ಸಹಜವಾಗಿ ಹೊರಸೂಸುವ ದೀರ್ಘ ಕಥನಕಗಳು ನಮ್ಮಲ್ಲಿವೆ. ಈ ಕಥನಗಳೇ ನಿಜವಾದ ಅರ್ಥದಲ್ಲಿ ನಮ್ಮ ಸಂಸ್ಕೃತಿಯ ಇತಿಹಾಸವನ್ನು ನಿರೂಪಿಸಬಲ್ಲವಂಥ ಶಕ್ತಿಪಡೆದವುಗಳು.

ಈ ನೆಲದ ಮೂಲ ನಿವಾಸಿಗಳು, ಆದಿಮ ಸಂಸ್ಕೃತಿಯ ಹರಿಕಾರರು ಎಂದೆಲ್ಲ ಕರೆಯುವ ನಮ್ಮ ಪರಿಶಿಷ್ಟರ ಬುಡಕಟ್ಟು ಸ್ವರೂಪದ ಮೂಲ ಸಂಸ್ಕೃತಿಯನ್ನು; ಉಪಸಂಸ್ಕೃತಿ ಅಥವಾ ಉಪಪರಂಪರೆ ಎಂದು ಕರೆಯಲು ಆರಂಭಿಸಿದ್ದೇವೆ. ನಮ್ಮ ಕರ್ನಾಟಕ ಸಾಹಿತ್ಯ ಅಕಾಡೆಮಿ ಹೊರತಂದ ಇಂಥ ಪರಿಶಿಷ್ಟರ ಸಂಸ್ಕೃತಿ ವಿಶೇಷಗಳಿಗೆ ಸಂಬಂಧಿಸಿದ ಗ್ರಂಥಗಳನ್ನು 'ಉಪಸಂಸ್ಕೃತಿ' ಮಾಲೆ ಎಂದೇ ಕರೆಯಲಾಯಿತು. ಬಹುಶಃ ಈ ರೀತಿಯ ವಿಂಗಡನೆಯನ್ನು ಮೊದಲ ಬಾರಿಗೆ ಮೆಕ್ಸಿಕೋದ ವಿಶಿಷ್ಟ ಜನವರ್ಗಗಳ ಜೀವನವನ್ನು ಕುರಿತು ಅಧ್ಯಯನ ಮಾಡಿದ ರಾಬರ್ಟ್ ರೆಡ್‌ಫೀಲ್ಡ್ ಎಂಬ ವಿದ್ವಾಂಸ ಮಾಡಿದ. ರೆಡ್‌ಫೀಲ್ಡ್ ತನ್ನ ಅಧ್ಯಯನದಲ್ಲಿ ಮುಂದುವರಿದ ಜನರ ಸಂಸ್ಕೃತಿಯನ್ನು ಹಾಗೂ ವ್ಯಾಪಕವಾದುದನ್ನು Greater Tradition ಎಂದೂ ವ್ಯಾಪಕವಲ್ಲದ್ದು ಮತ್ತು ನಿರ್ಲಕ್ಷ್ಯಕ್ಕೆ ಒಳಗಾದ್ದನ್ನು Little Tradition ಎಂಬ ಅರ್ಥದಲ್ಲೂ ಪರಿಗಣಿಸಿದಂತೆ ಕಾಣಿಸುತ್ತದೆ. ಭಾರತವನ್ನು ಕುರಿತು ಅಧ್ಯಯನ ಮಾಡಿದ ಮಿಲ್ಟನ್ ಸಿಂಗರ್ ಮತ್ತು ಮ್ಯಾಕಿಂ ಮ್ಯಾರಿಯೆಟ್ ಎಂಬ ವಿದ್ವಾಂಸರು ಕೂಡ ರೆಡ್‌ಫೀಲ್ಡ್ ಸೂತ್ರವನ್ನೇ ಮುಂದುವರಿಸಿದರು. ನಿರ್ಲಕ್ಷಿತ ಸಂಸ್ಕೃತಿಗಳನ್ನು ಕುರಿತು ಅಧ್ಯಯನ ಮಾಡುತ್ತಿರುವ ಇಂದಿನ ಅನೇಕ ಪ್ರಗತಿಪರ ವಿದ್ವಾಂಸರು ಕೂಡ ಈ ಮಹಾಪರಂಪರೆ ಮತ್ತು ಉಪಪರಂಪರೆಗಳ ಸೂತ್ರವನ್ನೇ ಅನುಸರಿಸುತ್ತಿದ್ದಾರೆ. ಆದರೆ, ವಾಸ್ತವವಾಗಿ ಈ ಪರಿಭಾಷೆ ಸರಿಯೇ? ಮೂಲ ಸಂಸ್ಕೃತಿಯನ್ನು, ಆದಿಮವಾದದ್ದನ್ನು ಉಪಪರಂಪರೆ ಎಂದೂ ಇಂಥ ಬುಡಕಟ್ಟು ಮಹಾಕಾವ್ಯಗಳು ಉಪಪರಂಪರೆಗೆ ಸೇರಿದವುಗಳೆಂದೂ ಅರ್ಥೈಸಿದರೆ ಸರಿ ಹೋಗಬಹುದೆ? ಬುಡಕಟ್ಟು ಮಹಾಕಾವ್ಯಗಳ ಚರ್ಚೆಯ ಜೊತೆಯಲ್ಲೇ ಈ ಸ್ವರೂಪದ ಸಂಸ್ಕೃತಿ ಚರ್ಚೆಯೂ ನಡೆದರೆ ಒಳ್ಳೆಯದೇನೋ!

-ಹಿ ಚಿ ಬೋರಲಿಂಗಯ್ಯ

ಪ್ರಪಂಚದ ಎಲ್ಲ ಕಡೆಗೂ ಜಾನಪದ ಕಥನ ಕಾವ್ಯ ಸಂಪ್ರದಾಯವಿರುವುದನ್ನು ನಾವು ಕಾಣಬಹುದು. ಕರ್ನಾಟಕದಲ್ಲಿ ಕಥೋಪ ಜೀವಿಗಳೂ ವೃತ್ತಿಗಾಯಕರೂ ಎಂದು ಕರೆಯಲ್ಪಟ್ಟಿರುವ ಮಾದೇಶ್ವರ ದೇವರ ಗುಡ್ಡರು, ನೀಲಗಾರರು, ಚೌಡಿಕೆ ಸಂಪ್ರದಾಯದವರು, ಗೊರವರು ಮುಂತಾದ ವೃತ್ತಿ ಕಲಾವಿದ ವರ್ಗಕ್ಕೆ ಕಿನ್ನರಿ ಜೋಗಿಗಳು ಕೂಡಾ ಸೇರುತ್ತಾರೆ.

ಕಿನ್ನರಿ ಜೋಗಿಗಳು ತಮ್ಮ ಕಥನ ಕಲೆಯನ್ನು ಕುಲಕಸುಬೆಂದು ಮೊದಲಿಂದ ಪಾಲಿಸಿಕೊಂಡು ಬಂದವರು. ಗೊಂದಲಿಗರಂತೆ ಇವರೂ ಮಹಾರಾಷ್ಟ್ರದಿಂದ ವಲಸೆ ಬಂದ ಅಲೆಮಾರಿ ಜನಾಂಗ. ನಮ್ಮ ನಾಡಿನ ಹಲವು ಕಡೆ ಈಗ ಇವರು ನೆಲೆನಿಂತಿದ್ದರೂ ಮಳೆಗಾಲದ ನಂತರ ಊರೂರು ಅಲೆದು ಭಿಕ್ಷೆ ಬೇಡುವ ಇಲ್ಲವೆ, ಕರೆಯ ಮೇರೆಗೆ ಆಟ ಆಡುವ ಪರಿಪಾಠ ಇದೆ. ಜೋಗಿಗಳಲ್ಲಿ ಇನ್ನೂ ಹಲವು ಪಂಗಡಗಳಿವೆ. ಹಂದಿಜೋಗಿ. ಟಗರುಜೋಗಿ, ಎಣ್ಣೆಜೋಗಿ, ಕೇಣಿಜೋಗಿ ಇತ್ಯಾದಿ. ಇದೇ ಜೋಗಿ ಪಂಗಡಕ್ಕೆ ಸೇರಿದ ಕಿನ್ನರಿ ಜೋಗಿಗಳು ತಾವು ಪಾಂಡವರ ವಂಶದವರೆಂದು ಭಾವಿಸುತ್ತಾರೆ. ಅಂತೆಯೇ ಇವರಿಗೆ ಅರ್ಜುನ ಜೋಗಿಗಳು ಎಂಬ ಹೆಸರೂ ಇದೆ. ಇತರ ಜನಪದ ವೃತ್ತಿ ಗಾಯಕರಂತೆ ಇವರೂ ಬಡವರು, ನಿರಕ್ಷರಿಗಳು. ತೋಂಡೀ ಸಂಪ್ರದಾಯದವರು.


ಕಿನ್ನರಿ ಜೋಗಿಗಳ ವೇಷ ಸುಮಾರು ಐವತ್ತು ವರ್ಷಗಳ ಹಿಂದೆ ಬಳ್ಳಾರಿ ಭಾಗದಲ್ಲಿ ನಾನು ಕಂಡಂತೆ ಈ ರೀತಿ ಇತ್ತು. ಪಾದದವರೆಗೆ ನಿಲುಕುವ ಕಾವೀ ಬಣ್ಣದ ಕೌಪೀನ, ತಲೆಯ ಮೇಲೆ ಮಣಿಕುಚ್ಚು, ಮುತ್ತಿನ ಹಾರ- ತುರಾಯಿಗಳಿಂದ ಸಿಂಗಾರಗೊಂಡ ಅದೇ ಬಣ್ಣದ ರುಮಾಲು, ಕಿವಿಯಲ್ಲಿ ರುದ್ರಾಕ್ಷಿಯ ಕರ್ಣಕುಂಡಲ, ಇಲ್ಲವೆ ನಾಗಾಭರಣ, ಎದೆಯ ಮೇಲೆ ವಿವಿಧ ಗಾತ್ರಗಳ ನಾಲ್ಕಾರು ರುದ್ರಾಕ್ಷಿ ಮಾಲೆಗಳು, ಹಣೆಯ ಮೇಲೆ ವಿಭೂತಿ ಕುಂಕುಮದ ಬಟ್ಟು, ಬಗಲಲ್ಲಿ ಕೆಂಪು ಇಲ್ಲವೆ ಕಾವಿ ಬಣ್ಣದ ಒಂದೆರಡು ಜೋಳಿಗೆಗಳು, ಕೈಯಲ್ಲಿ ಕಿನ್ನರಿ. ಈ 'ಜೋಗಿ' ವೇಷದಲ್ಲೇ ಮನೆ ಮನೆ ತಿರುಗಿ ಭಿಕ್ಷೆ ಬೇಡುತ್ತಿದ್ದರು. ರಾತ್ರಿ ಕಥೆ ನಡೆಸುತ್ತಿದ್ದರು. ಈಗ ಕಾಲ ಬದಲಾಗಿದೆ. ಹಳೆಯ ಆ ಭವ್ಯ ವೇಷ ಮಾಯವಾಗಿ ಕಚ್ಚೆಪಂಚೆ, ಹರುಕು ಕೋಟು, ಹಳೆಯ ಶಲ್ಯ ಮಾತ್ರ ವೇಷದ ಪರಿಕರಗಳಾಗಿದೆ. ಕಿನ್ನರಿ ಒಂದು ಮಾತ್ರ ಅದೇ ಕೈಯಲ್ಲಿ ಅದೇ ರೀತಿ ಉಳಿದಿದೆ.



ಕಿನ್ನರಿ ಜೋಗಿಗಳು ನಾಥಪಂಥಕ್ಕೆ ಸೇರಿದವರು. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ನಂಕೆಮಲೆ ಹಾಗೂ ಮಂಗಳೂರಿನ ಕದರಿಗಳಲ್ಲಿ ಇವರ ಧಾರ್ಮಿಕ ಪರಂಪರೆಯ ಪವಿತ್ರ ಮಠಗಳಿವೆ. ಕದರಿ ಮಠದ ಮಹಂತರು ಪಂಜಾಬದ ನಾಥಪಂಥಕ್ಕೆ ಸೇರಿದವರಾಗಿರುವ ರೂಢಿ.

ಕಥಾ ನಿರೂಪಣೆಯ ಸ್ವಾತಂತ್ರ್ಯವಿರುವುದರಿಂದ ಕಿನ್ನರಿ ಜೋಗಿಗಳು ಎಂಟೆಂಟು ರಾತ್ರಿಗಳವರೆಗೆ ಭಾರತದ ಕಥೆ ನಡೆಸಬಲ್ಲರು. ಇದರಲ್ಲಿ ಇವರವೇ ಆದ ಕಥಾ ವೈಚಿತ್ರ್ಯಗಳನ್ನು ಕಾಣಬಹುದೆಂಬುದಕ್ಕೆ ಒಂದು ಉದಾಹರಣೆ: ಅರಣ್ಯವಾಸಿಗಳಾದ ಪಾಂಡವರ ಆತಿಥ್ಯದ ಸತ್ವಪರೀಕ್ಷೆಗಾಗಿ ಕೌರವ ದೂರ್ವಾಸ ಋಷಿಗಳನ್ನು ಕಳಿಸುತ್ತಾನೆ. ಪೇಚಿಗೆ ಸಿಕ್ಕ ಧರ್ಮರಾಯ ದ್ರೌಪದಿಯನ್ನು ಕರೆದು "ನೀನು ಪತಿವ್ರತಾ ಎಂಬುದು ನಿಜವಿದ್ದ ಪಕ್ಷದಲ್ಲಿ ಈ ಋಷಿಗಳಿಗೂ ಇವರ ಸಾವಿರ ಶಿಷ್ಯರಿಗೂ ಕೂಡಲೇ ಊಟ ತಯಾರು ಮಾಡು" ಎನ್ನುತ್ತಾರೆ. ಅತಿಥಿಗಳು ಸ್ನಾನಮಾಡಿ ಬರಲು ತೆರಳುತ್ತಾರೆ. ಇತ್ತ ದ್ರೌಪದಿ ಅನ್ಯ ಮಾರ್ಗ ಕಾಣದೆ ಐದು ಜನ ಗಂಡಂದಿರಿಂದ ಒಣ ಕಟ್ಟಿಗೆ ತರಿಸಿ ಚಿತೆಯ ವ್ಯವಸ್ಥೆ ಮಾಡಿಸಿಕೊಂಡು, ಗುಡ್ಡವನ್ನೇರಿ ಅದರಲ್ಲಿ ಧುಮುಕುವ ಮುನ್ನ "ನಾನು ಈ ಪಾಂಡವರ ಪತಿವ್ರತಾ ಸತಿಯಲ್ಲವಾದರೆ ಈ ಕಿಚ್ಚು ನನ್ನನ್ನು ಸುಡಲಿ" ಎಂದು ಗಂಡಂದಿರಿಗೆ ಹೇಳಿ, ಕೃಷ್ಣನನ್ನು ನೆನೆದು, ತನ್ನ ಮುಡಿಯಲ್ಲಿಯ ಮೂರು ಅಕ್ಕಿಕಾಳುಗಳನ್ನು ಚಿತೆಗೆಸೆಯುತ್ತಿರುವಂತೆಯೇ ಗುಡ್ಡದೆತ್ತರದಷ್ಟು ರಂಗೂನ್ ಸಣ್ಣಕ್ಕಿ ಅನ್ನದ ರಾಶಿ ಸಿದ್ಧವಾಗುತ್ತದೆ....." ಹೀಗೆ, ಆ ಜೋಗಿಗಳ ಮಹಾಭಾರತದಲ್ಲಿ ಕಲ್ಪನಾ ವೈಚಿತ್ರ್ಯ ಕಾಣಬಹುದು. ಇವರಿಗೆ ಅಕ್ಷಯ ಪಾತ್ರೆಯ ಜರೂರಿಲ್ಲ.

ಮಹಾಭಾರತವೊಂದನ್ನೇ ಅಲ್ಲದೆ ಕಾಲ್ಪನಿಕ ಅದ್ಭುತ ರಮ್ಯ ಕಥಾನಕಗಳನ್ನೂ ಇವರು ಪ್ರಯೋಗಿಸುವುದೂ ಉಂಟು. ಅವುಗಳಲ್ಲಿಯ ಪವಾಡ, ಸಾಹಸ, ಸಾತ್ವಿಕತೆಗಳ ವೈಭವೀಕರಣಗಳು ಮಾತ್ರ ಒಂದೇ ಮಾದರಿಯವು. ಕಥೆಯು ನಿರೂಪಣೆ, ಸಂಭಾಷಣೆ, ಹಾಡಿನ ಚೌಕಟ್ಟಿನಲ್ಲಿ ಮೈ ತೆರೆದುಕೊಳ್ಳುತ್ತದೆ. ನಾಲ್ಕು ಜನರ ಮೇಳದಲ್ಲಿ ಮುಖ್ಯ ಕಥನಕಾರನ ಕೈಯಲ್ಲಿ ಕಿನ್ನರಿ ಇದ್ದರೆ ಹಿಮ್ಮೇಳದವರು ತಾಳ, ದಮ್ಮಡಿ, ಏಕತಾರಿ ಹಿಡಿದಿರುತ್ತಾರೆ. ಹೆಚ್ಚಿನ ಆಂಗಿಕಾಭಿನಯವಿರುವುದಿಲ್ಲ. ನೃತ್ಯ ಪದಗತಿಯೂ ಪರಿಮಿತವಾದದ್ದು. ಆಡುಮಾತಿನ ಗದ್ಯ ನಿರಾಲಂಕಾರದ ಸರಳ ಹಾಡುಗಾರಿಕೆಯೇ ಹೆಚ್ಚು.



ಅರ್ಥ ಸಂವಹನೆಯ ಮಟ್ಟಿಗೆ ನಾದದ ಬಳಕೆಯೆನ್ನಬೇಕು. ಕಿನ್ನರಿ ಜೋಗಿಗಳ ಕಥನಕಲೆಯ ಒಂದು ವಿಶೇಷವೆಂದರೆ -ವಿವಿಧ ಪಾತ್ರಗಳ ಆವಾಹನೆ. ಆಯಾ ಪಾತ್ರಗಳಿಗೆ ತಕ್ಕ ಮನೋಭಾವಗಳನ್ನು ನಿರಾಯಾಸವಾಗಿ ಬಿಂಬಿಸುತ್ತಾರೆ. ಪಾತ್ರನಿರ್ವಹಣೆಯಲ್ಲಿಯ ಇವರ ನಿರ್ಲಿಪ್ತ ತಾಟಸ್ಥ್ಯ ಸಿದ್ಧಿ ಅಸಾಮಾನ್ಯವಾದದ್ದು.

ಕೀರ್ತನದ ಬಹುಭಾಗ ಏಕಪಾತ್ರಾಭಿನಯದ ವಿಧಾನಕ್ಕೆ ಸೇರಿದ್ದು, ಆದರೆ ಕಿನ್ನರಿ ಜೋಗಿ ನಾಟಕಕ್ಕೆ ತಿರುವು ನೀಡಲಿಕ್ಕಾಗಿ ಹಿಮ್ಮೇಳದವರನ್ನು ಸಂದರ್ಭಕ್ಕೆ ತಕ್ಕ ಪಾತ್ರಗಳನ್ನಾಗಿಸಿಕೊಂಡು ಸಂಭಾಷಿಸುತ್ತಾನೆ.

ತಮ್ಮ ಕಲೆಗೆ ಧಾರ್ಮಿಕ ಸ್ವರೂಪ ಕೊಡುವ ಉದ್ದೇಶದಿಂದ ಸೆರೆಸಿಕ್ಕ ವೀರನನ್ನು ಬಿಡಿಸಲಿಕ್ಕಾಗಿ ಸತ್ತವರನ್ನು ಎಬ್ಬಿಸಲಿಕ್ಕಾಗಿ ಪ್ರೇಕ್ಷಕರಿಂದ ದಾನ ಬೇಡುತ್ತಾರೆ. ಜನರು ತೆರೆದ ಅಂತಃಕರಣದಿಂದ ಹಣ ನೀಡಿ ಕಷ್ಟದಲ್ಲಿದ್ದ ಕಥಾಪಾತ್ರಗಳ ಧರ್ಮಸೆರೆ ಬಿಡಿಸುತ್ತಾರೆ. ಸೂತ್ರದ ಗೊಂಬೆ; ತೊಗಲು ಗೊಂಬೆ, ಗೊಂದಲಿಗರ ಆಟ ಆಡಿಸಿದರೆ ಮಳೆ ಬರುತ್ತದೆಂಬ ಭಾವನೆ ಇವರ ಆಟಕ್ಕೂ ಸಲ್ಲುತ್ತದೆ.

-ಮುದೇನೂರ ಸಂಗಣ್ಣ





ಜಾನಪದ ಗೀತೆಗಳು ಜನತೆಯ ಮನಸ್ಸು ಮತ್ತು ಹೃದಯವನ್ನು ತಿಳಿಯಲು ನಮಗೆ ಸಹಕಾರಿಯಾಗಿವೆ. ಬೇರೆ ಬೇರೆ ಪ್ರದೇಶದ ಹಳ್ಳಿಯ ಹಾಡುಗಳಲ್ಲಿ ಕಂಡುಬರುವ ಸಮಾನಗುಣಗಳಿಂದ ಭಾರತಾದ್ಯಂತವೂ ಮಾನವ ಸ್ವಭಾವದ ವೈವಿಧ್ಯತೆಯಲ್ಲಿರುವ ಏಕತೆಯನ್ನು ನಾವು ನೋಡುತ್ತೇವೆ. ಎಲ್ಲ ದೇಶಗಳ ಲೋಕಗೀತಗಳನ್ನು ಸಂಗ್ರಹಿಸಿದ್ದಲ್ಲಿ ಮತ್ತು ಒಂದನ್ನೊಂದು ಹೋಲಿಸಿ ನೋಡಿದಲ್ಲಿ ಎಲ್ಲ ಮಾನವ ಕುಲಕ್ಕೂ ಸಾಮಾನ್ಯವಾದ ಮನಸ್ಸು ಹೃದಯಗಳು ಅವುಗಳಲ್ಲಿ ಅಡಗಿರುವುದನ್ನೂ ಕಾಣಬಹುದಾಗಿದೆ.

-ರವೀಂದ್ರನಾಥ ಠಾಗೂರ್



ಮೊಹರಂ ಹಾಡುಗಳಿಗೆ ಅಲಾವಿ ಪದಗಳೆಂದೂ ಕರೆಯುವ ವಾಡಿಕೆ. ನಾಗರಪಂಚಮಿಯಲ್ಲಿ ಹೆಂಗಳೆಯರು ಹಾಡುವ ಜೋಕಾಲಿ ಪದಗಳಂತೆ, ಗೋಕುಲಾಷ್ಟಮಿಯಲ್ಲಿ ಕೇಳಿಬರುವ ಕೃಷ್ಣನ ಪದಗಳಂತೆ, ಹೋಳೀ ಹುಣ್ಣಿಮೆಯಲ್ಲಿ ಗಂಡಸರು ಹಾಡುವ ಲಾವಣಿಗಳಂತೆ ಈ ಮೊಹರಂ ಹಾಡುಗಳು ಕೂಡ ಮೊಹರಂ ಹಬ್ಬದಾಚರಣೆಯ ಸಂದರ್ಭದಲ್ಲಿ ಮಾತ್ರ ಬಯಲಿಗೆ ಬರುತ್ತವೆ. ಹಜರತ್ ಇಮಾಮ್ ಹಸನ್ ಮತ್ತು ಹುಸೇನರ ಪವಿತ್ರಜೀವನದ ಅಮರ ಸಂದೇಶವನ್ನು ಮನೆಮನೆಗೂ ಮನಮನಕ್ಕೂ ನೆನಪಿಸಿ ಕೊಡುತ್ತವೆ. ಈ ಮೊಹರಂ ಉತ್ಸವದ ಕಾಲದಲ್ಲಿ ಹಳ್ಳಿಯ ಎಳೆಯ ಮಕ್ಕಳನ್ನು ಮೊದಲ್ಗೊಂಡು ಮುಪ್ಪಿನವರವರೆಗೂ ಈ ಹಾಡುಗಳ ಸಾಲುಗಳು ಜನರ ನಾಲಗೆಯ ಮೇಲೆ ಸಲೀಸಾಗಿ ಸುಳಿದಾಡುತ್ತವೆ. ಈ ಹಾಡುಗಳು ಒಂದು ಜಾತಿಯ ಜನರ ಸೊತ್ತಲ್ಲ. ಮೊಹರಂ ಉತ್ಸವವೇ ಹಳ್ಳಿಯಲ್ಲಿರುವ ಹಿಂದು-ಮುಸ್ಲೀಮರ ಮಧುರ ಮೈತ್ರಿಯ ಸಾಂಕೇತಿಕ ಉತ್ಸವವಾಗಿರುವಾಗ ಈ ಹಾಡುಗಳಿಗೆ ಯಾವ ಜಾತಿ-ಮತದ ಕಟ್ಟು ಬೀಳಲುಂಟು ? ಮೊಹರಂ ಹಾಡುಗಳು ನಮ್ಮ ಗ್ರಾಮ ನಿವಾಸಿಗಳ ಭಾವೈಕ್ಯದ ಬೀಜಮಂತ್ರಗಳಾಗಿಯೇ ಇಂದಿಗೂ ಬಳಸಲ್ಪಡುತ್ತವೆ. ಈ ಜಾತ್ಯತೀತ ಉತ್ಸವದ ಬೆಡಗನ್ನು ಹಳ್ಳಿಯಲ್ಲಿ ಪ್ರತ್ಯಕ್ಷವಾಗಿ ಕಂಡುಂಡವರು ಕೊಂಡಾಡದಿರಲಾರರು.

-ಬಿ ಎ ಸನದಿ





. . . . ಹಳ್ಳಿಯ ಹಾಡುಗಳೂ ಮೊದಲು ಮೊದಲು ಹೃದಯದಲ್ಲಿ ತುಂಬಿದ ಭಾವನೆಗಳನ್ನು, ರೈತರು ಹಾಡಿಕೊಳ್ಳುವುದಕ್ಕಾಗಿಯೇ ಹುಟ್ಟಿದವು. ರೈತನು ತನ್ನ ಸುಖ, ತನ್ನ ನೋವು, ತನ್ನ ಆಸೆ, ಸಂಶಯ, ಭಯ, ನಚ್ಚು, ಮಾತೃಪ್ರೇಮ, ಗಂಡನಲ್ಲಿ ಹೆಂಡತಿಗೆ ಇರುವ ಮನೋಭಾವ, ಬಂಜೆತನದ ಕಷ್ಟ, ದೇವರಲ್ಲಿ ಭಕ್ತಿ, ಪ್ರಕೃತಿಯನ್ನು ನೋಡಿ ಉಂಟಾದ ಆನಂದ, ಜೀವನದಲ್ಲಿ ತೋರಿದ ಒಂದು ವಿನೋದ, ಹಾಸ್ಯ-ಇವುಗಳನ್ನು ತನ್ನ ಪಾಡಿಗೆ ತಾನು-ತನ್ನ ಮನಸ್ಸಿನ ತೃಪ್ತಿಗೆ ಹಾಡಿಕೊಳ್ಳಲು ಮೊದಲು ಹುಟ್ಟಿದ ಕಾವ್ಯಗಳೇ ಹಳ್ಳಿಯ ಹಾಡುಗಳು.


- ಗೊರೂರು ರಾಮಸ್ವಾಮಿ ಅಯ್ಯಂಗಾರ್



. . . . ಈ ದೇಶದಲ್ಲಿ ಜೈಮಿನಿ, ರಾಜಶೇಖರಗಳಂತಹ ಪ್ರೌಢ ಗ್ರಂಥಗಳನ್ನು ಆ ಕೊನೆಯಿಂದ ಈ ಕೊನೆಯುವರೆಗೆ ಕಂಠಪಾಠ ಮಾಡಿರುವ ನಿರಕ್ಷರರಿದ್ದಾರೆ. ಚಿಟಿಕೆ ಹೊಡೆಯುವಷ್ಟು ಹೊತ್ತಿನಲ್ಲಿ ಹಾಡು-ಲಾವಣಿಗಳನ್ನು ಕಟ್ಟಬಲ್ಲ ಪಾಮರರಿದ್ದಾರೆ; ಸಾವಿರಾರು ನುಡಿಯ ಹಾಡುಗಳು ಇಪ್ಪತ್ತು ಮೂವತ್ತನ್ನು ನಿರಾಯಾಸವಾಗಿ ಚಾಚೂ ತಪ್ಪಿಲ್ಲದೆ, ಇತರರ ಸಹಾಯವಿಲ್ಲದೆ ಬಾಯಲ್ಲಿ ಹೇಳುವ 'ಹೆಣ್ಣು ಹೆಂಗಸರಿದ್ದಾರೆ'. ಹೆಸರಾದ ಡಾಕ್ಟರುಗಳು ಕೈಬಿಟ್ಟ ವ್ಯಾಧಿಗಳನ್ನು 'ಘುಟಿಕಾ ಮಂತ್ರ ಮೂಲಿಕೆ'ಗಳಿಂದ ಗುಣಪಡಿಸಬಲ್ಲ ಅಜ್ಞರಿದ್ದಾರೆ. ಇವರೆಲ್ಲರನ್ನೂ ಒಳಗೊಂಡಿರುವ ಜನಾಂಗದಲ್ಲಿ ಪಂಡಿತ ಸಂಸ್ಕೃತಿ, ಪಾಮರ ಸಂಸ್ಕೃತಿ, ಮೇಲಿನವರ ಸಂಸ್ಕೃತಿ, ಕೆಳಗಿನವರ ಸಂಸ್ಕೃತಿ ಎಂದು ವಿಭಾಗ ಮಾಡುವುದು ಸಾಧ್ಯವಿಲ್ಲ.

- ದೇವುಡು





ಜನಪದ ಕಲೆ ಜನಸಾಮಾನ್ಯರ ಕಲೆ. ಮಾನವರ ಉಗಮದೊಂದಿಗೆ ಜನಪದ ಕಲೆಯೂ ಉಗಮವಾಯಿತು. ಲಿಪಿ ಬೆಳೆಯುವ ಮೊದಲು ಚಿತ್ರಗಳೇ ಲಿಪಿಯ ಸ್ಥಾನದಲ್ಲಿ ಕೆಲಸ ಮಾಡುತ್ತಿದ್ದವು. ಮಾನವ ಸಂಸ್ಕೃತಿ ಬೆಳೆದಂತೆ ವಿವಿಧ ಕಲೆಗಳು ಅವನಲ್ಲಿ ಮೂಡಿಬಂದವು. ಸಂತೋಷ ಸಡಗರಗಳನ್ನು ವ್ಯಕ್ತಗೊಳಿಸಲು ಕುಣಿತಗಳನ್ನು ರೂಢಿಸಿಕೊಂಡ. ಮನಸ್ಸಿನ ಉಲ್ಲಾಸಗಳನ್ನು ಹಂಚಿಕೊಳ್ಳಲು ಸಂಗೀತವನ್ನು ಬಳಸಿಕೊಂಡ. ಪ್ರಕೃತಿಯ ವೈಚಿತ್ರಗಳನ್ನು ನೋಡಿ ತಾನು ಚಿತ್ರಗಳ ಮೂಲಕ, ಶಿಲ್ಪಗಳ ಮೂಲಕ ಕಲಾಭಿವ್ಯಕ್ತಿಯನ್ನು ಸಾಧಿಸಿದ. ಹೀಗೆ ಕಲೆ ಎಂಬುದು ಪ್ರಾಚೀನ ಕಾಲದಿಂದಲೂ ಬೆಳೆದುಬಂದು, ಇದು ಅತ್ಯುತ್ತಮವಾದ ರೂಪಕಗಳಲ್ಲಿ ವ್ಯಕ್ತವಾಗಿದೆ.

ಜನಪದರು ಬೇಟೆ ಸಾಧನಗಳಲ್ಲಿ, ವ್ಯವಸಾಯದ ಉಪಕರಣಗಳಲ್ಲಿ ವಿವಿಧ ವೃತ್ತಿಯ ಸಾಧನ ಸಲಕರಣೆಗಳಲ್ಲಿ ಒಂದು ಕಲಾತ್ಮಕವಾದ ಅಭಿರುಚಿಯನ್ನು ತೋರಿಸುತ್ತಲೇ ಬಂದಿದ್ದಾರೆ. . ಆದುದರಿಂದ ಕಲೆ ಇಲ್ಲದೆ ಅವರ ಬಧುಕಿಲ್ಲ. ಕಲೆ ಅವರಿಗೆ ಹೃದಯ ವೈಶಾಲ್ಯವನ್ನು, ಸಹಕಾರ ಮನೋಭಾವವನ್ನು ಪರಸ್ಪರ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಡುವ ಸಾಧನವಾಗಿದೆ. ಜಾತಿಮತಗಳ ಗೊಂದಲಗಳ ಆಚೆಗೆ ನಿಂತು ಜನಪದ ಕಲೆ ಮನುಷ್ಯನ ಬದುಕಿನ ಬೆಳಕಾಗಿ ಉಳಿದು ಬಂದಿದೆ.


- ಪಿ ಆರ್ ತಿಪ್ಪೇಸ್ವಾಮಿ

. . . .ಯಕ್ಷಗಾನ ಬಯಲಾಟವು ಕರ್ನಾಟಕದ ಸಂಸ್ಕೃತಿಯ ಒಂದು ಉತ್ತಮವಾದ ಅಂಗ. ಅದು ಅಖಿಲ ಕರ್ನಾಟಕದ ಬೇರೆ ಬೇರೆ ಮೂಲಗಳಲ್ಲಿ, ಹತ್ತೆಂಟು ಆಕಾರಗಳಲ್ಲಿ ಕಾಣಸಿಗುತ್ತದೆ. ಆದರೆ, ಅದರ ಪುಷ್ಟವಾದ, ಸಂಪತ್ಸಮೃದ್ಧವಾದ, ರಸಾವಿಷ್ಟವಾದ ರೂಪವನ್ನು ನಾವು ಕಾಣಬೇಕಾದರೆ, ಕರ್ನಾಟಕದ ಮಲೆನಾಡಿನ ಕಡೆಗೆ ದೃಷ್ಟಿಯನ್ನು ಹರಿಯಿಸಬೇಕು. ಯಾವ ಕಲೆಯೇ ಆಗಲಿ, ಸಂಸ್ಕಾರವೇ ಆಗಲಿ ದೇಶೀಯ ಆವರಣದಲ್ಲಿ, ಪ್ರೇರಣೆಯಲ್ಲಿ ಹುಟ್ಟಿ ಬೆಳೆದಿದ್ದಾದರೆ, ಅದು ದೀರ್ಘಕಾಲ ಬಾಳುತ್ತದೆ; ಅದು ಶಕ್ತಿಯುತವಾಗಿ ಕೆಲಸ ಮಾಡುತ್ತದೆ.

ನಮ್ಮ ಮಲೆನಾಡಿನ ನಿವಾಸಿಗಳ ಭಾವ ಜೀವನವು ವಿಶೇಷವಾಗಿ ಪರಿಣಾಮಕಾರಿಯಾಗಿ ಪ್ರಕಟವಾದೊಂದು ಸಾಧನವಿರುವುದಾದರೆ-ಅದು ನಮ್ಮ ಯಕ್ಷಗಾನ ಕಲೆಯಲ್ಲಿ. ಅದು ಇತರ ಕಲೆಗಳಂತೆಯೇ ಮತಧರ್ಮಗಳಿಂದ ಪ್ರೇರಣೆಗೊಂಡು ವಿಕಾಸಗೊಂಡದ್ದು ನಿಜ. ಈ ಕಲೆಯು ಒಂದೇ ಮುಖದ ಕಲೆಯಲ್ಲ. ಬ್ರಹ್ಮನಿಗಿರುವಂತೆ ನಾಲ್ಕು ಮುಖಗಳು ಅದಕ್ಕಿವೆ. ಅದು ಸಮ್ಮಿಶ್ರ ಕಲೆ. ನೃತ್ಯ, ನಾಟಕ, ಗೀತ, ಚಿತ್ರ - ಈ ನಾಲ್ಕು ಪ್ರಬಲ ಮಾಧ್ಯಮಗಳ ಸಮ್ಮೇಳನದಿಂದ ಬೆಳೆದುಬಂದ ಸಾಧನವದು. ನಾವು 'ಯಕ್ಷಗಾನ' ಎಂಬ ಪದವನ್ನು ಹೇಳುವಾಗಲೆಲ್ಲ, ಕೇಳುವಾಗಲೆಲ್ಲ 'ಗಾನ' ಎಂಬ ಪದವು ಪ್ರತ್ಯಕ್ಷ ಅರ್ಥದಲ್ಲಿ ಬೋಧೆಯಾದರೂ, ಪರೋಕ್ಷದಲ್ಲಿ ನೃತ್ಯ, ಚಿತ್ರ, ನಾಟಕಗಳೂ ಅದರಲ್ಲಿ ಅಡಕವಾಗಿವೆ ಎಂಬ ಅರಿವು ನಮಗಿರುತ್ತದೆ. ಮಲೆನಾಡಿನ ರಸಿಕ ಜೀವನಕ್ಕೆ ಯಕ್ಷಗಾನ ಹಿರಿಯ ಸಾಧನವಾಗಿದೆ. ಈ ರಸಿಕ ಜೀವನವು ವಿಲಾಸ ಮುಖಿಯಲ್ಲ; ಉದಾತ್ತ ಜೀವನಕ್ಕೆ ಸಂಬಂಧಿಸಿದ್ದು, ಸೌಂದರ್ಯ ಮುಖಿಯಾದುದು.

- ಶಿವರಾಮ ಕಾರಂತ





ಜನರ ವಿಚಾರ ಹಾಗೂ ಮನೋಧರ್ಮವನ್ನು ರೂಪಿಸಲು ಜಾನಪದ ಅಧ್ಯಯನವು ನೆರವಾಗಬಲ್ಲದು ಎನ್ನುವ ಉದ್ದೇಶವನ್ನು ಈ ರೀತಿ ವಿವರಿಸಬಹುದು. ಜಾನಪದ ಅಧ್ಯಯನದಿಂದ, ಒಂದು ಸಂಸ್ಕೃತಿಯ ಜನರು ಇನ್ನೊಂದು ಸಂಸ್ಕೃತಿಯ ಜನರನ್ನು ಹೆಚ್ಚು ಹೆಚ್ಚಾಗಿ ಅರ್ಥಮಾಡಿಕೊಳ್ಳಬಹುದು. ಭಿನ್ನ ಸಂಸ್ಕೃತಿಗಳ ಜನರ ನಡುವೆ ಅಪನಂಬಿಕೆ, ಸಂಶಯ, ದ್ವೇಷ ಹೆಚ್ಚುತ್ತಿರುವ ಇಂದಿನ ಸಂದರ್ಭದಲ್ಲಿ ಇದು ಬಹಳ ಮುಖ್ಯವಾದ ಸಂಗತಿ. ಪ್ರತಿಯೊಂದು ಸಮಾಜಕ್ಕೂ ಬದುಕಿನ ಬಗ್ಗೆ ತಮ್ಮದೇ ಆದ ಒಂದು ದೃಷ್ಟಿಕೋನವಿರುತ್ತದೆ. ಇದನ್ನು ಸಾವು ಅಂತಹ ಸಮಾಜದ ಜಾನಪದ ಅಧ್ಯಯನದಿಂದ ತಿಳಿದುಕೊಳ್ಳಬಹುದು. ಜನಪದ ಆಶಯಗಳನ್ನು ಅಧ್ಯಯನ ಮಾಡಿದಾಗ, ಜಗತ್ತಿನ ವೈವಿಧ್ಯಮಯ ಆಲೋಚನೆಗಳ, ಕ್ರಿಯೆಗಳ ಸಾಮ್ಯ ಗಮನ ಸೆಳೆಯುತ್ತದೆ. ಆದರೆ ಅಭಿವ್ಯಕ್ತಿಯ ಸ್ವರೂಪಗಳು ಮಾತ್ರ ಬೇರೆ ಬೇರೆಯಾಗಿರುತ್ತವೆ.

- ಬಿ ಎ ವಿವೇಕ ರೈ



. . . . ಜನಪದ, ಜಾನಪದ ಚಿಂತನೆಯ ಮೂಲ ವಿಕೇಂದ್ರೀಕೃತ ವೈಜ್ಞಾನಿಕ ಸಮಾನತಾ ಸಮಾಜದ ಚಿಂತನೆಯಲ್ಲಿದೆ. ಜನಪದ ವಿಜ್ಞಾನ ಜನಗಳ ಹಿತಕ್ಕಾಗಿ ಮತ್ತು ಅವರ ಅಧೀನದಲ್ಲಿ ಇರಬೇಕು. ಭಸ್ಮಾಸುರ ತನ್ನ ಅಂಗೈಯಲ್ಲಿರುವ ತನ್ನ ಸಾವನ್ನು ವರ ಎಂದು ಇಟ್ಟುಕೊಂಡಂತೆ ನಮ್ಮ ವಿಜ್ಞಾನ ಆಗಬಾರದು. ಆ ದೃಷ್ಟಿಯಿಂದ ಮಹಾತ್ಮ ಗಾಂಧೀಜಿ ಚಿಂತನೆಯಂತೆ ಜನಪದ ವಿಜ್ಞಾನ, ಜನಪದ ಶಿಕ್ಷಣ, ಜೀವನ ಸಂಸ್ಕೃತಿ-ಜನಪದ ಬದುಕು ಜೀವಿಸುವ ಹಕ್ಕಾಗಿ ಉಳಿಯಬೇಕು. ಜಾನಪದದ ತಂತ್ರಜ್ಞಾನವೆಂದರೆ ಬದುಕುವ ಹಕ್ಕಿನ ತಂತ್ರಜ್ಞಾನ.

-ಹಿ ಶಿ ರಾಮಚಂದ್ರೇಗೌಡ



...... ಒಮ್ಮೊಮ್ಮೆ ಅನೇಕ ದಿನಗಳವರೆಗೆ ನಾನು ಗಿರಿಜನರನ್ನಲ್ಲದೆ ಬೇರೆಯವರನ್ನು ನೋಡುವುದೇ ಕಷ್ಟವಾಗುತ್ತಿತ್ತು. ಒಂದು ವರ್ಷ ಪಟಾನ್ ಘರ್‌ನಲ್ಲಿದ್ದ ಐದು ತಿಂಗಳು ಮಳೆಗಾಲದಲ್ಲಿ ಹೊರಪ್ರಪಂಚದ ಜನರನ್ನು ನೋಡಿದ್ದು ಕೇವಲ ಐದು ಮಂದಿ. ಶಾಮರಾವ್ ಇಲ್ಲದೆ ನಾನೊಬ್ಬನೆ ಸಂಚಾರ ಮಾಡಬೇಕಾಗಿ ಬಂದಾಗ, ಮೂರು-ನಾಲ್ಕು ವಾರಗಳ ಕಾಲ ಇಂಗ್ಲಿಷಿನ ಒಂದು ಪದವನ್ನೂ ಮಾತನಾಡದ್ದು ಉಂಟು. ಇದು ನನಗೆ ಒಂಟಿತನದ ಬೇಸರವನ್ನುಂಟು ಮಾಡಿದರೂ, ಒಂಟಿಯಾಗಿ ಬಾಳುವ ಜನರನ್ನು ಅರ್ಥಮಾಡಿಕೊಳ್ಳುವ ಅವಕಾಶ ಒದಗಿಸಿತು. ಇವರ ಜೊತೆಗೆ ಬರೆಯಲೂ, ಸಂಶೋಧನೆ ಮಾಡಲೂ ಸೊಗಸಾದ ಅವಕಾಶ ಸಿಕ್ಕಿತು.

1931 ರಿಂದ 1953 ರ ವರೆಗಿನ ಬಹುಕಾಲವನ್ನು ನಾನು ಹುಲ್ಲು ಗುಡಿಸಲುಗಳಲ್ಲಿ ಕಳೆದೆ. ಮೊದಮೊದಲಿಗೆ ತುಂಬಾ ಚಿಕ್ಕ ಗುಡಿಸಲುಗಳಲ್ಲಿ ಇರುತ್ತಿದ್ದೆ. ಹುಲ್ಲು ಗುಡಿಸಲಿನ ಅನುಕೂಲವೇನೆಂದರೆ, ನಮಗೆ ಸರಿಕಾಣದಾಗ ಒಂದು ಗೋಡೆ ತೆಗೆದು ಬೇಕಾದ ಹಾಗೆ ಬದಲಾಯಿಸಿಕೊಳ್ಳಬಹುದು; ಇಲ್ಲ, ಇಡೀ ಗುಡಿಸಲನ್ನೇ ಕಿತ್ತು ಬೇರೆ ಕಟ್ಟಿಕೊಳ್ಳಬಹುದು. ಮಳೆಗಾಲದಲ್ಲಿ ನೀರು ಅಲ್ಲಲ್ಲಿ ತೊಟ್ಟಕ್ಕಿದರೂ ಬೇಸಗೆಯಲ್ಲಿ ತಣ್ಣಗಿರುತ್ತದೆ. ಅಲ್ಲದೆ ಮಳೆ ಹೊಯ್ಯುವಾಗ ತಗಡಿನ ಮನೆಯಲ್ಲಿ ಆಗುವ ಶಬ್ದ ಆಗುವುದಿಲ್ಲ. ನಾವಿದ್ದ ಗುಡಿಸಲುಗಳ ನೆಲವನ್ನು ದಿನಾ ಅಥವಾ ದಿನಬಿಟ್ಟು ದಿನಾ ಹಸುವಿನ ಸಗಣಿಯಿಂದ ಸಾರಿಸುತ್ತಿದ್ದೆವು. ಸಗಣಿಯಿಂದ ಸಾರಿಸದೆ ಇರುವ ಮನೆಗಳಲ್ಲಿರುವವರಿಗೆ ಇದು ವಿಚಿತ್ರವಾಗಿ ಕಾಣುತ್ತದೆ. ಆದರೆ ಸಗಣಿಯಿಂದ ಸಾರಿಸಿದರೆ ಸ್ಥಳ ನಿರ್ಮಲವಾಗುವುದಲ್ಲದೆ ಮನಸ್ಸಿಗೆ ನೆಮ್ಮದಿಯೂ ಆಗುತ್ತದೆ.

.....ಗೊಂಡ್ ಹಾಡುಗಳು ಸರಳ ಹಾಗು ಸಾಂಕೇತಿಕವಾಗಿವೆ. ನೆಲ, ಆಕಾಶ, ಕಾಡು, ಬೆಟ್ಟ, ನದಿಗಳನ್ನೂ, ಬಂದುಹೋಗುವ ಋತುಗಳನ್ನು ಮನುಷ್ಯನ ಕಷ್ಟ ಸುಖಗಳನ್ನೂ, ಮುಚ್ಚು ಮರೆಯಿಲ್ಲದ ಮತ್ತು ನಾಚಿಕೆಯಿಲ್ಲದ ಪ್ರೇಮವನ್ನೂ ಅವರ ಸ್ವಚ್ಛಂದ ಹಾಡುಗಳಲ್ಲಿ ಕಾಣಬಹುದು. ಕುಣಿಯುತ್ತಾ ಹಾಡುವ ಹಾಡುಗಳೇ ಹೆಚ್ಚು ಅವರಲ್ಲಿ. ಅವುಗಳಲ್ಲಿ ತುಂಬಾ ಸೊಗಸಾದುವುಗಳೆಂದರೆ, ಅವರ ಕರ್ಮನೃತ್ಯಕ್ಕೆ ಸಂಬಂಧಪಟ್ಟ ಹಾಡುಗಳು. ಈ ಕರ್ಮನೃತ್ಯ ಮಧ್ಯ ಇಂಡಿಯಾದ ಮೂಲನಿವಾಸಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ. ವಸಂತ


ಋತುವಿನಲ್ಲಿ ಮರಗಿಡಗಳು ಬೆಳೆಯುವುದನ್ನು ಸೂಚಿಸುತ್ತದೆ ಈ ನೃತ್ಯ. ಕೆಲವು ವೇಳೆ ಮರವನ್ನು ಊರಿನಲ್ಲಿ ನೆಟ್ಟು ಅದರ ಸುತ್ತ ಕುಣಿಯುವುದುಂಟು. ಡೋಲುಗಳ ಬಡಿತಕ್ಕೆ ಹೆಂಗಸರೂ, ಗಂಡಸರೂ ಹಿಂದಕ್ಕೂ ಮುಂದಕ್ಕೂ ಕಾಲಿಡುತ್ತಾ ಕುಣಿಯುತ್ತಾರೆ. ಅನೇಕ ವೇಳೆ ರಾತ್ರಿಯಲ್ಲಿ ಕುಣಿಯುವುದುಂಟು. ಅಂತೂ ಕುಣಿಯುವುದರಲ್ಲಿ ಅವರು ತಲ್ಲೀನರಾಗಿಬಿಡುತ್ತಾರೆ.

..... ಪಂಡಿತರಲ್ಲಿ ನನ್ನ ಬಗ್ಗೆ ತೋರಿಬಂದ ದೊಡ್ಡ ಸಂಶಯವೆಂದರೆ, ನಾನು ಕಾವ್ಯದ ಮೂಲಕ ಮಾನವಶಾಸ್ತ್ರಕ್ಕೆ ಕಾಲಿಟ್ಟಿದ್ದು. ಇದರಲ್ಲಿ ಏನು ತಪ್ಪು ಎಂಬುದು ನನಗೆ ಇಲ್ಲಿಯವರೆಗೆ ಗೊತ್ತಾಗುತ್ತಿಲ್ಲ. ಮಾನವನನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಯ ಮುಖ್ಯ ಸಮಸ್ಯೆ ಎಂದರೆ, ಮೇಲೆ ತೋರಿಕೆಗೆ ಕಾಣುವುದರ ಕೆಳಗೆ ದಾರಿಮಾಡಿಕೊಳ್ಳುವುದು. ಅವನು ಜನರನ್ನು 'ಅಗೆ'ಯ ಬೇಕು. ಬಯಲು ಮಾಡುವುದು, ಪರದೆ ಎತ್ತಿ ತೋರಿಸುವುದು ಕಾವ್ಯದ ಕೆಲಸ. ಮನುಷ್ಯನ ಸೂಕ್ಷ್ಮ ಬುದ್ಧಿಯನ್ನು ಕೆರಳಿಸಿ, ಅವನ ಊಹೆಯ ಭಂಡಾರವನ್ನು ತೆರೆದು, ಅವನಲ್ಲಿ ಕರುಣೆ ಹಾಗೂ ಅರಿವನ್ನು ಮೂಡಿಸುತ್ತದೆ ಕಾವ್ಯ.

..... ಜನರ ಮಾತೂ ಕಾವ್ಯಮಯವಾಗಿರುವುದನ್ನು ಕಂಡೆ. ಬೆಂಕಿ, ಒಣಗಿದ ಮರ ಹೂ ಬಿಟ್ಟಂತೆ, ಎಂದು ಮುದುಕಿಯೊಬ್ಬಳು ಹೇಳುತ್ತಾಳೆ. ಕೊಡೆ, ಒಂಟಿ ಕಾಲಿನ ನವಿಲಂತೆ! ರಾತ್ರಿ ಹೊತ್ತು ಬೆಂಕಿ ಕಾಯಿಸುತ್ತ ಕುಳಿತು ಹುಡುಗರು ಕಾವ್ಯಮಯವಾದ ಭಾಷೆಯಲ್ಲಿ ಒಗಟುಗಳನ್ನು ಹೇಳುತ್ತಾರೆ. ಮೆಣಸಿನ ಕಾಯಿಗಳು ಪೊದೆಯ ಮೇಲೆ ಕುಳಿತ ಕೆಂಪು ಮತ್ತು ಹಸುರು ಹಕ್ಕಿಗಳಂತೆ. ಲ್ಯಾಂಪು, ಮನೆಯಲ್ಲೆಲ್ಲಾ ಗರಿಗಳನ್ನು ಉದುರಿಸುವ ಪುಟ್ಟ ಗುಬ್ಬಚ್ಚಿ. ಗರ್ಭಿಣಿಯಾದ ಹೆಂಡತಿಯನ್ನು ಕುರಿತು ಗಂಡ ಹೇಳುತ್ತಾನೆ, 'ಆಕೆಯನ್ನು ಹೂವಿನಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಹೂವಿನೊಳಗಿನ ಬೆಳಕು ನಂದಿಹೋಗುತ್ತದೆ' ಎಂದು. ಹುಡುಗ ಹುಡುಗಿಯರು ಹೊಲಗದ್ದೆಗಳಲ್ಲಿ ತಮ್ಮ ಪ್ರೇಮವನ್ನು ಹಾಡಿನ ರೂಪದಲ್ಲಿ ಹಾಡಿ ತಾವೆಂದು ಕೂಡುವುದೆಂದು ಕಾವ್ಯದ ಕಲ್ಪನೆಯಲ್ಲಿ ಹೇಳುತ್ತಾರೆ. ಹೊಲದ ಕಾಳು, ಕಡ್ಡಿ, ಕಾಡಿನ ಬೇರು-ನಾರು, ಇವೆಲ್ಲಾ ಸುಂದರ ಹಾಡಿನಲ್ಲಿ ನೇಯಲ್ಪಡುತ್ತವೆ. ತನ್ನ ಪ್ರೇಯಸಿ ಮಲಗಿರುವ ಬಡಗುಡಿಸಲಿನ ಹಾಸಿಗೆ ಪ್ರೇಮಿಗೆ ಸುವರ್ಣಖಚಿತ ಸುಪ್ಪತ್ತಿಗೆ.

- ವೆರಿಯರ್ ಎಲ್ವಿನ್





ನುಡಿದದ್ದೇ ವೇದ, ನಡೆದದ್ದೇ ಯೋಗ ಎನ್ನುವ ಸಹಜ ಸುಮ್ಮಾನಿಗಳ ಜೀವದೊಳಗಿನ ತೀರ ಸಾಮಾನ್ಯ ಸಂಗತಿಗಳು ಕೂಡ ಉಳಿದವರಿಗೆ ತೀರ ಬೋಧಪ್ರದವಾಗಿರುವಂತೆ, ನುಡಿದದ್ದೆಲ್ಲ ಕವಿತೆ, ನಡೆದದ್ದೆಲ್ಲ ರಸವಾಗಿ ಪರಿಣಮಿಸಿದ ರಸಪುರುಷರ ಅಂತರಂಗದಿಂದುಕ್ಕಿಬಂದ ಒಂದು ಚಿಕ್ಕ ನುಡಿಯೂ ಕೂಡ ಸರ್ವ ಸಾಮಾನ್ಯರಿಗೆ ಅರಗಳಿಗೆಯ ಮಟ್ಟಿಗಾದರೂ ಸ್ವರ್ಗದ ಸುಳುವನ್ನು ತೋರದಿರದು.

ಕಾವ್ಯ ರತ್ನವನ್ನು ಯಾವ ಗಣಿಯಲ್ಲಿ ಅರಸಬೇಕು? ಮತ್ತು ಅದನ್ನು ಗುರುತಿಸುವುದಕ್ಕೆ ಕುರುಹುಗಳಾವುವು? - ಎಂಬೆರಡು ಮಾತುಗಳನ್ನು ಸರಿಯಾಗಿ ತಿಳಿಯದಲ್ಲದೆ ನಮ್ಮ ವ್ಯವಸಾಯವು ಎಂದಿಗೂ ಊರ್ಜಿತದೆಶೆಗೆ ಬಾರದು. ನಮಗೆ ಬೇಕಾಗಿರುವ ಮೇಲ್ಕಾಣಿಸಿದ ಎರಡು ಮಾತುಗಳ ಜ್ಞಾನವು ನಮಗಾಗಬೇಕಾದರೆ ಅದಕ್ಕೆ ಎರಡೇ ಮಾರ್ಗಗಳುಂಟು. ಜಗತ್ತಿನ ಪುರಾತನ, ನೂತನ, ಮಹಾಕವಿಗಳ ಕೃತಿಗಳನ್ನು ಪರಿಶೀಲಿಸುವುದೊಂದು; ಮತ್ತು ಕವಿಗಳೆಂದೆನಿಸಿಕೊಳ್ಳುವ ಹಂಬಲದ ಸೋಂಕು ಎಳ್ಳಷ್ಟೂ ಇಲ್ಲದ, ಅಶಿಕ್ಷಿತ ಪುರಾತನ ಜನಪದ ಸಾಹಿತ್ಯವನ್ನು ಸೋಸಿ ನೋಡುವುದು ಇನ್ನೊಂದು. ಒಂದು : ಕವಿಗಳ ಕವಿತೆ; ಇನ್ನೊಂದು: ಕವಿಗಳಲ್ಲದವರ ಕವಿತೆ... ಬೌದ್ಧಿಕ ಸಂಘರ್ಷಣವಿಲ್ಲದ 'ಇಂಥ' ಪುರಾತನ ಗ್ರಾಮ್ಯ ಗೀತೆಗಳ ಅನುಶೀಲನದಿಂದ ಕಾವ್ಯವಿಷಯಕವಾಗಿರುವ ಒಗಟುಗಳು ಒಡೆಯುವ ಸಂಭವವೂ ಹೆಚ್ಚಿಗೆ ಇದೆ.

ಹೆಣ್ಣುಮಕ್ಕಳ ಈ ಹಾಡುಗಳಲ್ಲಿ ತ್ರಿಪದಿಗೆ ಸಂಬಂಧಿಸಿರುವವುಗಳೇ ತೀರ ಹೆಚ್ಚು. ಕೆಲವೇ ವೃತ್ತಗಳು ಭಾವಕ್ಕೆ ತಕ್ಕಂತೆ ಬೇರೆ-ಬೇರೆ ವಿಧದ ಮಟ್ಟುಗಳಿಂದ ಹಾಡಲ್ಪಡುವುದನ್ನು ಬಗೆದರೆ ನಮಗೆ ಏಕಮೇವ ಪರಮಾತ್ಮನ ಅನಂತಲೀಲೆಯೇ ಇಲ್ಲಿ ನೆನಪಾಗುವುದು.

- ಮಧುರ ಚೆನ್ನ




ಯಾವದೇಶದಲ್ಲಿಯೇ ಆಗಲಿ, ಯಾವ ಜನಾಂಗದಲ್ಲಿಯೇ ಆಗಲಿ ಸುತ್ತ ಮುತ್ತಲಿನ ವಾತಾವರಣದ ಮೇಲಿಂದ ಮಾನವನ ಸಂಸ್ಕಾರಗಳು ಮಾತ್ರ ಬದಲಾಗಬಹುದಲ್ಲದೆ, ಅವನ ಮನೋಭಾವನೆಗಳು ಎಲ್ಲಿದ್ದರೂ ಒಂದೇ. ಗಂಡ-ಹೆಂಡಿರ ಪ್ರೇಮ, ತಾಯಿ-ಮಕ್ಕಳ ವಾತ್ಸಲ್ಯ ಮೊದಲಾದ ಜೀವನ ಚಿತ್ರಗಳು ಎಲ್ಲ ಕಡೆಗೂ ಒಂದೇ. ಅವುಗಳ ಬಣ್ಣಗಳು ಬೇರೆ ಕಂಡರೂ ರೂಪಗಳು ಒಂದೇ. ಕನ್ನಡ ಇದಾವುದಕ್ಕೂ ಹೊರತಾಗಿಲ್ಲ. ಇಂದು ನಮಗೆ ಕರ್ನಾಟಕದ ತುಂಬೆಲ್ಲ ಸರಳ ಜೀವನದ ತಿರುಳು ಚಿತ್ರಗಳನ್ನೊಳಗೊಂಡ ಜಾನಪದ ಸಾಹಿತ್ಯವೇ ಸಾಕ್ಷಿ.

ಜಾನಪದ ಸಾಹಿತ್ಯವು ಪಂಡಿತರಿಗೆ ಹಾಸ್ಯಾಸ್ಪದವಾಗಿರಬೇಕು. ಅರಸನೊಡ್ಡೋಲಗವಂತೂ ಅದು ಕಾಣಲೇ ಇಲ್ಲ! ಗುಡಿಸಲವೆ ಅದರ ಉಗಮವಾಯಿತು. ಸಾಮಾನ್ಯ ಜನಜೀವನ ಚಿತ್ರವೇ ಕಥೆಯಾಯಿತು. ನಿಸರ್ಗವೇ ಪ್ರಸಂಗಗಳಲ್ಲಿ ಆಡಿ ತೋರಿಸಲು ರಂಗಭೂಮಿಯಾಯಿತು. ಜನಸಾಮಾನ್ಯರೇ ಕಿವಿಗೊಟ್ಟು ಕೇಳುವ ಪರಿಸೆಯಾಯಿತು. ಎಂದ ಮೇಲೆ ಅದು ಗ್ರಂಥಸ್ಥವಾಗುವ ಬಗೆ ಎಂತು? ಜಾನಪದ ಸಾಹಿತ್ಯ ಕರ್ತೃಗಳಂತೂ ಎಲ್ಲರೂ ನಿರಕ್ಷರಿಗಳೇ.

ಕನ್ನಡ ಮನೆಮಾತುಗಳು ಜಿನುಗಾಗಿ ಪೋಣಿಸಲ್ಪಟ್ಟು ರಾಗವನ್ನೊಳಗೊಂಡು, ಕಿವಿಗೆ ಅತಿ ಇಂಪಾಗಿ ಕೇಳಬರುವವು... ತಾಳಮದ್ದಳೆಗೆ ಹೊಂದದ ಹಾಡು ಜಾನಪದ ಸಾಹಿತ್ಯದಲ್ಲಿ ಯಾವುದೂ ಇಲ್ಲ. ಅಂತೆಯೇ ಹಾಡುವವರಿಗೆ ಹೊಸಹುರುಪು; ಕೇಳುವವರಿಗೆ ರಸಾನಂದ; ಅನುಭವದ ಮಾತುಗಳ ವಿದ್ಯುಲ್ಲತೆಯು ನೇರವಾಗಿ ಮನಕ್ಕೆ ತಾಗಿ, ಮನವು ವಿಕಾಸಹೊಂದಿ ಇಡೀ ಮಾನವ ಪ್ರಪಂಚವನ್ನೇ ಆ ಬೆಳಕಿನಲ್ಲಿ ಕಾಣಲೆತ್ನಿಸುವುದು.

– ಬಿ.ಎಸ್. ಗದ್ದಿಗಿಮಠ





ಇತ್ತೀಚೆಗೆ ಜನಪದ ಹಾಡುಗಳನ್ನು ಸಂಗ್ರಹಿಸಿಕೊಂಡು ಬಂದವರು, ಕೆಲವನ್ನು ನನಗೆ ಕೇಳಿಸಿದರು. ಅವರಿಗೆ ನಾನು ಹೇಳಿದೆ; ನೋಡಿ ನಾಲ್ಕು ಸಾವಿರ ವರ್ಷಗಳಿಂದ ಅತ್ಯಂತ ಉದಾತ್ತವಾದ ತತ್ವಗಳು ಘೋಷಿಸಲ್ಪಟ್ಟಿವೆ. ಆದರೆ ಭಾಷೆಯಲ್ಲಾಗಲಿ ಮತ್ತಾವುದೇ ರೀತಿಯಲ್ಲಾಗಲಿ, ಆ ತತ್ವಗಳು ಸಾಮಾನ್ಯ ಜನಕ್ಕೆ ತಲುಪದಂತೆ ನೋಡಿಕೊಳ್ಳಲಾಗಿದೆ. ಅಷ್ಟೇ ಅಲ್ಲ, ಯಾರಾದರೂ ಸಾಮಾನ್ಯ ಜನ ಅವುಗಳನ್ನು ತಿಳಕೊಳ್ಳೋಕೆ ಪ್ರಯತ್ನಪಟ್ಟರೆ ನಾಲಗೆ ಕತ್ತರಿಸಿ, ಕಿವಿ ಕತ್ತರಿಸಿ ಅಂತ ಹೇಳ್ತಾರೆ. ಆದ್ದರಿಂದ ನಮ್ಮಲ್ಲಿ ಸಾಮಾನ್ಯಜನಕ್ಕೆ ಉಪನಿಷತ್ತು ಮೊದಲಾದವುಗಳು ಸಿಕ್ಕಲಿಲ್ಲ. ಆಮೇಲೆ ಪುರಾಣ-ಗಿರಾಣ ಬಂದವು. ಅವುಗಳಲ್ಲಿ ಕಟ್ಟುಕತೆ ಅದೂ-ಇದೂ ಸ್ವಾರಸ್ಯವಾಗಿ ಹೇಳಿದ್ದಾರೆ. ಎಷ್ಟೋ ಮೌಢ್ಯಗಳನ್ನು ಆವುಗಳಲ್ಲಿ ಆ ನೆಪದಲ್ಲಿ ಹಾಗೇ ಹಾಗೇ ತಂದು ತುಂಬಿದರು. ಅದನ್ನೆಲ್ಲಾ ಆಶ್ರಯಿಸಿಕೊಂಡು ಈ ಜನಪದ ಸಾಹಿತ್ಯ ಹುಟ್ಟಿತು. ಜನಪದ ಸಾಹಿತ್ಯ ಸಂಗ್ರಹ ಮಾಡೋ ನೀವು, ಸಂಗ್ರಹ ಮಾಡಿ ಅದನ್ನೊಂದು ಕಲೆ ಅಂತ ಹೇಳಿ. ಆದರೆ ಈ ಜನ ಮೌಢ್ಯ ಹಾಗೂ ಅವಿಚಾರಕ್ಕೆ ವಶರಾಗಿ, ಈ ಬಗೆಯ ಜೀವನವನ್ನು ನಡೆಸಿದರು ಅನ್ನೋದನ್ನ ನೀವು ಹೇಳದೆ ಬಿಡಬೇಡಿ. ಈ ಜನಪದ ಹಾಡುಗಳಲ್ಲಿ ಆ ಅಂಶಗಳು ಬಹಳ ಇವೆ. ನಮ್ಮಲ್ಲಿ ಮತದ ವಿಚಾರವಾಗಿ ಬಹಳ ಉದಾರವಾಗಿದ್ದೀವಿ ಅಂತೀವಲ್ಲ! ಅದರ ಅರ್ಥ ಏನೂ ಅಂದ್ರೆ, ಈ ಹೆಸರಿನಲ್ಲಾಗಿರೋ ಅನ್ಯಾಯಗಳನ್ನೆಲ್ಲಾ ನಾವು ದಾಖಲೆ ಮಾಡಿಲ್ಲ, ಅಂತ ಅಷ್ಟೇ.

ಕೆಲವೆಡೆ ದಾಖಲು ಇರಬಹುದು. ಆದ್ದರಿಂದ ಜನಪದ ಸಾಹಿತ್ಯದಲ್ಲಿ ತಾಯಿ-ಮಗ, ತಾಯಿ-ಮಗಳು, ಗಂಡ-ಹೆಂಡತಿ ಇವರ ಸಂಬಂಧಗಳನ್ನು ಕುರಿತ ವಿಷಯಗಳು ಚನ್ನಾಗಿರುತ್ತವೆ. ಆದರೆ ಮೌಢ್ಯ ಇತ್ಯಾದಿಗಳು ಬಂದಾಗ ಖಂಡಿಸಬೇಕು. ಅವು ಸಾಹಿತ್ಯವಾಗಿ, ಕಲೆ ಆಗಿ ಚೆನ್ನಾಗಿ ಇರಬಹುದು. ಆದರೆ ಅವುಗಳಲ್ಲಿರೋದೆಲ್ಲಾ ನಿಜ ಅಂತ ತಿಳಕೊಬೇಡಿ. ಅವುಗಳಿಗೆ ಎದುರಾಗಿ ಹೋಗಿ ಅಂತ ಹೇಳಬೇಕು. ಮತ ಮೌಢ್ಯ ಮೂಢನಂಬಿಕೆ ಇವುಗಳನ್ನು ಹೇಳೋದು ಎಷ್ಟೇ ಸುಂದರವಾಗಿದ್ದರೂ ಅದು ಸಾಹಿತ್ಯ, ಕತೆ ಅಂತ ಮೆಚ್ಚಿದರೂ, ಬದುಕಿಗೆ ವಿರೋಧವಾಗುವಂಥ ಅಂಶಗಳನ್ನು ಸ್ವಾಗತಿಸಲೇಬಾರದು.

– ಕುವೆಂಪು

ನನ್ನ ಮನಸ್ಸಿಗೆ ಗಾದೆಯೂ ಒಂದು ಸಾಹಿತ್ಯ ಪ್ರಕಾರವೇ ಎನಿಸುತ್ತದೆ. ಒಂದು ಸಾಹಿತ್ಯ ಪ್ರಕಾರಕ್ಕೆ ಸಲ್ಲುವ ನಿರ್ದಿಷ್ಟ ಗುಣಲಕ್ಷಣಗಳೆಲ್ಲ ಗಾದೆಗಿವೆ. ಪ್ರಪಂಚದ ಮೂಲೆ ಮುಡುಕುಗಳಲ್ಲಿ, ಎಲ್ಲೆಲ್ಲೂ ಗಾದೆಯ ಹುಟ್ಟು, ವಸ್ತು, ಧೋರಣೆ, ಶೈಲಿ, ಬೆಲೆ, ಇವೆಲ್ಲ ಒಂದೇ ರೀತಿಯವು. ವಸ್ತುವಿನಲ್ಲಿ ಸ್ಥಳವ್ಯತ್ಯಾಸಕ್ಕನುಗುಣವಾದ ಹಲಕೆಲವು ಸಣ್ಣಪುಟ್ಟ ಮಾರ್ಪಾಟುಗಳಿದ್ದರೂ, ಶೈಲಿಯಲ್ಲಿ, ಅಲಂಕಾರ ವಿಶೇಷಗಳಲ್ಲಿ ಸಾಹಿತ್ಯ ರೂಪದಲ್ಲಿ ಎಳ್ಳಷ್ಟೂ ವ್ಯತ್ಯಾಸವಿಲ್ಲ.


ಗಾದೆಯಲ್ಲಿ ಜನತೆಗೆ ಗೊತ್ತಿರುವ, ಅವರ ಅನುದಿನದ ಬಾಳ್ವೆಯಲ್ಲಿ ಹುದುಗಿ ಅದನ್ನು ನಡೆಸುವ ಜ್ಞಾನವೆಲ್ಲಾ ದೊರಕುತ್ತವೆ. ಸಮಾಜಶಾಸ್ತ್ರಜ್ಞ ಗಾದೆಗಳನ್ನು 'ಚೆನ್ನಾಗಿದೆ - ಚೆನ್ನಾಗಿಲ್ಲ'ವೆಂಬ ಪಕ್ಷಪಾತವಿಲ್ಲದೆ ಪರೀಕ್ಷಿಸಿದರೆ-ಜನತೆಯಲ್ಲಿ ಬಳಕೆಯಲ್ಲಿರುವ, ಅಲಿಖಿತವಾದರೂ ಅಪ್ರತಿಭವಾದ ಶೀಲನಿಯಮಗಳು, ವಿಧಿ-ನಿಷೇಧಗಳೂ, ಆದರ್ಶ-ಹುಳುಕುಗಳೂ ಸಿಕ್ಕುತ್ತವೆ. ಗಾದೆಗಳಲ್ಲನೇಕ ಜನಾಂಗದ ಶಿಶುವಿಹಾರಕ್ಕೇ ಕರೆದೊಯ್ದು ಅದರ ಮನಸ್ಸಿನ ಬಾಲಭಾಷೆಯನ್ನು ನಿರೂಪಿಸುತ್ತವೆ ಎನ್ನಬಹುದು. ನಾಣ್ಣುಡಿಗಳಲ್ಲದಿರುವ ನುಡಿ ಪ್ರಪಂಚದಲ್ಲಿಲ್ಲ.

ಗಾದೆಮಾತು ಜನತೆಯ ಮನಸ್ಸನ್ನು ಒಂದು ಮುಖದಲ್ಲಿ ಬಿಂಬಿಸುತ್ತದೆ; ಮತ್ತೊಂದು ಮುಖದಲ್ಲಿ ಆಳುತ್ತದೆ. ಅವರ ಅನುದಿನದ ನಂಟುಗಳನ್ನು ನಡೆಸುತ್ತದೆ. ಗಂಟುಗಳನ್ನು ಬಿಡಿಸುತ್ತದೆ. ಇದರ ಪ್ರಭಾವದ ಆಳ-ಅಗಲ ಸೂಕ್ಷ್ಮಗಳನ್ನು ಸುಲಭವಾಗಿ ಅಳೆಯಲು ಸಾಧ್ಯವಿಲ್ಲ. ಆದ್ದರಿಂದ ಸಮಾಜಶಾಸ್ತ್ರಜ್ಞರಿಗೂ, ಚರಿತ್ರಕಾರನಿಗೂ, ಸಮಾಜವನ್ನು ಅರಿತು ಬದಲಾಯಿಸಬೇಕೆನ್ನುವ ಸುಧಾರಕನಿಗೂ ನಾಣ್ಣುಡಿ (ಮಿಕ್ಕ ಜಾನಪದ ಕಲೆಗಳ ಹಾಗೆ) ಜನಮನದ ಸಾಕ್ಷಿಯಾಗಿ ನಿಂತಿದೆ.

ಹಾಗೆಯೇ ಸಾಹಿತಿಗೂ, ಭಾಷಾಪಂಡಿತರಿಗೂ ನಾಣ್ಣುಡಿಯ ಅರಿವು ಅವಶ್ಯ. ವಿವಿಧ ದೇಶದ ಸಾಹಿತಿಗಳು ಗಾದೆಗೆ ಎಂತಹ ಮನ್ನಣೆ ಸಲ್ಲಿಸಿದ್ದಾರೆಂದು ಹೇಳಲಾಗಿದೆ. ಭಾಷಾಶಾಸ್ತ್ರಜ್ಞನಿಗೆ ಗಾದೆಯಲ್ಲಿ ಭಾಷೆಯ ನುಡಿಗುಟ್ಟು-ವ್ಯಾಕರಣದ ಮತ್ತು ಲೇಖನ ಕಲೆಯ ಕಟ್ಟುನಿಟ್ಟಿಲ್ಲದೆ, ಕೃತಕವಾದ ತಿದ್ದಿದ ಪರಿಪೂರ್ಣತೆಯಿಲ್ಲದೆ-ಇದ್ದದ್ದು ಇದ್ದಂತೆ ಸಿಕ್ಕುತ್ತದೆ. ದೇಸಿ ನುಡಿಗಳನ್ನೂ, ದಿನದಿನವೂ ಮಾತಿನಲ್ಲಿ ನಡೆಯುವ ನುಡಿನಾಣ್ಯಗಳನ್ನೂ,ಜೋಡುನುಡಿ, ಪಡೆನುಡಿಗಳನ್ನೂ ಆಯಾ ಭಾಷೆಗೆ ಸಹಜವಾದ ಚಮತ್ಕೃತಿಯನ್ನು ಇಲ್ಲಿ ಭಾಷಾಶಾಸ್ತ್ರಜ್ಞ ಗಮನಿಸಬಹುದು. ಜೀವಂತಭಾಷೆ ಬೆಳೆಯುವ, ಬದಲಾಗುವ ರೀತಿ ಇಲ್ಲಿ ಜೀವಂತವಾಗಿ ವಿಕೃತಿಯಿಲ್ಲದೆ ಸಿಕ್ಕುತ್ತದೆ.

– ಡಾ.ಎ ಕೆ ರಾಮಾನುಜನ್





ಚರಿತ್ರೆಯ ರಚನೆಗೆ ಸರ್ಕಾರದ ಹಳೆಯ ಪತ್ರಗಳು ಮತ್ತು ದಾಖಲೆಗಳು ಬೇಕಾಗುವಂತೆ, ಸಾಂಸ್ಕೃತಿಕ ಇತಿಹಾಸದ ರಚನೆಗೂ ಜಾನಪದ ದಾಖಲೆಗಳು ಅತ್ಯಂತಾವಶ್ಯಕ. ಅಷ್ಟೇ ಅಲ್ಲ, ಮಾನವನ ಮೂಲಭೂತವಾದ ಗುಣಗಳನ್ನರಿಯಬೇಕಾದರೆ ಜಾನಪದಕ್ಕೇ ಶರಣು ಹೋಗಬೇಕು. ನವನಾಗರೀಕತೆಯ ಆಡಂಬರ ಆರ್ಭಟಗಳಿಗೆ ಹೆದರಿಯೋ, ಲಜ್ಜೆಗೊಂಡೋ ಮೂಲೆಮುಡುಕುಗಳಲ್ಲಿ, ಸಂದು-ಗೊಂದುಗಳಲ್ಲಿ, ಕೊಂಪೆ-ಕೊಪ್ಪಲುಗಳಲ್ಲಿ ಅವಿತುಕೊಂಡಿರುವ ಜಾನಪದ ಸಂಗತಿಗಳನ್ನು ಹೊರತೆಗೆದು ರಕ್ಷಿಸದಿದ್ದರೆ, ಎಂದೆಂದಿಗೂ ತುಂಬಲಾರದ ನಷ್ಟವಾಗುತ್ತದೆ. ಹಣ ಖರ್ಚುಮಾಡಿದರೆ ಅಮೆರಿಕೆಯಿಂದಾದರೂ ಆಧುನಿಕ ವಸ್ತುಗಳನ್ನು ಪಡೆಯಬಹುದು; ಹಣ ಕೊಟ್ಟರೂ ಹಿಂದಿನ ಕಾಲದ ಕೇಶಾಲಂಕಾರ ವಸ್ತುಗಳು, ಉಡುಪುಗಳು, ವ್ಯವಸಾಯ ಸಾಧನಗಳು, ಪೂಜಾಸಾಮಗ್ರಿಗಳು ಸಿಗುವುದಿಲ್ಲ. ಶಿಷ್ಟಕಲೆಗಳು ಪಂಡಿತ ಪ್ರತಿಭೆಯ ಸೃಷ್ಟಿಯಾದರೆ, ಅವುಗಳಿಗೆ ತಲಕಾವೇರಿಯಂತಿರುವ, ನಾಡಿನ ಜೀವನಾಡಿಯನ್ನು ಮಿಡಿಯುವ ಜಾನಪದ ಕಲೆಗಳು ಶ್ರೀಸಾಮಾನ್ಯ ಪ್ರತಿಭೆಯ ಸೃಷ್ಟಿ. ಆಧುನಿಕ ವಿಜ್ಞಾನಕ್ಕೆ ಹಾಗೂ ಸಂಸ್ಕೃತಿಗೆ ಅವು ಮಾತೃಸ್ಥಾನದಲ್ಲಿವೆಯೆಂಬುದನ್ನು ಮರೆಯಲಾಗದು.

– ದೇಜಗೌ


ಪ್ರಪಂಚದಾದ್ಯಂತ ಎಲ್ಲ ಜನಾಂಗಗಳೂ ಸಂಪ್ರದಾಯಗಳನ್ನೊಳಗೊಂಡಂತೆ ಕನ್ನಡ-ನಾಡಿನಲ್ಲೂ ಅನೇಕ ಜಾನಪದ ಸಂಪ್ರದಾಯಗಳು ಆಚರಣೆಯಲ್ಲಿವೆ. ಆದರೆ ಅವು ಪ್ರಾರಂಭದ ರೀತಿ ನೀತಿಗಳನ್ನೇ ಅನುಸರಿಸಿಕೊಂಡು ಬಂದಿವೆ ಎಂದು ಹೇಳಲುಬಾರದು.

ಪ್ರಾಚೀನ ಕಾಲದಿಂದಲೂ ಮಾನವ ಮತ್ತು ನಿಸರ್ಗದ ಸಂಬಂಧ ಗಾಢವಾಗಿದ್ದು, ಮಾನವನ ಜೀವನ ವಿಧಾನವನ್ನು ರೂಪಿಸಿದ್ದು, ಅವನ ನಾನಾಬಗೆಯ ಚಟುವಟಿಕೆಗಳಿಗೆ ಕಾರಣವಾದದ್ದು ನಿಸರ್ಗ. ಕಾಲದಿಂದ ಕಾಲಕ್ಕೆ ನಿಸರ್ಗದ ಪರಿಣಾಮ ನಿರ್ದಿಷ್ಟವಾಗುತ್ತಾ ಬಂತು. ಸೂರ್ಯ ಹುಟ್ಟಿ ಬೆಳಕು ತರುವುದು. ಮುಳುಗಿದಾಗ ಕತ್ತಲಾಗುವುದು. ಚಂದ್ರನ ಶೀತಳ ಬೆಳಕು. ಮೋಡ-ಮಳೆ, ನಕ್ಷತ್ರಗಳ ಮಿನುಗು, ಹಸಿರು, ಹೂ-ಇಂಥ ಅಸಂಖ್ಯಾತ ನೈಸರ್ಗಿಕ ವ್ಯಾಪಾರ ಮಾನವನ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನುಂಟುಮಾಡಿತು. ಅದರಿಂದಾಗಿ ನಾನಾ ಬಗೆಯ ನಂಬಿಕೆ, ಆಚರಣೆಗಳು ರೂಢಿಗೆ ಬಂದವು.

ಸೂರ್ಯ, ಚಂದ್ರ, ಎಲ್ಲ ಜನಾಂಗಗಳಲ್ಲೂ ಪ್ರಮುಖ ಪಾತ್ರವಹಿಸಿವೆ. ಅವುಗಳ ಬಗ್ಗೆ ಪುರಾಣ, ನಂಬಿಕೆ ಕತೆಗಳನ್ನೊಳಗೊಂಡಿವೆ. ಸೌರವ್ಯೂಹದ ಎಲ್ಲ ಗ್ರಹಗಳಿಗಿಂತಲೂ ನಮಗೆ ಬಹಳ ಹತ್ತಿರದ ಗ್ರಹ ಚಂದ್ರ. ಇದೊಂದೇ ಭೂಮಿಯ ಏಕೈಕ ಉಪಗ್ರಹ. ಪ್ರಪಂಚದಾದ್ಯಂತ ಸೂರ್ಯನನ್ನು ಆರಾಧಿಸುವ ಜನಾಂಗಗಳಿರುವಂತೆಯೇ ಚಂದ್ರನನ್ನು ಆರಾಧಿಸುವ ಜನಾಂಗಗಳು ಬಹಳಷ್ಟಿವೆ.

ನಮ್ಮ ನಾಡಿನ ಹಬ್ಬಗಳನ್ನು ಅಭ್ಯಾಸ ಮಾಡಿದಾಗ ಸಹ ಬಹುಪಾಲು ಹಬ್ಬಗಳು ಹುಣ್ಣಿಮೆಯೊಂದಿಗೆ ಸಂಬಂಧ ಹೊಂದಿರುತ್ತವೆ. ಹಿಂದಿನ ಕಾಲದಲ್ಲಿ ಅಶ್ವಮೇಧಯಾಗಕ್ಕೆ ನಿಗಧಿ ಮಾಡಲ್ಪಡುತ್ತಿದ್ದ ಕುದುರೆ ರಾಜ್ಯದಿಂದ ರಾಜ್ಯಕ್ಕೆ ಸಂಚರಿಸಲು, ಅದನ್ನು ಪೂಜೆ ಮಾಡಿ ಬಿಡುತ್ತಿದ್ದರು. ಪೂರ್ಣಚಂದ್ರ ಮೂಡಿದ ಚೈತ್ರಮಾಸದ ಹುಣ್ಣಿಮೆಯಂದು. ಕಾವ್ಯಗಳಲ್ಲಿನ ಕೌಮುದಿ ಮಹೋತ್ಸವ ಬೆಳದಿಂಗಳಲ್ಲಿ ನಡೆಯುವ ಒಂದು ಸಂತೋಷದ ಹಬ್ಬ. ಕೊಡಗಿನಲ್ಲಿ ಆಚರಿಸಲ್ಪಡುವ ಹುತ್ತರಿ ಹಬ್ಬ ಮಾರ್ಗಶಿರ ಹುಣ್ಣಿಮೆಯಂದು. ನಮ್ಮ ಹಳ್ಳಿಗಳಲ್ಲಿ ಈಗಲೂ ಹೊರಬೀಡು ಸಾರುವುದು ಹುಣ್ಣಿಮೆಯ ರಾತ್ರಿ. ಅಂದು ಊರಿನ ಎಲ್ಲರೂ ಆ ರಾತ್ರಿಗೆ ಬೇಕಾಧ ಅಡಿಗೆ ಸಾಮಗ್ರಿಗಳೊಂದಿಗೆ ಊರಿನಿಂದ ಹೊರಗೆ ತಮ್ಮ-ತಮ್ಮ ಹೊಲ ತೋಟಗಳಿಗೆ ಹೋಗುತ್ತಾರೆ. ಆ ರಾತ್ರಿ ದೇವತೆಗಳೋ, ದೆವ್ವಗಳೋ ಊರಿನಲ್ಲಿರುತ್ತವೆಂದೂ, ಒಂದು ನರಪಿಳ್ಳೆಯೂ ಇರಕೂಡದೆಂದೂ ಹೇಳುತ್ತಾರೆ. ಇಂಥ ನಂಬಿಕೆಯ ಹಿಂದೆ ಮೂಲದಲ್ಲಿ ಒಂದು ಧಾರ್ಮಿಕ ಆಸಕ್ತಿ, ಭೀತಿ ಇದ್ದೇ ಇರುತ್ತದೆ. ಅಂತಹ ಭೀತಿ ಬರುತ್ತಾ ಮಾಯವಾಗಿ ಬೇರೆ ಸ್ವರೂಪ ತಳೆಯುತ್ತದೆ. ಹೊರಬೀಡನ್ನು ಅವರು ಬೆಳದಿಂಗ್ಳೂಟ ಎಂತಲೂ ಕರೆಯುತ್ತಾರೆ. ಒಂದು ಹಪ್ಪಳದಲ್ಲಿ ಊರಿಗೆಲ್ಲಾ ಊಟ ಆಯ್ತು ಎನ್ನುವುದು ಚಂದ್ರನನ್ನು ಕುರಿತ ಹಳ್ಳಿಗರ ಆಚರಣೆ ಕುರಿತು ಒಂದು ಸೊಗಸಾದ ಒಗಟು. ಇಡೀ ಹಳ್ಳಿಯೇ ಊಟಕ್ಕೆ ಕುಳಿತುಕೊಳ್ಳುವುದು ಇಂಥ






ಒಂದು ಸಂದರ್ಭದಲ್ಲಿ ಮಾತ್ರ. ಈ ಒಗಟು ಒಂದು ಸಾಂಪ್ರದಾಯಿಕ ಸನ್ನಿವೇಶವನ್ನು ಎಷ್ಟು ಸಮರ್ಥವಾಗಿ ಹೇಳುತ್ತದೆಂಬುದು ಗಮನಾರ್ಹ.

ಕನ್ನಡ ನಾಡಿನ ಕೆಲವು ಭಾಗಗಳಲ್ಲಿ ಚಂದ್ರನನ್ನು ಬೆಳದಿಂಗಳ ರೂಪದಲ್ಲಿ ಆರಾಧಿಸುತ್ತಾರೆ. ಅದು ಸಂಪೂರ್ಣವಾಗಿ ಒಂದು ಜಾನಪದ ಸಂಪ್ರದಾಯ....ಚಂದ್ರನ ಆರಾಧನೆಯನ್ನು ಬೆಳದಿಂಗ್ಳಪ್ಪನ ಪೂಜೆ, ಬೆಳದಿಂಗ್ಳಪ್ಪನ ಹೊಯ್ಯುವುದು, ಚಂದ್ರಾಮನ ಪೂಜೆ, ಚೆಂದ್ರಮನ ಪೂಜೆ, ತಿಂಗಳು ಮಾವನ ಪೂಜೆ-ಎಂದು ಹಲವು ಹೆಸರುಗಳಲ್ಲಿ ಕರೆಯುತ್ತಾರೆ.

ನಮ್ಮ ಸಂಸ್ಕೃತಿಯಲ್ಲಿ ಪೂಜೆಯ ಕಲ್ಪನೆ ಎರಡು ರೀತಿಯದೆಂದು ಬಹಳ ಸ್ಪಷ್ಟವಾಗಿ ಗುರುತಿಸಬಹುದು. ಆರ್ಯರ ಪೂಜೆಯ ವಿಧಾನ ಹೋಮ. ಅಗ್ನಿಗೆ ಆಹಾರ ಪದಾರ್ಥಗಳನ್ನು, ಮದ್ಯ-ಮಾಂಸವನ್ನು ಅರ್ಪಿಸುವುದು. ಆದರೆ ಈ ಪದ್ಧತಿಗೆ ತೀವ್ರ ವಿರುದ್ಧ ಪದ್ಧತಿ ಪೂಜೆ. ಇದು ಸಂಪೂರ್ಣವಾಗಿ ಆರ್ಯೇತರರ ಕಲ್ಪನೆ. ಒಂದು ವಿಗ್ರಹ ಅಥವಾ ವಸ್ತುವನ್ನು ದೈವತ್ವದ ಆರೋಪಣೆಗೆ ಗುರಿ ಮಾಡಿ ಅದನ್ನುಬಹಳ ಗೌರವ ಭಯದಿಂದ ಸತ್ಕರಿಸುತ್ತಾರೆ. ಹೂವು-ಹಣ್ಣು, ಎಲೆ ಮುಂತಾದವುಗಳಿಂದ ಪೂಜೆ ಮಾಡುತ್ತಾರೆ. ಈ ಸಂಗತಿಯಿಂದಲೇ ಅನೇಕ ಜಾನಪದ ಆಚರಣೆಗಳನ್ನು (ತಿಂಗಳು ಮಾವನ ಪೂಜೆ, ಕೊಂತಿ ಪೂಜೆ, ಗುಳ್ಳವ್ವನ ಪೂಜೆ, ಶೀಗೀ ಗೌರಿಯ ಪೂಜೆ, ಬಸವನ ಪೂಜೆ-ಇತ್ಯಾದಿ) ಅವುಗಳಲ್ಲಿ ಕಾಣುವ ಪೂಜೆ ಪದದಿಂದ ಆರ್ಯೇತರ ಸಂಪ್ರದಾಯಗಳೆಂದು ಗುರುತಿಸಬಹುದು.

ಆರ್ಯರದು ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಾದರೆ, ದ್ರಾವಿಡರಲ್ಲಿ ಸ್ತ್ರೀ ಪ್ರಧಾನ. ದ್ರಾವಿಡರಲ್ಲಿ ಸ್ತ್ರೀ ಪೂಜೆಯನ್ನು ಮುಖ್ಯವಾಗಿ ಗುರುತಿಸಬಹುದು. ಇವರಲ್ಲಿ ಚಂದ್ರನ ಪೂಜೆಯ ಸಂಬಂಧವನ್ನು ಹುಡುಕುವುದಕ್ಕೆ ಕೆಲವು ಕಾರಣಗಳನ್ನು ಹುಡುಕಬಹುದು. ಈ ಜನಾಂಗದ ಹಬ್ಬಗಳೆಲ್ಲ ಬಹುತರವಾಗಿ ಹುಣ್ಣಿಮೆಯಲ್ಲಿ ನಡೆಯುತ್ತದೆ. ಇಲ್ಲಿನ ಒಂದು ನಂಬಿಕೆಯಂತೆ ಒಬ್ಬ ಚೆಲುವಾದ ಹುಡುಗ ದೊರೆಯುವವರೆಗೂ ನಮ್ಮ ನಾಡಿನ ಹುಡುಗಿಯರಿಗೆಲ್ಲ 'ಚಂದ್ರಾಮರಾಯ'ನೇ ಗಂಡ. ಇವುಗಳಿಂದ ದ್ರಾವಿಡರ ಅಧಿಪತಿ ಚಂದ್ರನೆಂದು ಯೋಚಿಸಬಹುದು.

– ಅಗ್ರಹಾರ ಕೃಷ್ಣಮೂರ್ತಿ




**ಕೋಗುಲು ಕೋಗುಲೇ ಕೊಂಬಾಳೆ ಮೊಟ್ಟೆನಿಕ್ಕಿ**
**ಹೊಂಬಾಳೇಲಿ ಮರಿಮಾಡಿ-ಕೋಗುಲೇ**
**ಮುಂಗಾರ್ಹೊತ್ತಿಗೆ ದನಿದೋರು**

ಈ ಅಪೂರ್ವ ಜಾನಪದ ಕಣ್ಮರೆಯಾಗುವ ಮುನ್ನವೇ ಇದನ್ನು ಉಳಿಸಬೇಕು ಮತ್ತು ಬೆಳೆಸಬೇಕು. ಹಾಡುವವರು ಮಣ್ಣಾದರೆ, ಅವರೊಡನೆ ಹಾಡೂ ಮಣ್ಣಾಗುತ್ತದೆ. ಇಂಥವರು ಎಷ್ಟೋ ಜನ ಆಗಲೇ ಮಣ್ಣಾಗಿದ್ದಾರೆ. ಆದುದರಿಂದ ನಮ್ಮ ನುಡಿಯ ತಾಯಿಬೇರು ಒಣಗುವ ಮುನ್ನ ನೂರಕ್ಕೆ ತೊಂಭತ್ತು ಜನರ ಮನಸ್ಸಿನ ತೃಪ್ತಿಗೆ ಕಾರಣವಾಗಿರುವ ಜಾನಪದ ಕಿವಿಮರೆ, ಕಣ್ಮರೆಯಾಗುವ ಮುನ್ನ, ಏನಾದರೂ ಮಾಡಿ, ಹೇಗಾದರೂ ಮಾಡಿ ಉಳಿಸಬೇಕು. ಹಾಗೆ ನಾವು ಮಾಡದೇ ಹೋದರೆ ಮುಂದೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ಹಿಂದೊಮ್ಮೆ ನಾನು ಹೇಳಿದ ಮಾತನ್ನು ಈಗಲೂ ಹೇಳಬಯಸುತ್ತೇನೆ. ಶರಾವತಿಯ ನೀರನ್ನು ಉಪಯೋಗಿಸಿ ವಿದ್ಯುತ್ತಿನ ಉತ್ಪನ್ನವನ್ನು ಒಂದೆರಡು ವರ್ಷ ನಿಧಾನ ಮಾಡಿದರೆ ಚಿಂತೆಯಿಲ್ಲ. ಅದರಿಂದ ಆಗುವ ಅನಾಹುತ ಅಂಥ ಹೆಚ್ಚಲ್ಲ! ಆದರೆ ಜಾನಪದವನ್ನು ಉಳಿಸುವ ಕೆಲಸ ಒಂದು ದಿನ ನಿಧಾನವಾದರೆ ಆಗುವ ಅನಾಹುತ ಅಪಾರ. ಹಾಡುವ ಒಬ್ಬ ಹೆಂಗಸು ಸತ್ತರೆ; ಕುಣಿಯುವ ಒಬ್ಬ ಗಂಡಸು ಸತ್ತರೆ, ಅವರೊಡನೆ ಆ ಹಾಡೂ, ಆ ಕುಣಿತವೂ ಸತ್ತಂತೆಯೇ. ಶರಾವತಿ ಹರಿಯುತ್ತಲೇ ಇರುತ್ತಾಳೆ; ಇಂದಲ್ಲ ನಾಳೆ ಅದನ್ನು ಉಪಯೋಗಿಸಿಕೊಳ್ಳಬಹುದು. ಆದರೆ ಜಾನಪದ ಗಂಗೆ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯುವುದಿಲ್ಲ.

– ಎಚ್.ಎಲ್.ನಾಗೇಗೌಡ





ಜಾನಪದವೆಂದರೆ ನಶಿಸಿ ಹೋಗುತ್ತಿರುವ ಕಲೆಗಳ ಆಗರವೆಂಬ ಮಾತನ್ನು ಮೇಲಿಂದ-ಮೇಲೆ ಕೇಳುತ್ತೇವೆ. ಹೇಗಾದರೂ ಮಾಡಿ ಅದನ್ನು ಸಂಗ್ರಹಿಸಿ, ಸಂರಕ್ಷಿಸಿ, ಪುರೋಭಿವೃದ್ಧಿಗೆ ತರಬೇಕೆಂಬ ಪ್ರಯತ್ನಗಳು ನಡೆದಿವೆ ಎನ್ನಬೇಕು. ಇದು ಮೂಲಭೂತವಾಗಿ ಹೊಸಾಹತುಶಾಹಿ ಶಿಕ್ಷಣ ಪದ್ಧತಿ ನಮ್ಮಲ್ಲಿ ರೂಢಿಗೊಳಿಸಿರುವ ದೃಷ್ಟಿಕೋನ. ನಶಿಸಿ ಹೋಗುತ್ತಿದೆ ಎಂದು ನಾವು ಭಾವಿಸುತ್ತಿರುವುದು ನಿಜವಾಗಿ ಪಡೆಯುತ್ತಿರುವ ಹೊಸ ರೂಪವನ್ನು ಗುರುತಿಸಲಾರದೆ ಆಗುತ್ತಿರುವ ತಪ್ಪು ಎಂದು ನನ್ನ ಅಭಿಪ್ರಾಯ. ಅಥವಾ ಜಾನಪದದ ಪ್ರಕ್ರಿಯಾತ್ಮಕ ನೆಲೆಗಳಲ್ಲಿ ಬೆರೆಯಲಾಗದೆ ಹೊರನಿಂತಿರುವುದೂ ಇದಕ್ಕೆ ಕಾರಣವಿದ್ದೀತು. ಈ ಏಕಾಕಿತನ ನಮ್ಮ ಅಧ್ಯಯನ ಪಟುಗಳ ಮಟ್ಟಿಗೆ ನಿಜವೇ ಸರಿ. ಆದರೆ ನಮ್ಮ ಸಂವೇದನೆಗಳಿಂದ ಜಾನಪದದ ಗತಿಯನ್ನು ಕಾಣುವುದು, ಆ ಮೂಲಕ ಅಧ್ಯಯನದ ನೆಲೆಗಳನ್ನು ನಿರ್ಧರಿಸುವುದು ಎಷ್ಟು ಸರಿ ಎಂಬುದನ್ನು ಚರ್ಚಿಸಬೇಕಾಗಿದೆ. ಗುಣಾತ್ಮಕ ಪರಿವರ್ತನೆಯ ಪ್ರಮಾಣವು ಶೂನ್ಯವೆನ್ನಬಹುದಾದ ಪ್ರಾಣಿವರ್ಗವನ್ನು ನಾಶವಾಗುವ ಸಂತತಿ ಎಂದು ಪರಿಗಣಿಸಿ ಬಳಸುವ ಪ್ರಾಣಿ ಶಾಸ್ತ್ರಜ್ಞನ ದೃಷ್ಟಿಕೋನ ಜಾನಪದಕ್ಕೆ ಅನ್ವಯವಾಗಬಹುದೇ? ಚರ್ಚಿಸಬೇಕು.

– ಕೆ.ವಿ.ನಾರಾಯಣ

ಗ್ರಾಮೀಣ ಜೀವನದಲ್ಲಿ ಅನಾದಿಕಾಲದಿಂದಲೂ ಹಾಸುಹೊಕ್ಕಾಗಿ ಬೆರೆತು ಬಂದಿರುವ ಗ್ರಾಮದೇವತೆಗಳು ಜನಪದ ಬದುಕಿನ ಒಂದು ಭಾಗವಾಗಿದೆ. ಜನಪದ ಸಂಸ್ಕೃತಿ, ಅರ್ಥವ್ಯವಸ್ಥೆ, ಸಾಮಾಜಿಕ ಸ್ಥಿತಿಗಳನ್ನು ಅಧ್ಯಯನ ಮಾಡುವವರು ಗ್ರಾಮದೇವತೆಗಳನ್ನು ಅಗತ್ಯವಾಗಿ ಗಮನಿಸಬೇಕಾಗುತ್ತದೆ. ಒಂದು ದೇವತೆಗೆ ಸಂಬಂಧಿಸಿದ ಹಾಡು, ಕತೆ, ಐತಿಹ್ಯ, ದಂತಕಥೆ, ಪುರಾಣದಲ್ಲಿ ಆಯಾ ಜನಾಂಗದ ಹಲವು ಸಮಸ್ಯೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಸಾಧ್ಯವಿದೆ. ಒಂದು ನಿರ್ದಿಷ್ಟ ದೇವತೆಯ ಸಮಗ್ರ ಅಧ್ಯಯನದಿಂದ ಆ ದೇವತೆಯನ್ನು ಪೂಜಿಸುವ ಜನರ ಜೀವನ ರೀತಿ, ಚಿಂತನ ವಿಧಾನಗಳು ಅನಾವರಣಗೊಳ್ಳುತ್ತಾ ಹೋಗುತ್ತವೆ. ಜ್ಞಾನದ ವಿವಿಧ ಶಾಖೆಗಳು ಅಂದರೆ ಇತಿಹಾಸ, ಮನಃಶಾಸ್ತ್ರ, ಭಾಷಾಶಾಸ್ತ್ರ, ಸಮಾಜಶಾಸ್ತ್ರ ಇನ್ನಿತರ ಶಿಸ್ತುಗಳು ಈ ಬಗೆಯ ಅಧ್ಯಯನದಿಂದ ನೆರವನ್ನು ಪಡೆಯಬಹುದು. ಗ್ರಾಮ ದೇವತೆಗಳು ಗ್ರಾಮೀಣರ ಮಾನಸಿಕ ಅಗತ್ಯವೆನ್ನಬಹುದು. ದೇವತೆಯಿಲ್ಲದೆ ಅವರು ಯಾವುದನ್ನೂ ಆರಂಭಿಸುವುದಿಲ್ಲ. ಬೆಳಗಿನಿಂದ ಸಂಜೆಯತನಕದ ದುಡಿಮೆಯಲ್ಲಿ ಇನ್ನಿತರ ಸಮಯದಲ್ಲಿ ದೇವರ ಆಸರೆ ಅವರಿಗೆ ಬೇಕು. ಅದರ ಎಲ್ಲ ಚಿಂತನೆಗಳೂ ಕ್ರಿಯೆಗಳೂ, ಆಣೆ - ಪ್ರಮಾಣಗಳೂ, ದೇವತೆಯ ಸಾಕ್ಷಿಯಲ್ಲಿ ಸಾಗುತ್ತವೆ. ಗ್ರಾಮದೇವತೆಗೆ ಸಂಬಂಧಿಸಿದಂತೆ ಊರಿನ ಎಲ್ಲಾ ಜಾತಿಗಳ ಜನಕ್ಕೂ ಒಂದೊಂದು ಜವಾಬ್ದಾರಿ ವಿತರಣೆಯಾಗಿರುತ್ತದೆ. ಈ ಜವಾಬ್ದಾರಿಯನ್ನು ಸಂಬಂಧಪಟ್ಟವರು ಅನುವಂಶಿಕವಾಗಿ ನಿರ್ವಹಿಸುತ್ತಾ ಬಂದಿರುತ್ತಾರೆ. ಇಡೀ ಗ್ರಾಮದ ಐಕ್ಯತೆ, ಸಾಮರಸ್ಯದ ಜೀವಾಳ ಈ ಗ್ರಾಮದೇವತೆಯೇ ಆಗಿರುತ್ತದೆ. ಆದ್ದರಿಂದ ಪರೋಕ್ಷವಾಗಿ ವ್ಯಕ್ತಿಯ ಮತ್ತು ಗ್ರಾಮ ಸಮೂಹದ ಮಾನಸಿಕ ನಿಯಂತ್ರಣ ಈ ದೇವತೆಯದೇ ಆಗಿರುತ್ತದೆ.

ವಿಶಿಷ್ಟವೂ ವೈವಿಧ್ಯಮಯವೂ ಆದ ಜನಪದ ಸಂಸ್ಕೃತಿಯನ್ನು ವಿವರಿಸಲು ಜನಪದರು ಹೇಳುವ ಪುರಾಣಗಳು, ಆಚರಿಸುವ ಧಾರ್ಮಿಕ ವಿಧಿಗಳು ಬಹಳ ಸಹಕಾರಿಯಾಗುತ್ತವೆ. ಈ ಸಂಸ್ಕೃತಿಯನ್ನು ಅರ್ಥೈಸುವ ಯಾರೆ ಆಗಲಿ ಜನಪದ ಪುರಾಣ ಪ್ರಪಂಚವನ್ನು ಎಚ್ಚರಿಕೆಯಿಂದ ಪ್ರವೇಶಿಸಿ ಅವುಗಳ ಅರ್ಥಪರಿವೀಕ್ಷಣೆಯಲ್ಲಿ ತೊಡಗಿ, ಒಂದು ಪುರಾಣ ಬಿತ್ತುವ ಸಂದೇಶವನ್ನು; ಅದು ಒಂದು ಕಾಲಕ್ಕೆ ನಿರ್ದಿಷ್ಟ ಜನವರ್ಗಕ್ಕೆ ಹೇಳಿದ ಸತ್ಯವನ್ನೂ ಗ್ರಹಿಸಬೇಕಾಗುತ್ತದೆ. ಜನಪದ ಆಚರಣೆಯೊಂದರ ಎಲ್ಲ ಮುಖಗಳನ್ನು ಗಮನಿಸಿ, ಅದರ ಸಾಮಾಜಿಕ ಸಂದರ್ಭದಲ್ಲಿ ಅದನ್ನು ವಿಶ್ಲೇಷಿಸುವ ಅಗತ್ಯವಿದೆ. ಪುರಾಣ ಮತ್ತು ಆಚರಣೆಗಳು ದೇವತೆಯ ಅಧ್ಯಯನದಲ್ಲಿ ಪ್ರಧಾನ ಪಾತ್ರ ವಹಿಸುತ್ತವೆ. ದೇವತೆಗೆ ಸಂಬಂಧಿಸಿದ ಸೈದ್ಧಾಂತಿಕ ಭಾಗ ಪುರಾಣವಾದರೆ, ಅದಕ್ಕೆ ಸಂಬಂಧಿಸಿದ ಕ್ರಿಯಾ ಭಾವವೇ ಆಚರಣೆ ಆಗುತ್ತದೆ.

– ಡಾ.ಸಿದ್ಧಲಿಂಗಯ್ಯ






ಈಗ ಇದು ಶಾಸ್ತ್ರೀಯ ಅಧ್ಯಯನದ ವಿಷಯವಾಗಿರುವುದರಿಂದ, ಇವನ್ನು ಪಾರಿಭಾಷಿಕ ಪದಗಳನ್ನಾಗಿ ಎಚ್ಚರಿಕೆಯಿಂದ ಬಳಸಬೇಕಾದ ಅಗತ್ಯವಿದೆ. Folk ಎನ್ನುವುದಕ್ಕೆ ಜನಪದವನ್ನು ನಾವು ಇಟ್ಟುಕೊಂಡಿರುವುದರಿಂದ ಜಾನಪದವನ್ನು Folklore ಎನ್ನುವ ಅರ್ಥದಲ್ಲಿ ಉಪಯೋಗಿಸಬಹುದೆಂದು ನಾನು ಸೂಚಿಸಬಯಸುತ್ತೇನೆ. ಜನಪದವನ್ನು ಕುರಿತದ್ದು ಜಾನಪದ. ಜಾನಪದ ಎಲ್ಲ ಜನಪದ ಸಮೂಹವನ್ನೂ ಒಳಗೊಂಡಿದ್ದು. ಈ ಪದ ನಮ್ಮಲ್ಲಿ ಬಳಕೆಯಲ್ಲಿರುವುದರಿಂದ ಅರ್ಥವನ್ನು ಹತೋಟಿಗೊಳಿಸಿ ಉಪಯೋಗಿಸುವುದರಿಂದ ಕಷ್ಟವಾಗದೆಂದು ನನ್ನ ಎಣಿಕೆ.

ಜನಪದ ಸಾಹಿತ್ಯವೆನ್ನುವುದು ಜಾನಪದ ಚಕ್ರದ ಒಂದು ಪುಟಿ; ಜನಪದ ಕಲೆ, ಜನಪದ ನೃತ್ಯ, ಜನಪದ ವೈದ್ಯ, ಜನಪದ ಉಡುಗೆ, ಜನಪದ ಸಂಗೀತ ಮೊದಲಾದವು ಮಿಕ್ಕ ಪುಟಿಗಳು. ಹಲವು ಪುಟಿಗಳು ಕೂಡಿ ತಾನೆ ಒಂದು ರಥ?

ಜನಪದ ಸಾಹಿತ್ಯದ ಅಧ್ಯಯನದಲ್ಲಿ ಅತ್ಯಂತ ಮಹತ್ವಪೂರ್ಣವಾದ ಎರಡು ವಿಚಾರಗಳ ಬಗೆಗೆ ನಾನು ಈ ಸಂದರ್ಭದಲ್ಲಿ ಹೇಳಬೇಕು: ಒಂದು motif; ಇನ್ನೊಂದು type. ಸ್ಥೂಲವಾಗಿ motif ಕಥೆಯ ವಸ್ತುವನ್ನು ಕುರಿತದ್ದು; type ಅದರ ತಾಂತ್ರಿಕ ಸ್ವರೂಪವನ್ನು ಕುರಿತದ್ದು; ಎಂದು ಇಟ್ಟುಕೊಳ್ಳಬಹುದು. ಜಾನಪದದ ಒಂದು ಅಂಶದ ಕನಿಷ್ಠ ಘಟಕ motif- ಆಶಯ. ಈ ತತ್ವ ಮುಖ್ಯವಾಗಿ ಕಥನ ನಿರೂಪಣೆಗೆ ಸಂಬಂಧಿಸಿದ್ದಾಗಿದೆ. ಸಾಮಾನ್ಯವಾಗಿ ಅಸಮಾನ್ಯವಾದ ವಿಚಾರಗಳಿಗೆ ಇದು ಅನ್ವಯಿಸುತ್ತದೆ. ತಾಯಿ ಎನ್ನುವುದು motif ಆಗುವುದಿಲ್ಲ; ಆದರೆ ಮಲತಾಯಿ ಎನ್ನವುದು ಒಂದು motif.... type ಎನ್ನುವುದು ಇಡೀ ಒಂದು ವರ್ಗ ಅಥವಾ ಒಂದು ಕಥನ ಮಾದರಿ. ಒಂದು ಕಥೆ ಎಷ್ಟೇ ಚಿಕ್ಕದಿರಲಿ, ದೊಡ್ಡದಿರಲಿ ಅದು ತನ್ನಷ್ಟಕ್ಕೆ ಒಂದು ಸ್ವತಂತ್ರ ಇರಬಹುದು. ಚಿಕ್ಕದಾದ ಒಂದು ಕಥೆಯಲ್ಲಿ ಒಂದೇ ಒಂದು motif. ಇದರಲ್ಲಿ motif ಹಾಗು type ಒಂದೇ.

– ಹಾ ಮಾ ನಾಯಕ



ರಾಗೀ ಕಲ್ಲು ಆಡ್ತಾ ಇದ್ರೆ ರಾಜ್ಯವೆಲ್ಲ ಬಳಗ, ರಾಮರಾಜ್ಯವಾದರೂ ಕಲ್ಲಾಡ್ತ ಇರ್ಬೇಕು, ಎಂಬ ಇತ್ಯಾದಿ ಗಾದೆಗಳಲ್ಲೂ ಕಾಯಕದ ಅನಿವಾರ್ಯತೆಯನ್ನು, ಪ್ರಾಧಾನ್ಯವನ್ನು ಸೂಚಿಸಿರುವುದು ತೋರೀತು. ರಾಗಿಯ ಕಲ್ಲು ಕಾಯಕದ ಸಂಕೇತ; ಜಾನಪದದ ಅನ್ನಸಮೃದ್ಧಿಯನ್ನು ಸೂಚಿಸುವ ಸಂಕೇತ. ರಾಗಿಯ ಕಲ್ಲು ಬೀಸುವುದೆಂದರೆ ಬರೀ ಯಾರಿಗೋ ಮಾಡುವ ಶ್ರಮವಲ್ಲ ತಾನೆ? ತನ್ನ ಹಿಟ್ಟನ್ನು ತಾನೇ ಬೀಸಿಕೊಳ್ಳುವುದೆಂದೂ ಅರ್ಥವುಂಟಲ್ಲ? ಆದ್ದರಿಂದ ಇದು ಕಾಯಕದ ಶ್ರೇಷ್ಠ ಸಂಕೇತ. ಮತ್ತೊಂದು ದೃಷ್ಟಿಯಲ್ಲಿ ಇದು ಜಾನಪದ ಗೀತದ ಜನಕಚಕ್ರ. ಇದು ಆಡುತ್ತಿದ್ದಾಗ ಜಾನಪದ ಹಾಡು ಸಮೃದ್ಧವಾಗಿ ಹುಟ್ಟಿಕೊಂಡಿತು.

– ಸುಜನಾ





ಈ ಗೀತೆಗಳ ಪ್ರಧಾನ ಗುಣ ಇವುಗಳ ಭಾವನಿಷ್ಠತೆ (Subjectivity). ಇವುಗಳನ್ನು ಹಾಡಿದವರು ಬದುಕಿನ ನೋವು ನಲಿವುಗಳನ್ನು ಉಂಡವರಾದ್ದರಿಂದ ತಮ್ಮನೋವು ನಲಿವುಗಳಿಗೆ ಒಂದು ರೂಪನ್ನು ಇವರು ಈ ಗೀತೆಗಳಲ್ಲಿ ಕೊಟ್ಟಿದ್ದಾರೆ. ಈ ಗೀತೆಗಳೆಲ್ಲ ಅವರ ಬದುಕಿನ ಒಂದು ಅವಿಭಾಜ್ಯ ಅಂಗ. ಅವರ ಬದುಕನ್ನು ತುಂಬಿದ್ದ ಮಾನವ ಭಾವಗಳ ಕಂಪು ಈ ಗೀತೆಗಳಲ್ಲಿ ತುಂಬಿದೆ. ಇತರ ಸಾಹಿತ್ಯ ಪ್ರಕಾರಗಳಿಗೆ ಹೋಲಿಸಿದರೆ ಈ ಕೃತಿಗಳು ಹೆಚ್ಚು ಭಾವನಿಷ್ಠವಾದವುಗಳು. ನೂರಾರೂ ಭಾವಗಳು ಈ ಕಲೆಯಲ್ಲಿ ತುಂಬಿ ತುಳುಕುತ್ತಿವೆ. ಆ ಜನರ ಉಸಿರಾಟದಂತೆ, ನಗೆಯಂತೆ, ನಿಟ್ಟುಸಿರಿನಂತೆ ಜೀವನದ ಒಂದು ಭಾಗವಾಗಿದೆ ಈ ಸಾಹಿತ್ಯ. ಈ ಹಿನ್ನೆಲೆಯಲ್ಲಿ ನೋಡಿದಾಗ ಈ ಗೀತೆ ದೇಶೀಯ ನೆಲದಿಂದೆದ್ದ ಅನೇಕ ಭಾವಗೀತೆಗಳ ಮೂಲ ಭೂಮಿಯೂ ಆಗಿದೆ.

ಗ್ರಾಮೀಣರ ಈ ಕವನ ಕಲೆ ನಿರಾಭರಣ ಸುಂದರವಾದುದು. ಜೀವನದ ಮೂಲ ನೆಲೆಯಿಂದಲೇ ಇದು ಬೆಳೆದು ಬಂದದ್ದರಿಂದ ಈ ಕಾವ್ಯ ಜೀವನಕಾವ್ಯವಾಗಿದೆ. ಭಾಷೆ, ಪ್ರತಿಮೆಗಳು, ಛಂದಸ್ಸು, (ಛಂದಸ್ಸು ಎಂಬುದಕ್ಕಿಂತ ಧಾಟಿ ಎನ್ನಬಹುದೇನೋ), ತಂತ್ರ ಇವುಗಳ ದೃಷ್ಟಿಯಿಂದ ಇದು ಸ್ವಭಾವೋಕ್ತಿ ಕಾವ್ಯ.

–ಜಿ ಎಸ್ ಸಿದ್ದಲಿಂಗಯ್ಯ




ನಮ್ಮ ನಾಡಿನ ನೆಲಕ್ಕೆ ಅನುಗುಣವಾದ ಕವಿತೆಯ ತಾಯಿಬೇರು ಈ ಜನಪದ ಕವಿತೆಯಲ್ಲಿದೆ. ಅದಕ್ಕೆ ನಾವು ಹೊಂದಿಕೊಂಡು ಅದರ ಮರ್ಮವನ್ನರಿತು ಹೊಸತನ್ನು ಬೆಳೆಸಬೇಕಾಗಿದೆ. ಅದರ ಎಲ್ಲ ಲಕ್ಷಣಗಳನ್ನು ನಾವು ಈಗ ತಂದುಕೊಳ್ಳುವುದು ಸಾಧ್ಯವಿಲ್ಲವಾದರೂ ಹರಿತಾದ, ಅಡಕವಾದ ಬಿಚ್ಚು ನುಡಿಗಳಲ್ಲಿ ನಮ್ಮ ಬುದ್ಧಿಯ, ಹೃದಯದ ಎಲ್ಲ ಸಂಪತ್ತನ್ನು ತೋಡಿಕೊಳ್ಳುವ ವಿಧಾನವನ್ನು ಕಲಿಯಬಹುದಾಗಿದೆ. ದಾಂಪತ್ಯ ಜೀವನದ ಬಗೆಗೆ ನಮ್ಮ ಹಿಂದಿನವರು, ಹಿರಿಯರು, ವ್ಯಾಕರಣದ ಗಂಧವಿರದಿದ್ದರೂ ಕಾವ್ಯ ರಹಸ್ಯವನ್ನು ಕರಗತ ಮಾಡಿಕೊಂಡಿದ್ದರು. ಈ ಶ್ರೇಷ್ಠ ಕವಿಗಳು ಹೇಳಿರದ ಸೂಕ್ಷ್ಮ ಸುಂದರ ಸಂಗತಿಯೇ ಬಹುಶಃ ಇರಲಾರದು! ಅವರ ಕವಿತೆಯಲ್ಲಿ ಹಬ್ಬಿಕೊಂಡಿರುವ ತಿರುಳ್ಗನ್ನಡದ ಇಂಪು, ಆ ಕನ್ನಡದಲ್ಲಿ ಅವರು ಕಟ್ಟಿರುವ ಕವಿತೆಯ ಪಾದರಿಗುಂಪು ನಮಗೆ ಹಿಂದಿನಿಂದ ಬಂದಿರುವ ಬೆಲೆಗಟ್ಟಲಾಗದ ಆಸ್ತಿ. ಅದು ಭಾಷೆಯ ಬೆಳವಣಿಗೆಯ ಚಿಹ್ನೆಯನ್ನು ಮಾತ್ರ ಕಾಣಿಸುವುದಿಲ್ಲ. ನಮ್ಮ ಜನಮನದ ಕಾವ್ಯ ಭಂಡಾರವನ್ನೇ ನಮ್ಮ ಕಣ್ಣೆದುರಿಗೆ ತೆರೆಯುತ್ತದೆ.

ಈ ಸರಳತೆಯ ಮುಂದೆ ನಾವೇನು ಹೇಳಬಲ್ಲೆವು ! ಕೈಮುಗಿಯುವುದೊಂದೆ ನಮ್ಮ ಕರ್ತವ್ಯ.

– ಕೆ ಎಸ್ ನರಸಿಂಹಸ್ವಾಮಿ





ಬರೆದವರು ಯಾರೋ- ಹೆಸರಿಲ್ಲದ, ಹೆಸರೊಲ್ಲದ ನೂರಾರು ಅಜ್ಞಾತ ಕವಿಗಳು; ಯಾವ ಮಹಾರಾಜರ ಅರಮನೆಯ ನೆಳಲಿನ ಸೋಂಕೂ ಇಲ್ಲದ, ತಮ್ಮ ಹಾಡಿನ ಮಹತ್ತನ್ನು ತಾವೇ ತಿಳಿಯದ ಮುಗ್ಧ ಜನತೆ ಈ ಹಾಡುಗಳನ್ನು ಕಟ್ಟಿತು. ಈ ಹಾಡುಗಳ ಆದಿದೈವ ಭೂಮಿತಾಯಿ; ಈ ಹಾಡುಗಳ ಸ್ಫೂರ್ತಿ ಕಾಯಕ. ಬೀಸುವಾಗ, ಕುಟ್ಟುವಾಗ, ನೆಡುವಾಗ, ಉಳುವಾಗ, ಕಳೆ ಕೀಳುವಾಗ, ಪೈರು ಕೊಯ್ಯುವಾಗ, ಕಾಳು ತೂರುವಾಗ, ತೊಟ್ಟಿಲನ್ನು ತೂಗುವಾಗ- ಮಾಡುವ ಕೆಲಸದೊಂದಿಗೆ ಮೂಡಿಬಂದ ಹಾಡುಗಳಿವು; ಕೆಲಸದೊಂದಿಗೆ ಮೂಡಿ, ಮಾಡುವ ಕೆಲಸವನ್ನು ಹಗುರವನ್ನಾಗಿ ಮಾಡುವ ಶಕ್ತಿಗಳಿವು. ಅಂದಂದಿನ ಅನುಭವಕ್ಕೆ ತಾನು ಕವಿ ಎಂಬ ಹೆಮ್ಮೆಯ ಸೋಂಕಿಲ್ಲದ ಜೀವನ ಪಡಿಮಿಡಿದ ಕಿಡಿಗಳಿವು. ನೆಲಕ್ಕೆ ಹಸಿರು ಮೂಡುವಷ್ಟು ಸಹಜವಾಗಿ, ಮೋಡಕ್ಕೆ ಹನಿಯೊಡೆಯುವಷ್ಟು ಸಹಜವಾಗಿ, ಗಿಡಕ್ಕೆ ಹೂವರಳುವಷ್ಟು ಸಹಜವಾಗಿ ಮೂಡಿದ ಮುಕ್ತಕಗಳಿವು. ಶತಶತಮಾನಗಳಿಂದ ಎದೆಯಿಂದ ಎದೆಗೆ ಪರಂಪರಾಗತವಾಗಿ ಸಾಗಿಬಂದ ಅಚ್ಚಳಿಯದ ಆಸ್ತಿಗಳಿವು.

ಜನಪದ ಕವಿಗಳ ಸೌಂದರ್ಯ ದೃಷ್ಟಿಯ ತಳಹದಿ, ಸೃಷ್ಟಿ ಸಮಸ್ತದೊಂದಿಗೆ ಅವರಿಗಿರುವ ಆತ್ಮೀಯತೆ. ಈ ಆತ್ಮೀಯತೆಯಲ್ಲಿ ಮಾತೃಭಾವನೆಯೇ ಸ್ಥಾಯಿ. ವಾತ್ಸಲ್ಯದ ಕಣ್ಣು ಎಲ್ಲ ವಸ್ತುಗಳ ಮೇಲೂ ತನ್ನ ಪ್ರೀತಿಯ ಬೆಳಕನ್ನು ಚೆಲ್ಲಿ ಚೆಲುವನ್ನಾಗಿ ಮಾಡಿ ಎತ್ತಿ ಹಿಡಿಯುತ್ತದೆ. ಬದುಕಿನ ಎಲ್ಲ ಭಾವನೆಗಳನ್ನು ಹಾಡನ್ನಾಗಿ ಪರಿವರ್ತಿಸುತ್ತದೆ; ಈ ಪರಿವರ್ತನೆಯಲ್ಲಿ ಅನಾಯಾಸವಾಗಿ ದೈನಂದಿನ ಸಾಮಾನ್ಯ ಅನುಭವ ಅಲಂಕರಣವಾಗಿ ಒದಗಿ ಬರುತ್ತದೆ. ಸಾಮಾನ್ಯದಿಂದ ಅಸಮಾನ್ಯದವರೆಗೆ ಅನುಭವದಿಂದ ಅನುಭಾವದವರೆಗೆ ವ್ಯಾಪ್ತವಾದ ಚೆಲುವನ್ನು ಹಿತವಾಗಿ, ಮಿತವಾಗಿ, ಶಕ್ತಿ ಪೂರ್ಣವಾಗಿ, ಅಭಿವ್ಯಕ್ತಿಗೊಳಿಸುವ ಈ ಹಾಡುಗಳು ಬಾಳಿಗೊಂದು ಭರವಸೆಯನ್ನೂ ಬದುಕಿನ ಬಗೆಗೆ ಒಲವನ್ನು ಕೊಡುತ್ತವೆ.

– ಡಾ. ಜಿ ಎಸ್ ಶಿವರುದ್ರಪ್ಪ



ಅಪಾರವಾದ ಜನಪದ ಸಾಹಿತ್ಯದಲ್ಲಿ ವಿಶಾಲವಾದ ಕ್ಷೇತ್ರವನ್ನು ಮಕ್ಕಳ ಜನಪದವಾಣಿ ಆಕ್ರಮಿಸಿದೆ. ಮಕ್ಕಳ ವಾಣಿಯ ಸೊಬಗು-ಸೊಗಸು, ಭಾವಪೂರ್ಣತೆ, ಅಂದ-ಚಂದಗಳನ್ನು ರಸಿಕರು ಅವಲೋಕಿಸಿದಾಗ ಅನಿರ್ವಚನೀಯ ಆನಂದ ಸಾಗರದಲ್ಲಿ ತೇಲಾಡುತ್ತಾರೆ.


ಆಧುನಿಕತೆಯ ಈ ಸುಧಾರಣೆಯ ಜೊಳ್ಳು ಬಿರುಗಾಳಿಯಲ್ಲಿ ಜನಪದ ಸಾಹಿತ್ಯದ ಮಕ್ಕಳ ನುಡಿಗೆ ಬೆಡಗಿಗೆ ತುಂಬಾ ನಷ್ಟಬಂದಿದೆ; ಹಳ್ಳಿಗಾಡಿನಲ್ಲಿ, ಪಟ್ಟಣಗಳಲ್ಲಿ ಬಹುಕಾಲದಿಂದಲೂ ಸಾಗಿಬಂದ ಆಟ-ಪಾಟಗಳು ಮರೆಯಾಗುತ್ತಾ ಇವೆ. ಪಾಶ್ಚಾತ್ಯ ಪದ್ಧತಿಯ ಆಟಗಳು ಆಕ್ರಮಿಸಿವೆ. ಅಲ್ಲಿಯ ವಾತಾವರಣ ಇಲ್ಲಿ ಹೇಗೆ ಸಾಧ್ಯ? ನಮ್ಮ ನಾಡಿನ ಆಟಪಾಟಗಳಿಗೆ ನಮ್ಮದೇ ಆದ ಒಂದು ಸತ್‌ಸಂಪ್ರದಾಯ, ನಿಯಮ, ವೈವಿಧ್ಯತೆ ಇದೆ. ಆಟಗಳೊಂದಿಗೆ ಹಾಡುಗಳು ಬೆಳೆದುಬಂದಿವೆ. ಒಂದನ್ನೊಂದು ಅಗಲದಂಥ ಸುಮಧುರ ಸಂಬಂಧ ಅವುಗಳಲ್ಲಿರುವುದನ್ನು ಹೇಳಬೇಕಿಲ್ಲ.

– ಈಶ್ವರಚಂದ್ರ ಚಿಂತಾಮಣಿ

ನುಡಿದು ನಡೆಗಲಿಸಿದ ಅಂದಿನ ಜನಪದ ಸಾಹಿತ್ಯವು ಇಂದಿನ ಕುಂಟು ಜನಾಂಗಕ್ಕೆ ಕಾಲನ್ನೂ, ಕುರುಡು ಜನಾಂಗಕ್ಕೆ ಕಣ್ಣನ್ನೂ, ಮೂಕ ಜನಾಂಗಕ್ಕೆ ಬಾಯನ್ನೂ, ಕೊಡಬಲ್ಲ ಕಲ್ಪವೃಕ್ಷವಾಗಿದೆ. ಅದರ ಫಲಗಳು ಮೊದಮೊದಲು ಬಾಯಿಗೆ ರುಚಿಸಲಿಕ್ಕಿಲ್ಲ. ಆದರೂ ಅಧರಕ್ಕೆ ಕಹಿ ಉದರಕ್ಕೆ ಸಿಹಿಯೆನ್ನುವ ಶ್ರದ್ಧೆಯಿಂದ ಜನಪದ ಸಾಹಿತ್ಯವನ್ನು ನಾವು ಆರೋಗಿಸಲೇ ಬೇಕಾಗಿದೆ.

– ಸಿಂಪಿ ಲಿಂಗಣ್ಣ ಚಡಚಣ





ನಮ್ಮ ಉತ್ತರಕನ್ನಡ ಜಿಲ್ಲೆಯ ಜಾನಪದ ಸಾಹಿತ್ಯವು ಕೇವಲ ದೇಸಿಯಾಗಿಲ್ಲ. ಕೆಲಮಟ್ಟಿಗೆ ಮಾರ್ಗವೂ ಆಗಿದೆ. ಈ ಮಾತು ಕೇಳಲು ವಿಚಿತ್ರವೆನಿಸೀತು. ಆದರೆ ಇದು ಯಥಾರ್ಥವು. ಹಾಲಕ್ಕಿ ಒಕ್ಕಲು ಮುಂತಾದ ಹಿಂದುಳಿದ ಆದಿವಾಸಿ ಸಮಾಜಗಳಲ್ಲಿ ಇಂಥ ಸಾಹಿತ್ಯವು ಅಪ್ಪಟ ದೇಸಿ ಆದರೆ ಹೈಗ (ಹವ್ಯಕ) ಸಮಾಜದ ಗರತಿಯರ ಹಾಡುಗಳು ಈ ರೀತಿಯಲ್ಲಿ ಅಚ್ಚ ಜಾನಪದವಲ್ಲ. ಅವು ಎಷ್ಟೇ ಹಳೆಯವಾಗಿದ್ದರೂ, ನಮ್ಮಲ್ಲಿರುವ ಯಕ್ಷಗಾನ ಆಖ್ಯಾನಗಳಂತೆ, ತುಂಡು ಪದ್ಯಗಳಂತೆ ಈ ಮೇಲ್ವರ್ಗದ ಹಾಡುಗಳು ಸಂಸ್ಕೃತ ಸಂಸ್ಕೃತಿಯ ಪ್ರಭಾವಕ್ಕೆ ತುಂಬಾ ಒಳಗಾಗಿದ್ದು ಕಂಡುಬರುತ್ತದೆ.

ಈ ದೃಷ್ಟಿಯಿಂದ ಪರಿಶೀಲಿಸಿದರೆ ಮಾರ್ಮಿಕ ರಸಿಕತೆಯ ಕಾವ್ಯಗಳು ಹಾಲಕ್ಕಿ ಒಕ್ಕಲ ಹಾಡುಗಳಲ್ಲಿ ಇದ್ದದ್ದು ಹವೀಕರ ಹಾಡುಗಳಲ್ಲಿ ಸಿಗುವುದಿಲ್ಲ. ಹವೀಕರ ಹಾಡುಗಳು ಅವರ ಬದುಕಿನ ಸಂದರ್ಭದಿಂದ ಅನುಭವದ ಆಳದಿಂದ ಹೊಮ್ಮಿದಂತಿಲ್ಲ. ಅವುಗಳ ಭಾವ ಆಹಾರ್ಯ, ಭಾಷೆ ಪ್ರತಿಧ್ವನಿ. ಹೆಚ್ಚಾಗಿ ರಾಮಾಯಣ, ಮಹಾಭಾರತ, ಭಾಗವತಗಳ ಪುರಾಣ ಪುಣ್ಯಕತೆಗಳಿಂದ ಪ್ರತಿಬಿಂಬಿತವಾಗಿವೆ. ಆದರೆ ಒಕ್ಕಲ ಹಾಡುಗಳು ಹಾಗಲ್ಲ. ಅವು ನಿಜವಾಗಿಯೂ ವೇದದಂತೆ ಶ್ರುತಿಯಷ್ಟು ಅಪೌರುಷೇಯ.

– ಗೌರೀಶ ಕಾಯ್ಕಿಣಿ

ಯಾವುದೇ ಭಾಷೆಯ ಅಭಿವ್ಯಕ್ತಿ ಸಾಮರ್ಥ್ಯವನ್ನು ಅಳೆಯಬೇಕಾದರೆ ಆ ಭಾಷೆಯ ಶಬ್ದ ಸಂಪತ್ತಿಯನ್ನು ಪರಿಶೀಲಿಸಬೇಕು. ಹಾಗೆಯೇ ಒಂದು ಭಾಷೆಯ ಶಬ್ದ ಸಂಪತ್ತಿಯನ್ನು ಎರಡು ವಿಭಾಗ ಮಾಡಬಹುದು. ಒಂದು: ಪಂಡಿತರು; ವಿದ್ವಾಂಸರು ಬಳಸುವ ಭಾಷೆ, ಮತ್ತೊಂದು ಜನಸಾಮಾನ್ಯರು ಅಂದರೆ ಅಷ್ಟಾಗಿ ವಿದ್ಯಾವಂತರಲ್ಲದವರು ಬಳಸುವ ಭಾಷೆ. ಇದನ್ನು ಗ್ರಾಮ್ಯಭಾಷೆ ಎನ್ನಬಹುದು. ವಿದ್ವಾಂಸರಿಗೆ ತಮ್ಮ ಭಾಷೆಯಜೊತೆಗೆ ಇತರ ಭಾಷೆಗಳ ಸಂಪರ್ಕವೂ ಇರುವುದರಿಂದ, ಅನ್ಯ ಭಾಷೆಗಳ ಶಬ್ದ ಸಂಪತ್ತಿಯನ್ನು ತಮ್ಮ ಭಾಷೆಯಲ್ಲಿ ಬಳಸುತ್ತಾರೆ. ಜನಸಾಮಾನ್ಯರಾದರೋ ತಮ್ಮ ಭಾಷೆಯಲ್ಲಿರುವ ಶಬ್ದಗಳನ್ನೇ ಉಪಯೋಗಿಸುತ್ತಾರೆ.

ಒಂದು ಭಾಷೆಯ ಶ್ರೀಮಂತಿಕೆಯನ್ನು ಅಳೆಯಬೇಕಾದರೆ ಆ ಭಾಷೆಯ ಶಬ್ದ ಸಂಪತ್ತಿಯನ್ನು ಅವಲೋಕಿಸುವುದು ಅನಿವಾರ್ಯ. ಹಾಗೆಯೇ ಆ ಭಾಷೆಯ ಮೂಲ ಶಬ್ದಕೋಶವನ್ನು, ಆದರ ಆಂತರಿಕ ಸತ್ವವನ್ನು ಅರಿಯಬೇಕಾದರೆ ಆಯಾ ಭಾಷೆಯ ಜನಪದ ಸಾಹಿತ್ಯವನ್ನೂ ಆದರ ಸ್ವರೂಪವನ್ನೂ ಗಮನಿಸಬೇಕು. ಜನಪದ ಸಾಹಿತ್ಯ ಜನಜೀವನದ ಎಲ್ಲ ಅಂಗಗಳನ್ನೂ ಒಳಗೊಂಡಿರುವ ಸಾಹಿತ್ಯ ಪ್ರಕಾರವೆಂಬುದು ನಿರ್ವಿವಾದ ಅಂಶ.

– ಎನ್ ಬಸವಾರಾಧ್ಯ


ಕನ್ನಡ ಜನಪದ ಸಾಹಿತ್ಯವನ್ನು ಭಾಷಾದೃಷ್ಟಿಯಿಂದಲೂ ಹೊಸದಾಗಿ ಅಭ್ಯಸಿಸುವುದು ಅಗತ್ಯ. ಅಚ್ಚಕನ್ನಡ ಕೆಚ್ಚು ಜನಪದ ಸಾಹಿತ್ಯದಲ್ಲಿ ಹೇರಳವಾಗಿರುವುದರಿಂದ ಈ ತರಹದ ಕನ್ನಡವೇ ಇನ್ನು ಮುಂದೆ ಬಳಕೆಗೆ ಬರಬೇಕಾಗಿದೆ.

– ಉತ್ತಂಗಿ ಚೆನ್ನಪ್ಪ

ಜನಪದ ಸಾಹಿತ್ಯವನ್ನು ಸಂಧಿಸಿದಾಗ 'ಇದು ಹಳ್ಳಿಯ ಹಾಡು, ಗುಣವನ್ನು ಗ್ರಹಿಸಬೇಕು ಎಂಬ ಕೃಪಾ ದೃಷ್ಟಿ ತೊಲಗಿ, ಇದು ಒಳ್ಳೆಯ ಕಾವ್ಯ, ಉತ್ತಮೋತ್ತಮ ಕಾವ್ಯ, ಇದರ ರಸವನ್ನು ಸವಿದು ಹೃದಯವನ್ನು ಸಂಸ್ಕರಿಸಿಕೊಳ್ಳಬೇಕು' ಎಂಬ ನಮ್ಮ ಬುದ್ಧಿ ಬೆಳೆಯುತ್ತದೆ.

– ತೀ ನಂ ಶ್ರೀಕಂಠಯ್ಯ






## ಗಣನಾಯ್ಕ

ಶರಣು ಶರಣುವಯ್ಯ ಗಣನಾಯ್ಕ
ನಮ್ಮ ಕರುಣದಿಂದಲಿ ಕಾಯೋ ಗಣನಾಯ್ಕ

ಎಳ್ಳುಂಡೆ ಜೇನುತುಪ್ಪ ಗಣನಾಯ್ಕ
ನಮಗೆ ವಿದ್ಯಾವ ಕಲಿಸಯ್ಯ ಗಣನಾಯ್ಕ
ಉದ್ದು ಹೋಳಿಗೆ ತುಪ್ಪ ಗಣನಾಯ್ಕ
ನಿಮ್ಗೆ ತಪ್ಪದೆ ಒಪ್ಪಿಸುವೆ ಗಣನಾಯ್ಕ
ಗೊನೆಮೇಗ್ಲ ಬಾಳೆಹಣ್ಣು ಗಣನಾಯ್ಕ
ನಿಮ್ಗೆ ಕಳಿ ಅಡ್ಕೆ ಚಿಗುರೆಲೆ ಗಣನಾಯ್ಕ
ಕೊಂಬೆಮೇಗ್ಲ ನಿಂಬೆಹಣ್ಣು ಗಣನಾಯ್ಕ
ನಿಮ್ಗೆ ಒಡಗಾಯಿ ಇಡಗಾಯಿ ಗಣನಾಯ್ಕ

ಕರ್ಪೂರ ಸಾಂಬ್ರಾಣಿ ಗಣನಾಯ್ಕ
ನಿಮ್ಗೆ ಮರುಗ ಮಲ್ಲಿಗೆ ಜಾಜಿ ಗಣನಾಯ್ಕ
ಹಸುರಂಗಿ ಕಾಲ್ಗಡಗ ಗಣನಾಯ್ಕ
ನಿಮ್ಗೆ ಕುಶಲದ ಮೇಲ್ಕಟ್ಟು ಗಣನಾಯ್ಕ
ಮೂಷಕವಾಹನ ಗಣನಾಯ್ಕ
ನಮ್ಮ ಶಿವನ ಕುಮಾರನಯ್ಯ ಗಣನಾಯ್ಕ
ನಿನ್ಗೆ ಹೆಂಡ್ರಿಲ್ಲ ಮಕ್ಳಿಲ್ಲ ಗಣನಾಯ್ಕ
ನೀ ಎದ್ದು ಬಾರಯ್ಯ ಸಿದ್ಧಿ ಗಣನಾಯ್ಕ
ಬಿಲ್ಪತ್ರೆ ವನದಲ್ಲಿ ಗಣನಾಯ್ಕ
ನಿನ್ನ ಧ್ಯಾನಮಾಡಿ ನೆನ್ದೇವಯ್ಯ ಗಣನಾಯ್ಕ
ಕಂಟಕಹರ ನೀನು ಗಣನಾಯ್ಕ
ನಮ್ಗೆ ವರವನು ಪಾಲಿಸಯ್ಯ ಗಣನಾಯ್ಕ



## ಬಿದಿರು

ನಾನ್ಯಾರಿಗಲ್ಲಾದವಳು ನಾನ್ಯಾರಿಗಲ್ಲಾದವಳು
ನಾನ್ಯಾರಿಗಲ್ಲಾದವಳು । ಬಿದಿರೂ
ನಾನ್ಯಾರಿಗಲ್ಲದವಳು ?

ಹುಟ್ಟೂತ ಹುಲ್ಲಾದೆ ಬೆಳೆಯೂತ ಬಿದುರಾದೆ
ಚಿಕ್ಕಾನು ಜಂಗಮ್ಮಯ್ಯಗೆ । ಬಿದಿರೂ
ಭಿಕ್ಷಾಕೆ ಬೆತ್ತವಾದೆನು ।

ಅಪ್ಪಾಗೆ ಬುಟ್ಟಿಯಾದೆ ಅಮ್ಮಾಗೆ ಪಡ್ಲಿಗಾದೆ
ಚೆಂಬಲ್ಲೆ ನಾರಿಯರಿಗೆ । ಬಿದಿರೂ
ಕೇರೂವ ಮೊರನಾದೆನು.

ಹಣ್ಣೀಗೆ ಬುಟ್ಟಾದೆ ಎಣ್ಣೀಗ ಲಳಿಗಾದೆ
ಕಣ್ಣು ಮೂರುಳ್ಳ ಶಿವಗೆ । ಬಿದಿರೂ
ಪಾಲಿಕೆ ಕೊಂಬಾದೆನು.

ಗುಡ್ಡದಲ್ಲಿ ಹುಟ್ಟೂತಿನಿ ಗುಡ್ಡದಲ್ಲಿ ಬೆಳೆಯೂತಿನಿ
ಗಡ್ಡ ಬಂದ ಮುದುಕಾರಿಗೆ । ಬಿದಿರೂ
ಊರುವ ಕೋಲಾದೆನು.



## ಅಡ್ಡಗುಡ್ಡವ ದಾಟಿ

ನೀರಿಗೋಗೋ ಹೆಣ್ಣೆ ನಿಲ್ಲೆ ನಾನು ಬರುತೀನಿ
ನಿನ್ನಾಣೆ ನಿನ್ನ ಕೊಡದಾಣೆ । ಕೊರಳೀನ ಬಣ್ಣದ ಸರದಾಣೆ
ಕಯ್ಯೀನ ಬಳೆಯಾಣೆ—ನೀರ ಹೊಳೆಯಾಣೆ

ಬಣ್ಣದ ಸರದ ಮೇಲ್ ಕಣ್ ಯಾಕೊ ಗಿಣಿರಾಮು
ಹೆಣ್ಣಿಲ್ಲವೇನೊ ಮೆಲುವೋಕೆ । ನಿಮಕುಲದ
ಹೆಣ್ಣಿಲ್ಲವೇನೊ ತರುವೋಕೆ ?

ಚಿನ್ನದ ಚೀಲಕ್ಕೆ ರನ್ನಾದ ಬಾಯ್ದಾರ
ನಿನ್ನೊಂದಿಗಾಡಿ ಗೆಣೆಗಾರ । ನಾನು
ನೆನ್ನಿಂದ ನೀರ ತರಲಿಲ್ಲಾ

ನಿನ್ನೊಂದಿಗಾಡಿ ತಾತೀಯ ನಾನು ಮರೆತೆ
ಹಾಸ್ಕೇಲಿ ಮರೆತೆ ಹವಳಾವ । ನನ ಗೆಣೆಯಾ
ಮಾತಿನಲ್ಲಿ ಮರೆತೆ ಮನೆಯವನ

ಹಾದೀಯ ಮನೆಯೊಳೆ ಗೋದೀಯ ನೆರಿಯೋಳೆ
ನನ ನೋಡಿ ಮೋರೆ ತಿರುವೋಳೆ । (ತಿರುವೋ) ಗೆಣಗಾತಿ
ನಾನು ಮಾಡಿದ ಹಗೆಯೇನೆ ?

ಬರುವೆನು ಜಾಣ ಬರುವ ದಾರಿಯ ಕಾಯೊ
ಬತ್ತಿದ ಬಾಯಿಗೆ ಎಳೆನೀರು । ನಿಂಬೆಹಣ್ಣು
ತರುವೇನು ಜಾಣ ತಡಮಾಡೊ

ಆಚೆ ದಡದಲಿ ನೀನು ಈಚೆ ದಡದಲಿ ನಾನು
ಭಾಷೆ ತಾರಣ್ಣೆ ಬಲಗೈಲಿ । ಎಲೆ ಹೆಣ್ಣೆ
ನಾನು ಭಾಷೆ ತಪ್ಪೊಂತ ಮಗನಲ್ಲಾ

ಚೊಳ್ಳೆ ಹೂವಿನಂಗೆ ಜೋಕಾಡಿ ನನನಲ್ಲಾ
ತೆಳ್ಳಗಿದ್ದರೇನು ಗೆಣೆಗಾರ । ಹಾಕೀದ ಕೇಕೆ
ಮುಂಗಾರು ಸಿಡಿಲು ಹೊಡೆದ್ಹಂಗೆ

ಕೇಕೆ ಹಾಕಿದ ಕಂಡು ಬೇಕಾಗಿ ನಾನು ಬಂದೆ
ಬಾರೊ ನನ ಗೆಣೆಯ ಬಯಲೀಗೆ । ನಾನೆಂದೂ
ಭಾಷೆ ತಪ್ಪೋಂತ ಮಗಳಲ್ಲಾ

ಕೋಳಿ ಕೂಗೀತು ಕುಂಬಳಹೂವೀಗೆ
ಬೆಟ್ಟಕೂಗೀತು ಬಿದಿರೀಗೆ । ನನ ಗೆಣೆಗಾರ
ನಾನು ಕೂಗೀದೆ ನಿನಗಾಗಿ

ಎಲ್ಲೆಲ್ಲಿ ನೋಡಿದಾರೆ ಗೆಳತಿಯಂಥವರಿಲ್ಲಾ
ಹಲ್ಲು ನೋಡಿದರೆ ಹವಳಾವು । ಗೆಳತೀಯ
ಸೊಲ್ಲು ಕೇಳಿದರೆ ಸಮದಾನ

ಕಾಣಾದೆ ಇರಲಾರೆ ಕಾಶಿ ಕರ್ಜೂರಾವ
ಬಾಣಸೂರೀನ ಗೆಣತೀಯ । ಮುಖವನ್ನು
ನೀನು ಕಾಣದರಘಳಿಗೆ ಇರಲಾರೆ

ಮುತ್ತಿನೋಲೆ ಬೇಕೆ ರತ್ನದೋಲೆ ಬೇಕೆ
ಪಟ್ಟೆ ಬಣ್ಣಬೇಕೆ ನಡುವಿಗೆ । ನನ ಹೆಣ್ಣೇ
ನನ್ನ ಪಟ್ಟೆ ಆರತಿ ಪರಿಮಳವೆ

ಹಸನಾದ ಹೆಣ್ಣೇ ಎಸಳೆ ತೋಟಕೆ ಬಾರೆ
ರಸಮೆಟ್ಟಿದೆಲೆಯ ಕುಯಿಸ್ತೇನು । ನನ ಹೆಣ್ಣೇ
ನಿನಗೆ ಹಸನಾದ ನಗೆಯ ನಗಿಸ್ತೇನು

ಜಾತ್ರೀಗೆ ಹೊಗ್ತೀನಿ ಜವನಾವ ತತ್ತೀನಿ
ನಾನು ಹೂವು ತತ್ತೀನಿ ತುರುಬಿಗೆ । ನನ ಹೆಣ್ಣೆ
ನಿನಗೆ ಬಂದೀ ತತ್ತೀನಿ ಬಲಗೈಗೆ

ಆಚೇಯ ಕೇರಿಯವನೆ ಚೀಟಿವಸ್ತ್ರಾದವನೆ
ಪಾರಿವಾಳಿದಂಗೆ ಸುಳಿಯೋನೆ । (ಸುಳಿಯೊ) ನನ ಗೆಣೆಯ
ದೂರು ಬರುತಾದೆ ನಿನಮೇಲೆ

ದೂರು ಬಂದಾರೆ ಬರಲಿ ವೈಯಾರ ನಿನಗಿರಲಿ
ಇಂದು ರಾಣಿ ನಿನ್ನ ಮುಖ ಕಳೆಯಿರಲಿ । ಎಲೆ ಹೆಣ್ಣೆ
ನೂರು ಬಿದ್ದಾರು ನನಗಿರಲಿ



ಕುಂದಿಸಿ ನುಡಿದಾರೆ ನಿಗೇನು ಎಲೆ ಹೆಣ್ಣೆ
ನಾ ಇದ್ದ ಮೇಲೆ ಭಯವೇನು । ನನ ಹೆಣ್ಣೆ
ನೂರು ಬಿದ್ದಾರು ನಾನು ಗೆಲುವೇನು

ಏರೀಯ ಕೆಳಗೆ ಏಳು ತೆಂಗಿನಮರ
ಬೇರಲಿ ನೀರ ಮೊಗೆಯೊಳೆ । (ಮೊಗೆಯೊ) ಎಲೆ ಹೆಣ್ಣೆ
ಕ್ವಾರೆ ನಿನಿ ಕೈಗೆ ಹಿಡಿ ಹೊನ್ನ

ಹಿಡಿ ಹೊನ್ನ ಕೊಟ್ಟಾರೆ ಗುಣವಿಲ್ಲಾ ಗೆಣೆಗಾರ
ಬಾ ಹೋಗು ನಮ್ಮ ಹೊಲಕಡೆ । ಮನೆಕಡೆ
ನಮ್ಮವರು ಕಂಡು ಬೋದಾರು

ಬಿಳಿಯ ಕಂಬಳಿಬೇಡ ಕರಿಯ ಕಂಬಳಿಬೇಕು
ತಿಂಗಳ ಬೆಳಕಲ್ಲಿ ಬರಬೇಕು । ನನ ಹೆಣ್ಣೇ
ನಿನ್ನಿಂದೆ ದೂರು ಹೊರಬೇಕು

ಚುಂಚನ ಗಿರಿಯಲ್ಲಿ ಆದಿ ಭೈರುವ
ಕನ್ನೆಣ್ಣು ನನಗೆ ಒಲಿದಾರೆ । ಚುಂಚನಗಿರಿಯ
ಕನ್ನಡಿಗೆ ಮುತ್ತ ಬಿಗಿಸೇನು

ಹದ್ದಿನಕಲ್ಲಲ್ಲಿರುವ ಬೆಟ್ಟದ ಹನುಮಂತ
ಬೆಡಗೀನ ಹೆಣ್ಣು ಒಲಿದಾರೆ । ಹನುಮಂತ
ನಾನು ಮುತ್ತ ಬಾಗಿಲ್ಗೆ ಹೆಣೆಸೇನು

ಹಂಬಲ ಬಿಟ್ಟು ತಿಂಗಳ ಮೇಲಾದೊ
ಕಣ್ಣೀಗೆ ನಿದ್ದೆ ಕವಿಯಾದೋ । ನನ ಗೆಣಗಾತಿ
ಮುಖ ತೋರೆ ಬಂದು ಸೊಪುನಾಕೆ

ಇಂಬೀಯ ಹಣ್ಣಿನಂಗೆ ತುಂಬೀತು ಮೈ ಬಣ್ಣ
ಹಂಬಲ ಬಿತ್ತು ನಿನಮೇಲೆ । ಗೆಣಗಾತಿ
ನಾನು ಮೈಸೂರ ಸಂಬಾಳ ಬಿಟ್ಟು ಬರುತ್ತೀನಿ

ಇಂಬೀಯ ಹಣ್ಣಿನಂಗೆ ತುಂಬೀದ ಮೈಬಾಲೆ
ಕಾಣಾದೆ ನಿನ್ನ ಕೊರಗೇನು । ಗೆಣೆಗಾತಿ
ಕಾಣಲಿನ್ಹೆಂಗೆ ಮನೆದೂರ

ಇಂಬೆ ಹಣ್ಣಿಗೆ ಬಂದೆ ತುಂಬೆ ಹೂವಿಗೆ ಬಂದೆ
ಹಂಬಲಿಸಿ ಬಂದೆ ನಿನ ಮನೆಗೆ । ಎಲೆ ಹೆಣ್ಣೇ
ತಾವೆಲ್ಲಿ ತೋರೆ ತಳುಗಾಕೆ

ಯಾಕೋ ಕಾಣೆ ನನ್ನ ಎಡಬುಜವು ಜುಮ್ಮೆಂತು
ಯಾಕೆನ್ನ ಗೆಣೆಯ ನೆನೆದಾನೊ । ನನ್ನ
ಕಲ್ಲಂತ ಎದೆಯು ಕರಗೀತು

ಕೋಟೇಯ ಮನೆಯವಳೆ ಕೋಗೀಲೆ ದನಿಯವಳೆ
ರಾಟೇವಾಲೆಯ ಮನೆಯವಳೆ । ನನ ಚೆಲುವೆ
ನಾನು ದಾಟೀ ಬರಲಾರೆ ನೀ ದನಿ ತೋರೆ

ಅಡ್ಡಗುಡ್ಡವ ದಾಟಿ ಕದ್ದು ಕಣಿವೆಯ ದಾಟಿ
ಬಿದ್ದೋಡಿ ಬಂದೆ ನಿನಗಾಗಿ । ನನ ಚೆಲುವೆ
ಕಬ್ಬಿನಂತವಳೆ ದನಿತೋರೆ

ಪಂಜರದ ಗಿಣಿ ನಾ ಬರಲಾರೆ ತಾವಿಲ್ಲಾ
ದನಿ ತೋರಲಾರೆ ತೆರಣೆಲ್ಲಾ । ನನ ಗೆಣೆಯ
ಗಿಣಿಯಾಗಿ ಬಾರೋ ಹೊಸಲೀಗೆ

ದನಿಹೆಂಗೆ ತೋರಾಲಿ ಕದಹೆಂಗೆ ತೆಗೆಯಾಲಿ
ಮಗ್ಗುಲಲ್ಲವನೆ ಮನೆಪುರುಷ । ನನ ಗೆಣೆಯ
ನೀನು ಮಗ್ಗಾಗಿ ಬಾರೋ ನನ್ನ ತುರುಬೀಗೆ

ಕಾರೆಂಬೋ ಕತ್ತಲೆ ಭೋರೆಂಬೊ ಮಳೆ ಮೋಡ
ಏನು ಹಿಡಿದಿತ್ತೊ ಬರುವೋಕೆ । ನನ ಗೆಣೆಯ
ನಿನಗೆ ರಾಣೆಲ್ಲವೇನೊ ಮನೆಯಲ್ಲಿ

ರಾಣಿದ್ದರೇನೆ ಪ್ರಾಣಕಾಂತೆ ನೀ ಕೇಳೆ
ನೀನೆ ಪಂಜರದ ಅರಗಿಣಿ । ನನ ರಾಣೀ
ನಾನು ಮರತ್ಹೆಂಗೆ ಇನ್ನು ಬದುಕಾಲಿ

ಗಂಗೇಗೆ ಮುಂದಾಗಿ ಊರೀಗೆ ಹಿಂದಾಗಿ
ಸೂಯೆಂದು ಸೀರೆ ಒಗೆಯೋನೆ । (ಒಗೆಯೊ) ಮಡಿವಾಳಿ
ಊರಲ್ಲೇನಯ್ಯ ಹೊಸ ಸುದ್ದಿ ?

ಹಳ್ಳಿ ಹೊಸೂರು ಕಟ್ಟೆ ಏರಿಮೇಲೆ
ಮಾಯೂರ ಮಲ್ಲ ಮಡಿದ್ಹೋದ । ಸುದ್ದೀಯು
ನಾರೀಗೆ ತಿಳಿಯೀತೆ ನೀರ ಹೊಳೆಯಲ್ಲಿ

ಮಾಯೂರ ಮಲ್ಲ ಮಡಿದ್ಹೋದ ಸುದ್ದೀ ಕೇಳಿ
ಹೊತ್ತಿದ್ದ ಕೊಡವ ಕೆಳಗ್ಹಾಕಿ । ಆ ನಾರಿ
ದುಃಖ ಮಾಡ್ಯಾಳೆ ಹೊಳೆಯಲ್ಲಿ





ಹೊತ್ತಿದ ಕೊಡವಾನೆ ದೊಪ್ಪಾನೆ ಎತ್ಹಾಕಿ
ಅವಳಿಚ್ಚೆ ಬಂದಂತೆ ದುಃಖಿಸಾಳೆ । (ದುಃಖಿಸಿ) ಬಾಲೆಯು
ಹಾಡ್ಹಾಡಿಕೊಂಡು ಅಳುತಾಳೆ

ಚಿನ್ನದ ಕೊಡನಲ್ಲಾ ರನ್ನದ ಕೊಡನಲ್ಲಾ
ಮಣ್ಣೀನ ಕೊಡಕ್ಯಾಕೆ ಕಡುದುಃಖ । ಎಲೆ ಬಾಲೆ
ಪುರುಷಾಗೆ ಹೇಳು ತರುತಾನೆ

ಕೊಡ ಕೊಡ ಎಂದಾರೆ ಈ ಸೀಮೆ ಕೊಡನಲ್ಲಾ
ನಾಗಮಂಗಲದ ಜಗಜೋಡಿ । ಕೊಡವ
ನಾನು ಹತ್ವರ್ಷದಿಂದ ಬಳಸಿದ್ದೆ

ಅತ್ತೆ ಕಾಣದ್ಹಾಗೆ ಮಾವ ನೋಡದ್ಹಾಗೆ
ಒಪ್ಪದಲಿ ನಾನು ಬಳಸಿದ್ದೆ । (ಬಳಸಿದ್ದ) ಕೊಡವು
ನುಚ್ಚಾಯ್ತು ನೀರ ಹೊಳೆಯಲ್ಲಿ

## ಜವರಾಯ

ಜವರಾಯ ಬಂದರೆ ಬರಿಕೈಲಿ ಬರಲಿಲ್ಲ
ಕುಡುಗೋಲು ಕೊಡಲ್ಯೊಂದು ಹೆಗಲೇರಿ
ಒಳ್ಳೊಳ್ಳೆ ಮರನ ಕಡಿಬಂದ
ಫಲಬಿಟ್ಟ ಮರನ ಕಡಿಬಂದ

ಎಂದೂ ಬಾರದ ಜವರಾಯ ಇಂದೇಕೆ ಬಂದೀರಿ ?
ಕೊಳ್ಳಯ್ಯ ನೀರ ಕುಡಿ । ನೀರ
ಕುಡಿಯೋಕೆ ಬಂದಿಲ್ಲ ಕೂರೋಕೆ ಬಂದಿಲ್ಲ
ಗಂಡನ ಮಡದಿ ನಡಿ ಮುಂದೆ

ಮನೆ ಮುಂದೆ ಚಪ್ಪರ ಹಬ್ಬದ ಸಡಗರ
ಬಿಟ್ಟೆಂಗೆ ಬರಲೋ ಜವರಾಯ । ಹಬ್ಬ ಮಾಡುವಂಥ
ಪುರಚಲುವೆ ಬರುತಾಳೆ ಗಂಡನ ಮಡದಿ ನಡಿ ಮುಂದೆ

ಮಳಿ ಮಳಿಗೆ ಹಚ್ಚಡ ಮಳಿಗೆ ಮುಂಡಾಸಿನ
ಗಂಡನ ಬಿಟ್ಟು ಹೇಗೆ ಬರಲೋ । ಗಂಡಗೆ ತಕ್ಕಂಥ
ಹೆಂಡೀರು ಬರುತಾರೆ ಗಂಡನ ಮಡದಿ ನಡಿ ಮುಂದೆ

ಹಾಲೂ ಬಾನಾ ಉಂಡು ತೋಳ ಮೇಲಾಡುವ
ಬಾಲನ ಬಿಟ್ಟು ಹೇಗೆ ಬರಲೋ । ಬಾಲಗೆ ತಕ್ಕಂಥ
ಬಾಲೇರು ಬರುತಾರೆ ಬಾಲನ ತಾಯಿ ನಡಿ ಮುಂದೆ

ಕಾಳು ಕಡ್ಡಿ ಮಾರಿ ಕಟ್ಟಾಣಿ ಮಾಡಿಸಿದ್ದೆ
ಕಟ್ಟಾಣ್ಯೊಂದರಫುಳಿಗೆ ಇಕ್ಕಲಿಲ್ಲವೊ । ಜವರಾಯ
ಬಿಟ್ಟೋಡಿ ಹೋಗೋ ಸಡಗರವೆ



## ಸಂತೆಯ ಮನೆಯೋಳು

ಸಂತೆಯ ಮನೆಯೋಳು ಸಮರಂತೆ ತಾಯವ್ವ
ಸಂತಿಟ್ಟು ಮಗಳ ಕಳುವ್ಯಾಳು । ನಿಂತಾಳು
ಸಾಲು ಸಂಪೀಗೆ ನೆರಳಾಗೆ

ಹೆಣ್ಣು ಮಗಳನು ಕಳುಹಿ ಕಣ್ಣೀಗೆ ನೀರ ತಂದು
ಸಣ್ಣ ಸೆಲ್ಲೆದಲ್ಲೇ ಮುಸುಕ್ಹಾಕಿ । ಹಡೆದಪ್ಪ
ಹೆಣ್ಣು ಸಾಕೆಂದ ಜನಮಕ್ಕೆ

ತಂಗೀಯ ಕಳುಹ್ಯಾನು ತೆವರೇರಿ ನಿಂತಾನು
ಅಂಗೀಲಿ ನೀರ ಒರಿಸ್ಯಾನು । ಅಣ್ಣನು
ಇಂದಿಗೆ ತಂಗಿ ಎರವೆಂದ

ತಾಯ್ತನ್ನ ಮಗಳನ್ನು ಏಗಳು ನೆನೆದಳು
ಉಂಬಾಗ ಮಡಿಯ ಉಡುವಾಗ । ಹಿತ್ತಿಲ
ಹೂವ ಕಂಡಲ್ಲಿ ನೆನೆವಳು

ಮನೆಯ ಹಿಂದಲ ಮಾವು ನೆನೆತಾರೆ ಘಮ್ಮೆಂದೂ
ನೆನೆದ್ಹಂಗೆ ಬಂದ ನನ್ನ ಅಣ್ಣ । ಬಾಳೆಯ
ಗೊನೆಹಾಗೆ ತೋಳ ತಿರುವೂತ

ತೌರೂರು ದಾರೀಲಿ ತೆಗಿಸಣ್ಣ ಬಾವಿಯ
ಅಕ್ಕತಂಗೀರು ತಿರುಗಾಡೊ ಹಾದೀಲಿ
ತೆಗಿಸಣ್ಣ ಕಲ್ಯಾಣದ ಕೊಳಗಳ

ತೌರೂರ ದಾರೀಲಿ ಕಲ್ಲಿಲ್ಲ ಮುಳ್ಳಿಲ್ಲ
ಸಾಸುವೆಯಷ್ಟು ಮರಳಿಲ್ಲ । ಬಾನಲಿ
ಬಿಸಿಲಿನ ಬೇಗೆಯು ಸುಡಲಿಲ್ಲ

ತೌರೂರ ಹಾದೀಲಿ ಗಿಡವೆಲ್ಲ ಮಲ್ಲಿಗೆ
ಹೂವರಳಿ ಪರಿಮಳ ಘಮ್ಮೆಂದೂ । ನಾಕೊಯ್ದು
ಗಿಡಕೊಂದು ಹೂವ ಮುಡಿದೇನು

ಹೆಣ್ಣೀಗೆ ತೌರೂರು ರಸಬಾಳೆ ಹಣ್ಣಂತೆ
ಮಲೆನಾಡು ತುಡುಬೆ ಜೇನಂತೆ । ತಾಯಿಯ
ಎದೆ ಹಾಲು ರುಚಿಯ ಸವಿದಂತೆ

ತೊಟ್ಟಿಲು ಹೊತ್ತುಕೊಂಡು ತೌರುಬಣ್ಣ ಉಟ್ಟುಕೊಂಡು
ಅಣ್ಣ ಕೊಟ್ಟೆಮ್ಮೆ ಹೊಡಕೊಂಡು । ತೌರೂರ
ತಿಟ್ಹತ್ತಿ ತಿರುಗಿ ನೋಡ್ಯಾಳ

## ತೊಳೆದ ಮುತ್ತನು ಕಂಡೆ

ತೊಟ್ಟಿಲದಾಗೊಂದು ತೊಳೆದ ಮುತ್ತನು ಕಂಡೆ
ಹೊಟ್ಟೆ ಮ್ಯಾಲಾಗಿ ಮಲಗ್ಯಾನ-ಕಂದೈಗ
ಮುತ್ತೀನ ದೃಷ್ಟಿ ತೆಗೆದೇನ

ಅತ್ತರೆ ಅಳಲವ್ವ ಈ ಕೂಸು ನನಗಿರಲಿ
ಕೆಟ್ಟಾರೆ ಕೆಡಲಿ ಮನೆಗೆಲಸ-ಕಂದನಂಥ
ಮಕ್ಕಳಿರಲವ್ವ ಮನೆ ತುಂಬ

ಹಸಿರಂಗಿ ತೊಡಸೀದ ಹಾಲ್ಗಡಗ ಇಡಸೀದ
ಹಳ್ಳಕ ನೀನು ಬರಬ್ಯಾಡ-ನನ ಕಂದ
ಬೆಳ್ಳಕ್ಕಿ ಹಿಂಡು ಬೆದರ್ಯಾವ

ತವರೂರಿಗ್ಹೋದಾಗ ನವಿಲ ಬಣ್ಣದ ಪಕ್ಷಿ
ತಲಬ್ಯಾನಿಯೆದ್ದು ಅಳುತಿತ್ತ-ಕಂದನ
ಚಲುವೀಕಿ ನೋಡಿ ನಗುತಿತ್ತ

ಕಂದಯ್ಯ ಅತ್ತರ ಕಣಗೀಲ ಕಾತಾವ
ಒಣಗಿದ್ದ ಬಾಳೆ ಚಿಗಿತಾವ-ಗೆಳತ್ಯಮ್ಮ
ಬರಡಾಕಳೆಲ್ಲ ಹೈನಾಗಿ

ಬಾಲ ಹನುಮನ ಮುಂದ ಬಾಗಿ ಚೆಂಡಾಡ್ಯಾನ
ಬಾವ್ಹಲಿಗಿವಿಯ ನನ ಕಂದನ-ಕಂಡರ
ಬಾಲೇರು ಬಸಿರ ಬಯಸ್ಯಾರ

ನನ್ನಯ್ಯ ನೀ ಬಾಳು ಇನ್ನು ಸಾವಿರ ಕಾಲ
ಹೊನ್ನೇಯ ಬುಡದ ಗರಿಕೇಯ-ಬೇರಂತೆ
ಮೊಮ್ಮಕ್ಕಳೆತ್ತಿ ಸುಖಿಯಾಗು



ಬೆಟ್ಟಕ್ಕೆ ಬಿದಿರಾಸೆ ಹೆಣ್ಣಿಗೆ ತೌರಾಸೆ
ಬಿತ್ತಿದ ಬೆಳೆಗೆ ಮಳೆಯಾಸೆ । ಎನ್ನಯ್ಯ
ನಿನ್ನಾಸೆ ನನಗೆ ಅನುಗಾಲ

ಅಳುವ ಕಂದನ ತುಟಿಯು ಹವಳದ ಕುಡಿಯಂತೆ
ಕುಡಿ ಹುಬ್ಬು ಬೇವಿನೆಸಳಂತೆ । ಕಣ್ನೋಟ
ಶಿವನ ಕೈಯಲಗು ಹೊಳೆದಂತೆ

ಯಾತ ಯಾತರ ಗಾಳಿ ಎಲೆಯು ತೋಟದ ಗಾಳಿ
ಸುತ್ತಾಲು ಗಾಳಿ ಸುಳಿಗಾಳಿ । ಕಂದಯ್ಯ
ತೊಟ್ಟಿಲ ಗಾಳಿ ಮನೆ ತುಂಬ

ಹಸುಮೊಗವೆ ಚಿನ್ನಾವೆ ಮಿಸುನಿ ಹೊಂಬಣ್ಣಾವೆ
ಬಸುರ್ಯೇರ ಹಣೆಯ ತಿಲಕಾವೆ । ಕಂದಯ್ಯ
ಹೊಸ ಮುತ್ತ ಹೊನ್ನ ಕಲಶಾವೆ

ನನ್ನಯ್ಯನಂಥೋರು ಹನ್ನೆರಡು ಮಕ್ಕಳು
ಹೊನ್ನೇಯ ಮರದ ನೆರಳಲ್ಲಿ । ಆಡ್ಯಾಗ
ಸನ್ಯಾಸಿ ಜಪವ ಮರೆತಾನು

ಆಡಿ ಬಾರೋ ಕಂದ ಅಂಗಾಲ ತೊಳೆದೇನು
ಬೆಳ್ಳಿ ಬಟ್ಟಲಲ್ಲಿ ತಿಳಿನೀರ । ತಕ್ಕೊಂಡು
ಬಂಗಾರದ ಮುಖವ ತೊಳೆದೇನು

ಸೊಸೆಯು ಗಂಡ್ಹಡೆಯಲಿ ಮಗಳು ಹೆಣ್ಹಡೆಯಲಿ
ಎಳೆಗರು ಎಮ್ಮೆ ಕರೆಯಲಿ । ನಮ್ಮನೆಯ
ಸಡಗರ ನೋಡೋಕೆ ಶಿವ ಬರಲಿ

ನನ್ನಯ್ಯ ನೀ ಬಾಳು ನೂರ್ಕಾಲ ಚಿನ್ನಾವೆ
ಹೊನ್ನೆಯ ಬುಡದ ಗರಿಕೆಯ ಬೇರಂತೆ
ಮೊಮ್ಮಕ್ಕಳ್ಹೆತ್ತಿ ಸುಖಿಯಾಗು

ಅಜ್ಜಣ್ಣನಾಗು ಗೆಜ್ಜೆ ಹುರಿಯಾಗು
ಸಹದೇವನಾಗು ಶುಚಿಯಾಗು । ಕಂದಯ್ಯ
ಭೀಮಣ್ಣನ್ಹಾಗೆ ಸುಖಿಯಾಗು


## ದೀಪಾವಳಿ

ದೀಪಾಳೆನ್ನಿರೋ ದೀಪಾಳೆನ್ನಿರೋ
ರನ್ನಾದಿ ದೀಪಾಳಿಗೋ
ಚಿನ್ನದಿ ದೀಪಾಳಿಗೋ ।
ದೀಪಾಳಿನ್ನಿರೋ ಕಾಲು ದೀಪಾಳಿಗೋ
ಕೋಲು ದೀಪಾಳಿಗೆ ।
ವರುಷಕೊಮ್ಮೆ ಬರುವೋದು
ಹರುಷ ದೀಪಾಳಿಗೆ ।
ಬಿರುಸು ದೀಪಾಳಿಗೋ । ದೀಪಾಳೆನ್ನಿರೋ......

ಕಂಚೀಯ ಗಿಡನೆಟ್ಟು
ಕನ್ಯೆ ನೀರಿಗೆ ಹೋಗ್ಯಾರೇ
ಕನ್ಯೆ ನೀರು ತರೋತಂಕ
ಕಂಚಿನ ಫಲ ಬಂದೋ
ಹಣ್ಣೆಲ್ಲೋ ತಿಂಬೋಕೆ
ಹೆಣ್ಣೆಲ್ಲೋ ಗೆಲುವೋಕೆ । ದೀಪಾಳೆನ್ನಿರೋ.......

ಹಟ್ಟೀನಾ ರಸವೀಗೆ
ತೊಟ್ಟಿಲಾ ಪುತ್ರಾಗೆ
ತೊಳಸಿ ಮಹಾಲಕ್ಷ್ಮೀಗೆ ದೀಪಾಳ
ದೀಪಾಳೆನ್ನಿರೋ ದೀಪಾಳೆನ್ನಿರೋ
ರನ್ನದಿ ದೀಪಾಳಿಗೋ
ಚಿನ್ನಾದಿ ದೀಪಾಳಿಗೋ





## ಬಾಲಗೋಪಾಲ


ಬಾಲಗೋಪಾಲ ನಿನ್ನ ಮಗ
ಲೋಲನೇನ ಗೋಪಮ್ಮ ?

ದೀಪದ ಕುಡಿಯಂಗೆ
ದೀವಿಗೆಯಂಗೆ ಉರುದಾನೇ ಗೋಪಮ್ಮ । ಬಾಲಾಗೋಪಾಲ......

ಹಸರು ಕಡಗದ ಗೊಲ್ಲಾರುಡಿಗಿ
ಮಸರು ಮಾರುತ ಬಂದಾಳಣ್ಣ
ಮಸರು ಮಾರಿದ ಸುಂಕ ಕೇಳಿದರೆ
ಹಸರು ಕಡಗ ತೋರಾಳೋ । ಬಾಲಾಗೋಪಾಲ......

ಸಣ್ಣನಾಮದ ಗೊಲ್ಲಾರುಡುಗಿ
ಬೆಣ್ಣೆಮಾರುತ ಬಂದಾಳಣ್ಣ
ಬೆಣ್ಣೆ ಮಾರಿದ ಸುಂಕ ಕೇಳಿದರೆ
ಸಣ್ಣನಾಮ ತೋರಾಳೋ । ಬಾಲಾಗೋಪಾಲ......

ಕುದುರೆಯ ಏರಿಕೊಂಡು
ಚದುರಂಗನಾಡಿಕೊಂಡು
ಕುದುರೆ ವಾನವನೇರಿ
ಬಂದನೇನೋ ಗೋಪಮ್ಮ । ಬಾಲಾಗೋಪಾಲ.....



## ಹರುಳಯ್ನ ಹಾಡು

ಅಣ್ಣನ ನೆನೆದೇನೆ ಅಣ್ಣಯ್ನ ನೆನೆದೇನೆ
ಸಣ್ಣಗೊರಳೋರ್ನ ನೆನೆದೇನೆ । ಭೂಮೀಗೆ
ಕಣ್ಣು ಕೊಟ್ಟಯ್ನ ನೆನೆದೇನೆ

ಅಪ್ಪನ ನೆನೆದೇನೆ ಅಪ್ಪಯ್ನ ನೆನೆದೇನೆ
ತಪ್ಪುಗೊರಳೋರ್ನ ನೆನೆದೇನೆ । ಭೂಮಿಗೆ
ಹೆಪ್ಪು ಕೊಟ್ಟಯ್ನ ನೆನೆದೇನೆ

ಆರು ಮಕ್ಕಳನು ತೋಳಲಿ ಅವಿಸಿಕೊಂಡು
ಮೂಡ್ಯಾನು ಜಂಬಯ್ಯ ಜಲದಿಂದ । ಭೂಮೀಗೆ
ಹೆಪ್ಪು ಕೊಟ್ಟಯ್ನ ನೆನೆದೇನೆ

ಆರುಮಕ್ಕಳನು ತೋಳಲಿ ಅವಿಸಿಕೊಂಡು
ಬಾಲನ ಕೊಯ್ದು ನೆಲಕೆಪ್ಪೆ । ಕೊಟ್ಟಾರಲ್ಲೆ
ಬಸವಾನ ಕೊಟ್ಟಾರೇ ದುಡಿದ್ದುಣ್ಣೇ

ಹಕ್ಕಿ ಹುಟ್ಟೋದಕಿನ್ನ ಪಕ್ಷಿ ಹುಟ್ಟೋದಕಿನ್ನ
ಅಪ್ಪ ಹುಟ್ಯಾನೆ ಹರುಳಯ್ಯ । ಮೇಗಳ
ಮುಕ್ಕಣ್ಣಗೇಳು ದಿನಕೆ ಹಿರಿಯಾರು



ಕೋಳಿ ಕೂಗೋದಕ್ಕಿನ್ನ ನಾಯಿ ಬಗಳೋದಕ್ಕಿನ್ನ
ಗೇನಿ ಹುಟ್ಯಾನೆ ಹರುಳಯ್ಯ । ಮೇಗಳ
ಶಿವಗೇಳು ದಿನಕೆ ಹಿರಿಯಾರು

ಕೇರ್‍ಯಾಗೆ ನನಗುರುವು ಈಗ್ಯೇನ ಮರೆತಾರೆ
ಹೋದವು ಎರಡಲಿಗೆ ದಪ್ಪದಾರ । ನಾಗಬೆತ್ತ
ಹಟ್ಯಾಗೆ ನನಗುರುವು ಮರೆತಾರೇ

ಕುಟ್ಟಿದ ಅಕ್ಕಿ ತಂದೆ ಬಟ್ಟಾಲ ಗಂಧ ತಂದೆ
ಪುಟ್ಟೇಳು ರಾಜ್ಯದ ಹೂವು ತಂದೆ । ನನ ಗುರುವೀನ
ಪಟ್ಟದೊತ್ತೀಗೆ ವದಗೀದೆ

ಆದ ಅಕ್ಕಿ ತಂದೆ ತೇದ ಗಂಧ ತಂದೆ
ಸುರುಗಿ ಸೇವಂತಿಗೆ ಹೂವು ತಂದೆ । ನನಗುರುವಿನ
ಪೂಜೆವೊತ್ತೀಗೆ ವದಗೀದೆ

ಸತ್ತದ್ದ ತಿಂಬೋರೆ ಕತ್ತೀಯ ಮಸೆವೋರೆ
ಹಟ್ಟಿಂದ ಹೊರಗೆ ಇರುವೋರೆ । (ಇರುವೋನೆ) ಹರುಳಯ್ಯ
ಮಿಕ್ಕೀದ ಕುಲಕೆ ಶರಣಾನೆ

ಸಾಯೋದ ತಿಂಬೋರೆ ಸೂರೀಯ ಮಸೆವೋರೆ
ಊರಿಂದ ಹೊರಗೆ ಇರುವೋರೆ । (ಇರುವೋನೆ) ಹರುಳಯ್ಯ
ಮೀರಿದ ಕುಲಕೆ ಶರಣಾನೆ

ಹರಗಿದ ಹೊಲದಾಗೆ ಅರಗಾದ ಹೊಲದಾಗೆ
ಸುರುಗಿ ಸೇವಂತಿಗೆ ವನುದಾಗೆ । ನನ ಗುರುವೀನ
ಕುದ್ರೆ ಸಾಲಿಟ್ಟು ಬರುತ್ಯೆತೆ

ಬಿತ್ತಿದ ಹೊಲದಾಗೆ ಬಿತ್ತಾದ ಹೊಲದಾಗೆ
ಹುತ್ತುತ್ತೆ ವನುದ ನೆರಳಾಗೆ । ನನ ಗುರುವೀನ
ಛತ್ರಿ ಸಾಲಿಟ್ಟು ಬರುತಾವೆ

ಹರುಳಯ್ನ ಮನೆಮುಂದೆ ಸುರುವನ್ನೆ ಮರ ಹುಟ್ಟಿ
ಶಿವ ಶಿವನೆಂಬೋ ಗಿಣಿಕುಂತು । ಕೂಯ್ದವಲ್ಲೆ
ಹರುಳಯ್ನ ಕೆಂಜಡೆಗೆ ಹೊಸಹೂವು



## ರಾಗಿ ಬೀಸೋ ಕಲ್ಲೆ


ಕಂಡುಗ ರಾಗಿ ಬೀಸೋ ಮುತ್ತಿನ ರಾಗಿಯ ಕಲ್ಲೆ
ದಂಡೆ ತಂದಿವ್ನಿ ಕೊರಳೀಗೆ । ನಮ್ಮನೆಯ
ಕಂಬದ ಸಾಲಲ್ಲಿ ಇರು ಬಾರೊ

ಬೀಸುವ ಪದ ಚಂದ ಕೂಸಿನ ದನಿ ಚಂದ
ನವಿಲಾಡೊ ನಮ್ಮ ವನ ಚಂದ । ಚನ್ನಿಗರ
ಬೆವರೀನ ಗಂಧ ಬಲು ಚೆಂದ

ಬೀಸಾಕ ಕುಂತಾರ ಬ್ಯಾಸರಿಕಿ ನಮಗಿಲ್ಲ
ಸೂಸಿ ಹರದಾವ ತವರೀಗು । ನಮ್ಮ ಪದ
ಕೂಸೀಗು ಬಂತು ಸವಿ ನಿದ್ದೆ

ಕಲ್ಲು ಕೊಟ್ಟಮ್ಮಗೆ ಎಲ್ಲ ಭಾಗ್ಯವು ಬರಲಿ
ಪಲ್ಲಕ್ಕಿ ಮ್ಯಾಲೆ ಮಗ ಬರಲಿ । ಆ ಮನೆಗೆ
ಮಲ್ಲಿಗೆ ಮುಡಿಯೋ ಸೊಸಿ ಬರಲಿ





## ಭೂಮಿತಾಯಿ

ಏಳುತಲೆ ನಾನೆದ್ದು ಯಾರ್‍ಯಾರ ನೆನೆಯಾಲಿ
ಎಳ್ಳು ಜೀರಿಗೆ ಬೆಳೆಯೋಳ । ಭೂಮಿತಾಯ
ಎದ್ದೊಂದು ಗಳಿಗೆ ನೆನದೇನು

ಹೂವಿನಾಗ ಹುದುಗ್ಯಾನ ಮಾಲ್ಯಾಗ ಮಲಗ್ಯಾನ
ಮೊಗ್ಗಾಗ ಕಣ್ಣ ತೆರದಾನ । ಲಿಂಗಯ್ಯನ
ನೋಡಟಗಿ ನಿದ್ದಿ ಬಯಲಾಗಿ

ಹೊತ್ತು ಮುಳುಗಿದರೇನ ಕತ್ತಲಾದರೇನ
ಅಪ್ಪ ನಿನ ಗುಡಿಗೆ ಬರುವೇನ । ಬೈರೂವ
ಮುತ್ತೀನ ಬಾಗೀಲ ತಗೆದೀರು

ಗುಡುಗುಡು ಮುತ್ಯಾ ಬಂದ
ಸಜ್ಜೀ ರೊಟ್ಟಿ ತಂದ
ಮಾಡದಾಗ ಇಟ್ಟಾ
ಬೇಡಿದಾಗ ಕೊಟ್ಟಾ

* * *

ಗುಡುಗುಡು ಗುಡುಗುಡು
ಕೌವಟಿ ಕೌವಟಿ ಕಂಚಿನ ಕೌವಟಿ
ಲವಂಗದ ಲಕ್ಕೆ ಜಯಕಾಯಿ ಪತ್ರೆ
ಕಂಚಿನತಟ್ಟೆ ತಾಮ್ರದ ತೊಟ್ಟಿ
ನರಿಮಂಟಿ ಮ್ಯಾಲೆ ನಂದಿಯಕುಟ್ಟಿ
ನಗಾರಿ ಬಾರಿಸಿ ನಲಿಯುತಲಿದ್ದೆ
ಕೌವಟಿ ಕೌವಟಿ ಕಂಚಿನ ಕೌವಟಿ
ಲವಂಗದ ಲಕ್ಕೆ ಜಯಕಾಯಿಪತ್ರೆ
ಗುಡುಗುಡುಗುಡು ಗುಡುಗುಡುಗುಡುಗುಡು...

* * *

ಗುರುಚಿ ಗುರುಚಿ ಎಲ್ಲಾಡಿ ಬಂದಿ ?
ಹಳ್ಳಾ-ಕೊಳ್ಳಾ ತಿರುಗ್ಯಾಡಿ ಬಂದಿ
ಬಣ್ಣ ಕೊಡುತಿನಿ ಬಾರೆಲೆ ಮಳಿಯೆ
ಕಾರಮಳಿಯೆ ಕಪಾಟಿ ಮಳಿಯೆ
ಬೇಗನೆ ಸುರಿಮಳಿಯೆ.

○



ಚಂದಪ್ಪ ಚಂದಪ್ಪ ಚಲುವಾಽ
ಜುಟ್ಟಲಾ ಬಿಟಕೊಂಡ ಬರುವಾಽ
ಎಂಟ ಎತ್ತಿನ ಬಂಡಿಽ
ಬಂಡಿ ಮ್ಯಾಲ ನಾನಾಽ
ನನ್ನ ಹಿಂದ ನವಿಲಾಽ
ನವಿಲಗರಿ ತಗದ
ಚಿಗರಿ ಕೋಡಿಗೆ ಹಾಕಿಽ
ಚಿಗರಿ ಚಿಗರಿ ಚಿಕ್ಕಪ್ಪಾ
ಅವರಿ ಗುಗ್ಗರಿ ಮುಕ್ಕಪ್ಪಾಽ

* * *

ಚಿಕ್ಕಿ ಚಿಕ್ಕಿ ಚೀಲ ಕೊಡು
ಅಕ್ಕಿ ತುಂಬಾಣ
ಬಾಗೀರಯ್ಯ ಬಾಗಿಲ್ ತೆಗಿ
ಬಗ್ಗಿ ನೋಡಾಣ

ಪೂಜಾರಯ್ಯ ಕಾಯಿ ಕೊಡು
ತಿಂದು ನೋಡೋಣ

* * *

ತಡಿಕೆ ಮುಡಿಕೆ
ತಾಳಂದೇವಿ
ಎಪ್ಪತ್ತವರೆ
ಗೊಲ್ಲೋರಣ್ಣ
ಆಚೆ ಬೀದಿಗ್ಹೋಗಿ
ಅಡ್ಡ ರಾಗಿ ತಂದು
ಡರ್ರ ಬುರ್ರ ಬೀಸಿ
ಮೂರು ರೊಟ್ಟಿ ತೊಟ್ಟಿ
ಅತ್ತೆಗೊಂದು ಕೊಟ್ಟು
ಮಾವನಿಗೊಂದು ಕೊಟ್ಟು
ಹೊಡಿಬೇಡ ಗಂಡ
ಹುಚ್ಚು ಮುಂಡೆ ಗಂಡ

○

ಸರಿಗಮಪದನಿಸ
ನಿನ್ ಜುಟ್ ಎಗರಿಸ
ಒಲೆ ಮುಂದೆ ರಾಗಿ ಬೀಸ
ಹಳೆ ಪೇಪರ್ ಖಾಲಿ ಶೀಸ

* * *

ಸತಾ ಸತಾ ಸೀಪೆ ಹಣ್ಣು
ರಸಾಪುರಿ ಮಾವಿನ ಹಣ್ಣು
ಬಾಯಿಗೆ ತುಂಬಿರಿ ಬಾಳೇಹಣ್ಣು
ರುಚಿಗೆ ತುಂಬಿರಿ ನಿಂಬೇಹಣ್ಣು
ಅಂಬಾರ್ದ ಮೇಲಿರುವ ಜಂಬುನೇರ್ಲೆಹಣ್ಣು

* * *

"ಬಿಸ್ಲೇ ಬಿಸ್ಲೇ ಎತ್ತೋದೆ ?"
"ಅಳ್ಳೀ ಮರ್ಕೆ ಆಡಾಕೋದೆ"
"ಕರೇಕಲ್ಲಿನ್ ಮೇಲೆ ಒಂದ್ ಸೌಟು ಎಣ್ಣೆ ಬಿಡ್ತೀನಿ
ಚಿಳ್ಳನ್ ಬಾ, ಬೆಳ್ಳನ್ ಬಾ"

* * *

ರತ್ತೋ ರತ್ತೋ ರಾಯನೆ ಮಗಳೆ
ಬಿತ್ತೋ ಬಿತ್ತೋ ಬೀಗ್ರ ಮಗಳೆ
ಹದಿನಾರೆಮ್ಮೆ ಕರೀಲಾರೆ
ಕಾಸಲಾರೆ ಕಡೀಲಾರೆ
ಬೆಣ್ಣೆಯನ್ನು ತಗೀಲಾರೆ
ಬೈಟ್‌ಗುಬ್ಬಿ ಬಾಳೇಕಂಬ
ಕುಕ್ಕರಬಸವಿ ಕೂರ್‌ಬಸವಿ

○



ಹತ್ತಿ ಕಟಗಿ ಬತ್ತಿ ಕಟಗಿ
ಬಾವನಂ ಬಸವಾನಂ
ಪಂಚಂ ಪಗಡೆಂ
ನೆಲಗಟ್ಟಿ ಹನುಮಾ
ಧಾತೋ ದುತ್ತೋ
ಜುರ್ ಜುಟಕ್

ಕೈ ಕೈ ಎಲ್ಲಿಟ್ಟೆ ?
ಕದ್ದಾಗ ಇಟ್ಟೆ
ಕದ ಏನ ಕೊಟ್ತು ?
ಶೆಕ್ಕಿ ಕೊಟ್ತು
ಶೆಕ್ಕಿ ಏನ ಮಾಡ್ದಿ ?
ಒಲಿಯೊಳಗ ಹಾಕಿದ್ಯಾ
ಒಲಿ ಏನ್ ಕೊಟ್ತು ?
ಬೂದಿ ಕೊಟ್ತು
ಬೂದಿ ಏನ್ ಮಾಡ್ದಿ ?
ಹೊಲಕ ಹಾಕಿದ್ಯಾ
ಹೊಲ ಏನ ಕೊಟ್ತು ?
ಜ್ವಾಳಾ ಕೊಟ್ತು
ಜ್ವಾಳಾ ಏನ ಮಾಡ್ದಿ ?
ಸೆರಗ ಮುರಗ ಕುಂಬಾರಿಗೆ ಕೊಟ್ಟು
ಚಲೋ ಜ್ವಾಳಾ ನಾ ತಿಂದೆ
ಜ್ವಾಳಕ್ಕ ಕುಂಬಾರ ಏನ ಕೊಟ್ಟೆ ?
ಕುಡಕಿ ಕೊಟ್ಟ
ಕುಡಕಿ ಏನ್ ಮಾಡ್ದಿ ?
ಹೂವಿನ ಗಿಡಕ ನೀರ್ ಹಾಕಿದ್ಯಾ ?
ಗಿಡ ಏನ್ ಕೊಟ್ತು ?
ಹೂವಾ ಕೊಟ್ತು
ಹೂವಾ ಏನ್ ಮಾಡ್ದಿ ?
ದೇವರಿಗೆ ಏರಿಸಿದೆ
ದೇವರು ಏನ್ ಕೊಟ್ತು?
ಗಂಟೆ ಕೊಟ್ತು

ಗಂಟೆ ಏನ್ ಮಾಡ್ತು ?
ಆಕಳ ಕೊಳ್ಳಾಗ ಕಟ್ಟಿದೆ
ಆಕಳ ಏನ್ ಕೊಟ್ತು ?
ಹಾಲು ಕೊಟ್ತು
ಹಾಲು ಏನ್ ಮಾಡ್ತು ?
ಅಜ್ಜಿ ಕೈಯಾಗ ಕೊಟ್ಬ್ಯಾ ?
ಅಜ್ಜಿ ಏನ್ ಮಾಡ್ತಿಳು ?
ತುಪ್ಪಾ ರೊಟ್ಟಿ ಕೊಟ್ಟಳು
ತುಪ್ಪಾ ರೊಟ್ಟಿ ಏನ್ ಮಾಡ್ತೆ ?
ಮಾಳಿಗೆಯ ಮ್ಯಾಲೆ ಕುಂತು ತಿನ್ನುವಾಗ
ಮಂಗ್ಯಾ ಬಂದು ಕಸಗೊಂಡೋಯ್ತು


* * *

ಹಿಟ್ಟು ಕುಟ್ಟು ಮಲ್ಲಕ್ಕ
ಅವರೆಕಾಯಿ ಚನ್ನಕ್ಕ
ಬಿದನೂರೋರ್ ಬಂದಾರೆ
ಎದ್ದು ಕೂರು ಮಲ್ಲಕ್ಕ

ಹಬ್ಬಬ್ಬಂತು
ಹಬ್ಬಕ್ಕಕ್ಕಿಲ್ಲಂತು
ಸಾಲ ಕೊಯ್ಯಿ ಅಂತು
ಸಾಲಕ್ಕಾನಲ್ಲ ಅಂತು
ನಾನಿದಿನಿ ಕಾಡ್ಕೊಟ್ರಾಯ ಅಂತು

ಕಟ್ಟೆ ಕಟ್ಟು ಅಂತು
ತುಪ್ಪ ಬಿಡು ಅಂತು
ಹಾಲು ಬಿಡು ಅಂತು
ಕಟ್ಬೊಡಿತೊ ಕಟ್ಬ್ಯೊಡಿತೊ....





## ಗೋವಿನ ಹಾಡು

೧

ಧರಣಿ ಮಂಡಲ ಮಧ್ಯದೊಳಗೆ
ಮೆರೆಯುತಿಹ ಕರ್ನಾಟ ದೇಶದೊ
ಳಿರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನು

ಗಿರಿಗಳೆಡೆಯಲಿ ಅಡವಿ ನಡುವೆ
ತುರುವ ದೊಡ್ಡಿಯ ಮಾಡಿಕೊಂಡು
ಮೆರೆವ ಕಾಳಿಂಗನೆಂಬ ಗೊಲ್ಲನಸಿರಿಯ ನಾನೆಂತು ಪೇಳ್ವೆನು

ಗೊಲ್ಲದೊಡ್ಡಿಯೊಳಿರುವ ಹಸುಗಳು
ಎಲ್ಲ ಬೆಟ್ಟದ ಮೇಲೆ ಮೇಯುತ
ಹುಲ್ಲುನೊಳ್ಳೆಯ ನೀರ ಕುಡಿಯುತ
ಅಲ್ಲಿ ಮೆರೆದುವರಣ್ಯದಿ

ಕರುಗಳನು ನೆನೆನೆನೆದು ಹಸುಗಳು
ಕೊರಳ ಘಂಟೆ ಢಣಿರು ಢಣಿರೆನೆ
ಪರಿದು ಲಂಘಿಸಿ ಚಿಮ್ಮಿ ನೆಗೆಯುತ
ಮರಳಿ ಬಂದುವು ದೊಡ್ಡಿಗೆ

ತಮ್ಮ ತಾಯನು ಕಂಡು ಕರುಗಳು
ಅಮ್ಮಾ ಎಂದು ಕೂಗಿ ನಲಿಯುತ
ಸುಮ್ಮಾನದೊಳು ಮೊಲೆಯನುಂಡು
ನಿರ್ಮಲದೊಳು ಇದ್ದವು

ಉದಯಕಾಲದೊಳೆದ್ದು ಗೊಲ್ಲನು
ನದಿಯ ಸ್ನಾನವ ಮಾಡಿಕೊಂಡು
ಮುದದಿ ತಿಲಕವ ಹಣೆಯೊಳಿಟ್ಟು
ಚದುರ ಶಿಖೆಯನು ಹಾಕಿದ

ಎಳೆಯ ಮಾವಿನ ಮರದ ಕೆಳಗೆ
ಕೊಳಲನೂದುತ ಗೊಲ್ಲಗೌಡನು
ಬಳಸಿ ನಿಂದ ತುರುಗಳನ್ನು
ಬಳಿಗೆ ಕರೆದನು ಹರುಷದಿ.

ಗಂಗೆ ಬಾರೆ ಗೌರಿ ಬಾರೆ
ತುಂಗಭದ್ರೆ ತಾಯಿಬಾರೆ
ಕಾಮಧೇನು ನೀನು ಬಾರೆಂದು
ಪ್ರೇಮದಲಿ ಗೊಲ್ಲ ಕರೆದನು.

ಗೊಲ್ಲಕರೆದ ಧ್ವನಿಯ ಕೇಳಿ
ಎಲ್ಲ ಹಸುಗಳು ಬಂದು ನಿಂತು
ಚೆಲ್ಲಿ ಸೂಸಿ ಹಾಲು ಕರೆಯಲು
ಅಲ್ಲೆ ತುಂಬಿತು ಬಿಂದಿಗೆ.

೨

ಹಬ್ಬಿದಾ ಮಲೆ ಮಧ್ಯದೊಳಗೆ
ಅರ್ಭುತಾನೆಂದೆಂಬ ವ್ಯಾಘ್ರನು
ಅಬ್ಬರಿಸಿ ಹಸಿ ಹಸಿದು ಬೆಟ್ಟದ
ಕಿಬ್ಬಿಯೊಳು ತಾನಿದ್ದನು.

ಸಿಡಿದು ರೋಷದಿ ಮೊರೆಯುತಾ ಹುಲಿ



ಘುಡುಘುಡಿಸಿ ಭೋರಿಡುತ ಛಂಗನೆ
ತುಡುಕಲೆರಗಿದ ರಭಸಕಂಜಿ
ಚದುರಿ ಹೋದವು ಹಸುಗಳು.

ಪುಣ್ಯಕೋಟಿ ಎಂಬ ಗೋವು
ತನ್ನ ಕಂದನ ನೆನೆದುಕೊಂಡು
ಮುನ್ನಹಾಲನು ಕೊಡುವೆನೆನುತ
ಚೆನ್ನಾಗಿ ತಾ ಬರುತಿರೆ.

ಇಂದೆನಗೆ ಆಹಾರ ಸಿಕ್ಕಿತು
ಎಂದು ಬೇಗನೆ ದುಷ್ಟ ವ್ಯಾಘ್ರನು
ಬಂದು ಬಳಸಿ ಅಡ್ಡಗಟ್ಟಿ
ನಿಂದನಾ ಹುಲಿರಾಯನು.

ಮೇಲೆ ಬಿದ್ದು ನಿನ್ನನೀಗಲೆ
ಬೀಳಹೊಯ್ವೆನು ನಿನ್ನ ಹೊಟ್ಟೆಯ
ಸೀಳಿ ಬಿಡುವೆನು ಎನುತ ಕೋಪದಿ
ಖೂಳ ವ್ಯಾಘ್ರನು ಕೂಗಲು.

ಒಂದು ಬಿನ್ನಹ ಹುಲಿಯೆ ಕೇಳು
ಕಂದನಿರುವನು ದೊಡ್ಡಿಯೊಳಗೆ
ಒಂದು ನಿಮಿಷದಿ ಮೊಲೆಯ ಕೊಟ್ಟು
ಬಂದು ಸೇರುವೆನಿಲ್ಲಿಗೆ.

ಹಸಿದವೇಳೆಗೆ ಸಿಕ್ಕಿದೊಡವೆಯ
ವಶವ ಮಾಡದೆ ಬಿಡಲು ನೀನು
ನುಸುಳಿ ಹೋಗುವೆ ಮತ್ತೆ ಬರುವೆಯ
ಹುಸಿಯನಾಡುವೆಯೆಂದಿತು.

ಸತ್ಯವೇ ನಮ್ಮ ತಾಯಿ ತಂದೆ
ಸತ್ಯವೇ ನಮ್ಮ ಸರ್ವ ಬಳಗ
ಸತ್ಯವಾಕ್ಯಕೆ ತಪ್ಪಿ ನಡೆದರೆ
ಮೆಚ್ಚನಾ ಪರಮಾತ್ಮನು.

೩

ಕೊಂದು ತಿನ್ನುವೆನೆಂಬ ಹುಲಿಗೆ
ಚೆಂದದಿಂದ ಭಾಷೆಯಿತ್ತು

## ನಲ್ಲನ ನೆನಪು

ಏಸು ದಿನೆಂದು ಮರೆಯಲ್ಲೋ- ನಲ್ಲನ ದಾರಿ
ಯಾವ ಕಾಲೆಂದು ಮರೆಯಲೋ?
ಏಸು ದಿನ ನಾನು ಮರೆಯಲಿ

ನೀಸಲಾರದ ಹೆಣ್ಣುಜನ್ಮ
ಗಾಸ್ಮಾಡಿ ಗದ್ದವ ಕಡಿದು
ಪೂಸ್ಮಾಡಿ ಬೆಲ್ಲವ ಕೊಟ್ಟು
ಲೇಸುಮಾಡಿ ಹೋದನಾ- ಏಸು ದಿನೆಂದು ಮರೆಯಲೋ ?

ದುರ್ಗದಿಂದ ಬಂದ ಗೆಣೆಯ
ಸರು ಹೊತ್ತು ನೀರನೆ ತಂದು
ಮರುಗ ಮಲ್ಲಿಗೆ ಜಾಜಿ
ತುರುಬಿಗೆ ತಂದಿಟ್ಟನಾ- ಏಸು ದಿನೆಂದು ಮರೆಯಲೋ ?


ಬಾಚ್ ಬಾಚ್ ಬಕ್ತಲೆ ತೆಗೆದು
ಜಾಡಿಸಿ ತುರುಬನೆ ಬಿಗಿದು
ಮುದ್ದು ಮುಖವ ನೋಡಿ
ಮೂಗುತಿ ತಂದಿಟ್ಟನಾ- ಏಸು ದಿನೆಂದು ಮರೆಯಲೋ ?

ಕಾಲ್ನೋಡಿ ಕಾಲ್ಪಿಲ್ಲಿ ತಂದ
ತೋಳ್ನೋಡಿ ತೋಳ್ಬಂದಿ ತಂದ
ಸಣ್ಣ ಸೀರೆಯ ತಂದು
ಹೆಣ್ಣು ಮಾಡಿ ಹೋದನಾ- ಏಸು ದಿನೆಂದು ಮರೆಯಲೋ ?

ವಾರ್ ವಾರ್ ಮಂಚಕೆ ಬರುವ
ಗೀರ್ ಗೀರ್ ಗಂಧವ ತರುವ
ವಾರೇ ಮಂಚದ ಮ್ಯಾಲೆ ಹೀರಿಪ್ಪೆ ಮಾಡಿ ತನುವ
ಸೂರೆ ಮಾಡಿ ಹೋದನಾ- ಏಸು ದಿನೆಂದು ಮರೆಯಲೋ ?

ಪುಟ್ ಪುಟ್ ಮಂಚಕೆ ಬರುವ
ಬಟ್ ಬಟ್ ಗಂಧವ ತರುವ
ಬಟ್ಟಾ ಕುಚದ ಮ್ಯಾಲೆ
ಬೆಟ್ಟಿಟ್ಟು ಹೋದನಾ- ಏಸು ದಿನೆಂದು ಮರೆಯಲೋ ?





## ಧಾರೆ

ಧಾರೆಯ ಹೊತ್ತಿಗೆ ಯಾರ್ಯಾರು ಬರಬೇಕು
ದಾರದ ಕೊರಳ ಹಿರಿಯಣ್ಣ । ಸೋದುರು ಮಾವ
ಧಾರೆ ಹೊತ್ತಿಗೆ ಬರಬೇಕು

ಸಾಲೆಯ ಸೀರೆಯ ಜೋಲೂತ ಮಾಲೂತ
ತಾವರೆಗಣ್ಣಾಗೆ ಪುರುಷಾರ । ನೋಡೂತ
ಏರ್ಯಾಳೆ ಹಸೆಯ ಜಗಲಿಯ

ಮುಂದಿಂಗಳು ಬೆಳಕಲ್ಲಿ ಸೂರ್ಯನ ರೆವಿಯಲ್ಲಿ
ಸಾದು ಕಸ್ತೂರಿ ಪುನಗೀನ । ಪಾರ್ವತಿದೇವಿ
ಸೇರ್ಯಾಳೆ ತೆರೆಯ ಮರೆಯಾಗೆ



ಅಂದಳಂದಳ ಸಾಕ್ಷಿ ಅಂದಳದ ಕೊನಿ ಸಾಕ್ಷಿ
ಅಂದಳದಲ್ಲಿರುವೊ ಜನ ಸಾಕ್ಷಿ । ಮದವಣ್ಣ
ನೀ ಸಾಕ್ಷಿ ನಮ್ಮ ಮಗಳೀಗೆ

ಚಪ್ಪ ಚಪ್ಪರ ಸಾಕ್ಷಿ ಚಪ್ಪರದ ಕೊನಿ ಸಾಕ್ಷಿ
ಚಪ್ಪರದಾಗಿರುವೊ ಜನ ಸಾಕ್ಷಿ । ಮದವಣ್ಣ
ನೀ ಸಾಕ್ಷಿ ನಮ್ಮ ಮಗಳೀಗೆ

ಅಪ್ಪ ಕಟ್ಟಿಸ್ಯಾನೆ ಇಪ್ಪತ್ತು ತೂಬಿನ ಕೆರೆಯ
ಇಪ್ಪತ್ತೆ ಕೋವು ಮದಗದ । ಕೆರಿಯ ನೀರು
ಪುತ್ರಿಯ ಕೈಧಾರೆಗೆ ಬರಬೇಕು

ಎಳ್ಳು ಜೀರಿಗೆ ಹೆಣ್ಣುಮ್ಮಿ ಕೈ ತುಂಬ
ತೆಗೆದಿಟ್ಟಾಳೆ ಪುರುಷರ । ಮಂಡೆ ಮ್ಯಾಲೆ
ಇಷ್ಟೊಂದು ಭಾಗ್ಯ ಬರಲೆಂದು

ಅಂದಲದ್ಹಟ್ಟಿಗೆ ನಿಂದು ಬೀಸೋ ಗಾಳಿ
ಇನ್ನೊಂದು ಗಳಿಗೆ ತಡಮಾಡಿ । ಬೀಸಿದರೆ
ಕಂದಗಾರತೀಯ ಬೆಳಗೇವು





## ಅಚ್ಚಚ್ಚ ಬೆಳದಿಂಗಳೆ

ಅಚ್ಚಚ್ಚ ಬೆಳದಿಂಗಳೇ । ನನ್ನೂರ ಹಾಲಿನಂಥ ಬೆಳದಿಂಗಳೇ
ತಿಂಗ್ಳು ತಿಂಗ್ಳೀಗೆ ತಿಂಗಳುಮಾವನ ಪೂಜೆ
ಗರುಡಾನ ಪೂಜೆ ಗಣಪೂಜೆ । ತಿಂಗಳುಮಾವ
ನಿನ ಪೂಜೆ ನಮಗೆ ಅನುಗಾಲ
ಸುಕ್ರ ಸೂಲ್ವಿಗ ಒತ್ತೀಲಿ ಬೆಳ್ಳಿದೇವ
ನಾಲೋರಿಗಿಂತ ಹಿರಿಯೋನು । ತಿಂಗಳುಮಾವ
ನಾರೀರ ಕುರುವಅರಿಯನು
ಹತ್ತಿ ಕಡೀಲಿಲ್ಲ ಅಗೆದು ನಿಲ್ಲಾಲಿಲ್ಲ
ನಡು ರಾಜ್ಯವದಲ್ಲಿರುವೋನೆ । ತಿಂಗಳುಮಾವನ
ಹಡೆದಮ್ಮನ್ಯಾರೆ ಧರಿಯೊಳಗೆ ?
ತಿಂಗಳುಮಾವಾಗೆ ತಂಗೇರೇಳು ಮಂದಿ
ತಿಂಗು ತಿಂಗಳಿಗೆ ತವರೀಗೆ । ಹೋಯ್ತೀನೆಂದು
ತಿಂಗಳ ಬೆಳಕೆ ಹಗಲಾದೊ
ಆರಾಳುದ್ದ ವಾರೇಲಿ ಸೇದೋ ಬಾವೀ
ವಾರೇಯ ಕಲ್ಲ ಮರಿಮಾಡಿ । ತಿಂಗಳುಮಾವ
ಹೊತ್ತಿನ ಪೂಜೆಗೆ ನಡೆದಾನೆ



## ತನುವಿನೊಳಗೊಂದು

ತನುವಿನೊಳಗನುದಿನವಿದ್ದು
ನನ್ನ ಮನಕೊಂದು ಮಾತ ಹೇಳದೆ ಹೋದೆ ಹಂಸೇ?

ಹಳ್ಳ ಕೊಳ್ಳದ ಮಧ್ಯೆ ತಂಪಿನ ಬಳ್ಳಿ ಹುಟ್ಟಿ
ಬಳ್ಳೀಯ ಹಣ್ಣು ನೆಲಕುದುರಿ । ಹೋಗುವಾಗ
ತನ್ನ ಬಳ್ಳಿಗೊಂದು ಮಾತ ಹೇಳದೆ ಹೋದೆ ಹಂಸೇ?

ಕಾಯದ ಕೊಂಬೆ ಮೇಲೆ ಮಾಯದ ಗಿಳಿ ಕುಳಿತು
ಕಾಯವ ಬಿಟ್ಟು ಗಿಳಿ ಹಾರಿ । ಹೋಗುವಾಗ
ತನ್ನ ಕಾಯಕೊಂದು ಮಾತ ಹೇಳದೆ ಹೋದೆ ಹಂಸೇ?

ಗಾಳಿ ಪಂಜರದಂತೆ ಮಾಳಿಗೆಯನು ಮಾಡಿ
ಗಾಳಿಯು ಬೀಸಿ ಎಲೆ ತೂರಿ । ಹೋಗುವಾಗ
ತನ್ನ ತಾಳಿಗೊಂದು ಮಾತ ಹೇಳದೆ ಹೋದೆ ಹಂಸೇ?

ಕಾರೆಂಬ ಕತ್ತಲಲಿ ಜೋರೆಂಬ ಮಳೆ ಸುರಿದು
ಕೆರೆ ಕಟ್ಟೆ ಬಯಲಾಗಿ ಹೋಗುವ ಕಾಲಕ್ಕೆ
ತನ್ನ ಬಯಲಿಗೊಂದು ಮಾತ ಹೇಳದೆ ಹೋದೆ ಹಂಸೇ?

ಅಡ್ಡ ಗೊಡ್ಡಾರಣ್ಯ ಇಟ್ಟೆಡೆ ಮೆಳೆಯೊಳಗೆ
ಜೇನುತುಪ್ಪವ ಸವಿದುಂಡು । ಹುಳು ಹಾರಿ ಹೋಗುವಾಗ
ತನ್ನ ಹಿಪ್ಪೆಗೊಂದ ಮಾತ ಹೇಳದೆ ಹೋದೆ ಹಂಸೇ?



## ಸಂಗಾತಿ

ಸಂಗಾತಿ ಬಾರೆ ಸಾದು ನಿಂಬೇ ಹಣ್ಣೆ
ಉಂಗೂರ ಬಾರೆ ಬೆರಳೀಗೆ । ತೋಟದ
ಹೊಂಬಾಳೆ ಬಾರೆ ಕಳಶಕ್ಕೆ

ಆಚೆ ಕೇರೀಲಿ ಅಲ್ಲೊಬ್ಬು ಸಂಗಾತಿ
ಮಾತಾಡೇನಂದರೆ ಮನಿ ದೂರ । ಸಂಗಾತಿ
ಸಂಜೀಗೆ ಬಾರೆ ಕನಸೀಗೆ


ಅಂಗಡ್ಯಂಗಡಿಗಿಂತ ಗಂಧದಂಗಡಿ ಚಂದ
ಬಂಗಾರದಂತ ಬಳೆ ಚಂದ । ಅದಕಿಂತ
ಗೆಳತಿ ಕರೆಯೂವ ದನಿ ಚಂದ

ಸಂಗಾತಿ ಹೆಣ್ಣು ಜಂಬು ನೇರಿಲೆ ಹಣ್ಣು
ಮುಂಗೈಯ ಹಿಡಿದು ನಗಿಸೋಳ । ಮುಖಭಾವ
ಮುಂಗಾರಿ ಮಿಂಚು ಹೊಳೆಧಾಂಗ

ನನ್ನ ಸಂಗಾತಿ ನನಗಿಂತ ಚೆಲುಗಾತಿ
ಪುಣ್ಯಾತಗಿತ್ತಿ ಪುರುಷರ । ತೊಡಿಮ್ಯಾಲೆ
ನನ್ನ ಹಂಬಲವ ಮರೆತಾಳ

ಮೂಗುತಿ ಮುಂಭಾರ ತುರುಬೀನ ಹಿಂಭಾರ
ಸೇರಿನ ಒಂಟಿ ಕೈಭಾರ । ನನ ಗೆಳತಿ
ನೀ ಕೊಟ್ಟ ಸೀರಿ ನಿರಿ ಭಾರ

ಗೆಳತಿ ಹಡದಾಳಂತ ನಗತ ಬಾಗಿಣೊಯ್ದು
ಜರತಾರದಂಗಿ ಮುಯ್ಯೋಯ್ದು । ಗೆಳೆತವ್ವ
ಜನಕೊಪ್ಪು ಮಗನ ಹಡೆದಾಳ



ಮನಿಯ ಮುಂದಿನ ಗೆಳತಿ ದನಿಯ ಕೂಡಿಸ ಬಾರ
ದನಿ ಸುದ್ದ ನಿನ್ನ ಗುಣ ಸುದ್ದ । ಗೆಳತವ್ವ
ಗುಣಕ ಕಟ್ಟೇನಿ ಗೆಳೆತನ

ಕೆಳದೀಯ ಕೂದಲು ಚೊಗಚೀಯ ಕಾಯಾಂಗ
ನಿಗುಚಿ ಬೈತಲೆ ತೆಗೆದಾಳ । ನನ ಗೆಳದಿ
ಗೆಳತ್ಯಾರ ಬಳಗಕತಿ ಚೆಲುವಿ


ಕಸ್ತೂರೆಂತ ಗೆಳತಿ ಕಸದಾಗ ನಿಂತಾಳ
ಕಸಿವಿಸಿ ನನ್ನ ಮನದಾಗ । ನನ ಗೆಳತಿ
ಕಸ್ತೂರಿ ಬಾರ ಒಳಿಯಾಕ

ಜೀವದ ಗೆಳತೀ ಮನಿಗೆ ಜೀರಿಗ್ಗೆ ನಾ ಹ್ವಾದೆ
ಜೀವ ಮಾಡಿ ನನ್ನ ಕರದಾಳ । ಆಕಿ ನನಗ
ಜಿನಕೀನ ಮಾಡಿ ತಿನಸ್ಯಾಳ

## ಈ ನೆಲದ ಗಾದೆಗಳು

ಅಲ್ಲಾಡುವ ಹಲ್ಲಿನ ಮೇಲೆ ಹಲಗೆ ಬಿದ್ದಂತೆ





ಎಮ್ಮೆಗೆ ಎರಡು ಕೋಡು, ಹೆಮ್ಮೆಗೆ ಎಂಟು ಕೋಡು

ಒರಳಲ್ಲಿ ಕೂತರೆ ಒನಕೆ ಪೆಟ್ಟು ತಪ್ಪೀತೆ ?

ಕಡು ಕೋಪ ಬಂದಾಗ ತಡಕೊಂಡವನೆ ಜಾಣ

ಕಪ್ಪೆ ಕೂಗಿ ಮಳೆ ಬರಿಸಿದ ಹಾಗೆ
ಕದ್ದು ಮದುವೆ ಆಗ್ತೀನಿ, ಬಗ್ಗಿ ಓಲಗ ಊದು

ಕಬ್ಬಿಣದ ಗಡಾರಿ ನುಂಗಿ ಶುಂಠಿ ಕಷಾಯ ಕುಡಿದ ಹಾಗೆ

ಕರಡಿ ಕೈಗೆ ಹೆದರದವ ಕರಿಕಂಬಳಿಗೆ ಹೆದರ್ಯಾನೆ ?

ಕಾಡಲ್ಲಿ ಹೊಂಬಾಳೆ ಬಯಸಿದ ಹಾಗೆ
ಕಾಸಿಗೆ ಒಂದು ಸೀರೆಯಾದರೂ ನಾಯಿ ಮೈ ಬೆತ್ತಲೆ

ಕಿಚ್ಚೆದ್ದಾಗ ಬಾವೀ ತೋಡಿದ

ಕಿಟಕಿಯಿಂದ ನುಸುಳುವವ ಹೆಬ್ಬಾಗಿಲಿನಿಂದ ಬಾರನೆ ?

ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ

ಕುರುಬನ ಮಂದೆ ತೋಳ ಕಾದ ಹಾಗೆ

ಕೂಳು ಚೆಲ್ಲಿದ ಕಡೆ ಸಾವಿರ ಕಾಗೆ

ಕೋಟಿ ವಿದ್ಯೆಯೂ ಕೂಳಿಗೋಸ್ಕರವೇ

ಗಂಗೆಗೆ ಹೋಗಿ ತೆಂಗಿನ ಓಟೆ ತಂದ ಹಾಗೆ

ಗುರುವಿನಂತೆ ಶಿಷ್ಯ, ತಂದೆಯಂತೆ ಮಗ

ಗುಂಪು ಒಂದು ತಂಪು

ಚರ್ಮ ತೊಳೆದರೆ ಕರ್ಮ ಹೋದೀತೆ ?

ಚಾಡಿಕೋರನಿಗೆ ಊರೆಲ್ಲ ನೆಂಟರು

ಚಿಂತೆಯೇ ಮುಪ್ಪು, ಸಂತೋಷವೇ ಯೌವನ

ಚೇಳಿನ ಮಂತ್ರವನ್ನರಿಯದವನು ಹಾವಿನ ಹುತ್ತಕ್ಕೆ ಕೈಯಿಕ್ಕಿದ ಹಾಗೆ

ಜೋಗಿಗೆ ಜೋಗಿ ತಬ್ಬಿಕೊಂಡರೆ ಮೈಯೆಲ್ಲಾ ಬೂದಿ

ಜ್ಞಾನವಂತನಿಗೆ ಸ್ನಾನವೇಕೆ ?

ತರ್ಕ ಮಾಡುವವ ಮೂರ್ಖನಿಗಿಂತ ಕಡೆ

ತಾ ಕಳ್ಳನಾದರೆ ಪರರ ನಂಬ

ತೀರಕ್ಕೆ ಬಂದ ಮೇಲೆ ತೆರೆಯ ಭಯವೇ ?

ತುಂತುರು ಮಳೆಯಿಂದ ತೂಬಿನಕೆರೆ ತುಂಬೀತೆ ?

ದೇವರ ಮಗನಾದರೂ ಮಾಡಿದ್ದೇ ಉಣ್ಣಬೇಕು

ಪ್ರಾಯ ಹೆಚ್ಚಾದರೂ ಬಾಯಿ ಚಂದಾಗಿರಬೇಕು

ಬಂದ ದಿವಸ ನಂಟ, ಮರುದಿವಸ ಭಂಟ, ಮೂರನೆ ದಿವಸ ಕಂಟ

ಬಗ್ಗಿಕೊಂಡು ಉತ್ತರೆ ಕಂದಾಯ ತಪ್ಪುತ್ತದೆಯೆ ?

ಬಲೆಗೆ ಸಿಕ್ಕದ್ದು ಕೋಲಿಗೆ ಸಿಕ್ಕೀತೆ ?

ಬಾಳೆ ಹಣ್ಣಿಗೆ ಗರಗಸವೇಕೆ ?

ಬೇರು ಬಲ್ಲಾತನಿಗೆ ಎಲೆ ತೋರಿಸಬೇಕೆ ?

ಬೋರೆಗಿಡದಲ್ಲಿ ಕಾರೆಹಣ್ಣಾದ್ದೀತೆ ?

ಬಾವೀ ನೀರಾದರೆ ಭಾವಿಸಿದರೆ ಬಂದೀತೆ ?

ಭೋಗಿಗೆ ಯೋಗಿ ಮರುಳು, ಯೋಗಿಗೆ ಭೋಗಿ ಮರುಳು.

ಮಠಪತಿಯಾದರೂ ಶಠಪತಿ ಬಿಡಲಿಲ್ಲ

ಮಡಕೆ ಒಡೆಯುವುದಕ್ಕೆ ಅಡಿಕೆ ಮರ ಬೇಕೆ ?

ಮಣ್ಣು ದೇವರಿಗೆ ಮಜ್ಜನವೇ ಸಾಕ್ಷಿ.

ಮಣ್ಣು ಕುದುರೆ ಏರಿ ನದಿ ದಾಟಿದಂತೆ



ಮನೆ ದೀಪವಾದರೆ ಮುತ್ತು ಕೊಡಬಹುದೇ ?

ಮಳೆಗೆ ಹೆದರಿ ಹೊಳೆಗೆ ಬಿದ್ದ ಹಾಗೆ

ಮಾತು ಬಂದಾಗ ಸೋತುಹೋದವನೇ ಜಾಣ

ಮೀನು ನೀರಿನಲ್ಲಿ ಮುಳುಗಿದರೆ ಸ್ನಾನದ ಫಲ ಬಂದೀತೇ?

ಮೂವರ ಕಿವಿಗೆ ಮುಟ್ಟಿದ್ದು ಮೂರು ಲೋಕಕ್ಕೆ ಮುಟ್ಟುವುದು.

ಮೆಚ್ಚಿದವನಿಗೆ ಮಸಣವೇ ಸುಖ

ಮೆಟ್ಟಿದಲ್ಲದೆ ಹಾವು ಕಡಿಯದು

ಮೊಗೇ ಮಾಡದ ಕುಂಬಾರ ಗುಡಾಣ ಮಾಡಾನೆ ?

ಯಾವ ರಾಯನಿಗೆ ರಾಜ್ಯವಾದರೂ ರಾಗಿಬೀಸೋದು ತಪ್ಪದು

ಲೋಕದವರೆಲ್ಲಾ ಸತ್ತರೆ ಶೋಕಾ ಮಾಡುವರ್ಯಾರು ?

ವೈರವಿದ್ದವನಿಂದ ಕ್ಷೌರ ಮಾಡಿಸಿಕೊಂಡ ಹಾಗೆ.

ಶಕ್ತಿಯಿದ್ದವನಾದರೂ ಯುಕ್ತಿಯಿದ್ದವನ ಕೆಳಗೆ

ಶಾಪ ಕೊಡುವವ ಪಾಪಕ್ಕೆ ಹೆದರ

ಶ್ವಾನದ ಮುಂದೆ ಗಾನಾ ಹಾಡಿದ ಹಾಗೆ

ಸತ್ತ ಕುರಿ ಕಿಚ್ಚಿಗೆ ಅಂಜೀತೆ ?

ಸತ್ಯವಿದ್ದರೆ ಎತ್ತಲೂ ಭಯವಿಲ್ಲ

ಸಮುದ್ರದ ಮುಂದೆ ಅರವಟಿಗೆ

ಸಮುದ್ರ ದೊಡ್ಡದಾದರೂ ಪಾತ್ರೆ ಇದ್ದಷ್ಟೇ ನೀರು ಸಿಕ್ಕೀತು

ಹೊಳೆಗೆ ನೆನೆಯದ ಕಲ್ಲು, ಮಳೆಗೆ ನೆನೆದೀತೇ ?

ಹೋಗದ ಊರಿಗೆ ದಾರಿ ಕೇಳಿದ ಹಾಗೆ !

## ಒಗಟುಗಳು

ಕೆಂಪಯ್ಯನ ತೋಟದಲ್ಲಿ
ಗುಂಪು ಮಲ್ಲಿಗೆ ಗಿಡಹುಟ್ಟಿ
ಎಸಳು ಎಂಬತ್ತು ಕುಸುಲು ಮುವತ್ತು
ಬೀದಿ ಬಿತ್ತಾರ ನಡುವೆ ಚಿತ್ತಾರ

(ಚೆಂಡುಮಲ್ಲಿಗೆ)

ಅಜ್ಜಿಗೊಂದು ಅಂಗಿ
ಅಂಗಿಯೊಳಗೆ ಮೀಸೆ
ಮೀಸೆ ಬಿಡಿಸೆ ಹಲ್ಲು
ಹಲ್ಲು ಕಡಿಯೆ ಹಿಟ್ಟು
ಹಿಟ್ಟು ತಟ್ಟೆ ರೊಟ್ಟಿ

(ಮುಸುಕಿನ ಜೋಳ)

ಅಂಬುಧಿಯಲ್ಲಿ ಹುಟ್ಟುವ ಕುದುರೆ
ಅಂಬಾರದಲ್ಲಿ ಓಡುವ ಕುದುರೆ
ತಂಬೆಲರದಲ್ಲಿ ಬೆವರುವ ಕುದುರೆ
ಇಂಬಾಗಿ ಬೆಟ್ಟದೊಲೊರಗುವ ಕುದುರೆ

(ಮೋಡ)

ಅಂಕು ಡೊಂಕು ಬಾವಿ
ಶಂಖ ಚಕ್ರದ ಬಾವಿ
ಬೊಮ್ಮಯ್ಯ ಕಟ್ಟಿಸಿದ ಬಾವಿ
ಇಣುಕಿ ನೋಡಿದರೆ ಒಂದು ತೊಟ್ಟೂ ನೀರಿಲ್ಲ

(ಕಿವಿ)

ಕಾಡಲ್ಲೆ ಉಟ್ಟೋದು
ಕಾಡಲ್ಲೆ ಬೆಳಿಯೋದು
ಊರ ನಾರಿರ ಮುಂದೆ ತಕತಕನೆ ಕುಣಿಯೋದು
ನಾರಿ ಕಂಡಿದ್ದರೆ ಒಡಚೇಳೆ ಗಂಗೆ
ನೀನು ಕಂಡಿದ್ದರೆ ಮಗುಚೇಳೆ

(ಒನಕೆ)

ಅರಿಷಿಣದ ಮೆಯ್ಯವಳು
ಅರವತ್ತು ಮೊಲೆಯವಳು



ಪುರುಷನಿಲ್ಲದಾ ನಾರಿ
ಬಹುಮಕ್ಕಳ ಪಡೆಯುವಳು

(ಅಡಕೆ ಹೊಂಬಾಳೆ)

ಹಚ್ಚನ್ನ ಹಕ್ಕಿ ಪುಚ್ಚ ತೆಗೆದು
ಕಲ್ಲ ಮೇಲಿಟ್ಟು ಕಾರ ಅರೆದರು

(ಕೊತ್ತಂಬರಿ ಸೊಪ್ಪು)

ತಾತಾ ಗಿಂಡಿ ತಾಮ್ರದ ಗಿಂಡಿ
ಕೆತ್ತಿಸಿ ನೋಡಿದರೆ ಮುತ್ತಿನ ಗಿಂಡಿ

(ದಾಳಿಂಬೆ ಹಣ್ಣು)

ಎರಡು ಚಕ್ರವುಂಟು ಬಂಡಿಯಲ್ಲ
ಎರಡು ಕಣ್ಣುಂಟು ಮನುಷ್ಯನಲ್ಲ
ಎರಡು ಕೊಂಬುಂಟು ಎತ್ತಲ್ಲ
ಇದ ಹೇಳಿದವನಿಗೆ ಒಂದುಂಡೆ ಬೆಲ್ಲ

(ರಾಗಿಯ ಕಲ್ಲು)

ಕೆರೆಯೆಲ್ಲ ಕುರಿಹೆಜ್ಜೆ

(ನಕ್ಷತ್ರ)

ತಲೆಯಲ್ಲಿ ಕಿರೀಟವುಂಟು ದೇವರಲ್ಲ
ಕೊರಳಲ್ಲಿ ಕಪ್ಪುಂಟು ನಂಜುಂಡನಲ್ಲ
ಮೆಯ್ಯಲ್ಲಿ ಕಣ್ಣುಂಟು ಇಂದ್ರನಲ್ಲ

(ಗಂಡು ನವಿಲು)

ನಾಲ್ಕು ಕಾಲಿನ ನರಸಿಂಹಯ್ಯನಿಗೆ
ನಲವತ್ತಾರು ಜನಿವಾರ

(ಶ್ಯಾವಿಗೆ)

ನಾಕು ಚೌಕದ ಗದ್ದಿ
ನಾರಾಯಣ ಕಟ್ಟಿಸಿದ ಗದ್ದಿ
ಬಿತ್ತೇದ್ಕ ಹದ್ನಾರ ಕಾಳ
ಸಾಗ ಮಾಡೋದಕ್ಕ ಒಂದ ಜತಿ ಎತ್ತು

(ಪಗಡೆ ಹಾಸು)

ಕೈಯುಂಟು ಕಾಲಿಲ್ಲ, ತಲೆಹರುಕ ಮುಂಡ
ಮೈಯೆಲ್ಲಾ ನವಗಾಯ ಒಂಭತ್ತು ತುಂಡ
ಬೇಗ ಬೇಗನೆ ಬಂದು ಹೆಗಲೇರಿಕೊಂಡ
ಕೈಕಳಚಿ ಬಿಟ್ಟರೆ ತಾ ಮುದುರಿಕೊಂಡ

(ಅಂಗಿ)

ಹೋಗುವಾಗ ಹೂವಿನ ತೋಟ
ಬರುವಾಗ ಬರೀ ತೋಟ

(ಹತ್ತಿಯ ಹೊಲ)

ಮಾಳಿಗೆ ಮೇಲೆ
ಮಂಡಲದ ಹಾವು ಮಲಗಿದೆ

(ಪಡವಲ ಕಾಯಿ)

ನಾರು ಸೀರೆ ಗರ್ತಿ
ನೀರು ಕೊಡ ಹೊರ್ತಿ
ನೋಡಿದೋರತ್ತ
ಮೂರು ಕಣ್ಣು ತೋರ್ತಿ

(ತೆಂಗಿನ ಮರ)

ಎಲೆ ಎಲೇ ಬಣ್ಣ
ಏಲಕ್ಕಿ ಬಣ್ಣ
ಬೀಜಿಲ್ಲದ ಹಣ್ಣ
ತಂದುಕೊಡಿ ಅಣ್ಣ

(ಗೆಣಸು)

ಕೋಟಿ ಜನರು ಕಟ್ಟಿದ ಕೋಟೆ
ಆರೆಂಟು ಬಾಗಿಲು ಬಿಚ್ಚಿದ ಕೋಟೆ
ಹೊಂದರೆ ಒಳಗಡೆ ರಾಜನ ತಂಟೆ
ನಮಗುಳಿವುಂಟೆ ?

(ಹಾವಿನ ಹುತ್ತ)

ಬುಡ್ಡು ಹುಡುಗಿ ಗುದ್ದಿದರೆ
ಮನೆತುಂಬ ಮಕ್ಕಳು

(ಬೆಳ್ಳುಳ್ಳಿ)



## ಶಿಶು ಪ್ರಾಸಗಳು

ಕಪ್ಪೆ ಕರ ಕರ
ತುಪ್ಪ ಝುಲಿ ಝುಲಿ
ಮಾವಿನ ಪೋಟೆ
ಮರದಲಿ ಪೋಟೆ
ಹದ್ದಿನ ಕೈಲಿ
ಸುದ್ದಿ ಕೊಟ್ಟು
ಕಾಗೆ ಕೈಲಿ
ಕಂಕಣ ಕಟ್ಸಿ
ನಳ್ಳಿ ಕೈಲಿ
ನಗಾರಿ ಹೊಡ್ಸಿ
ಸೊಳ್ಳೆ ಕೈಲಿ
ಸೋಬಾನೆ ಹೇಳ್ಸಿ
ಸಣ್ಣೆ ಮದುವೆ ಶನಿವಾರ
ಊಟಕೆ ಬನ್ನಿ ಭಾನುವಾರ

***

ಗುಬ್ಬಿ ಗುಬ್ಬಿ
ನಿಂದೆಷ್ಟು ಜೀವ
ಮಾಡ್ಯಾನ ಶಿವ
ಸಣ್ಣ ಸಣ್ಣ ಕಣ್ಣ
ಮುತ್ತಾಗ್ಯಾವ
ಚುರಮುರಿ ಬೇಕ ?
ಚುದುವಾ ಬೇಕ ?
ಬೆಲ್ಲದ ಪಾಕ ।

○

ಕಂದ ನಿನ್ನನು ನೋಡಿಹೋಗುವೆ
ನೆಂದು ಬಂದೆನು ದೊಡ್ಡಿಗೆ.

ಅಮ್ಮ ನೀನು ಸಾಯಲೇಕೆ
ನಮ್ಮ ತಬ್ಬಲಿ ಮಾಡಲೇಕೆ
ಸುಮ್ಮನಿಲ್ಲೆಯೆ ನಿಲ್ಲೆನುತ್ತ
ಅಮ್ಮನಿಗೆ ಕರು ಹೇಳಲು.

ಕೊಟ್ಟ ಭಾಷೆಗೆ ತಪ್ಪಲಾರೆನು
ಕೆಟ್ಟ ಯೋಚನೆ ಮಾಡಲಾರೆನು
ನಿಷ್ಠೆಯಿಂದಲಿ ಪೋಪೆನಲ್ಲಿಗೆ
ಕಟ್ಟಕಡೆಗಿದು ಖಂಡಿತ.

ಆರ ಮೊಲೆಯನು ಕುಡಿಯಲಮ್ಮ
ಆರ ಸೇರಿ ಬದುಕಲಮ್ಮ
ಆರ ಬಳಿಯಲಿ ಮಲಗಲಮ್ಮ
ಆರು ನನಗೆ ಹಿತವರು.


ಅಮ್ಮಗಳಿರ ಅಕ್ಕಗಳಿರ
ನಮ್ಮ ತಾಯೊಡಹುಟ್ಟುಗಳಿರ
ನಿಮ್ಮ ಕಂದನೆಂದು ಕಾಣಿರಿ
ತಬ್ಬಲಿಯನೀ ಕರುವನು.

ಮುಂದೆ ಬಂದರೆ ಹಾಯಬೇಡಿ
ಹಿಂದೆ ಬಂದರೆ ಒದೆಯಬೇಡಿ
ಕಂದ ನಿಮ್ಮವನೆಂದು ಕಾಣಿರಿ
ತಬ್ಬಲಿಯನೀ ಕರುವನು.

ಕಟ್ಟಕಡೆಯಲಿ ಮೇಯಬೇಡ
ಬೆಟ್ಟದೊತ್ತಿಗೆ ಹೋಗಬೇಡ
ದುಷ್ಟವ್ಯಾಘ್ರನು ಹೊಂಚುತಿರುವನು
ನಟ್ಟನಡುವಿರು ಕಂದನೆ.

ತಬ್ಬಲಿ ನೀನಾದೆ ಮಗನೆ
ಹೆಬ್ಬುಲಿಯ ಬಾಯನ್ನು ಹೊಗುವೆನು
ಇಬ್ಬರಾ ಋಣ ತೀರಿತೆಂದು
ತಬ್ಬಿಕೊಂಡಿತು ಕಂದನ.





ಳ

ಗೋವು ಕರುವನಿ ಬಿಟ್ಟು ಬಂದು
ಸಾವಕಾಶವ ಮಾಡದಂತೆ
ಗವಿಯ ಬಾಗಿಲ ಸೇರಿ ನಿಂತು
ತವಕದಲಿ ಹುಲಿಗೆಂದಿತು.

ಖಂಡವಿದೆ ಕೋ ಮಾಂಸವಿದೆಕೋ
ಗುಂಡಿಗೆಯ ಬಿಸಿ ರಕ್ತವಿದೆಕೋ
ಚಂಡ ವ್ಯಾಘ್ರನೆ ನೀನಿದೆಲ್ಲವ
ನುಂಡು ಸಂತಸದಿಂದಿರು.

ಪುಣ್ಯಕೋಟಿಯ ಮಾತಕೇಳಿ
ಕಣ್ಣನೀರನು ಸುರಿಸಿನೊಂದು
ಕನ್ನೆಯಿವಳನು ಕೊಂದು ತಿಂದರೆ
ಮೆಚ್ಚನಾ ಪರಮಾತ್ಮನು.

ಎನ್ನ ಒಡಹುಟ್ಟಕ್ಕ ನೀನು
ನಿನ್ನ ಕೊಂದು ನಾನೇನ ಪಡೆವೆನು
ಎನ್ನುತಾ ಹುಲಿ ಹಾರಿ ನೆಗೆದು
ತನ್ನ ಪ್ರಾಣವ ಬಿಟ್ಟಿತು.



## ಕೆರೆಗೆ ಹಾರ

೧

ಕಲ್ಲನಕೇರಿ ಮಲ್ಲನಗೌಡಾ ಕೆರೆಯೊಂದ ಕಟ್ಟಿಸ್ಯಾನು
ಕೆರೆಯೊಂದ ಕಟ್ಟಿಸ್ಯಾನು ಸೆರೆಮುಕ್ಕ ನೀರಿಲ್ಲ
ಸೆರೆಮುಕ್ಕ ನೀರಿಲ್ಲ ಹೊತ್ತಿಗಿ ತಗಸ್ಯಾರು
ಹೊತ್ತಿಗೆ ತಗಸ್ಯಾರು ಜೋಯಿಸ ಕೇಳ್ಯಾರು
"ದೇವರಲ್ಲ ದಿಂಡ್ರಲ್ಲ ದೆವ್ವಲ್ಲ ಭೂತಲ್ಲ"
"ಹಿರಿ ಸೊಸಿ ಮಲ್ಲವ್ವನ ಹಾರವ ಕೊಡಬೇಕು"
ಹಾರವ ಕೊಟ್ಟರ ನೀರು ಬೀಳೂವಂದ್ರೂ
"ಹಿರಿ ಸೊಸಿನ್ನ ಕೊಟ್ಟರೆ ಹಿರಿತನಕ ಯಾರಿಲ್ಲ"
"ಕಡೆ ಸೊಸಿ ಭಾಗೀರತಿನ್ನ ಹಾರವ ಕೊಡಬೇಕು"
ಹಾರ ಕೊಡಬೇಕಂತ ಮಾತಾತು ಮನೆಯಾಗ.



೨

ಸಣ್ಣ ಸೊಸಿ ಭಾಗೀರತಿ ತವರಮನೆಗೆ ಹೊಂಟಾಳು,
"ಅತ್ತೆವ್ವಾ ನಾ ನಮ್ಮ ತವರ ಮನೆಗೆ ಹೋಗತೀನು"
"ಸರ್‍ರನೆ ಹೋಗವ್ವಾ ಭರ್‍ರನೆ ಬಾರವ್ವ"
ಸಣ್ಣ ಸೊಸಿ ಭಾಗೀರತಿ ತವರಮನೆಗೆ ಹೋದಾಳು
ಮನೆಮುಂದೆ ಹೋಗುದಕ ಅವರಪ್ಪ ಬಂದಾನು
"ಎಂದಿಲ್ಲದೆ ಭಾಗೀರತಿ ಇಂದ್ಯಾಕ ಬಂದೆವ್ವ?
ಬಾಡಿದ ಮಾರ್‍ಯಾಕ ಕಣ್ಣಾಗ ನೀರ್‍ಯಾಕ"
"ನಮ್ಮಾವ ನಮ್ಮತ್ತೆ ಬ್ಯಾರೆ ಇಡುತಾರಂತೆ"
"ಇಟ್ಟರ ಇಡಲೇಳು ಹೊಲಮನೀ ಕೊಡತೇನು"
"ಹೊಲಮನಿ ಒಯ್ದು ಹೊಳೆ ದಂಡ್ಯಾಗ್ಹಾಕಪ್ಪ"
ಅತ್ತತ್ತ ಹೋಗುತಲೆ ಅವರವ್ವ ಬಂದಾಳು
"ಎಂದಿಲ್ಲದೆ ಭಾಗೀರತಿ ಇಂದ್ಯಾಕಳುತಾ ಬಂದೆ?"
"ನಮ್ಮತ್ತೆ ನಮ್ಮಾವ ಬ್ಯಾರೆ ಇಡುತಾರಂತೆ"
"ಇಟ್ಟರೆ ಇಡಲೇಳು ವಾಲಿಜೋಡು ಕೊಡುತೇನೆ"
"ವಾಲಿಯ ಜೋಡೊಯ್ದು ಒಲಿಯಾಗ ಹಾಕವ್ವ"
ಮುಂದಕತ್ತ ಹೋಗುತಲೆ ಅವರಕ್ಕ ಬಂದಾಳು
ಅವರಕ್ಕ ಬಂದ್ಯಾಳು ಭಾಗೀರತೀನ ಕೇಳ್ಯಾಳು
"ಎಂದಿಲ್ಲದೆ ಭಾಗೀರತಿ ಇಂದ್ಯಾಕ ಈ ದುಕ್ಕ?"
"ನಮ್ಮತ್ತೆ ನಮ್ಮಾವ ಬ್ಯಾರೆ ಇಡುತಾರಂತೆ"
"ಇಟ್ಟಾರೆ ಇಡಲೇಳ ಮಕ್ಕಳ ಜೋಡಿಗೆ ಕಳವತೇನೆ"
"ಮಕ್ಕಳಿದ್ದರೇನಕ್ಕ ದುಕ್ಕ ಕಳೆದಾವೇನ"
ಸಣ್ಣ ಸೊಸಿ ಭಾಗೀರತಿ ತವರ ಮನೆಯ ಬಿಟ್ಟು
ತವರಮನಿಯ ಬಿಟ್ಟು ಗೆಣತಿ ಮನೆಗೆ ನಡೆದಳು.
ತಲಬಾಗಿಲದಾಗ ಗೆಳತಿನ್ನ ಕಂಡಳು.
"ಎಂದಿಲ್ಲದೆ ಭಾಗೀರತಿ ಇಂದ್ಯಾಕ ಈ ಅಳುವು?"
"ಅಂಜಿ ಹೇಳಲೆ ಗಳತಿ ಅಳುಕಿ ಹೇಳೆಲೆ ಗೆಳತಿ"
"ಅಂಜಬ್ಯಾಡ ಗೆಳತಿ ಅಳುಕಬ್ಯಾಡ ಗೆಳತಿ"
"ನಮ್ಮತ್ತೆ ನಮ್ಮಾವ ಕೆರೆಗ್ಹಾರ ಕೊಡುತಾರಂತ"
"ಕೊಟ್ಟರೆ ಕೊಡಲೇಳು ಇಟ್ಹಾಂಗ ಇರಬೇಕುs!"
ಸರ್‍ರನೆ ಹೋದಳು ಬರ್‍ರನೆ ಬಂದಳು.

೩

ಬ್ಯಾಳಿಯ ಹಸಮಾಡ್ತ ಬಿಟ್ಟಳು ಕಣ್ಣೀರ,
"ಎಂದಿಲ್ಲದೆ ಭಾಗೀರತಿ ಇಂದಾಕs ಕಣ್ಣೀರು"
"ಬ್ಯಾಳ್ಯಾಗಿನ ಹಳ್ಳು ಬಂದು ಕಣ್ಣಾಗೆರಚಿದವು ಮಾವಾ"
ಅಕ್ಕಿಯ ಹಸಮಾಡ್ತ ಉಕ್ಯಾವು ಕಣ್ಣೀರು
"ಎಂದಿಲ್ಲದೆ ಭಾಗೀರತಿ ಇಂದ್ಯಾಕ ಕಣ್ಣೀರು"
"ಅಕ್ಯಾಗಿನ ಹಳ್ಳೊಂದ ಕಣ್ಣಾಗ ಬಿತ್ತತ್ತಿ"
ಉಕ್ಕುವ ನೀರಾಗ ಅಕ್ಕಿಯ ಸುರುವ್ಯಾರ
ಹತ್ತು ಕೊಪ್ಪರಿಗೆ ನೀರು ಉಕ್ಕಿ ಮಳ್ಳತಿತ್ತು
"ನಿಂಗವ್ವ ಜಳಕ ಮಾಡs ನೀಲವ್ವ ಜಳಕ ಮಾಡ"
ನಿಂಗವ್ವ "ನಾವೊಲ್ಲೆ" ನೀಲವ್ವ "ನಾವೊಲ್ಲೆ"
"ಗಂಗವ್ವ ಜಳಕ ಮಾಡs ಗವರವ್ವ ಜಳಕ ಮಾಡ"
ಗಂಗವ್ವ "ನಾವೊಲ್ಲೆ" ಗವರವ್ವ "ನಾವೊಲ್ಲೆ"
ಸಣ್ಣ ಸೊಸಿ ಭಾಗೀರತಿ ಜಳಕನ ಮಾಡ್ಯಾಳು
ಜಳಕನ ಮಾಡ್ಯಾಳು ಬಂಗಾರ ಬುಟ್ಟೆ ತುಂಬ್ಯಾಳು
ಸಿಂಗಾರ ಸಿಂಬಿ ಮಾಡ್ಯಾಳು ಮುಂದ ಮುಂದ ಹೊಂಟಾಳು
ಮುಂದ ಮುಂದ ಭಾಗೀರತಿ ಹಿಂದ್ಹಿಂದ ಎಲ್ಲಾರೂ
ಗಂಗಿ ಪೂಜೆ ಮಾಡ್ಯಾರ ಬೆಲಪತ್ತಿ ಏರಿಸ್ಯಾರ
ಬೆಲಪತ್ರಿ ಏರಿಸ್ಯಾರ ಈಬತೀ ಧರಿಸ್ಯಾರ
ಸೀರಿ ಕುಬಸಾ ಏರಿಸ್ಯಾರ ಹೂವಿನ ದಂಡಿ ಮುಡಿಸ್ಯಾರ
ಹೂವಿನ ದಂಡಿ ಮುಡಿಸ್ಯಾರ ನೇವದಿ ಮಾಡ್ಯಾರ
ನೇವದಿ ಮಾಡ್ಯಾರು ಎಲ್ಲರೂ ಉಂಡಾರು
ಎಲ್ಲಾರು ಉಂಡಾರು ಉಳಿದದ್ದು ತುಂಬ್ಯಾರು
ಉಳಿದದ್ದು ತುಂಬ್ಯಾರು ಬಂಗಾರ ಬುಟ್ಟಿ ಹೊತ್ತಾರು
ಬುಟ್ಟಿ ಹೊತ್ತು ನಡೆದಾರು ಬಂಗಾರ ಬಟ್ಲ ಮರೆತರು
"ಗಂಗವ್ವ ನೀ ಹೋಗ ! ಗವರವ್ವ ನೀ ಹೋಗ !"
ಗಂಗವ್ವ "ನಾವೊಲ್ಲೆ" ಗವರವ್ವ "ನಾವೊಲ್ಲೆ"
"ನಿಂಗವ್ವ ನೀ ಹೋಗ ನೀಲವ್ವ ನೀ ಹೋಗ"
ನಿಂಗವ್ವ "ನಾವೊಲ್ಲೆ" ನೀಲವ್ವ "ನಾವೊಲ್ಲೆ"
"ಸಣ್ಣ ಸೊಸಿ ಭಾಗೀರತಿ ನೀ ತರಹೋಗವ್ವ"
ಸಣ್ಣ. ಸೊಸಿ ಭಾಗೀರತಿ ಬಿರಿ ಬಿರಿ ನಡೆದಾಳು
ಬಿರಿಬಿರಿ ಹೋದಳು ಬಂಗಾರ ಬಟ್ಲ ತೊಗೊಂಡಾಳು




ಒಂದು ಮೆಟ್ಲೇರುದಕ ಪಾದಕ ಬಂದಾಳು ಗಂಗಿ
ಎರಡು ಮೆಟ್ಲೇರುದಕ ಪಾದ ಮುಣಿಗಿಸ್ಯಾಳು ಗಂಗಿ
ಮೂರು ಮೆಟ್ಲೇರುದಕ ಮೊಣಕಾಲಿಗೆ ಬಂದಾಳು ಗಂಗಿ
ನಾಕು ಮೆಟ್ಲೇರುದಕ ನಡಮಟ ಬಂದಾಳು ಗಂಗಿ
ಐದು ಮೆಟ್ಲೇರುದಕ ತುಂಬಿ ಹರಿದಾಳು ಗಂಗಿ
ಸಣ್ಣ ಸೊಸಿ ಭಾಗೀರತಿ ಕೆರೆಗ್ಹಾರವಾದಾಳು

೪

ಗಂಡ ಮಾದೇವರಾಯ ದಂಡಿನಾಗ್ಯೆದಾನು.
ದಂಡಿನಾಗ್ಯೆದಾನು ಕಂಡಾನು ಕೆಟ್ಟ ಕನಸ
ಸೆಲ್ಯ ಸುಟ್ಟಾಂಗಾತು ಕೋಲು ಮುರಿದ್ಹಾಂಗಾತು,
ಕಟ್ಟಿಸಿದ ಮಾಲೆಲ್ಲ ತಟ್ಟನೆ ಬಿದ್ಹಾಂಗಾತು,
ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಒತ್ತಾರ ಬಂದಾನ ಮನೆಗೆ
ಬಂದ ಮಾದೇವನ ತಂದೆ - ತಾಯಿ ನೋಡಿದರು.
"ಗಂಗವ್ವ ನೀರ ಕೊಡs ಗವರವ್ವ ನೀರ ಕೊಡs"
"ಗಂಗವ್ವ ನೀರ ಕೊಡುದ್ಯಾಕ? ಗವರವ್ವ ನೀರ ಕೊಡುದ್ಯಾಕ?
ನನ ಮಡದಿ ಭಾಗೀರತಿ ಎಲ್ಲಿಗೋಗ್ಹಾಳವ್ವ"
"ನಿನ ಮಡದಿ ಭಾಗೀರತಿ ತವರಿಗೆ ಹೋಗ್ಯಾಳಪ್ಪ"

೫

ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಹೊಂಟಾನತ್ತೆಯ ಮನೆಗೆ.
ಬಂದಿರು ಅಳಿಯನ ನೋಡಿ ಅಂದಳು ಅತ್ತೆವ್ವ
"ನಿಂಬೆವ್ವ ನೀರ್ ಕೊಡs ನೀಲವ್ವ ನೀರ್ ಕೊಡs !"
"ನಿಂಬೆವ್ವ ನೀರ್ ಕೊಡುದ್ಯಾಕ ? ನೀಲವ್ವ ನೀರ್ ಕೊಡುದ್ಯಾಕ?
ನನ ಮಡದಿ ಭಾಗೀರತಿ ಎಲ್ಲಿಗ್ಹೋಗ್ಯಾಳತ್ತೀ"
"ನಿನ ಮಡದಿ ಭಾಗೀರತಿ ಗೆಣತಿ ಮನೆಗೆ ಹೋಗ್ಯಾಳಪ್ಪ! "
ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಗೆಣತಿ ಮನೆಗೆ ಸ್ವಾರಿ.
ಬಂದಿರು ಮಾದೇವನ ಕಂಡಾಳು ಗೆಣತೆವ್ವ
"ಬಾಳವ್ವ ನೀರ್ ಕೊಡ ಬsಸವ್ವ ನೀರ್ ಕೊಡ"
"ಬಾಳವ್ವ ನೀರ್ ಕೊಡುದ್ಯಾಕs ಬsಸವ್ವ ನೀರ್ ಕೊಡುದ್ಯಾಕ!



ನನ ಮಡದಿ ಭಾಗೀರತಿ ಎಲ್ಲಿಗೋಗ್ಯಾಳಕ್ಕ"
"ನಿನ್ನ ಮಡದಿ ಭಾಗೀರತಿದು ಏನು ಹೇಳಲಿ ಸೂರಿ
ನಿಮ್ಮಪ್ಪ ನಿಮ್ಮವ್ವ ಕೆರಿಗ್ಹಾರ ಕೊಟ್ಟರಂತs "
ಗಂಡ ಮಾದೇವರಾಯ ಹತ್ತಿದ ಬತ್ತಲೆಗುದರಿ
ಹತ್ತಿದ ಬತ್ತಲೆಗುದರಿ ಹೊಂಟಾನು ಹೌಹಾರಿ ;
ಕೆರೆಯ ದಂಡೆಗೆ ಬಂದು ಕಣ್ಣೀರು ಇಟ್ಟ್ಯಾನು
ಕಣ್ಣೀರು ಇಟ್ಟ್ಯಾನು ನಿಟ್ಟುಸಿರು ಬಿಟ್ಟ್ಯಾನು ;
"ಸಾವಿರ ವರಹ ಕೊಟ್ಟರೂ ಸಿಗಲಾರದ ಸತಿ ನೀನು
ಸಿಗಲಾರದ ಸತಿ ನೀನು ನನ ಬಿಟ್ಟು ಎಲ್ಲಿ ಹೋದೆ ?
ಮುನ್ನೂರು ವರಹ ಕೊಟ್ಟು ಮುತ್ತಿನೋಲೆ ಮಾಡಿಸಿದ್ದೆ
ಮುತ್ತಿನೋಲೆ ಇಟ್ಟುಗೊಳ್ಳೊ ಮುತ್ತೈದೆ ಎಲ್ಲಿಗ್ಹೋದೆ"
ಇಷ್ಟು ಮಾತಾಡಿ ಮಾದೇವ ಬಿಟ್ಟ್ಯಾನು ಕಣ್ಣೀರು.
ಬಿಟ್ಟನು ಕಣ್ಣೀರs ಹಾರೀದ ಕೆರೆ ನೀರಾಗ.

○



## ಕಲ್ಲುಸಕ್ಕರೆ ಸವಿ

ಕಲ್ಲುಸಕ್ಕರೆ ಕೊಳ್ಳಿರೋ ನೀವೆಲ್ಲರು
ಕಲ್ಲುಸಕ್ಕರೆ ಕೊಳ್ಳಿರೋ
ಕಲ್ಲುಸಕ್ಕರೆ ಸವಿ ಬಲ್ಲವರೆ ಬಲ್ಲರು
ಪುಲ್ಲಲೋಚನ ಶ್ರೀ ಕೃಷ್ಣನಾಮವೆಂಬ

ಎತ್ತು ಹೇರುಗಳಿಂದ ಹೊತ್ತು ಮಾರುವುದಲ್ಲ
ಒತ್ತೊತ್ತಿ ಗೋಣಿಯೊಳ್ ತುಂಬುವುದಿಲ್ಲ
ಎತ್ತ ಹೋದರು ಬಾಡಿಗೆ ಸುಂಕವಿದಕಿಲ್ಲ
ಉತ್ತಮ ಸರಕಿದು ಅತಿ ಲಾಭ ಬರುವಂಥ

ನಷ್ಟ ಬೀಳುವುದಿಲ್ಲ ನಾತ ಹುಟ್ಟುವುದಿಲ್ಲ
ಎಷ್ಟು ಹೊಯ್ದರು ಬೆಲೆ ರೊಕ್ಕವಿದಕಿಲ್ಲ
ಕಟ್ಟಿರುವೆಯು ತಿಂದು ಕಡಿಮೆಯಾಗುವುದಲ್ಲ
ಪಟ್ಟಣದೊಳಗೆ ಪ್ರಸಿದ್ಧವಾಗಿರುವಂಥ

ಸಂತೆ ಸಂತೆಗೆ ಹೋಗಿ ಶ್ರಮಪಡಿಸುವುದಲ್ಲ
ಸಂತೆಯೊಳಗೆ ಇಟ್ಟು ಮಾರುವುದಿಲ್ಲ
ಸಂತತ ಭಕ್ತರ ನಾಲಗೆ ಸವಿಗೊಂಬ
ಕಾಂತ ಪುರಂದರ ವಿಠಲನಾಮವೆಂಬ

-ಪುರಂದರ ದಾಸ



## ಕುಲದ ನೆಲೆ


ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರ

ಹುಟ್ಟಿದ ಯೋನಿಗಳಿಲ್ಲ ಮೆಟ್ಟಿದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸ ಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆಕಂಡ್ಯ ಮನುಜ
ಜಲವೆ ಸಕಲ ಕುಲಕ್ಕೆ ತಾಯಲ್ಲವೆ
ಜಲದ ಕುಲವನೇನಾದರೂ ಬಲ್ಲಿರ
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲವೀದೇಹ
ನೆಲೆಯನರಿತು ನೀ ನೆನೆಕಂಡ್ಯ ಮನುಜ

ಹರಿಯೆ ಸರ್ವೋತ್ತಮ ಹರಿಯೇ ಸರ್ವೇಶ್ವರ
ಹರಿಮಯವೆಲ್ಲವೆನುತ ತಿಳಿದು
ಸಿರಿ ಕಾಗಿನೆಲೆಯಾದಿಕೇಶವರಾಯನ
ಚರಣ ಕಮಲದ ಕೀರ್ತಿಸುವನೆ ಕುಲಜ

-ಕನಕದಾಸ





## ಮನೆಯ ಮಾಳಿಗೆ


ಸೋರುತಿಹುದು ಮನೆಯ ಮಾಳಿಗೆ । ಅಜ್ಞಾನದಿಂದ
ಸೋರುತಿಹುದು ಮಾನೆಯ ಮಾಳಿಗೆ

ಸೋರುತಿಹುದು ಮನೆಯ ಮಾಳಿಗೆ
ದಾರಿಗಟ್ಟಿ ಮಾಳ್ಪರಿಲ್ಲ
ಕಾಳಕತ್ತಲೆಯೊಳಗೆ ನಾನು
ಮೇಲಕೇರಿ ಮೆಟ್ಟಲಾರೆ

ಮುರುಕು ತೊಲೆಯ ಹುಳುಕು ಜಂತಿ
ಕೊರೆದು ಸರಿದು ಕೀಲ ಸಡಲಿ
ಹರಕು ಚಪ್ಪರ ಜೇರು ಗಿಂಡಿ
ಮೇಲಕೇರಿ ಮೆಟ್ಟಲಾರೆ
ಕರಕಿ ಹುಲ್ಲು ಕಸವು ಹತ್ತಿ
ದುರಿತ ಭವದಿ ಇರಬಿ ಮುತ್ತಿ
ಜಲದಿ ಭರದಿ ತಿಳಿಯ ಮಣ್ಣು
ಒಳಗೆ ಹೊರಗೆ ಏಕವಾಗಿ

ಕಾಂತೆ ಕೇಳೆ ಕರುಣದಿಂದ
ಬಂತು ಕಾಣೆ ಹುಬ್ಬಿ ಮಳೆಯು
ಈಗ ಶಿಶುನಾಳ ಗ್ರಾಮಕ
ಮೇಘ ರಾಜ ಒಲಿದು ಬಂದ

-ಶಿಶುನಾಳ ಶರೀಫ



## ನೇಗಿಲ ಯೋಗಿ

ನೇಗಿಲ ಹಿಡಿದು ಹೊಲದೊಳು ಹಾಡುತ
ಉಳುವಾ ಯೋಗಿಯ ನೋಡಲ್ಲಿ
ಫಲವನು ಬಯಸದ ಸೇವೆಯು ಪೂಜೆಯು
ಕರ್ಮವೆ ಇಹಪರ ಸಾಧನವು

ಕಷ್ಟದೊಳನ್ನವ ದುಡಿವನೆ ತ್ಯಾಗಿ
ಸೃಷ್ಟಿ ನಿಯಮದೊಳೊಗವನೇ ಭೋಗಿ

ಲೋಕದೇಳೇನೇ ನಡೆಯುತಿರಲಿ
ತನ್ನೀ ಕಾಯಕ ಬಿಡನೆಂದೂ;
ರಾಜ್ಯಗಳುದಿಸಲಿ ರಾಜ್ಯಗಳಳಿಯಲಿ,
ಹಾರಲಿ ಗದ್ದುಗೆ ಮಕುಟಗಳು

ಮುತ್ತಿಗೆ ಹಾಕಲಿ ಸೈನಿಕರೆಲ್ಲ
ಬಿತ್ತುಳುವುದನವ ಬಿಡುವುದೆ ಇಲ್ಲ!

ಬಾಳಿತು ನಮ್ಮೀ ನಾಗರಿಕತೆ ಸಿರಿ
ಮಣ್ಣುಣಿ ನೇಗಿಲಿನಾಶ್ರಯದಿ;
ನೇಗಿಲ ಹಿಡಿದಾ ಕೈಯಾಧಾರದಿ
ದೊರೆಗಳು ದರ್ಪದೊಳಾಳಿದರು

ನೇಗಿಲ ಬಲದೊಳು ವೀರರು ಮೆರೆದರು
ಶಿಲ್ಪಿಗಳೆಸದರು, ಕವಿಗಳು ಬರೆದರು

ಯಾರೂ ಅರಿಯದ ನೇಗಿಲಯೋಗಿಯೆ
ಲೋಕಕೆ ಅನ್ನವನೀಯುವನು
ಹೆಸರನು ಬಯಸದೆ ಅತಿಸುಖಕೆಳಸದೆ
ದುಡಿವನು ಗೌರವಕಾಶಿಸದೆ

ನೇಗಿಲ ಕುಳದೊಳಗಡಗಿದೆ ಕರ್ಮ
ನೇಗಿಲ ಮೇಲೆಯೆ ನಿಂತಿದೆ ಧರ್ಮ

-ಕುವೆಂಪು





## ಅವ್ವ

ನನ್ನವ್ವ ಫಲವತ್ತಾದ ಕಪ್ಪು ನೆಲ
ಅಲ್ಲಿ ಹಸಿರು ಪತ್ರದ ಹರವು, ಬಿಳಿಯ ಹೂ ಹಬ್ಬ;
ಸುಟ್ಟಷ್ಟು ಕಸವು, ನೊಂದಷ್ಟು ಹೂ ಹಣ್ಣು.
ಮಕ್ಕಳೊದ್ದರೆ ಅವಳ ಅಂಗಾಂಗ ಪುಲಕ;
ಹೊತ್ತ ಬುಟ್ಟಿಯ ಇಟ್ಟು ನರಳಿ ಎವೆ ಮುಚ್ಚಿದಳು ತೆರೆಯದಂತೆ.

ಪಲ್ಲ ಜೋಳವ ಎತ್ತಿ ಅಪ್ಪನ್ನ ಮೆಚ್ಚಿಸಿ ತೋಳ ಬಂದಿಯ ಗೆದ್ದು,
ಹೆಂಟೆಗೊಂದು ಮೊಗೆ ನೀರು ಹಿಗ್ಗಿ;
ಮೆಣಸು, ಅವರೆ, ಜೋಳ, ತೊಗರಿಯ ಹೊಲವ ಕೈಯಲಿ ಉತ್ತು,
ಹೂವಲ್ಲಿ ಹೂವಾಗಿ ಕಾಯಲ್ಲಿ ಕಾಯಾಗಿ
ಹೆಸರು ಗದ್ದೆಯ ನೋಡಿಕೊಂಡು,
ಯೌವನವ ಕಳೆದವಳು ಚಿಂದಿಯ ಸೀರೆ ಉಟ್ಟುಕೊಂಡು.

ಸತ್ತಳು ಈಕೆ:
ಬಾಗು ಬೆನ್ನಿನ ಮುದುಕಿಗೆಷ್ಟು ಪ್ರಾಯ ?
ಎಷ್ಟುಗಾದಿಯ ಚಂದ್ರ, ಒಲೆಯೆದುರು ಹೋಳಿಗೆಯ ಸಂಭ್ರಮ ?
ಎಷ್ಟು ಸಲ ಈ ಮುದುಕಿ ಅತ್ತಳು
ಕಾಸಿಗೆ, ಕೆಟ್ಟ ಪೈರಿಗೆ, ಸತ್ತ ಕರುವಿಗೆ ;
ಎಷ್ಟು ಸಲ ಹುಡುಕುತ್ತ ಊರೂರು ಅಲೆದಳು
ತಪ್ಪಿಸಿಕೊಂಡ ಮುದಿಯ ಎಮ್ಮೆಗೆ ?

ಸತಿ ಸಾವಿತ್ರಿ, ಜಾನಕಿ, ಊರ್ಮಿಳೆಯಲ್ಲ ;
ಚರಿತ್ರೆ ಪುಸ್ತಕದ ಶಾಂತ, ಶ್ವೇತ, ಗಂಭೀರೆಯಲ್ಲ ;
ಗಾಂಧೀಜಿ, ರಾಮಕೃಷ್ಣರ ಸತಿಯರಂತಲ್ಲ ;
ದೇವರ ಪೂಜಿಸಲಿಲ್ಲ : ಹರಿಕತೆ ಕೇಳಲಿಲ್ಲ ;
ಮುತ್ತೈದೆಯಾಗಿ ಕುಂಕುಮ ಕೂಡ ಇಡಲಿಲ್ಲ.
ಬನದ ಕರಡಿಯ ಹಾಗೆ
ಚಿಕ್ಕ ಮಕ್ಕಳ ಹೊತ್ತು
ಗಂಡನ್ನ ಸಾಕಿದಳು ಕಾಸು ಗಂಟಿಕ್ಕಿದಳು
ನೊಂದ ನಾಯಿಯ ಹಾಗೆ ಬೈದು, ಗೊಣಗಿ, ಗುದ್ದಾಡಿದಳು ;

ಸಣ್ಣತನ, ಕೊಂಕು, ಕೆರೆದಾಟ ಕೋತಿಯ ಹಾಗೆ :
ಎಲ್ಲಕ್ಕೆ ಮನೆತನದ ಉದ್ಧಾರ ಸೂತ್ರ,
ಈಕೆ ಉರಿದೆದ್ದಾಳು
ಮಗ ಕೆಟ್ಟರೆ, ಗಂಡ ಬೇರೆ ಕಡೆ ಹೋದಾಗ ಮಾತ್ರ.
ಬನದ ಕರಡಿಗೆ ನಿಮ್ಮ ಭಗವದ್ಗೀತೆ ಬೇಡ ;
ನನ್ನವ್ವ ಬದುಕಿದ್ದು
ಕಾಳು ಕಡ್ಡಿಗೆ, ದುಡಿತಕ್ಕೆ, ಮಕ್ಕಳಿಗೆ ;
ಮೇಲೊಂದು ಸೂರು, ಅನ್ನ, ರೊಟ್ಟಿ, ಹಚಡಕ್ಕೆ
ಸರೀಕರ ಎದುರು ತಲೆಯೆತ್ತಿ ನಡೆಯಲಿಕ್ಕೆ.

ಇವಳಿಗೆ ಮೆಚ್ಚುಗೆ, ಕೃತಜ್ಞತೆಯ ಕಣ್ಣೀರು :
ಹೆತ್ತದ್ದಕ್ಕೆ, ಮಣ್ಣಲ್ಲಿ ಬದುಕಿ
ಮನೆಯಿಂದ ಹೊಲಕ್ಕೆ ಹೋದಂತೆ
ತಣ್ಣಗೆ ಮಾತಾಡುತ್ತಲೇ ಹೊರಟುಹೋದದ್ದಕ್ಕೆ

-ಪಿ.ಲಂಕೇಶ್



## ಕನ್ನಡ ಮಾಧ್ಯಮ

೧

ಶಿಕ್ಷಣ ಮಾಧ್ಯಮವಾದರೆ ಸಾಲದು
ಕನ್ನಡ-ಮಕ್ಕಳಿಗೆ ;
ಕನ್ನಡ ಮಾಧ್ಯಮವಾಗಲೆಬೇಕು
ಮೊದಲೀ ಕವಿಗಳಿಗೆ
ಕನ್ನಡ ಕವಿಗಳಿಗೆ !

೨

ಕನ್ನಡ ಲಿಪಿಯಲಿ ಏನಿದು ಸಂಸ್ಕೃತ
ಪದಗಳ ಮೆರವಣಿಗೆ !
ಕಡೆಯಲಿ ಒಂದೇ ಕನ್ನಡ ವ್ಯಯ
ತೂಕದ ಬರವಣಿಗೆ
ತೂಕಡಿಸುವ ಕಣ್ಣಿಗೆ

೩

ಹಬ್ಬಿದ ಕುಂಬಳ ಬಳ್ಳಿಯ ಭಾರಕೆ
ಗುಡಿಸಲು ಬೀಳುತಿವೆ ;
ಅಳುವೇ ಕೇಳಿಸದಾಚೆಯ ತೀರಕೆ ;
ಉಸಿರೇ ಉಡುಗುತಿದೆ
ಗಾಳಿಯೆ ನಡುಗುತಿದೆ !

೪

ಕನ್ನಡದಾಸೆಯ ಕವಿತಾ ರಚನೆಗೆ
ಒದಗದೆ ನಮ್ಮ ನುಡಿ ?
ಹೂವಿಗೆ ಹೂವೆ-ಕಲ್ಲಿಗೆ ಕಲ್ಲೇ
ಕನ್ನಡ ಮುತ್ತು ನುಡಿ
ಜನತೆಯ ಬಳಕೆನುಡಿ

೫

ಕನ್ನಡ ಗೌಡರು ಕನ್ನಡದಲ್ಲೆ
ಮಕ್ಕಳ ಹರಸುವರು

ದಾಸರು ಶರಣರು ಕನ್ನಡದಲ್ಲೆ
ವೇದವ ನುಡಿಸಿದರು ;
ಬೆಳಕನು ಬಿಡಿಸಿದರು

೬

ಮುಗಿಲೂ ಕನ್ನಡ, ಸಿಡಿಲೂ ಕನ್ನಡ
ಮಿಂಚೂ ಕನ್ನಡವೆ !
ಮಗುವೂ ಕನ್ನಡ, ಹಾಲೂ ಕನ್ನಡ
ಬದುಕೂ ಕನ್ನಡವೆ -
ಸಾವೂ ಕನ್ನಡವೆ !

೭

ಕನ್ನಡ ತೊಟ್ಟಿಲು, ಕನ್ನಡ ಜೋಗುಳ
ಕನಸೂ ಕನ್ನಡವೆ
ನಮಗೇತಕೆ ಈ ಸಂಸ್ಕೃತ ಕಳವಳ ?
ನಾವೂ ಕನ್ನಡವೆ -
ನೀವೂ ಕನ್ನಡವೆ !

೮

ಕನ್ನಡತನದಭಿಮಾನವ ತೋರಿಸಿ
ಕವಿಗಳೆ, ಕಾರ್ಯದಲಿ !
ಕನ್ನಡನುಡಿಯೇ ಕವಿತೆಯನಾಳಲಿ !
ಸಂಸ್ಕೃತ ಮಿತವಾಗಿ
ಬೆರೆಯಲಿ ಹಿತವಾಗಿ !

೯

ಸಂಸ್ಕೃತವೊಂದರ ಭಾಗ್ಯವೆ ಸಾಲದು
ಸೃಷ್ಟಿಯೆ ಗುರು ನಮಗೆ
ಕನ್ನಡ ಮಾಧ್ಯಮವಾದರೆ ಸಾಲದು
ಕೇವಲ ಮಕ್ಕಳಿಗೆ
ಮೊದಲಾಗಲಿ ಕವಿಗಳಿಗೆ !

- ಕೆ.ಎಸ್.ನರಸಿಂಹಸ್ವಾಮಿ



## ಹೂವಾದ ಹುಡುಗಿ

ಒಂದು ಪಟ್ಟಣ. ಅಲ್ಲೊಬ್ಬ ದೊರೆಯಿದ್ದ. ಆತನಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತೆ ಒಬ್ಬ ಮಗ ಇದ್ದ- ದೊರೆಯ ಮೊದಲನೆ ಹೆಣ್ಣುಮಗಳಿಗೆ ಲಗ್ನವಾಗಿತ್ತು.

ಅದೇ ಊರಿನಲ್ಲಿ ಒಬ್ಬ ಮುದುಕಿಯಿದ್ದಳು. ಅವಳಿಗೆ ಇಬ್ಬರು ಹೆಣ್ಣುಮಕ್ಕಳು. ಆ ಮುದುಕಿ ಕೂಲಿಮಾಡಿ ತನ್ನ ಮಕ್ಕಳನ್ನು ಸಾಕುತ್ತಿದ್ದಳು. ಆಗ ಈ ಹುಡುಗಿಯರು ಮೈನೆರೆದರು. ಒಂದುದಿನ ತಂಗಿ, “ಅಕ್ಕಯ್ಯ ಹೋದಷ್ಟು ದಿನಕ್ಕೆ ಅಮ್ಮ ಕೂಲಿಮಾಡಿ ನಮ್ಮನ್ನು ಸಾಕಬೇಕು ಅಂದ್ರೆ ಕಷ್ಟ. ಆದ್ದರಿಂದ ನಾನು ಹೂವಿನ ಗಿಡ ಆಗ್ತೀನಿ, ನೀನು ಹೂ ತಗೊಂಡು ಹೋಗಿ ಮಾರ್ಕೊಂಡು ಬಂದ್ಬಿಡೇ” ಎಂದು ಅಕ್ಕನಿಗೆ ಹೇಳಿದಳು. ಅಕ್ಕನಿಗೆ ಕುತೂಹಲ ಕೆರಳಿ, “ಅದು ಹೇಗೆ ಹೂವಿನ ಗಿಡ ಆಗ್ತೀಯೆ?” ಎಂದು ತಂಗಿಯನ್ನು ಕೇಳಿದಳು. “ಅದೆಲ್ಲ ನಾನು ಆಮೇಲೆ ಹೇಳ್ತೀನಿ ಕಣೆ, ಮೊದಲು ಮನೆಯೆಲ್ಲ ಸಾರ್ಸಿಬಿಡು. ನೀನು ಸ್ನಾನಮಾಡಿ ಬಾವಿಯಿಂದ ಚಿಳ್ ಉಗುರು ಸೋಂಕದ ಹಾಗೆ ಎರಡು ತಂಬಿಗೆ ನೀರು ತಗೊಂಡು ಬಾ” ಅಂದಳು. ಅಕ್ಕ ತಂಗಿಯ ಮಾತಿನಂತೆ ಹೋಗಿ ಸ್ನಾನ ಮಡಿಮಾಡಿ ಚಿಳ್‌ಉಗುರು ಸೋಕದ ಹಾಗೆ ಎರಡು ತಂಬಿಗೆ ನೀರು ತಂದಳು. ಇವರ ಮನೆ ಎದುರಿಗೆ ಒಂದು ದೊಡ್ಡ ಮರವಿತ್ತು. ಅಲ್ಲೂ ಗುಡಿಸಿ ಸಾರಿಸಿದಳು. ಅಲ್ಲಿಗೆ ಇಬ್ಬರೂ ಹೋದರು. ತಂಗಿ ಅಕ್ಕನನ್ನು ಕರೆದು, “ನೋಡಕ್ಕಯ್ಯ, ನಾನಿಲ್ಲಿ ದೇವರನ್ನು ಧ್ಯಾನಮಾಡಿ ಕುಳಿತ್ಕೋತೀನಿ, ನೀನು ಈ ತಂಬಿಗೆ ನೀರನ್ನೆಲ್ಲ ನನ್ನ ಮೈಮೇಲೆ ಸುರಿದುಬಿಡು. ನಾನು ಹೂವಿನ ಗಿಡ ಆಗ್ತೀನಿ. ಸುಳಿ ಮುರಿಯದ ಹಾಗೆ, ಎಲೆ ಮುರಿಯದ ಹಾಗೆ ಬೇಕಾದಷ್ಟು ಹೂವು ಕಿತ್ತಿಕೊ. ನಿನಗೆ ಸಾಕಾದ ಮೇಲೆ ಈ ತಂಬಿಗೆ ನೀರು ನನ್ನ ಮೇಲೆ ಸುರಿದುಬಿಡು, ಪುನಃ ನಾನು ಮನಿಷ್ಯಿ ಆಗ್ತೀನಿ” ಅಂದಳು. ತಂಗಿ ದೇವರನ್ನು ನೆನೆದು ಕುಳಿತುಕೊಂಡಳು. ದೊಡ್ಡವಳು ಒಂದು ತಂಬಿಗೆ

ನೀರನ್ನು ಅವಳ ಮೇಲೆ ಸುರಿದಳು. ಸರಿ, ಭೂಮಿಗೂ ಆಕಾಶಕ್ಕೂ ಏಕವಾದ ಹಾಗೆ, ತಂಗಿ ಹೂವಿನ ಗಿಡವಾದಳು. ಆಗ ಅಕ್ಕ, ಸುಳಿ, ಎಲೆ, ತೊಟ್ಟು ಮುರಿಯದ ಹಾಗೆ ಹೂವನ್ನು ಬಿಡಿಸಿಕೊಂಡಳು. ಬೇಕಾದಷ್ಟು ಹೂವು ಕಿತ್ತುಕೊಂಡ ಮೇಲೆ ಮತ್ತೊಂದು ತಂಬಿಗೆ ನೀರನ್ನು ಗಿಡದಮೇಲೆ ಸುರಿದಳು. ಯಥಾಸ್ಥಿತಿಯಂತೆ ತಂಗಿ ಲಕ್ಷಣವಾಗಿ ಮನುಷ್ಯಳಾದಳು. ಮಂಡೆ ಒದರಿಕೊಂಡು ಎದ್ದು ನಿಂತಳು. ಅನಂತರ ಇಬ್ಬರೂ ಆ ಹೂವನ್ನೆಲ್ಲ ಬುಟ್ಟಿಗೆ ತುಂಬಿ ಮನೆಗೆ ತಂದರು. ಹೂವು ಗಮಗಮ ಅನ್ನೋದು. ಇಬ್ಬರೂ ಸೇರಿ ಹೂವು ಕಟ್ಟಿದರು. "ಎಲ್ಲಿಗೆ ತಗೊಂಡು ಹೋಗಿ ಮಾರಲಿ" ಅಂದಳು ದೊಡ್ಡವಳು. "ಅಕ್ಕಯ್ಯ, ದೊರೆಮನೆಗೆ ತಗೊಂಡು ಹೋಗೇ. ಅವರು ಹೆಚ್ಚಿಗೆ ಹಣ ಕೊಡುತ್ತಾರೆ. ಅಮ್ಮಯ್ಯ ನಮಗೋಸ್ಕರ ಯಾವಾಗಲೂ ಕೂಲಿ ಮಾಡುತ್ತಿರುತ್ತಾಳೆ. ಹೆಚ್ಚು ಹಣ ಕೂಡಿಹಾಕಿ ಅಮ್ಮನಿಗೆ ತೋರ್‍ಸಾನ" ಅಂದಳು ಚಿಕ್ಕೋಳು. ಅಕ್ಕ ಒಂದು ಬುಟ್ಟಿಯಲ್ಲಿ ಹೂವನ್ನೆಲ್ಲ ಇಟ್ಟುಕೊಂಡು, "ಹೂವು ಬೇಕೇನಮ್ಮ ಹೂವು" ಅಂತ ಕೂಗಿಕೊಂಡು ದೊರೆಯ ಮನೆ ಮುಂದೆ ಬಂದಳು. ದೊರೆಯ ಚಿಕ್ಕಮಗಳು "ಅಮ್ಮ, ಅಮ್ಮ, ಹೂವು ಗಮಗಮ ಅಂತಾವೆ ಕೊಡಿಸಿ ಕೊಡು" ಅಂತ ತನ್ನ ತಾಯಿಯನ್ನು ಕೇಳಿದಳು. "ಸರಿ ಕೂಗಮ್ಮ" ಅಂದಳು ತಾಯಿ. ದೊರೆಮಗಳು ಕೂಗಿದಳು. ದೊರೆ ಹೆಂಡತಿ ಹೂವನ್ನು ನೋಡಿದಳು, ಚೆನ್ನಾಗಿತ್ತು; ಆದ್ದರಿಂದ. "ಎಷ್ಟಮ್ಮ ಬೆಲೆ, ಏನು ಕೊಡಬೇಕಮ್ಮ" ಅಂತ ಕೇಳಿದಳು. "ಎಷ್ಟಾನ ಕೊಡ್ರವ್ವ; ನಾವು ಬಡವರು" ಅಂದಳು ಅಕ್ಕ. ದೊರೆ ಹೆಂಡತಿ ಹೂವು ತಗೊಂಡು ಒಂದು ಮೊಗೆ ಹಣ ಕೊಟ್ಟು ಕಳುಹಿಸಿದಳು. ಅಕ್ಕ ಮೊಗೆ ಹಣ ತಂದು ತಂಗಿಗೆ ತೋರಿಸಿದಳು. ತಂಗಿ, "ಅಕ್ಕಯ್ಯ ಅಮ್ಮನಿಗೆ ಹೇಳಬೇಡ, ಮುಚ್ಚಿಡು" ಅಂದಳು. ಹೀಗೆಯೆ ನಾಲ್ಕೈದು ದಿನ ಮಾಡಿದರು. ಒಟ್ಟು ಐದು ಮೊಗೆ ಹಣವಾಯಿತು. ಅಕ್ಕ "ಅಮ್ಮನಿಗೆ ತೋರ್‍ಸಾನ?" ಅಂದಳು "ಬೇಡ್ವೆ ತಂಗಿ, ಹೊಡೀತಾಳೆ" ಅಂತ ಅವರವರೆ ಮಾತನಾಡಿಕೊಂಡರು. ಈ ಹುಡಿಗಿಯರಿಗೆ ಸಂಪಾದನೆ ಮಾಡೋ ಆಶೆ.

ಅರಮನೆಯಲ್ಲಿದ್ದ ಹೂವು ದೊರೆಮಗನ ಕಣ್ಣಿಗೆ ಬಿತ್ತು. ಒಳ್ಳೆ ಗಮಗಮ ಅಂತಿತ್ತು. ಇಂತಹ ಸೊಗಸಾದ ಹೂವನ್ನು ಅವನೆಂದೂ ನೋಡೇ ಇರಲಿಲ್ಲ. "ಇದು ಯಾವ ಗಿಡದ್ದು, ಇದನ್ನು ಎಲ್ಲಿ ಬೆಳೀತಾರೆ, ಅರಮನೆಗೆ ಯಾರು ತಂದು ಕೊಡ್ತಾರೆ" ಎಂದೆಲ್ಲ ಯೋಚನೆ ಮಾಡಿದ. ಆ ದೊಡ್ಡ ಹುಡುಗಿ ತಂದು ಕೊಡುವುದನ್ನು ನೋಡಿ, ಅವಳನ್ನೇ ಹಿಂಬಾಲಿಸಿದ. ಅವಳ ಮನೆ ಹತ್ತಿರ ವೇಷಮರೆಸಿಕೊಂಡು ಹೋಗಿ



ನೋಡಿದ. ಆ ಮುದುಕಿ ಮನೆಯ ಒಳಗಡೆಯೇ ಆಗಲಿ, ಆ ಮನೆಯ ಸುತ್ತ-ಮುತ್ತಲೇ ಆಗಲಿ ಒಂದೂ ಹೂವಿನ ಗಿಡವಿರಲಿಲ್ಲ. ಅವನಿಗೆ ಆಶ್ಚರ್ಯವಾಯಿತು. ಇಂಥ ಹೂವು ಇವರಿಗೆಲ್ಲಿಂದ ಬರುತ್ತದೆ ಎಂದು ಯೋಚನೆ ಮಾಡಿ ಅರಮನೆಗೆ ಬಂದ. ಮಾರನೆಯ ದಿನ ಬೆಳಿಗ್ಗೆ ಸೂರ್ಯಹುಟ್ಟುವ ಮೊದಲೇ ಹೋಗಿ ಹುಡುಗಿಯರ ಮನೆ ಮುಂದಿದ್ದ ದೊಡ್ಡ ಮರದಮೇಲೆ ಕುಳಿತುಕೊಂಡ.

ಅಂದೂ ಸಹ ಹುಡುಗಿಯರು, ಆ ಮರದಡಿ ಸಾರಿಸಿ ಗುಡಿಸಿದರು. ತಂಗಿ ಯಥಾಪ್ರಕಾರ ಹೂವಿನ ಗಿಡವಾದಳು. ಅಕ್ಕ ಎಚ್ಚರಿಕೆಯಿಂದ ಹೂ ಬಿಡಿಸಿಕೊಂಡಳು. ಅನಂತರ ಪುನಃ ಹೂವಿನ ಗಿಡವಾಗಿದ್ದ ತಂಗಿ ಮನುಷ್ಯಳಾದಳು. ಇದೆಲ್ಲವನ್ನು ಮರದ ಮೇಲಿದ್ದ ದೊರೆಮಗ ನೋಡಿಕೊಂಡ. ಆಮೇಲೆ ಸೀದಾ ಅರಮನೆಗೆ ಹೋಗಿ ಮಂಚದ ಮೇಲೆ ಮಕಾಡೆ ಮಲಗಿಕೊಂಡ. ತಂದೆ ತಾಯಿ ಬಂದು ವಿಚಾರಿಸಿದರು. ಏನೂ ಮಾತಾಡದೆ ಮಲಗಿದ್ದ. ಆಗ ಮಂತ್ರಿಮಗ ಬಂದು; "ಏನಾಯಿತು? ಯಾರಾದರೂ ಏನಾದರೂ ಅಂದರಾ? ಈಗ ಏನಾಗಬೇಕು" ಅಂತ ಕೇಳಿದ. ಆಗ ದೊರೆಮಗ ಮೆಲ್ಲಗೆ ಹೂವು ಆಗೋ ಹುಡುಗಿ ವಿಚಾರವೆಲ್ಲ ಹೇಳಿದ. "ಇಷ್ಟೆತಾನೆ" ಎಂದು ಮಂತ್ರಿಮಗ ದೊರೆ ಹತ್ತಿರ ಹೋಗಿ ಹೇಳಿದ. ದೊರೆ ಮಂತ್ರಿನ ಕಳುಹಿಸಿ, ಮುದುಕಿಯನ್ನು ಅರಮನೆಗೆ ಕರೆಸಿಕೊಂಡ. ಆಕೆ ಗಾಬರಿಯಲ್ಲಿ ನಡುಗುತ್ತಾ ಬಂದಳು. ಹರಿದ ಹಳೆ ಬಟ್ಟೆಯಲ್ಲಿ ಬಂದಿದ್ದಳು. ಬಾಗಿಲ ಹತ್ತಿರ ನಿಂತುಕೊಂಡಳು. ಕಡೆಗೆ ಅಲ್ಲೇ ಕುಳಿತುಕೊಂಡಳು. ದೊರೆ ಅವಳನ್ನು ಒಳಗೆ ಕರೆದು ಸಮಾಧಾನಪಡಿಸಿ, ಮೆತುವಾಗಿ, "ಏನಮ್ಮ ನಿನ್ನ ಮನೆಯಲ್ಲಿ ಎರಡು ಹೆಣ್ಣುಮಕ್ಕಳು ಇದೆಯಲ್ಲ, ಅದಗಲ್ಲಿ ಒಬ್ಬಳನ್ನು ಕೊಡ್ತಿಯಾ ನಮಗೆ" ಅಂತ ಕೇಳಿದ. "ನನ್ನ ಮನೆ ಹೆಣ್ಣುಮಕ್ಕಳ ವಿಚಾರ ದೊರೆಗೆ ಹೇಗೆ ಗೊತ್ತಾಯಿತು" ಎಂದು ಮುದುಕಿ ಗಾಬರಿಗೊಂಡಳು. "ಆಗ್ಲೇಳಿ ಸ್ವಾಮಿ. ನೀವು ಕೇಳುವುದು ಹೆಚ್ಚೊ, ನಾವು ಕೊಡುವುದು ಹೆಚ್ಚೊ" ಅಂದಳು ತಡವರಿಸುತ್ತಾ. ದೊರೆ ಬೆಳ್ಳಿ ತಟ್ಟೆಯಲ್ಲಿ ಅಡಿಕೆ-ಎಲೆ ತಾಂಬೂಲ ಕೊಡಿಸಿದ. ಮುದುಕಿ ಭಯದಿಂದ ಮುಟ್ಟಲೇ ಇಲ್ಲ. ಆದರೆ ದೊರೆ ಬಲವಂತವಾಗಿ ತಾಂಬೂಲ ಕೊಟ್ಟು ಮುದುಕಿಯನ್ನು ಕಳುಹಿಸಿದ.


ಮುದುಕಿ ಮನೆಗೆ ಬಂದಳು. ಕೈಗೆ ಪೊರಕೆ ತೆಗೆದುಕೊಂಡು, "ಏನೆ ಮುಂಡೇರಾ, ಎಲ್ಲೋಗಿದ್ರಿ. ದೊರೆ ನಿಮ್ಮ ಕೇಳಬೇಕಾದ್ರೆ ನೀವು ಎಲ್ಲೋಗಿದ್ರಿ" ಅಂತ ಇಬ್ಬರನ್ನೂ ಬೈದು ಹೊಡೆದಳು. ಆ ಹೆಣ್ಣುಮಕ್ಕಳು ಗಾಬರಿಯಾಗಿ ವಿಷಯವೇನೆಂದು ತಿಳಿಯದೆ "ಅಮ್ಮ

ನಮ್ಮನ್ನೇಕೆ ಹೊಡಿತ್ಯಾ, ಅಮ್ಮ ನಮ್ಮನ್ನೇಕೆ ಹೊಡಿತ್ಯಾ" ಅಂತ ಅಳುತ್ತಾ ನಿಂತರು. "ನಿಮ್ಮ ಹೊಡಿದಿದ್ರೆ ಇನ್ಯಾರ್ನ ಹೊಡೀಲಿ. ಯಾವ ಮನೆಗೆ ಹೋಗಿದ್ರಿ. ಹೇಗೆ ನಿಮ್ಮ ವಿಷಯ ದೊರೆಗೆ ತಿಳೀತು" ಎಂದು ಗದರಿದಳು ಮುದುಕಿ. ಅವರಿಬ್ಬರೂ ಅಂಜುತ್ತಂಜುತ್ತಾ ಹೂವಿನಗಿಡ ಆದದ್ದು, ಹೂ ಮಾರಿದ್ದು, ಹಣ ಕೂಡಾಕಿದ್ದನ್ನೆಲ್ಲ ಹೇಳಿ, ಐದು ಮೊಗೆ ಹಣ ತೋರಿಸಿದರು. "ಮನೆಯಲ್ಲಿ ಹಿರೇಳು ನಾನಿರುವಾಗ, ಅದೆಂಗೆ ಮಾಡಿದ್ರೆ ಇದನ್ನೆಲ್ಲ, ಮನುಷ್ಯರು ಹೂವಿನಗಿಡ ಆಗ್ತಾರೇನೆ. ಸುಳ್ಳು ಸುಳ್ಳೇ ಬೊಗಳ್ತೀರಾ? ಅದೆಂಗೆ ಹೂವಿನಗಿಡ ಆಗ್ತೀರ ತೋರಿಸ್ರೇ" ಎಂದು ಹೇಳುತ್ತಾ ಮತ್ತಷ್ಟು ಬಡಿದಳು. ಕಡೆಗೆ ಚಿಕ್ಕೋಳು ಹೂವಿನಗಿಡವಾಗಿ, ಪುನಃ ಮನುಷ್ಯಳಾಗಿ, ತಾಯಿಯನ್ನು ಸಮಾಧಾನ ಪಡಿಸಿದಳು.

ಮಾರನೆದಿನ ಮುದುಕಿ ಮನೆಮುಂದೆ ದೊರೆಯ ಆಳುಗಳು ಬಂದು, "ದೊರೆ ಅಪ್ಪಣೆಯಾಗಿದೆ ಬಾರಮ್ಮಾ" ಅಂತ ಕರೆದರು. ಮುದುಕಿ ಅರಮನೆಗೆ ಹೋಗಿ. "ಏನು ಸ್ವಾಮಿ ಬರಹೇಳಿದ್ದು" ಎಂದು ಕೇಳಿದಳು. "ಏನಮ್ಮ ಈಗ ಲಗ್ನ ಕಟ್ಟಿಸಬೇಕು. ಏನು ಹೇಳ್ತಿ" ಎಂದು ದೊರೆ ಕೇಳಿದ."ಹೇಳೋದೇನು ಬಂತು ಸ್ವಾಮಿ, ತಮ್ಮಿಚ್ಛೆಯಂತಾಗಲಿ" ಎಂದಳು ಮುದುಕಿ.

ಲಗ್ನದೇರ್ಪಾಟೆಲ್ಲ ಪ್ರಾರಂಭವಾಯ್ತು. ಆಕಾಶದಗಲ ಹಸೆಬರೆದರು. ಭೂಮ್ತಾಯಗಲ ಚಪ್ಪರ ಹಾಕಿದರು. ನೆಂಟರಿಷ್ಟರೆಲ್ಲ ಬಂದರು. ಒಳ್ಳೆ ಮುಹೂರ್ತದಲ್ಲಿ, ಹೂವಿನಗಿಡವಾಗಿದ್ದ ಹುಡುಗಿ ಜೊತೆಯಲ್ಲಿ ರಾಜಕುಮಾರನ ಲಗ್ನವಾಯಿತು. ಸೋಬನವಾಯಿತು. ಬೇರೆ ಮನೆಮಾಡಿ ಇವರಿಬ್ಬರನ್ನು ಏಕಾಂತದಲ್ಲಿ ಬಿಟ್ಟರು. ಇವನಷ್ಟಕ್ಕೆ ಇವನಿದ್ದಾನೆ. ಅವಳಷ್ಟಕ್ಕೆ ಅವಳಿದ್ದಾಳೆ. ಎರಡು ರಾತ್ರಿ ಆಯ್ತು. ಅವರೇ ಮಾತನಾಡಿಸಲಿ ಅಂತ ಇವಳು. ಅವಳೇ ಮಾತನಾಡಿಸಲಿ ಅಂತ ಅವನು. ಹೀಗೆ ಇಬ್ಬರೂ ಗುಮ್ಮಾಗಿ ಸುಮ್ಮನೆಯಿದ್ದರು. ಮೂರನೆ ರಾತ್ರಿ, "ಏನು ಅವರು ಮಾತನಾಡಿಸಲೇ ಇಲ್ವಲ್ಲ, ಮತ್ತೇಕೆ ಮದ್ವೆಯಾದರು" ಅಂತ ಯೋಚನೆಮಾಡಿ, "ಈ ಸಂಪತ್ತಿಗೇಕೆ ಮದ್ವೆ ಮಾಡ್ಕೊಂಡು ಬಂದ್ರಿ" ಅಂತ ರಾಜಕುಮಾರನನ್ನು ಕೇಳಿದಳು. "ನಾನ್ ಹೇಳಿದ ಹಾಗೆ ಕೇಳಿದ್ರೆ ಮಾತಾಡ್ತೀನಿ. ಇಲ್ದೇ ಇದ್ರೆ ಇಲ್ಲ". ಎಂದು ಒರಟೊರಟಾಗಿ ಹೇಳಿದ ದೊರೆಮಗ. "ಪತಿ ಮಾತು ಕೇಳದೆ ಉಂಟೇ? ಅದೇನು ಹೇಳಿ" ಅಂದಳು. "ಮತ್ತೆ ನೀನು ಹೂವಿನಗಿಡ ಆಗ್ತೀಯಲ್ಲ ಆಗು", ಹೂವ ಹಾಸ್ಕೊಂಡು, ಹೊದ್ಕೊಂಡು ಮಲಿಕೋಬೇಕು" ಅಂದ.





"ಸ್ವಾಮಿ, ನಾನು ದೇವರಲ್ಲ, ದೆವ್ವವಲ್ಲ. ಎಲ್ಲಾರ ಹಾಗೆ ನಾನೂ ನರಮನುಷ್ಯಳು. ನರಮನುಷ್ಯ ಹೂವಿನಗಿಡ ಆಗೋದುಂಟೇ?" ಎಂದಳು ದೈನ್ಯದಿಂದ. "ಈ ಕಳ್ಳಾಟವೆಲ್ಲ ಬೇಡ, ಅವತ್ತು ನೀನು ಹೂವಿನಗಿಡ ಆಗಿದ್ದನ್ನು ಕಣ್ಣಾರೆ ನಾನು ನೋಡ್ದೆ.... ನನ್ನ ಮುಂದೆ ನೀನು ಹೂವಿನಗಿಡ ಆಗದಿದ್ದ ಮೇಲೆ ಇನ್ಯಾರಮುಂದೆ ಆಗ್ತೀಯಾ" ಎಂದು ಸಿಟ್ಟಾದ. ಆಕೆ ಕಣ್ಣಲ್ಲಿ ಒಂದೆರಡು ತೊಟ್ಟು ನೀರನ್ನು ಸೀರೆ ಸೆರಗಿನಿಂದ ಒರೆಸಿಕೊಂಡು, "ಸ್ವಾಮಿ ಸಿಟ್ಟು ಮಾಡಬೇಡಿ, ಇಷ್ಟು ಹಠ ಬಂದ್ಮೇಲೆ ನೀವು ಹೇಳಿದಂತೆ ನಾನು ಕೇಳ್ತೀನಿ. ಈಗ ಎರಡು ತುಂಬಿಗೆ ನೀರು ತಂದುಕೊಡಿ" ಎಂದು ಕೇಳಿದಳು. ಅವನು ತಂದು ಕೊಟ್ಟ. ಅವೆರಡನ್ನು ಮಂತ್ರಿಸಿದಳು. ಅಷ್ಟರಲ್ಲಿ ಇವನು ಕೊಠಡಿ ಕಿಟಕಿ ಬಾಗಿಲೆಲ್ಲ ಮುಚ್ಚಿಬಿಟ್ಟ. "ನೋಡಿ, ತೊಟ್ಟು, ಎಲೆ, ಕೊಂಬೆ ಮುರಿಯದ ಹಾಗೆ ನಿಮಗೆ ಬೇಕಾದಷ್ಟು ಹೂವ್ವನ್ನೆಲ್ಲ ಬಿಡಿಸಿಕೊಳ್ಳಿ" ಎಂದು ಹೇಳಿ, ಈ ತಂಬಿಗೆಯ ನೀರನ್ನು ಸುರಿಯುವ ವಿಧಾನವನ್ನು ಹೇಳಿ, ದೇವರನ್ನು ನೆನೆಯುತ್ತಾ, ಕುಳಿತಳು.

ದೊರೆಮಗ ಒಂದು ತಂಬಿಗೆ ನೀರು ಸುರಿದ ಕೂಡಲೆ ಹೂವಿನಗಿಡ ಆದಳು. ಹೂವಿನ ಗಮಗಮ ಅರಮನೆ ತುಂಬೆಲ್ಲ ಹಬ್ಬಿತು. ಈತ ತನಗೆ ಬೇಕಾದಷ್ಟು ಹೂವು ಕಿತ್ತು, ಅನಂತರ ಮತ್ತೊಂದು ತಂಬಿಗೆಯ ನೀರನ್ನು ಗಿಡದ ಮೇಲೆ ಸುರಿದ. ಪುನಃ ನರಮನುಷ್ಯಳಾದಳು. ಮಂಡೆ ಒದರಿಕೊಂಡು ನಗುಮುಖದಿಂದ ಮೇಲೆದ್ದಳು. ಇಬ್ಬರೂ ಆನಂದದಿಂದ ಹೂವು ಹಾಸ್ಕೊಂಡು ಹೊದ್ಕೊಂಡು ಮಲಗಿದರು. ಹೀಗೆ ಕೆಲವುದಿನ ಮಾಡಿದರು. ಪ್ರತಿದಿನ ಬೆಳಿಗ್ಗೆ ಬಾಡಿದ ಹೂವನ್ನೆಲ್ಲ ತಮ್ಮ ಕೊಠಡಿಯ ಕಿಟಕಿಯಿಂದ ಆಚೆಗೆ ಹಾಕುತ್ತಿದ್ದರು. ಈ ಹೂವಿನ ರಾಶಿ ಬೆಟ್ಟದ ಹಾಗೆ ಬಿದ್ದಿತ್ತು.

ದೊರೆಯ ಚಿಕ್ಕಮಗಳು, ಈ ಬಾಡಿದ ಹೂವಿನ ರಾಶಿಯನ್ನು ಒಂದು ದಿನ ನೋಡಿ, "ನೋಡಮ್ಮ, ಅತ್ತಿಗೆ ಮುಡಿದು ಬಿಸಾಕಿದ ಬಾಡಿದ ಹೂವೇ ಒಂದು ಬೆಟ್ಟ ಬಿದ್ದ ಹಾಗೆ ಬಿದ್ದಿದೆ. ನನಗೊಂದು ದಿನ ಒಂದು ಹೂವು ಕೊಡ್ಲಿಲ್ಲ" ಎಂದು ತನ್ನ ತಾಯಿಗೆ ದೂರು ಹೇಳಿದಳು. "ಹೂವು ಬೇಕಾದರೆ ಕೊಡಿಸಿ ಕೊಡ್ತೀನಿ, ಸುಮ್ಮನಿರಮ್ಮ" ಎಂದು ಸಮಾಧಾನ ಮಾಡಿದಳು ತಾಯಿ.

ಒಂದು ದಿನ ದೊರೆಮಗ ಎಲ್ಲೋ ಹೊರಗೆ ಹೋಗಿದ್ದ. ಆಗ ದೊರೆ ಮಗಳು ತನ್ನ ಸ್ನೇಹಿತೆಯರಿಗೆಲ್ಲ, "ಸುರಹೊನ್ನೆ ತೋಟಕ್ಕೆ ಉಯ್ಯಾಲೆ ಆಡೋಕೆ ಹೋಗೋಣ. ನಮ್ಮತ್ತಿಗೆ ಹೂವಿನಗಿಡ ಆಗ್ತಾಳೆ. ನೀವೆಲ್ಲರೂ ಬನ್ನಿ. ಗಮಗಮ ಅನ್ನೋ ಹೂವು ಬೇಕಾದಷ್ಟು ಕೊಡ್ತೀನಿ" ಎಂದು ಹೇಳಿ ಬಂದಳು. ಅನಂತರ ತಾಯಿಯಲ್ಲಿ ಅನುಮತಿ ಕೇಳಿದಳು. ಆಕೆ, "ಹೋಗಮ್ಮ ಯಾರು ಬೇಡ ಅಂತಾರೆ" ಅಂದಳು. ಆಗ, "ಅಮ್ಮ ನಾನೊಬ್ಬಳೇ ಹೋಗಲಾ, ಅತ್ತಿಗೆಯನ್ನು ಕಳ್ಸಮ್ಮ" ಎಂದಳು. "ನಿಮ್ಮಣ್ಣನನ್ನು ಕೇಳಿ ಅತ್ತಿಗೆಯನ್ನು ಕರ್ಕೊಂಡು ಹೋಗಮ್ಮ" ಅಂದಳು ತಾಯಿ. ಅಷ್ಟುಹೊತ್ತಿಗೆ ಅವಳ ಅಣ್ಣಯ್ಯನೂ ಅಲ್ಲಿಗೆ ಬಂದ. "ಅಣ್ಣಯ್ಯ, ಅಣ್ಣಯ್ಯ ! ನಾವೆಲ್ಲ ಸುರಹೊನ್ನೆ ತೋಟಕ್ಕೆ ಉಯ್ಯಾಲೆ ಆಡೋಕೆ ಹೋಗ್ತೀವಿ. ಅತ್ತಿಗೇನೂ ಕಳ್ಸಣ್ಣಯ್ಯ" ಅಂದಳು. ಆಗ ಅವಳ ಅಣ್ಣಯ್ಯ, "ನನ್ನಿಷ್ಟ ಅಲ್ಲಮ್ಮ ಕಳ್ಸಕ್ಕೆ, ಅವೆಲ್ಲ ತಾಯಿಯವರ ಇಷ್ಟ" ಅಂದ. ಆಗ ತನ್ನ ತಾಯಿಯಲ್ಲಿ ಹೋಗಿ, "ಅಮ್ಮ, ಅಣ್ಣನನ್ನು ಕೇಳಿದರೆ, ಅಮ್ಮನನ್ನು ಕೇಳು ಅಂತಾನೆ. ಕಳಿಸಲಾರದೆ ಯಾವುದೋ ನೆಪ ಹೇಳ್ತಿ. ನನಗಿಂತ ಹೆಚ್ಚಿನವಳಾ ನಿನ್ನ ಸೊಸೆ" ಅಂದಳು ಬಿಂಕದಿಂದ. "ಹಾಗೆಲ್ಲ ಒರಟು ಮಾತಾಡಬೇಡ, ನಿನ್ನ ಅತ್ತಿಗೆಯನ್ನು ಕರಕೊಂಡು ಲಕ್ಷಣವಾಗಿ ಹೋಗಿ, ಸಂಜೆ ಹೊತ್ತಿಗೆ ಜೋಪಾನವಾಗಿ ಮನೆಗೆ ಬನ್ನಿ" ಎಂದು ಹೇಳಿಕಳುಹಿಸಿದಳು ತಾಯಿ.



ಎಲ್ಲಾರು ಉಯ್ಯಾಲೆ ಆಡೋಕೆ ಸುರಹೊನ್ನೆ ತೋಟಕ್ಕೆ ಹೋದರು. ಅಲ್ಲೊಂದು ದೊಡ್ಡ ಮರಕ್ಕೆ ಉಯ್ಯಾಲೆ ಕಟ್ಟಿದರು. ಎಲ್ಲಾರು ಸಂತೋಷದಿಂದ ಉಯ್ಯಾಲೆ ಆಡ್ತಾ ಅವ್ರೆ. ಆಗ ಇದ್ದಕ್ಕಿದ್ದಂತೆ ಈ ದೊರೆ ಚಿಕ್ಕಮಗಳು, ಎಲ್ಲಾರನ್ನು ಉಯ್ಯಾಲೆಯಿಂದ ಇಳಿಸಿದಳು. ತನ್ನ ಅಣ್ಣನ ಹೆಂಡತಿಯನ್ನು ಕುರಿತು, "ಅತ್ತಿಗೆ, ನೀನು ಹೂವಿನಗಿಡ ಆಗ್ತೀಯಲ್ಲ ಆಗತ್ತಿಗೆ. ಸ್ನೇಹಿತೆಯರೆಲ್ಲಾ ಬರೀ ತಲೇಲಿ ಬಂದವರೆ" ಎಂದಳು. "ಅಯ್ಯೋ ದೇವರೇ, ಇದ್ಯಾರು ನಿನಗೆ ಹೇಳಿದ್ದು. ನಾನು ನಿಮ್ಮ ಹಾಗೆ ಮನುಷ್ತಿಯಲ್ವ!. ಹುಚ್ಚು ಹುಚ್ಚಾಗಿ ಆಡಬೇಡ" ಅಂತ ಗದರಿದಳು ಅತ್ತಿಗೆ. "ಆಹಾ.... ಅಲ್ಲ ಅತ್ತಿಗೆ ನನ್ನ ಸ್ನೇಹಿತೆಯರೆಲ್ಲ ಬರೀ ತಲೇಲಿ ಬಂದಿದ್ದಾರೆ, ಹೂವಿನಗಿಡ ಆಗತ್ತಿಗೆ ಅಂದ್ರೆ, ಏನಲ್ಲ ಮಾತಾಡ್ತಿರಾ. ನಮ್ಮುಂದೆ ಆಗ್ದೆ, ಇನ್ನಾರ ಮುಂದೆ ಹೂವ್ವಿನಗಿಡ ಆಗಾಕೆ ಹೋಗ್ತೀಯಾ" ಎಂದು ನಿಷ್ಠುರವಾಗಿ ನಿರ್ದಾಕ್ಷಿಣ್ಯವಾಗಿ ಮಾತಾಡಿಬಿಟ್ಟಳು.

"ಛೆ ಪಾಪಿ. ಎಂಥ ಕೆಲಸ ಆಯ್ತು. ಇಲ್ಲಿಗೆ ನಾನು ಬಂದದ್ದೇ ತಪ್ಪಾಯಿತು" ಎಂದು ವ್ಯಥೆಪಟ್ಟು, ಎರಡು ತಂಬಿಗೆ ನೀರು ತರಿಸಿ, ಅದನ್ನು ಮಂತ್ರಿಸಿದಳು. ಅವುಗಳನ್ನು ಸುರಿಯುವ, ಹೂವನ್ನು ಕೀಳುವ ವಿಧಾನವನ್ನೆಲ್ಲ ವಿವರವಾಗಿ ಹೇಳಿ, ದೇವರನ್ನು ನೆನೆದು ಕುಳಿತಳು. ಈ ಹುಡುಗಿಯರು ಆ ವಿವರವನ್ನು ಸರಿಯಾಗಿ ಆಲಿಸದೆ, ನಿರ್ಲಕ್ಷ್ಯದಿಂದ, ಒಂದು ತಂಬಿಗೆ ನೀರನ್ನು ಅಡ್ಡಾದುಡ್ಡಿ ಅವಳ ಮೇಲೆ ಸುರಿದರು. ಆಕೆ ಅರ್ಧಂಬರ್ಧ ಗಿಡ ಆದಳು. ಅಷ್ಟು ಹೊತ್ತಿಗೆ ಸಾಯಂಕಾಲವಾಗಿತ್ತು. ಇದ್ದಕ್ಕಿದ್ದಂತೆ ಗುಡುಗು ಸಿಡಿಲಿನಿಂದ ಕೂಡಿದ ಮಳೆ ಪ್ರಾರಂಭವಾಯಿತು. ಆಗ ಇವರು ಹೂವು ಕೀಳೋ ಸಂಭ್ರಮದಲ್ಲಿ ತೊಟ್ಟು, ಎಲೆ, ಸುಳಿ ಎಲ್ಲ ಕಿತ್ತು, ರಂಬೆನೆಲ್ಲ ತರದುಬಿಟ್ಟಿದ್ದರು. ಈ ಮಳೆಗೆ ಹೆದರಿ ಮನೆಗೆ ಹೋಗೋ ಆತುರದಲ್ಲಿ, ಮತ್ತೊಂದು ತಂಬಿಗೆ ನೀರನ್ನು ಅಡ್ಡಾದುಡ್ಡಿ ಅದರ ಮೇಲೆ ಸುರಿದು ಹೊರಟುಬಿಟ್ಟರು. ಆಕೆ ಪುನಃ ಮನುಷ್ಯಳಾಗುವಾಗ, ಕೈಯಿಲ್ಲದ ಕಾಲಿಲ್ಲದ ಅರ್ಧಂಬರ್ಧ ದೇಹವಾಗಿದ್ದಳು. ಮೈಯೆಲ್ಲ ಗಾಯವಾಗಿತ್ತು. ಆ ಮಳೆ ನೀರಲ್ಲಿ ತೇಲಿಕೊಂಡು, ಚರಂಡಿಯಲ್ಲಿ ಬಿದ್ದು ಬಹುದೂರ ಹೋಗಿ ಅಲ್ಲೊಂದು ಮೋರಿಯಲ್ಲಿ ಸಿಕ್ಕಿಕೊಂಡಳು.

ಮಾರನೆಯ ದಿನ ಬೆಳಿಗ್ಗೆ ಅತ್ತಕಡೆಯಿಂದ ಏಳೆಂಟು ಅರಳೆ ಗಾಡಿ ಬರುತ್ತಿದ್ದವು. ಆಗ ಇದು, 'ಹ್ಞಾ...ಹ್ಞಾ...' ಅಂತ ಕೊರಗುತ್ತಿತ್ತು.

ಮೊದಲ ಗಾಡಿಯವನು, "ಇದೇನು ನೋಡ್ರೋ" ಅಂದ. ಎರಡನೆಯವನು, "ಹೊಡೀರಲೇ ಗಾಡೀನ, ಗಾಳಿಯೋ ಪಿಶಾಚಿಯೋ ಏನೋ" ಅಂದ. ಆದರೆ ಕೊನೆಗಾಡಿಯವನು, ಗಾಡಿ ನಿಲ್ಲಿಸಿ ನೋಡ್ತಾನೆ, ಒಂದು ದೇಹದ ಮುದ್ದೆ. ಮುಖ ಮಾತ್ರ ಚೆನ್ನಾಗಿತ್ತು. ಬಟ್ಟೆಯಿಲ್ಲ, ಬರೆಯಿಲ್ಲ. "ಅಯ್ಯೋ ಮನುಷ್ಯ ಕಣಪ್ಪ" ಅಂತ ನೊಂದು, ಬೇರೆಯವರ ಅಸಹ್ಯದ ಮಾತಿಗೆ ಬೆಲೆ ಕೊಡದೆ, ತನ್ನ ತಲೆಮೇಲಿದ್ದ ವಸ್ತ್ರವನ್ನು ಅದರ ಮೇಲೆ ಹಾಕಿ ಕರತಂದು ಗಾಡಿಯಲ್ಲಿ ಕುಳ್ಳರಿಸಿದ. ಮುಂದೊಂದು ಊರು ಸಿಕ್ಕಿತು. ಅಲ್ಲೊಂದು ಹಾಳು ಮಂಟಪ. ಅಲ್ಲಿ ಗಾಡಿ ನಿಲ್ಲಿಸಿ, 'ಇದನ್ನು' ಆ ಮಂಟಪದಲ್ಲಿಟ್ಟು, "ಯಾರಾದರು ಅನ್ನ ಕೊಟ್ಟರೆ ಜೀವ ಉಳಿಸಿಕೋ" ಅಂತ ಹೇಳಿ ಗಾಡಿ ಹೊಡೆದುಕೊಂಡು ಮುಂದೆ ಹೋದ.

ಇತ್ತ ದೊರೆಯ ಚಿಕ್ಕಮಗಳು ಅರಮನೆಗೆ ಬಂದಳು. ಇವಳೊಬ್ಬಳೇ ಬಂದದ್ದನ್ನು ತಾಯಿ ಕಂಡು, "ಎಲ್ಲಮ್ಮ ಅತ್ತಿಗೆ ? ನಿಮ್ಮ ಅಣ್ಣಯ್ಯ ಕಂಡ್ರೆ ಏನಂತಾನಮ್ಮ" ಎಂದು ಕೇಳಿದಳು. "ಅಯ್ಯೋ ಯಾರಿಗೆ ಗೊತ್ತು. ಈಗ ನಾವೆಲ್ಲ ಬರಲಿಲ್ವಾ. ಅವಳು ಎಲ್ಲಿ ಹೋದಳೋ ?" ಅಂದಳು. "ಅಯ್ಯೋ ಹಂಗೆ ಅನ್ನಬಾರದಮ್ಮ. ನಿಮ್ಮ ಅಣ್ಣಯ್ಯ ಸುಮ್ನೆ ಬಿಟ್ಟಾನ. ಅದೇನು ಆಯ್ತು ಹೇಳಮ್ಮ" ಎಂದು ಉಪಾಯದಿಂದ ತಾಯಿ, ನಡೆದ ವಿಚಾರ ತಿಳಿದುಕೊಳ್ಳಲು ಪ್ರಯತ್ನಿಸಿದಳು. ಆದರೆ ಮಗಳು ಬಾಯಿಗೆ ಬಂದ ಹಾಗೆ ಸುಳ್ಳನ್ನು ಹೇಳಿಬಿಟ್ಟಳು. ನಡೆದ ವಿಚಾರ ತಾಯಿಗೆ ತಿಳಿಯಲೇ ಇಲ್ಲ. ಇವಳೇನೋ ಮಾಡಿಬಂದಿದ್ದಾಳೆಂದು ತಾಯಿಗೆ ಅನುಮಾನ ಬಂತು. ಎರಡು-ಮೂರು ದಿನವಾದ ಮೇಲೆ ದೊರೆಮಗ ತಾಯಿಯನ್ನು ವಿಚಾರಿಸಿದ.

"ಅಮ್ಮ ಅಮ್ಮ"

"ಏನಪ್ಪ"

"ಇದೇನಮ್ಮ ಉಯ್ಯಾಲೆ ಆಡೋಕೆ ಹೋದೋಳ ಸುಳಿವೇ ಇಲ್ವಲ್ಲ?"

"ಅಯ್ಯೋ ರಾಮ, ಮಲಗೋ ಮನೆಯಲ್ಲಿರಬಹುದೆಂದು ನಾ ತಿಳಿದಿದ್ರೆ, ನೀನು ನನ್ನೇ ಕೇಳ್ತಿಯಲ್ಲಪ್ಪ" ಅಂದಳು ತಾಯಿ.

"ಓ ಏನೋ ಆಗಬಾರದ್ದು ಆಗ್ಹೋಯ್ತು" ಅಂತ ತಿಳಿದ ದೊರೆಮಗ. ಮಂಚದ ಮೇಲೆ ಮಕಾಡೆ ಮಲಗಿ ಬಿಟ್ಟ. ಐದು ದಿನ ಆಯ್ತು, ಆರು ದಿನ ಆಯ್ತು. ಹದಿನೈದು ದಿನ ಆಯ್ತು. ಹೆಂಡತಿ ಪತ್ತೆಯಿಲ್ಲ. "ಬಾವಿಗೆ ನೂಕಿದ್ರೆ! ಕೆರೆಗೆ ನೂಕಿದ್ರೆ!" ಅಂತ ತಂದೆ ತಾಯಿನ ಕೇಳಿದ.



ಅವರೇನು ಹೇಳ್ತಾರೆ. ಅವರೂ ಚಿಂತೆ ಮಾಡ್ತಾ ಕೊರಗ್ತಾ ಅವರೆ. ಆಗ ಅವನಿಗೆ ಬೇಜಾರಾಗಿ, ಗೋಸಾಯಿ ದಿರ್ಸು ಹಾಕಿಕೊಂಡು, ದೇಶಾಂತರ ಹೊರಟ.

ಇತ್ತ ಮೈಯೆಲ್ಲ ಗಾಯವಾಗಿ ಅರ್ಧಂಬರ್ಧ ದೇಹವಾಗಿದ್ದ 'ಇವಳು' ತನ್ನ ಗಂಡನ ದೊಡ್ಡಕ್ಕಳನ್ನು ಮದವೆ ಮಾಡಿಕೊಟ್ಟಿದ್ದ ಪಟ್ಟಣದಲ್ಲಿದ್ದಳು. ಆ ಪಟ್ಟಣದ ಅರಮನೆಯ ದಾದೇರು, ಗೌಡೇರು ದಿನವಹಿ ನೀರಿಗೆ ಹೋಗಿ ಬರುವಾಗ ಇವಳನ್ನು ನೋಡುತ್ತಿದ್ದರು. ನೋಡಿ "ಮಹಾರಾಜನ ಮಗಳಿದ್ದ ಹಾಗೆ ಅವಳೆ" ಅಂದುಕೊಳ್ಳುತ್ತಿದ್ದರು. ಒಬ್ಬಳು ನೋಡಿ ಸೈರಿಸಲಾರದೆ, "ಅಮ್ಮಾವ್ರಿಗೆ ಹೇಳಬೇಕು" ಅಂದ್ಕೊಂಡು, ಅರಮನೆಗೆ ಹೋಗಿ ಇವಳ ವಿಚಾರ ಹೇಳಿ, "ಅಮ್ಮ...ಅಮ್ಮ, ನಿಮ್ಮ ತಮ್ಮನ ಹೆಂಡತಿ ಇದ್ದ ಹಾಗೆ ಇದಾಳೆ ಕಣಮ್ಮ. ದುರಬೀನು ಹಾಕಿ ನೋಡಿ" ಅಂದಳು. ರಾಣಿ ನೋಡಿದಳು. ಒಂದು ತರವಾಗಿ ತಮ್ಮನ ಹೆಂಡತಿ ಹಂಗೇ ಕಾಣುತ್ತಿತ್ತು. "ಅಮ್ಮ, ಅಮ್ಮ, ಕರೆದು ಅರಮನೆ ಮುಂದೆ ಕುಳ್ಳರಿಸಿದರೆ ಎಷ್ಟೋ ಕಳೇವಾಗಿರುತ್ತೆ, ಕರೆದುಕೊಂಡು ಬರಲಾ" ಅಂದಳು ಒಬ್ಬ ದಾದಿ. "ಹೋಗ್ರೆ, ಹೋಗ್ರೆ, ಅವಳ ಸೇವೆಮಾಡಿ ಅನ್ನ ಹಾಕಬೇಕಾಗುತ್ತೆ" ಎಂದು ತಾತ್ಸಾರ ಮಾಡಿದಳು ರಾಣಿ. ಮಾರನೆ ದಿನವು ಸಹ ದಾದೇರು, "ಅಪರೂಪದ ರೂಪವತಿ, ಅರಮನೆಗೆ ಬೆಳಕಾಕ್ತಾಳಮ್ಮ. ಕರೆದು ತರ್ಲಾ" ಅಂತ ಗೋಗರೆದರು. "ಹ್ಞೂ, ಕರೆದು ತನ್ನಿ. ಅವಳ ಸೇವೆ ನೀವೇ ಮಾಡಬೇಕು ಅಂದಳು ರಾಣಿ, "ಹ್ಞೂ ನಾವೇ ಮಾಡ್ತೀವಮ್ಮ" ಎಂದು ಒಪ್ಪಿಕೊಂಡು ಅವಳನ್ನು ಕರೆತಂದು, ನೀರು-ನಿಡಿ ಹೊಯಿದ್ರು. ಬಟ್ಟೆ ಉಡಿಸಿ, ಅರಮನೆ ಬಾಗಿಲಲ್ಲಿ ಕುಳ್ಳರಿಸಿದರು. ದಿನವಹಿ ಅವಳ ಗಾಯಗಪ್ಪೆಗೆ ಔಷಧಿ ಹಾಕಿ, ವಾಸಿಮಾಡಿದರು.

ಇತ್ತ ದೊರೆಮಗ, ದೇಶಕೋಶವೆಲ್ಲ ತಿರುಗಿ, ತನ್ನಕ್ಕನ ಪಟ್ಟಣಕ್ಕೆ ಬಂದ. ಬಂದು ಪಟ್ಟಣದ ಬಾಗಿಲಲ್ಲಿ ಕುಳಿತ. ತಿಕ್ಕಲು ಮನುಷ್ಯನ ಹಾಗೆ ಅವನಿಗೆ ಗಡ್ಡಮೀಸೆ ಬೆಳೆದಿತ್ತು. ನೀರಿಗೆ ಹೋಗಿ ಬರುತ್ತಿದ್ದ ದಾದೇರು ಇವನನ್ನು ನೋಡಿ ಅರಮನೆಗೆ ಹೋಗಿ, "ಅಮ್ಮಾವ್ರೆ, ಯಾರೋ ನಿಮ್ಮ ತಮ್ಮ ಕುಳಿತಂಗೆ ಕಾಣುತ್ತೆ. ದುರಬೀನು ಹಾಕಿ ನೋಡ್ರಮ್ಮಾವ್ರೆ" ಅಂತ ಗೋಗರೆದರು. ರಾಣಿ ಉದಾಸೀನವಾಗಿ ಮೇಲ್ಮಾಡಿಗೆ ಹೋಗಿ, ದುರಬೀನು ಹಾಕಿ ನೋಡಿದಳು. "ಏನೋ ಮುಖದ ಹೋಲಿಕೆ ಹಾಗೇನೆ ಕಾಣುತ್ತೆ. ನನತಮ್ಮ ಜೋಗಿ ಆಗ್ತಾನೆಂದ್ರೇನು ಮಾತು" ಎಂದು ಬಹಳ ಯೋಚನೆಮಾಡಿದಳು ರಾಣಿ. ದಾದೇರ ಕೈಲಿ ಹೇಳಿ ಕಳುಹಿಸಿದಳು.

ಅವರು, "ರಾಣಿ ಅಪ್ಪಣೆಯಾಗಿದೆ ಬನ್ನಿ" ಅಂತ ಕರೆದರು. "ಹೋಗ್, ಹೋಗಿ ಆಕೆ ನನ್ಯಾಕೆ ಕರೀತಾಳೆ" ಅಂದ. "ಇಲ್ಲ ಸ್ವಾಮಿ ನಿಮ್ಮೆ ಕರೀತಾರೆ ಬನ್ನಿ" ಎಂದು ಬಹಳ ಮೆಹನತ್ತು ಮಾಡಿ ಕರೆದು ತಂದರು. ರಾಣಿ ಅವನನ್ನು ಚೆನ್ನಾಗಿ ನೋಡಿದಳು. ನನ್ನ ತಮ್ಮನೇ ಇರಬೇಕೆಂದುಕೊಂಡಳು.

ಕೊಪ್ಪ ಕೊಪ್ಪರಿಗೆ ಎಣ್ಣೆ ಕಾಯ್ಸಿ, ನೆತ್ತಿಗೆ ಒತ್ತಿಸಿ, ಹಂಡೆ-ಹಂಡೆ ನೀರು ಹಾಕ್ಸಿ, ನನ್ನ ತಮ್ಮನೇವರ್ತು ಬೇರಲ್ಲವೆಂದು ತಿಳಿದುಕೊಂಡು, ಬೇಕು ಬೇಕಾದ ಹಾಗೆ ಉಪಚಾರ ಮಾಡಿದಳು. ದಿನಕ್ಕೊಂದೊಂದು ಅಡಿಗೆ, ದಿನಕ್ಕೊಂದೊಂದು ದಿರ್ಸು ಕೊಡುತ್ತಿದ್ದಳು. ಆದರೆ ಈತ ಏನು ಮಾಡಿದರೂ ಅಕ್ಕನ ಕೈಲಿ ಮಾತಾಡಲಿಲ್ಲ. 'ನಾನ್ಯಾರು, ನೀನ್ಯಾರು' ಅಂತಲೂ ಸಹ ಮಾತಾಡಲಿಲ್ಲ. ಅಷ್ಟು ಹೊತ್ತಿಗೆ ಇಬ್ಬರಿಗೂ ತಾವು ಅಕ್ಕ-ತಮ್ಮ ಅನ್ನೋದು ಚೆನ್ನಾಗಿ ಗೊತ್ತಾಗಿತ್ತು.

"ನಾನಿಷ್ಟು ಉಪಚಾರ ಮಾಡಿದರೂ ನನ್ನ ತಮ್ಮ ಮಾತಾಡಲಿಲ್ವಲ್ಲ, ಏನು ಕಾರಣ ? ಯಾವುದಾದರೂ ಮೋಹಿನಿ ಕೆಲ್ಸ ಇರಬಹುದಾ?" ಎಂದು ಆಲೋಚನೆ ಮಾಡಿ, ದಿನಾ ಒಬ್ಬೊಬ್ಬರು ಚಲುವೆ ದಾದಿಯರನ್ನು ಅವನು ಮಲಗೋ ಮನೆಗೆ ಕಳುಹಿಸಿದಳು. ಏಳುಜನ ದಾದಿಯರನ್ನು ಏಳದಿನ ಕಳುಹಿಸಿದಳು. ಆ ಎಲ್ಲ ದಾದೇರು ಇವನ ಕೈಮುಟ್ಟಿ, ಮೈಮುಟ್ಟಿ ಎಚ್ಚರ ಮಾಡಿ ನೋಡಿದರು. ಆದರೆ ಇವನು ಯಾರೊಂದಿಗೂ ಮಾತಾಡಲಿಲ್ಲ. ಆಗ ಮಾರನೆಯ ದಿನ ರಾತ್ರಿ ದಾದೇರೆಲ್ಲ ಸೇರಿ, ಅರಮನೆ ಮುಂದಿದ್ದ 'ಇವಳಿಗೆ' ಶೃಂಗಾರಮಾಡಿ, ರಾಣಿಯಿಂದ ಅಪ್ಪಣೆ ಪಡೆದು ಇವನ ರೂಮಿನಲ್ಲಿ ಮಂಚದ ಮೇಲೆ ತಂದು ಕೂರಿಸಿದರು. ಇವನು ದಾದೇರ್ನ ನೋಡಲೂ ಇಲ್ಲ, ಮಾತಾನಾಡಿಸಿಯೂ ಇರಲಿಲ್ಲ. ಆದರೆ ಈ ರಾತ್ರಿ 'ಇದು' ಮೋಟುಗೈಯಲ್ಲಿ ಸುಮ್ನೆ ಇವನ ಕಾಲನ್ನು ಒತ್ತುತ್ತ, 'ಹ್ಞೂ...ಹ್ಞೂ...' ಅಂತ ಕೊರಗುತ್ತಿತ್ತು. ಆಗ ಇವನು ಎದ್ದು ನೋಡಿದ. 'ಇದು' ಕೂಡ ಅವನನ್ನು ಸ್ವಲ್ಪ ಹೊತ್ತು ಹಾಗೇ ನೋಡಿತು, ಇವಳೇ ನನ್ನ ಹೆಂಡತಿಯೆಂದು ತಿಳಿದುಕೊಂಡ. ಆಗ "ಏನು? ಎತ್ತ? ಎಂದು ಅವಳನ್ನು ವಿಚಾರಿಸಿದ. ಆಗ ಆಕೆಗೆ ಅಷ್ಟುದಿನ ನಿಂತಿದ್ದ ಮಾತು ಬಂತು. ಆಗ ಅವಳು, "ನಿಮ್ಮ ತಂಗಿಯಿಂದ ಹೀಗಾಯ್ತು" ಎಂದು ಎಲ್ಲವನ್ನೂ ಗಂಡನಿಗೆ ಹೇಳಿದಳು. "ಈಗೇನು ಮಾಡಬೇಕು?" ಅಂತ ಕೇಳಿದ. "ಹೆಚ್ಚಿಗೇನೂ ಮಾಡಬೇಡಿ, ಚಿಳ್ಳುಗರು ಸೋಕದ ಹಾಗೆ ಎರಡು ತಂಬಿಗೆ ನೀರು ತನ್ನಿ" ಎಂದು ಕೇಳಿಕೊಂಡಳು. ಆತ ಯಾರಿಗೂ ಪತ್ತೆಯಿಲ್ಲದ




ಹಾಗೆ ತಂದು ಕೊಟ್ಟ. ಆ ಎರಡು ತಂಬಿಗೆಯನ್ನು ಮಂತ್ರಿಸಿ ಕೊಟ್ಟು, "ಮೊದಲು ಈ ತಂಬಿಗೆ ನೀರು ಹೊಯ್ದುಬಿಡಿ, ಹೂವಿನಗಿಡ ಆಗ್ತೀನಿ. ಆಗ ಎಲ್ಲಿ ಎಲೆ ಹೋಗಿದೆಯೋ ಅಲ್ಲಿ ಎಲೆ ಜೋಡಿಸಿ, ಎಲ್ಲಿ ರಂಬೆ ಹೋಗಿದೆಯೋ ಅಲ್ಲಿ ರಂಬೆ ಜೋಡಿಸಿ, ಅನಂತರ ಈ ಇನ್ನೊಂದು ತಂಬಿಗೆ ನೀರನ್ನು ಸುರಿಯಿರಿ" ಎಂದು ಹೇಳಿ, ದೇವರನ್ನು ನೆನೆದು ಕುಳಿತುಕೊಂಡಳು. ಸರಿ ಈತ ಒಂದು ತಂಬಿಗೆ ನೀರು ಹೊಯ್ದ. ಹೂವಿನಗಿಡ ಆದಳು. ನೋಡ್ತಾನೆ ಕೊಂಬೆ ರಂಬೆನೆಲ್ಲ ತರದುಬಿಟ್ಟಿದ್ದಾರೆ. ಅವನ್ನೆಲ್ಲ ಸರಿಪಡಿಸಿ, ಗಿಡದ ಮೈಮೇಲೆಲ್ಲ ಬೀಳುವ ಹಾಗೆ ಇನ್ನೊಂದು ತಂಬಿಗೆ ನೀರು ಸುರಿದ. ಆಗ ಪುನಃ ನರಮನುಷ್ಯಳಾದಳು. ಮಂಡೆ ಒದರಿಕೊಂಡೆದ್ದು, ಗಂಡನ ಕಾಲಿಗೆ ನಮಸ್ಕಾರ ಮಾಡಿದಳು. ನಾದನಿ ರಾಣಿಯನ್ನು ಎಬ್ಬರಿಸಿ, ಆಕೆಯ ಕಾಲಿಗೂ ನಮಸ್ಕಾರ ಮಾಡಿದಳು. ನಡೆದ ಸಂಗತಿಯನ್ನೆಲ್ಲ ತಿಳಿಸಿದಳು. ರಾಣಿ ಈಕೆಯನ್ನು ಅಪ್ಪಿ ಮುದ್ದಾಡಿ ಅತ್ತಳು. ಕಡೆಗೆ ರಾಣಿ ಇಬ್ಬರನ್ನೂ ಬೇಕು ಬೇಕಾದಂಗೆ ಉಪಚರಿಸಿ, ತಮ್ಮನನ್ನು, ತಮ್ಮನ ಹೆಂಡತಿಯನ್ನು ಕುಳ್ಳಿರಿಸಿ, ಹಸೆ ಎತ್ತಿಸಿ, ನಾಲ್ಕಾರು ವಾರ ತನ್ನ ಮನೆಯಲ್ಲಿಟ್ಟುಕೊಂಡಿದ್ದಳು. ಅವರಿಬ್ಬರೂ ತನ್ನ ತಂದೆ ಪಟ್ಟಣಕ್ಕೆ ಹೋಗುವಾಗ ಬೇಕಾದಷ್ಟು ಐಸಿರಿ ಕೊಟ್ಟು, ಉಡುಗೊರೆ ಕೊಟ್ಟು ಕಳುಹಿಸಿದಳು.

ಅಲ್ಲಿ, ಆ ಪಟ್ಟಣದ ದೊರೆ, ಕಳೆದು ಹೋಗಿದ್ದ ತಮ್ಮ ಮಗ ಸೊಸೆ ಬಂದರೆಂದು, ವೈಭವದಿಂದ ಅವರಿಬ್ಬರನ್ನೂ ಆನೆ ಅಂಬಾರಿ ಮೇಲೆ ಕುಳ್ಳರಿಸಿ, ಊರೆಲ್ಲ ಮೆರವಣಿಗೆ ಮಾಡಿ ಅರಮನೆಗೆ ಕರೆದುಕೊಂಡು ಹೋದ. ಅಲ್ಲಿ ದೊರೆಗೂ, ಮಹಾರಾಣಿಗೂ ನಡೆದ ಸಂಗತಿಯನ್ನೆಲ್ಲ ಇವರು ಹೇಳಿದರು. ಆಗ ದೊರೆ, ಒಂದು ಅಗೇವು ತೆಗೆಸಿ, ಅದಕ್ಕೆ, ಏಳು ಖಂಡುಗ ಸುಣ್ಣ ಬಿರೆಹೊಯ್ಸಿ, ಅದರೊಳಗೆ ತನ್ನ ಚಿಕ್ಕಮಗಳನ್ನು ನೂಕಿಸಿದ. ಇದನ್ನು ನೋಡಿದ ಜನರೆಲ್ಲ, "ತಪ್ಪಿಗೆ ಶಿಕ್ಷೆ ಉಂಟೇ ಉಂಟು" ಎಂದುಕೊಂಡರು.

ಎಲ್ಲರೂ ಸುಖವಾಗಿದ್ದರು.

○






## ಕ್ಷೇತ್ರಕಾರ್ಯದ ಅನುಭವ: ಕೆಲವು ನೆನಪುಗಳು

ಜಾನಪದವನ್ನು ಕುರಿತ ಆಸಕ್ತಿ ಮೊಳೆತು ನನಗೂ ಈಗಾಗಲೇ ಸುಮಾರು ಹನ್ನೆರಡು ವರ್ಷಗಳು ತುಂಬಿವೆ. 1967ರಲ್ಲಿ ತರೀಕೆರೆಯಲ್ಲಿ ನಡೆದ ಮೊದಲ ಜಾನಪದ ಸಮ್ಮೇಳನದ ನೆನಪಿನ ಹೊತ್ತಗೆ "ಹೊನ್ನ ಬಿತ್ತೇವು ಹೊಲಕೆಲ್ಲ"ದಲ್ಲಿ ಜನಪದ ಕಾವ್ಯವನ್ನು ಕುರಿತು ನಾನೂ ಒಂದು ಲೇಖನ ಬರೆದಿದ್ದೇನೆ. ಅಷ್ಟಲ್ಲದೆ ಆಗ ಬಿ.ಎ. ವಿದ್ಯಾರ್ಥಿಯಾಗಿದ್ದ ನಾನು–ಈಗ ಸರ್ಕಾರದ, ವಿಶ್ವವಿದ್ಯಾಲಯದ ವೆಚ್ಚದಲ್ಲಿ ಇತರರಂತೆ ಟಿಎ ಡಿಎ ವಿದ್ವಾಂಸನಾಗಿ ಸಮ್ಮೇಳನ, ಸೆಮಿನಾರುಗಳಿಗೆ ಹಾಜರಾಗುವ ಸಂಕೋಚದ ನಡುವೆಯೂ–ಅಪ್ಪನ ಹಣದ ಖರ್ಚಿನಲ್ಲಿ ಸರಿಯಾದ ಊಟ ವಸತಿಯ ಸೌಕರ್ಯಗಳಿಲ್ಲದೆ, ಎಲ್ಲೆಂದರಲ್ಲಿ ಅಲೆಯುತ್ತಾ, ಸಿಕ್ಕಿದ ಬಸ್ಸು ರೈಲು ಹತ್ತಿ, ಆ ತರೀಕೆರೆ ಸಮ್ಮೇಳನದ ಯಾತ್ರೆಯನ್ನು ನಡೆಸಿದ್ದ ಸಿಹಿನೆನಪುಗಳನ್ನು ಇಟ್ಟುಕೊಂಡಿದ್ದೇನೆ. ಆ ಕಾಲದ ಒಬ್ಬ ಮಹಾರಾಜನು ಕೂತ ಜಾಗದಲ್ಲಿ ಕೆಲವೇ ನಿಮಿಷಗಳಲ್ಲಿ ನಮ್ಮ ಜನಪದ ಕಲಾವಿದರನ್ನು ಸಾಲಾಗಿ ಕೂರಿಸಿ, ಪ್ರೀತ್ಯಾದರಗಳಿಂದ ಗೌರವಿಸಿದ ದೃಶ್ಯ ಆಗ ನನ್ನ ಕಣ್ಮನಗಳನ್ನು ಬಹಳವಾಗಿ ಸೂರೆಗೊಂಡಿತ್ತು. (ಸಮ್ಮೇಳನದ ವ್ಯವಸ್ಥಾಪಕರಿಗೆ, ಭಾರೀ ದೇಹದ, ಡೌಲಿನ ವೇಷದ ಆ ಮಹಾರಾಜನ ಬಗ್ಗೆಯೂ ಭಕ್ತಿ ಗೌರವಗಳಿದ್ದಿರಬಹುದಾದ ವಿಚಾರ ಬೇರೆ!). ಹೀಗೆ ನನ್ನಂಥವನಿಗೆ ಸೃಜನಶೀಲ ಬರವಣಿಗೆಯ ಜೊತೆ ಜೊತೆಯಲ್ಲೇ ಜನಸಮುದಾಯವನ್ನು ಅನುಭವದ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಬೇಕೆನ್ನುವ ಆಕಾಂಕ್ಷೆಯ ಮೂಲಕವೇ ಮೂಡಿಬಂದ ಜಾನಪದ ಆಸಕ್ತಿಯೂ ಕೂಡಿಕೊಂಡು, ಇದನ್ನೆಲ್ಲಾ ಕೆಲಕಾಲವಾದರೂ ಸಾಕಷ್ಟು ತೀವ್ರವಾಗಿ ಹಚ್ಚಿಕೊಳ್ಳಲು ಸಾಧ್ಯವಾಯಿತೆಂದು ಕಾಣುತ್ತದೆ.

ಈ ಹನ್ನೆರಡು ವರ್ಷಗಳಲ್ಲಿನ ಮೊದಲ ಏಳೆಂಟು ವರ್ಷಗಳಲ್ಲಿ, ಅಂದರೆ, ವಿದ್ಯಾರ್ಥಿ ಜೀವನದ ಕೊನೆಯ ಭಾಗ ಮತ್ತು ಅಧ್ಯಾಪಕ ವೃತ್ತಿಯ ಆರಂಭದ ಕಾಲದಲ್ಲಿ, ಅದರಲ್ಲೂ ಕಾಲೇಜಿನ ಬೇಸಿಗೆ ರಜಾ ಅವಧಿಯ ಮೇ, ಜೂನ್ ತಿಂಗಳುಗಳಲ್ಲೇ ಜಾನಪದ ಕ್ಷೇತ್ರಕಾರ್ಯವನ್ನು ನಾನು ಆಗಾಗ ನಡೆಸಿದ್ದೇನೆ. ನನ್ನ ಹುಟ್ಟೂರಿನಲ್ಲಿ ನಮ್ಮ ಮನೆಯ ಎದುರು ಸಾಲಿನಲ್ಲಿಯೇ ಕೆಲವು ಗಜಗಳ ದೂರದಲ್ಲಿ ಕೆಂಪೋಜಿ ನಾಥಮ್ಮ ಎನ್ನುವ ಅಜ್ಜಿಯೊಂದು ಕೂಲಿ-ನಾಲಿ ಮಾಡಿ ದುಡಿದು ಉಣ್ಣುವ ಶಕ್ತಿಯನ್ನೂ ಆಗಲೇ ಕಳೆದುಕೊಂಡು, ಮುರುಕಲು ಮನೆಯ ಕೋಣೆಯೊಂದರಲ್ಲಿ ಒಂಟಿಯಾಗಿ ತಾನೇ ಸೊಪ್ಪೋ

ಗಂಜಿಯೋ ಬೇಯಿಸಿ ತಿನ್ನುತ್ತಾ ಕಾಲಹಾಕುತ್ತಿದ್ದಳು. ಜೀವನದಲ್ಲಿ ಮನುಷ್ಯರು–ಹೀಗೆ 'ನೀನೆ?' ಎನ್ನುವವರಿಲ್ಲದೆ– ಎಷ್ಟೋ ಸಲ ಬದುಕಬೇಕಾಗುತ್ತದೆನ್ನುವ ಚಿತ್ರ ನನಗೆ ಮೊದಲ ಬಾರಿಗೆ ಕಣ್ಣಿಗೆ ಕಟ್ಟಿದ್ದು ಕೂಡ ಅಲ್ಲೇ. ಯಾಕೆಂದರೆ ನಾನು ಬೆಳೆದ ಕೂಡು ಕುಟುಂಬದಲ್ಲಿ ಒಟ್ಟು ಸುಮಾರು 30-40 ಜನರು ಇದ್ದು ಅದರಲ್ಲಿ ಅರ್ಧದಷ್ಟು ಮಂದಿ ಮಕ್ಕಳು-ಹುಡುಗರೇ ಸದಾ ಗಿಜಗುಡುತ್ತಿದ್ದವು. ಈಗಲೂ ಕೂಡ ನನಗೆ, ನಿದ್ರೆಯಂಥ ಅತ್ಯಪೂರ್ವ ಮೈಮರೆವಿನ ಮಧುರ ಕ್ಷಣಗಳ ಹೊರತಾಗಿ ಒಂಟಿಯಾಗಿದ್ದು ಉಣ್ಣುವ, ತಿನ್ನುವ, ಕುಡಿಯುವ, ಯಾವುದೇ ಆಸೆಯ, ತೃಪ್ತಿಯ ಕ್ರಿಯೆಯಲ್ಲಿ ಮನಸ್ಸು ತೊಡಗಿಸಲು ಸಾಧ್ಯವಾಗುತ್ತಿಲ್ಲ. 'ಇಂಥ' ಹಿನ್ನಲೆಯ ನನಗೆ ನಾಥಮ್ಮ ಅಪೂರ್ವ ಮಾಂತ್ರಿಕ ಶಕ್ತಿಯ ಹೆಂಗಸಿನಂತೆ ಕಾಣುತ್ತಿದ್ದಳು. ಆ ಒಂಟಿತನದ ಉದ್ದಕ್ಕೂ ಅವಳು ತನಗೆ ಗೊತ್ತಿದ್ದ ಎಲ್ಲ ಹಾಡುಗಳನ್ನೂ ತನ್ನ ಪ್ರಿಯ ಸಂಗಾತಿಯನ್ನಾಗಿಸಿಕೊಂಡಿದ್ದಳು. ಸೋಬಾನದ ಒಸಗೆಯ, ಬೀಸುವ ಕಲ್ಲಿನ ಎಷ್ಟೋ ಪದಗಳನ್ನು ಹಾಡುತ್ತಿದ್ದಳು. ಒಂದು ಸಲ ತನ್ನ ಬದುಕಿನ ಮರೆಯಲಾಗದ ನೆನಪಿನ ವಿವರಗಳನ್ನು ಕುರಿತು ಇಷ್ಟು ಆತ್ಮೀಯವಾಗಿ, ತಾಳ್ಮೆಯಿಂದ ಕೇಳಿದವರೇ ಇಲ್ಲವೆಂದು ದೀರ್ಘವಾಗಿ ಕಣ್ಣೀರಿಟ್ಟಳು. ಯಾವಾಗಲೂ ಬಿಡುವಾಗಿಯೇ ಕೂತಿರುತ್ತಿದ್ದ ಆಕೆ ನಾನು ಹೋದಾಗಲೆಲ್ಲಾ ತುಂಬು ಉತ್ಸಾಹದಿಂದಲೇ ಹಾಡುಗಳನ್ನು ಹೇಳಿಕೊಟ್ಟಳು. ಎಷ್ಟೋ ಬೇಸಗೆಯ ದಿನಗಳಲ್ಲಿ ಅವಳಿಂದ ಹಾಡುಗಳನ್ನು ಬರೆದುಕೊಂಡೆ. ಮುಂದೆ ಯಾವುದೋ ಒಂದು ಬೇಸಿಗೆಯಲ್ಲಿ ಊರಿಗೆ ಬಂದಾಗ ಆಕೆ ತೀರಿಕೊಂಡಿದ್ದ ಸುದ್ದಿ ತಿಳಿಯಿತು: ಬಹಳಷ್ಟು ಬೇಕಾದವರೊಬ್ಬರು ಥಟ್ಟನೆ ಇಲ್ಲವಾದ ಅನುಭವ ಆಗ ನನಗಾಯಿತು.

ಬಿಲ್ಲನಕೋಟೆಯ ಲಕ್ಕಮ್ಮಜ್ಜಿಯಂತೂ ಕರ್ನಾಟಕದ ಶ್ರೇಷ್ಠ ಜನಪದ ಹಾಡುಗಾರ್ತಿಯರಲ್ಲಿ ಒಬ್ಬಳು. ನನ್ನ ಪಕ್ಕದ ತಾಲ್ಲೂಕಿನವರೇ ಆದ ಮಾಗಡಿ ಸುತ್ತಿನ ಶ್ರೀ ಸುಧಾಕರ ಅವರು ನನಗೆ ಅಧ್ಯಾಪಕರಾಗಿ, ಹಿರಿಯ ಮಿತ್ರರಾಗಿ ತುಂಬಾ ಬೇಕಾದವರು. ಅವರ ಶ್ರೀಮತಿಯವರಾದ ರಾಜಮ್ಮನವರು ತಮ್ಮ ತವರೂರಿನ ಈ ಲಕ್ಕಮ್ಮಜ್ಜಿಯನ್ನು ಪರಿಚಯಿಸಿದ್ದಲ್ಲದೆ, ವಾರಗಟ್ಟಲೆ ನನಗೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಅಲ್ಲೇ ಎಲ್ಲ ಬಗೆಯ ಉಪಚಾರಗಳೊಡನೆ ನೆರವಾದರು. ಊರಾಚೆಗೆ ದೊಡ್ಡ ಬಂಡೆಯೊಂದರ ಅಂಚಿಗೆ ಹೊಲದಲ್ಲಿ ಕಟ್ಟಲಾಗಿರುವ ವಿಸ್ತಾರವಾದ ಒಂಟಿ ಮನೆ; ಹಾಲುಮತದ ಆ ದೊಡ್ಡ



ಕೂಡುಕುಟುಂಬದಲ್ಲಿನ ಸದಸ್ಯರಲ್ಲಿ ನಾನೂ ಒಬ್ಬನಂತೆ ಆಗ ಪರಿಗಣಿತನಾಗಿದ್ದೆ. ವಿಶಾಲವಾಗಿದ್ದ ಅಟ್ಟದ ಮೇಲೆ ತಂಗಿ, ಹಗಲು ರಾತ್ರಿಗಳೆನ್ನದೆ ಕಣ್ಣಿಗೆ ನಿದ್ರೆ ಹತ್ತುವ ತನಕ ಲಕ್ಕಮ್ಮಜಿಯಿಂದ ಹಾಡುಗಳನ್ನು ಹೇಳಿಸಿ ನಾನು ಬರೆದುಕೊಳ್ಳುತ್ತಾ ಹೋದೆ. ಮತ್ತೆ ಎಚ್ಚರಾದರೆ ಹಾಡು ಬರವಣಿಗೆ. ಇಬ್ಬರಿಗೂ ಕೂತಲ್ಲಿಗೇ ಕಾಫಿ, ತಿಂಡಿ, ಊಟ : ಹಾಡು ಕೇಳಲು ಬರುವ ಜನಗಳು ಮಾತ್ರ ಆಗಾಗ ಬದಲಾಗುತ್ತಿದ್ದರು. ಒಂದೇ ಸಮನೆ ಕೂತು ಕೂತು ಎಂಟು ದಿನಗಳ ನಂತರ ಮೇಲೆದ್ದಾಗ ಕೈಕಾಲು ಆಡಿಸಲಾಗದೆ ವಿಶೇಷವಾಗಿ ಕೊರಳು, ಬೆನ್ನು ಮತ್ತು ಶರೀರ ಪೂರ್ತಿ ನೋವಿನಿಂದ ಆವೃತ್ತವಾಗಿ ಗಾಢನಿದ್ರೆಗೆ ಕಣ್ಣೆಳೆಯುತ್ತಿದ್ದವು. ಅದೇ ಅನುಭವದ ಬೆಳ್ಳಿಗೂದಲ ಲಕ್ಕಮ್ಮಜ್ಜಿ ಇದೆಲ್ಲಾ ಮುಗಿಸಿ ಹೊರಡುವಾಗ ಮುಖದ ಸುಕ್ಕುಗಳು ಕರಗುವಂತೆ ನಗೆಯರಳಿಸಿದಳು.

ಇದಾದ ಸುಮಾರು ಎಂಟು ವರ್ಷಗಳ ಮೇಲೆ 1977ರಲ್ಲಿ ಗೆಳೆಯ ಅಗ್ರಹಾರ ಕೃಷ್ಣಮೂರ್ತಿಯ ಜೊತೆಯಲ್ಲಿ ಕ್ಯಾಮರಾ ಮತ್ತು ಟೇಪ್‌ರೆಕಾರ್ಡರ್ ಹೊತ್ತು ಅದೇ ಅಜ್ಜಿಯ ಸಂದರ್ಶನಕ್ಕೆಂದು ಬಿಲ್ಲನಕೋಟೆಗೆ ಹೋದೆ. ಬೆಂಗಳೂರು-ತುಮಕೂರು ರಸ್ತೆಯ ಮಗ್ಗುಲಿನ ಈ ಹಳ್ಳಿಯಲ್ಲಿ ಬಸ್ಸು ಇಳಿಯುತ್ತಲೇ ಮೊದಲು ಅಲ್ಲೇ ಅಂಚಿನ ಅರೆಕಲ್ಲಿನ ಏರಿಳಿತಗಳಲ್ಲಿ ಎದ್ದಿರುವ ಗುಡಿಸಲುಗಳ ಮಾದಿಗರ ಹಟ್ಟಿಗೆ ನುಗ್ಗಿದೆವು. ಹಳೆಯ ನೆನಪಿನ ಮಂಜಿನಲ್ಲಿ ನುಸುಳಿ ಹೋಗುತ್ತಿದ್ದ ನನಗೆ ಯಾರೋ ಒಬ್ಬರು ಅಜ್ಜಿಯ ಗುಡಿಸಲಿನ ಕಡೆಗೆ ಕೈತೋರಿಸಿದರು. ಈ ಅವಧಿಯಲ್ಲಿ ಇನ್ನೂ ಹೆಚ್ಚಾಗಿದ್ದ ಮೊಮ್ಮಕ್ಕಳ ಜೊತೆಯಲ್ಲಿ ಈಗ ಬೆನ್ನು ತುಂಬಾ ಬಾಗಿದ್ದ ಆಕೆ ಹೊರಬಂದಳು; ತಡಮಾಡದೆ ನನ್ನ ಗುರುತು ಹಿಡಿದುದ್ದು ನೋಡಿ ಆಶ್ಚರ್ಯವಾಯಿತು. ಹರಕಲು ಸೀರೆಯಲ್ಲಿ ಆಕೆ ಹೊರಬಂದ ಮೊಮ್ಮಕ್ಕಳೊಡನೆ ಗುಡಿಸಲ ಹೊರಗೆ ನಿಂತ ಭಂಗಿಗಳನ್ನು ನಮ್ಮ ಕ್ಯಾಮರಾ ಸೆರೆಹಿಡಿಯಿತು. ಆ ಸಣ್ಣ ಗುಡಿಸಲಿಗೆ ಹೋಗಿ ಕೂರಬೇಕೆನ್ನುವ ನಮ್ಮ ಆಸೆಗೆ ಅಜ್ಜಿ ಅವಕಾಶಕೊಡದೆ, ಹಿಂದೆ ನಾನು ಉಳಿದುಕೊಂಡಿದ್ದ ಮನೆಗೇ ನಡೆಯಬೇಕೆಂದು ಅತ್ಯಾದರದಿಂದ ಒತ್ತಾಯ ಹೇರಿದಳು. ಊರಾಚೆಯ ಮನೆಯನ್ನು ನಾವು ತಲುಪಿದ ಕೊಂಚ ಹೊತ್ತಿನಲ್ಲಿಯೇ ಅಜ್ಜಿ ಅಲ್ಲಿಗೆ ಬಂದಳು. ಆ ಹಳೆಯ ಕೂಡುಕುಟುಂಬ ಈಗ ಅಣ್ಣತಮ್ಮಂದಿರ ನಾಲ್ಕೈದು ಸಣ್ಣ ಸಂಸಾರಗಳಾಗಿ ಒಡೆದಿತ್ತು : ಆಗಿನ ಎಳೆಯ ವಿಶ್ವಾಸದ ಹೆಣ್ಣುಮಕ್ಕಳೆಲ್ಲ ಗಂಡಂದಿರ ಮನೆ ಸೇರಿದ್ದರು; ಮುಗ್ಧ ಹುಡುಗರ

ತುಟಿ ಕೆನ್ನೆಗಳನ್ನು ಒರಟು ಗಡ್ಡಮೀಸೆಗಳು ಆವರಿಸಿದ್ದು ಅವರೆಲ್ಲ ತಂತಮ್ಮ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿದ್ದರು. ನಾನೂ ಒಬ್ಬ ಪುಟ್ಟ ಸಂಸಾರಸ್ಥನಾಗಿರುವುದು ನೆನಪಾಯಿತು. ಈ ಎಲ್ಲ ಬದಲಾವಣೆಗಳ ನಡುವೆ, ಮನೆಯೊಳಕ್ಕೆ ಮಾದಿಗರ ಅಜ್ಜಿಯ ಪ್ರವೇಶ ಇಲ್ಲದ್ದರಿಂದ ಕಿಟಕಿಯ ಹೊರಗೆ ವೈರ್ ಎಳೆದು ಕರೆಂಟ್ ತರುವ ಪಾಡುಪಟ್ಟು, ಆಕೆಯ ಮಾತುಕತೆಯನ್ನು ಧ್ವನಿಮುದ್ರಿಸಿಕೊಳ್ಳುವ ಹೊತ್ತಿಗೆ ನಮಗೆ ಸಾಕುಬೇಕಾಗಿ ಹೋಯಿತು. ಇಷ್ಟಕ್ಕೂ ಅಜ್ಜಿ ತಣ್ಣಗೆ ಸಾಕಷ್ಟು ಗೆಲುವಾಗಿಯೇ ಇತ್ತು. ನಮ್ಮ ಎಷ್ಟೋ ಪ್ರಶ್ನೆಗಳಿಗೆ ಆಕೆ ತಟತಟನೆ ನಿಸ್ಸಂಕೋಚವಾಗಿ ಉತ್ತರಿಸುತ್ತಾ ಹೋದಳು. ನನಗೆ ಇನ್ನೂ ಒಟ್ಟಿಗಿರುವ, ಮಾತಾಡುವ ಆಸಕ್ತಿ. ಆಕೆ ಆ ಈ ನೆಪಗಳನ್ನು ಹೇಳಿ ಮನೆಗೆ ಬೇಗ ಹೋಗಬೇಕೆನ್ನುವ ಒದ್ದಾಟಕ್ಕಿಳಿದಳು. ಆಗ ಸಂಜೆ ಸುಮಾರು ಐದು ಗಂಟೆಯಾಗಿತ್ತು. ಆಕೆಯ ತರಾತುರಿಗೆ ಕಾರಣಗಳನ್ನು ಕೇಳುತ್ತಾ ಹೋದಂತೆ-ಮೊಮ್ಮಕ್ಕಳ ಜವಾಬ್ದಾರಿಯ, ಮೇಕೆಯ ಉಸ್ತುವಾರಿಯ ಸಂಗತಿಗಳನ್ನೆಲ್ಲ ಹೇಳುತ್ತಾ-ಕೊನೆಗೆ, ಬೆಳಗಿನಿಂದಲೂ ಹೊಟ್ಟೆಗೆ ಏನೂ ತಿಂದಿಲ್ಲದ, ನಿಜಸ್ಥಿತಿಯನ್ನು ಸೂಚ್ಯವಾಗಿ ತಿಳಿಸಿದಳು. ಆಗ ನಾವು ಮೂಕರಾದೆವು; ಅಜ್ಜಿಯನ್ನು ತಡೆಯುವ ಮನಸ್ಸು ನಮಗೆ ಮಾಯವಾಗಿತ್ತು : ಮನಸ್ಸಿನಲ್ಲೇ ವಂದಿಸುತ್ತಾ ಬೆಂಗಳೂರಿನ ಬಸ್ಸು ಹಿಡಿದೆವು.

ಸಂಪೂರ್ಣ ಹರಿಜನರೇ ಇರುವ ಕುಂತೂರುದೊಡ್ಡಿ ಎನ್ನುವ ಹಳ್ಳಿ ನಮ್ಮ ತಾಲ್ಲೂಕಿನಲ್ಲಿ ನನಗೆ ತುಂಬಾ ಇಷ್ಟವಾದದ್ದು. ಕೆಲವು ಗೆಳೆಯರು ಅಲ್ಲಿನ ಸೋಬಾನದ ಕುಂಟಮ್ಮನ ಹಾಡುಗಾರಿಕೆಯ ಬಗ್ಗೆ ತಿಳಿಸಿದಾಗ ನಾನು ತಡಮಾಡದೆ ಹಾಜರಾದೆ. ಅಲ್ಲಿಗೆ ಸಾಕಷ್ಟು ಪರಿಚಯದವನೇ ಆಗಿದ್ದ ನನ್ನನ್ನು ಅಜ್ಜಿ ಆತ್ಮೀಯವಾಗಿ ಕಂಡರು. ಉಳಿದ ಹಳ್ಳಿಗಳಲ್ಲಿ ಸಾಮಾನ್ಯವಾಗಿ ನಾವು ಕೆಲವು ಗೆಳೆಯರು-ಹರಿಜನ ಬಂಧುಗಳೊಡನೆ ಬೆರೆತು ಉಣ್ಣುವ ತಿನ್ನುವ ಒಗ್ಗೂಡುವ ಕಾರ್ಯಗಳಿಗೆ ಕೈಹಚ್ಚಿದಾಗ ಅವರೆಲ್ಲರೂ ಸದಾ ಅದೇ ಹಳ್ಳಿಯ ಸವರ್ಣೀಯರ ಭಯದಲ್ಲಿದ್ದು ನುಣುಚಿಕೊಳ್ಳುವ, ಅಂಥ ಘಟನೆಗಳನ್ನು ಸಾಧ್ಯವಾದಷ್ಟೂ ಮುಂದೂಡುವ ಮಾರ್ಗಗಳನ್ನು ಹುಡುಕುತ್ತಿರುತ್ತಾರೆ. ಇಲ್ಲಿ ಅಂಥ ಆತಂಕದ ಸ್ಥಿತಿ ಇಲ್ಲದ್ದು ಕಂಡು ನನಗೆ ಆನಂದವಾಯಿತು. ಕುಂಟಮ್ಮ ತನ್ನ ಹಿಮ್ಮೇಳದ ಬಳಗದ ಜೊತೆ ಈ ನಿರಾಂತಕದಲ್ಲಿಮೂರು- ನಾಲ್ಕುದಿನಗಳ ಕಾಲ ತನ್ನಲ್ಲಿದ್ದ, ನಾನು ಇಷ್ಟಪಟ್ಟ ಹಾಡುಗಳನ್ನು ಹೇಳಿಕೊಟ್ಟಳು. ಸದಾ ಹಾಡಲು



ಹಾತೊರೆಯುತ್ತಿದ್ದ, ಬೆನ್ನು ಬಾಗಿಯೇ ನಡೆಯುತ್ತಿದ್ದ ಆ ಹಿರಿಯ ಜೀವ ಈಗಾಗಲೇ ಇನ್ನಿಲ್ಲವಾಗಿದೆ.

ರಾಮನಗರದ ತಾಲ್ಲೂಕಿನ ಜಯಪುರದಲ್ಲಿ ಹುಟ್ಟಿ ಬೆಳೆದ ಲಿಂಗಮ್ಮ ನನ್ನ ಊರಿನ ಹರಿಜನಕೇರಿಗೆ ಸೊಸೆಯಾಗಿ ಬಂದವರು. ಈಕೆ ತನ್ನ ಬಳಗದೊಡನೆ ಅತ್ಯಂತ ಇಂಪಾಗಿ ಹಾಡುತ್ತಾಳೆ. ಊರ ಜನಸಂಖ್ಯೆಯಲ್ಲಿ ಸುಮಾರು ಶೇಕಡಾ ಎಂಬತ್ತರಷ್ಟು ಇರುವ ಒಕ್ಕಲಿಗರು, ತಮಗಿಂತಲೂ ಚೆನ್ನಾಗಿ ಹರಿಜನಕೇರಿ ಮತ್ತು ಕುಂಬಾರಗೇರಿಯ ಜನ ಇಂಪಾದ ಕಂಠವುಳ್ಳವರೆಂದು ಆಗಾಗ್ಗೆ ಮೆಚ್ಚುಗೆ ಸೂಚಿಸುವುದನ್ನು ನಾನು ಕೇಳಿದ್ದೇನೆ. ಇದು ಕೇವಲ ಸತ್ಯ ಮತ್ತು ತಮಗಿಂತಲೂ 'ಕೀಳು ಜಾತಿ'ಯವರಲ್ಲೂ ಎಂಥ ವಿದ್ಯೆ ಇದೆ ಎನ್ನುವ- ಇಂಡಿಯಾದ ಜಾತಿಪದ್ಧತಿ ಗೋಪುರದ ಅಂತಸ್ತುಗಳ ಹಿನ್ನಲೆಯನ್ನು ಸೂಚಿಸುವ-ಗೌಡಿಕೆಯ ಬೆರಗುಗಳ ಸಂಗಮವಾಗಿರಬಹುದು. ನಾನೂ ಕೂಡ ನಮ್ಮ ಹರಿಜನ ಕೇರಿಯವರ 'ಕುಮಾರ ರಾಮ' ನಾಟಕ ಮತ್ತು ಕುಂಬಾರಗೇರಿಯವರು ಆಡುವ-ಸತ್ಯದ ಬೆನ್ನು ಹತ್ತಿ ಹೋದ ಕಾರಣಕ್ಕಾಗಿ ಸಂಕಷ್ಟಗಳ ಸುರಿಮಳೆ ಬಿರುಗಾಳಿಯಲ್ಲಿ ಮಡದಿ ಮಕ್ಕಳೊಡನೆ ನರಳುವ ರಾಜನೊಬ್ಬನ ಕಥಾವಸ್ತುವುಳ್ಳ ನಾಟಕಗಳನ್ನು ತನ್ಮಯವಾಗಿ ಎಷ್ಟೋ ರಾತ್ರಿಗಳಲ್ಲಿ ನೋಡಿದ್ದೇನೆ; ಸಣ್ಣಗೆ ಎತ್ತರವಾಗಿರುವ, ಮೈತುಂಬ ಸರಿಯಾದ ಬಟ್ಟೆ ಬರೆಗಳಿಲ್ಲದೆ, ಹಿರಿಕೆರೆಯಲ್ಲಿ ಗುಂಡಿ ತೋಡಿ ಮಣ್ಣು ಕಿತ್ತು ಚಳಿಯಲ್ಲೂ ಬೆವರು ಹರಿಯುವಂತೆ ಭಾರವಾದ ಹಸಿಮಣ್ಣಿನ ಪುಟ್ಟ ಗೋಪುರವನ್ನೇ ತಲೆಯಲ್ಲಿ ಹೊತ್ತು ಹಗಲು ಪೂರ್ತಿ ಮಡಕೆ-ಕುಡಿಕೆ-ಹೆಂಚು ಮಾಡುವ ಬಿಡುವಿಲ್ಲದ ಕಾರ್ಯದಲ್ಲಿ ತೊಡಗುವ ಕುಂಬಾರ ಕೆಂಚಣ್ಣ ರಾಜನ ಪಾತ್ರ ಮಾಡುತ್ತಾನೆ. ಸುಂದರ ಕೆಂಪು ಸಂಜೆ ಕ್ರಮೇಣ ತನ್ನ ಬಣ್ಣದ ಸರಕುಗಳನ್ನೆಲ್ಲಾ ಪ್ರದರ್ಶಿಸುತ್ತಾ ಬಿಕರಿ ಮಾಡಿಕೊಳುತ್ತಿದ್ದಂತೆಯೇ ಈತ ದೊಡ್ಡಿತಿಟ್ಟಿನ ಪಡಖಾನೆಯಿಂದ ರಂಗೇರಿ ಗೆಲವಿನಿಂದ ಹಿಂದಿರುಗುತ್ತಾನೆ. ನಾಟಕದ ರಾತ್ರಿಯಂತೂ ಕಲ್ಪನೆಯ, ಪುರಾಣದ ರಾಜನೇ ನೆಲಕ್ಕಿಳಿದಂತೆ ಹಾಡಿ, ಅಭಿನಯಿಸಿ ಪ್ರೇಕ್ಷಕರ ಕಣ್ಮನಗಳನ್ನು ತಣಿಸುತ್ತಾನೆ. ಇದೇ ರೀತಿ ಜಯಪುರದ ಲಿಂಗಮ್ಮ ವಿವಿಧ ಮಟ್ಟುಗಳಲ್ಲಿ ದನಿಯೇರಿಸಿ, ಇಳಿಸಿ, ಹಾಡಿ, ಕೇಳುಗರಿಗೆ ಕರ್ಣಾನಂದದ ಅನುಭವವನ್ನು ನೀಡುತ್ತಾಳೆ. ಆಕೆಯಿಂದ ನಾನು ಹಾಡುಗಳನ್ನು ಸಂಗ್ರಹಿಸುತ್ತಿದ್ದ ದಿನಗಳಲ್ಲಿ ಊರ ಹೆಂಗಸರೆಲ್ಲಾ ಒಂದುಗೂಡಿ ಬಾಯಿನ ಮೇಲೆ ಕೈಯಿಟ್ಟು ಬೆರಗಾಗುತ್ತಿದ್ದುದ್ದು ಸಾಮಾನ್ಯ ದೃಶ್ಯವಾಗಿರುತ್ತಿತ್ತು.

ಮಾನಸ ಗಂಗೋತ್ರಿಯಲ್ಲಿ ಎಂ.ಎ. ವಿದ್ಯಾರ್ಥಿಯಾಗಿದ್ದಾಗ-1970ರ ಆಚೀಚೆ- ಶನಿವಾರ ಭಾನುವಾರಗಳ ರಜಾದ ಜೊತೆಗೆ ಇನ್ನಷ್ಟು ದಿನಗಳನ್ನು ಸೇರಿಸಿಕೊಂಡು ಆಗಾಗ್ಗೆ ಹೀಗೆ ಜಾನಪದದ ನೆಪದಲ್ಲಿ ಹೊಸ ಊರುಗಳನ್ನು ಅಲೆಯುವ ಪ್ರಿಯಕಾಯಕದಲ್ಲಿ ತೊಡಗುತ್ತಿದ್ದೆ. ಗೆಳೆಯ ಬೆಸಗರಹಳ್ಳಿ ರಾಮಣ್ಣ ಆಗತಾನೆ ಸರ್ಕಾರಿ ವೈದ್ಯರಾಗಿ ನಾಗಮಂಗಲ ತಾಲ್ಲೂಕಿನಲ್ಲಿ ಸೇರಿಕೊಂಡಿದ್ದರು. ಆಗೊಂದು ಸಲ ಎಣ್ಣೆಹೊಳೆ, ಕ್ಯಾತನಹಳ್ಳಿ ಮತ್ತು ನಾನು-ದಿನವಿಡೀ ಸುತ್ತಮುತ್ತಲ ಆ ಒಣನೆಲದ ಹಳ್ಳಿಗಳನ್ನು ಉರಿಬಿಸಿಲಲ್ಲಿ ಅಲೆದೆವು. ಜನರ ನಂಬಿಕೆ, ಜೀವನ ವಿಧಾನ, ವ್ಯವಸಾಯ ಸಂಬಂಧದ ವೈವಿಧ್ಯ- ಯಾವುದೆಂದರೆ ಅದರ ಪರಿಶೀಲನೆ. ಹಾಗೆಯೇ ಹೊಕ್ಕು ಓಡಾಡುವ ನಮ್ಮ ವಿವಿಧೋದ್ದೇಶದ ಪರ್ಯಟನೆಯಲ್ಲಿ ಜೀಶಂಪ ಅವರ ಜೀರಹಳ್ಳಿಯ ಮನೆಯನ್ನೂ ಒಂದು ಸಲ ತಲುಪಿದ್ದೆವು : ಆ ಚಿಕ್ಕ ಮನೆಯ, ಕೋಣೆ (ಅಡಿಗೆ ಮಾಡುವ ಜಾಗ)ಯ ಸಮಸ್ತ ಐಶ್ವರ್ಯವೆಂದರೆ ಕೆಲವು ಮಡಿಕೆ-ಕುಡಿಕೆ-ಚೆಟ್ಟಿಗಳಷ್ಟೇ ಆಗಿದ್ದು-ಅದನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸುತ್ತಿದ್ದ ನಮ್ಮ ಹುಚ್ಚಾಟವನ್ನು ಕಂಡ ಜೀಶಂಪ ಅವರ ತಾಯಿ ಬೆರಗಾಗಿದ್ದರು : ಆ ಅಜ್ಜಿಯ ಅಂಥ ಸ್ಥಿತಿ ಒಳಗೆ-ಹೊರಗೆನ್ನದೆ ಹಗಲೂ ಇರುಳು ಸದಾ (ನಿದ್ರೆಯ ಅವಧಿಯ ಹೊರತಾಗಿ) ಒಂದಲ್ಲ ಒಂದು ಬಗೆಯ ದುಡಿಮೆಯಲ್ಲಿ ಕರಗಿರುವ, ಕರುಬು ಕಾಣದ ಗ್ರಾಮೀಣ ಇಂಡಿಯಾದ ವೈಶಿಷ್ಟ್ಯಪೂರ್ಣ ಪ್ರಾತಿನಿಧಿಕ ಸ್ವರೂಪದಂತೆ ನನಗಾಗ ಕಂಡಿತು.

ಅದೇ ಸಮಯದಲ್ಲಿ ಮತ್ತೊಮ್ಮೆ ಜೊತೆಗೆ ಬಂದಿದ್ದವರು ಕ್ಯಾತನಹಳ್ಳಿ ರಾಮಣ್ಣ. ಹೊರಟಿದ್ದುದ್ದು, 1933 ಹೊತ್ತಿಗಾಗಲೇ ತಮ್ಮ ಹುಟ್ಟೂರಿನ ಜಾನಪದದ ಹಲವು ಹತ್ತು ಮುಖಗಳನ್ನು ಯಶಸ್ವಿಯಾಗಿ ಸೆರೆಹಿಡಿದಿದ್ದ ಕೆ.ಆರ್.ಪೇಟೆ ತಾಲ್ಲೂಕಿನ ಬಂಡಿಹೊಳೆ ಗ್ರಾಮದ ಅರ್ಚಕ ಬಿ. ರಂಗಸ್ವಾಮಿಯವರನ್ನು ಮತ್ತು ಆ ಪ್ರದೇಶವನ್ನು ನೋಡುವ ಉದ್ದೇಶದಿಂದ. ಬಂಡಿಹೊಳೆಯ ಬಲಮಗ್ಗುಲಲ್ಲಿ ಉದ್ದಕ್ಕೂ ತಾಯಿ ಕಾವೇರಿ ಪೂರ್ವದಿಂದ ಪಶ್ಚಿಮಕ್ಕೆ ಬಹಳ ದೂರ ತಂತಾನೆ (ಶ್ರೀರಂಗಪಟ್ಟಣದ ಬಳಿ ಮುಂದೆ ಇದೇ ಕಾವೇರಿ ಕೊಂಚ ದೂರ ಪಶ್ಚಿಮಕ್ಕೆ ಹರಿಯುವಿಕೆಯು ಈಚಿನ ಕೃತಕ ವಿಧಾನಗಳಿಂದ ಆದುದ್ದೆಂದು ರಂಗಸ್ವಾಮಿಯವರು ತಣ್ಣಗೆ, ಆನಂದದಿಂದ ನನಗೆ ವರ್ಣಿಸಿದರು.) ನಯನ ಮನೋಹರವಾಗಿ, ಮಂಜುಳನಾದದೊಡನೆ ಹರಿಯುತ್ತಾಳೆ. ಪಕ್ಕದಲ್ಲೇ ಹೇಮಗಿರಿಬೆಟ್ಟ; ಆ ಬೆಟ್ಟದ ಗುಡಿಯಲ್ಲಿ



ರಂಗಸ್ವಾಮಿ ಅರ್ಚಕರು. ಕೃತಕತೆ ಕಪಟಗಳ ಸೋಂಕನ್ನೂ ಅರಿಯದ ಆ ಮುಗ್ಧವ್ಯಕ್ತಿ ಹಾಸಲು ಮತ್ತು ಹೊದೆಯಲು ಸಾಕುಬೇಕಾದಷ್ಟಿರುವ ಬಡತನದ ನಡುವೆಯೂ ಹುಟ್ಟಿನಿಂದ ಮೇಲುವರ್ಣದವರಾದ ಇವರು-ಊರಿನ ಶೂದ್ರಾತಿಶೂದ್ರರ ಜೀವನಕ್ರಮದ ಬಗ್ಗೆ ಅಧ್ಯಯನ ನಡೆಸುವ ಆಸಕ್ತಿ ಮತ್ತು ಹೇರಳ ಕುತೂಹಲದ ನಿರ್ಲಿಪ್ತ ದೃಷ್ಟಿಕೋನ ಬೆಳೆಸಿಕೊಂಡಿರುವುದು ತೀರಾ ಅಪರೂಪದ ಸಂಗತಿಯಾಗಿದೆ. "ಹುಟ್ಟಿದಹಳ್ಳಿ-ಹಳ್ಳಿಯ ಹಾಡು" ಪುಸ್ತಕವನ್ನು ಯೂನಿವರ್ಸಿಟಿಯ ವಿದ್ವಾಂಸರಲ್ಲದ, ಅಷ್ಟೇನೂ ಬೆಳಕಿಗೆ ಬಾರದ ಸಾಮಾನ್ಯ ವ್ಯಕ್ತಿಯಾದ ತಾವು ಕಷ್ಟದಲ್ಲಿ ಹಣ ಜೋಡಿಸಿಕೊಂಡು-ಮೈಸೂರಲ್ಲಿ ಅಲೆದು ಯಾವುದೊ ಪ್ರೆಸ್ ಹುಡುಕಿ ಅಚ್ಚು ಹಾಕಿಸಿದ ವಿವರಗಳನ್ನು ತಿಳಿಸಿದರು. ತಮ್ಮ ಊರಿನ ಪ್ರಮುಖವೆನ್ನಿಸಿದ ಭಾಗಗಳನ್ನು, ವೀರಗಲ್ಲುಗಳನ್ನು ; ಆ ಕಾಲದಲ್ಲಿ ತಾವು ಬೇರೆ ಬೇರೆ ಜನಪದ ಕಲಾವಿದರನ್ನು ಕಂಡು ಅವರಿಂದ ಸಾಹಿತ್ಯ, ವಿವರ ಸಂಗ್ರಹಿಸಿದ ಮನೆಗಳನ್ನು ಇನ್ನೂ ಬದುಕುಳಿದಿದ್ದ ಕಲಾವಿದರನ್ನು ತೋರಿಸುತ್ತಾ ತುಂಬು ಆತ್ಮೀಯತೆಯಿಂದ ವಿವರಿಸಿದರು.

ಅಲ್ಲೇ ಹೈಸ್ಕೂಲಿನಲ್ಲಿ ಅಧ್ಯಾಪಕನಾಗಿದ್ದ ನನ್ನ ಹಳೆಯ ಸಹಪಾಠಿಯೊಬ್ಬನಂತೂ ನಾನು ಆ ಊರಿಗೆ ಬಂದುದ್ದು ಕಂಡು ಪರಮಾನಂದಭರಿತನಾಗಿದ್ದ. ಹಣೆಯಲ್ಲಿ ನಾಮ ಇಲ್ಲದೆ ಹೊರಗೆ ಅಡ್ಡಾಡಲು ನಾಚುತ್ತಿದ್ದ ಆ ಮಡಿವಂತ ಅಯ್ಯಂಗಾರ್ ಮಿತ್ರ ನನ್ನ ಮೇಲೆ ಅಪಾರ ಅಭಿಮಾನದ ಮಳೆಗರೆಯತೊಡಗಿದ : ನನಗಾಗಿ ಶಾಲೆಯ ಪಕ್ಕದ ಯಾವುದೋ ಮನೆಯಲ್ಲಿ ಆತ ಶೂದ್ರಭೋಜನದ ವ್ಯವಸ್ಥೆಯನ್ನೂ ಮಾಡಿದ್ದಂತೆ ನೆನಪು. ಹಾಗೆಯೇ ಅಲ್ಲಿನ ಯಾವುದೋ ಮನೆಯಲ್ಲಿ ನಾನೊಂದು ಹೆಣ್ಣು ನೋಡಬೇಕೆಂದು ಉತ್ಸಾಹದಿಂದ ಪೀಡಿಸತೊಡಗಿದ. ಈ ಸುತ್ತಿನ ಹಳ್ಳಿಗಳಲ್ಲಿ ಜನಪದ ಸಾಹಿತ್ಯ ಸಂಗ್ರಹಿಸಬೇಕೆನ್ನುವ ನಮ್ಮ ಪ್ರಧಾನ ಅಭಿಲಾಷೆಯನ್ನು ಆತನ ನೆನಪಿಗೆ ತಂದಾಗ, ಕೂಡಲೇ ಎರಡು ಸೈಕಲ್ ತರಿಸಿಕೊಟ್ಟು ಕೆಲವು ಹಳ್ಳಿಗಳ ವಿವರ ನೀಡಿದ. ಮಧ್ಯಾಹ್ನ ಸುಮಾರು ಮೂರು ಗಂಟೆ ಸಮಯದಲ್ಲಿ ನಾನು ಮತ್ತು ರಾಮಣ್ಣ ಸೈಕಲ್ ಹತ್ತಿ ವೇಗವಾಗಿ ಹೊರಟು ವಡ್ಡರಹಳ್ಳಿ ತಲುಪಿದೆವು. ಊರಿಗೆ ಹೊಸಬರಾದ ನಮ್ಮನ್ನು ಅಲ್ಲಿ ಕೇಳುವವರೇ ಇರಲಿಲ್ಲ. ಕೆಲಸವಿಲ್ಲದ ಕೆಲವು ಅಲಸಿಗರು ಮಾತ್ರ 'ಕೇಳಿದರೂ' ನಮ್ಮ ಮೇಲೆ ಯಾವುದೋ ಒಳಗುಮಾನಿಯೊಂದನ್ನು ಬಚ್ಚಿಟ್ಟುಕೊಂಡೇ ಇರುತ್ತಿದ್ದರು. ಅದನ್ನೆಲ್ಲಾ ಮಾತುಕತೆಯ ಮೂಲಕ


ಪರಿಹರಿಸುತ್ತಾ ಕಾಣದ ಊರಿನಲ್ಲಿ ಕತ್ತಲಾಗುತ್ತದಲ್ಲ ಅನ್ನುವ ಆತಂಕದಿಂದ ಹಾಡುವವರ ಬಗ್ಗೆ ವಿಚಾರಿಸಿದಲ್ಲಿ, ಅವರು ಹೊಲಕ್ಕೋ ದನಕರುಗಳ ಹಿಂದೆಯೋ ಹೋಗಿರುತ್ತಿದ್ದರು. ಆ ಊರಿನ ದೊಂಬಿದಾಸರ ಮನೆಯೊಂದಕ್ಕೆ ಬಂದೆವು. ಅಲ್ಲಿದ್ದವರಿಂದ ಯಾವ ಯಾವ ಹಾಡು ಹೇಳುತ್ತಾರೆಂದು ಮಾಹಿತಿ ತೆಗೆದುಕೊಂಡೆವು. ಹಾಡುವ ಸಾಲಮ್ಮ ಅಲ್ಲೇ ಪಕ್ಕದ ಹಳ್ಳದ ದಂಡೆಯಲ್ಲಿ ಎಮ್ಮೆಗಳನ್ನು ಕಾಯಲು ಹೋಗಿರುವುದಾಗಿ ಹೇಳಿದರು. ಅಲ್ಲಿಗೇ ಹುಡುಕಿಕೊಂಡು ಹೋಗುವ ತೀರ್ಮಾನ ತೆಗೆದುಕೊಂಡೆ ; ಸಿಗರೇಟಿನ ಚಟದ ಮೌನಿ ರಾಮಣ್ಣ ಯಾವುದಕ್ಕೂ ಬೇಡ ಅನ್ನುತ್ತಿರಲಿಲ್ಲ. ಸಾಲಮ್ಮಜ್ಜಿಗೆ ದೂರ 'ದೇಶ'ದ ಜನ ಇಲ್ಲೆಲ್ಲಾ ನನ್ನನ್ನು ಹುಡುಕಿ ಬಂದಿದ್ದಾರಲ್ಲ ಅನ್ನುವ ಆಶ್ಚರ್ಯ. ನಾನು ಅಲ್ಲೇ ಕೂತು **'ಕೊಣವೇಗೌಡ'** ಎಂಬ ಕಡುಜಿಪುಣನೊಬ್ಬನನ್ನು ಅಸಾಧಾರಣವಾಗಿ ಗೇಲಿ ಮಾಡುತ್ತ ಸಾಗುವ ಕಥಾವಸ್ತುವಿನ ಲಾವಣಿಯೊಂದನ್ನು ಬರೆದುಕೊಂಡೆ; ರಾಮಣ್ಣ ಯಾರ ಸೂಚನೆಯನ್ನೂ ಇಚ್ಛಿಸದೆ ಬೆಳೆಗೆ ಬಾಯಿಕ್ಕುವ ಎಮ್ಮೆಗಳ ಉಸ್ತುವಾರಿಯನ್ನು ಆಗಲೇ ನಿರ್ವಹಿಸುತ್ತಿದ್ದರು. ಕತ್ತಲು ಕವಿಯುತ್ತಿದ್ದಂತೆ ಅಜ್ಜಿಯೊಡನೆ ಊರು ತಲುಪಿದೆವು.

ಮುಂದಿನ ಹಳ್ಳಿಯೊಂದರಲ್ಲಿ ಚೆನ್ನಾಗಿ ಹಾಡುವವರಿದ್ದಾರೆಂದು ತಿಳಿಸಿ ಆ ಊರಿನವರು ನಮ್ಮನ್ನು ಬೀಳ್ಕೊಟ್ಟರು. ಆಗಲೇ ತುಂಬಾ ಕತ್ತಲಾಗಿದ್ದು ಹೆಜ್ಜೆಗಳು ಸವೆಸಿರುವ ಕಾಲುದಾರಿಯ ಬೋಳು ಗುರುತನ್ನು ಕಣ್ಣುಗಳಲ್ಲಿ ಅಗೆಯುತ್ತಾ ಸೈಕಲ್ ತುಳಿಯಬೇಕಾಗುತ್ತಿತ್ತು. ಆ ನೀರವ ಮೌನದ ಇರುಳಿನಲ್ಲಿ ಎಷ್ಟು ದೂರ ಸಾಗಿದರೂ ಮನೆಗಳ ಅಥವಾ ಬೆಳಕಿನ ಸುಳಿವೇ ಕಾಣಲಿಲ್ಲ. ಹಳ್ಳ-ದಿಣ್ಣೆ-ಕೊರಕಲುಗಳೆನ್ನದೆ ಯಾವ ದಿಕ್ಕು ಊರುಗಳೆನ್ನುವ ಗಮನವಿಲ್ಲದೆ ದಾರಿ ಕರೆದೊಯ್ದು ಕಡೆಗೆ ಒಂದೇ ಸಮನೆ ಹೋದೆವು. ಆ ದಾರಿ ಮುಂದೆ ಕೆಲವು ಗುಡಿಸಲುಗಳ ನಡುವೆ ಹಾದು ಹೋಗುತ್ತಿತ್ತು. ಅಲ್ಲಿ ಇಳಿದು ಏದುಸಿರು ಬಿಡುತ್ತಾ ನಿಂತೆವು. ಹೊರಗೆ ಯಾರೂ ಕಾಣಲಿಲ್ಲ. ಪಕ್ಕದ ಗುಡಿಸಲಿಗೆ ಹೋಗಿ ಕರೆದು ಪರಿಚಯ ಹೇಳಿಕೊಳ್ಳುತ್ತಾ ನಮ್ಮ ಉದ್ದೇಶ ವಿವರಿಸಿದೆವು. ಪರಿಸ್ಥಿತಿ ಯಾವ ರೀತಿಯಿಂದಲೂ ಉತ್ತೇಜನಕಾರಿಯಾಗಿರಲಿಲ್ಲ. ಮುಂಚಿತವಾಗಿ, ಬಿಡುವಾಗಿ ಅವರಿಗೆ ತಿಳಿಸದೆ-ಕತ್ತಲಲ್ಲಿ, ನಿಂತ ಹೆಜ್ಜೆಯಲ್ಲಿ ಎಲ್ಲವೂ ಆಗಬೇಕೆನ್ನುವ ಭ್ರಮೆಯೂ ನಮಗಿರಲಿಲ್ಲ. ಅಮವಾಸ್ಯೆಯ ಹತ್ತಿರದ ಈ ದಿನಗಳಲ್ಲಿ ಹೊಸಬರಾದ ನೀವು ರಾತ್ರಿ ಯಾರೂ ಸುಳಿಯದ ಈ ದಾರಿಯಲ್ಲಿ



ಹೇಗೆ ಬಂದಿರೆಂದು ಆ ಜನ ನಮ್ಮನ್ನು ಕೇಳುತ್ತಾ ನೀರು ನಿಡಿ ಕೊಟ್ಟು ಉಪಚರಿಸಿದರು. ಹೇಮಗಿರಿಗೆ ನೀವು ಹೋಗುವುದಾದಲ್ಲಿ ಈಗ ಬಂದ ಹಾದಿಯಲ್ಲಿ ಮಾತ್ರ ಬೇಡವೆಂದು ಹೇಳಿ ಬೇರೊಂದು ಬಳಸು ದಾರಿಯನ್ನು ಸೂಚಿಸಿದರು. ಇಲ್ಲ ಪರವಿಲ್ಲ ನಾವು ಬಂದ ಹಾಗೇ ಹಿಂದಿರುಗುತ್ತೇವೆ ; ಏನೂ ಗಾಬರಿಪಡಬೇಡಿ-ಅನ್ನುತ್ತಾ ನಾನು ಸೈಕಲ್ ಹತ್ತಿ ಹಾಗೆಯೇ ರಾಮಣ್ಣ ಈಗೇನು ಮಾಡುತ್ತಿರಬಹುದೆಂದು ಆ ಕತ್ತಲಲ್ಲಿ ಹಿಂದಿರುಗಿ ನೋಡಿದೆ : ಅವರು ಕಿಂಚಿತ್ತೂ ತಡಮಾಡದೆ ತಮ್ಮ ವಾಹನವನ್ನು ಏರತೊಡಗಿದ್ದರು.

ಇನ್ನು ನನಗೆ ತೀರಾ ಪರಿಚಿತರಾಗಿರುವ ಚಿಕ್ಕತಾಯಕ್ಕ, ತಿಮ್ಮಕ್ಕ, ಚಿಕ್ಕಮ್ಮ-ಮುಂತಾದ ಹಾಡುಗಾರ್ತಿಯರಿಂದ ನನಗೆ ಬೇಕೆನಿಸಿದ ಹಾಡುಗಳನ್ನು ಅವರ ಮತ್ತು ನನ್ನ ಬಿಡುವಿನ, ಅನುಕೂಲದ ಹೊತ್ತು ನೋಡಿ ಸಂಗ್ರಹಿಸಿದ್ದೇನೆ. ದೊಂಬಿದಾಸರ ಹಾಡುಗಳನ್ನು ಹೇಳುತ್ತಾ ಊರೂರ ಮೇಲೆ ಹೊರಟ ಮರಿಯಪ್ಪ ತೀರಾ ಆಕಸ್ಮಿಕವಾಗಿ ನನ್ನೂರಿನಲ್ಲಿ ಸಿಕ್ಕಿ, ಕೆಲವು ಗಂಟೆಗಳ ಕಾಲ ನನ್ನೊಡನಿದ್ದು ತಮಗೆ ಗೊತ್ತಿದ್ದ ಕೆಲವು ಲಾವಣಿಗಳನ್ನು ಹೇಳಿಕೊಟ್ಟರು. ಆಗಾಗ ನನ್ನನ್ನು ಕಾಣಲು ಬರುವ ಕಾಡುಗೊಲ್ಲರ ತಿಮ್ಮಯ್ಯ ತೀರಾ ಬಿಡುವಾಗಿ ಕೂತು ಕೋಲಾಟದ ಬಿಂಗಿಪದಗಳನ್ನು ಹಾಡಿ ಆ ಬಗೆಗಿನ ಅರ್ಥವಿವರಣೆಗಳನ್ನು ನೀಡಿದರು. ನಮ್ಮ ಪಕ್ಕದ ದಶವಾರದ ಕಟ್ಟಮ್ಮ ಎಂಬ ಕಲಾವಿದೆ ರಾಮಾಯಣಕ್ಕೆ ಸಂಬಂಧಿಸಿದ ತ್ರಿಪದಿಗಳನ್ನು ತುಂಬಾ ಮಧುರವಾಗಿ ಹಾಡುತ್ತಿದ್ದಳು; ನಾನು ಹಾಗೆಯೇ ತನ್ಮಯನಾಗಿ ಬರೆದುಕೊಳ್ಳುತ್ತಿದ್ದೆ. ಹಾಡು ಮುಗಿಯುತ್ತಿದ್ದಂತೆ ಕಾಣಿಸಿ, ನಾನು ಬರೆದುಕೊಳ್ಳುವುದನ್ನು ನಿಲ್ಲಿಸಬೇಕೆಂದಿದ್ದೆ. ಆದರೆ ಹಾಡು ಹೊಸಮಟ್ಟಿನಲ್ಲಿ ಮುಂದುವರಿಯುತ್ತಿದ್ದು ಹಾಡುಗಾರ್ತಿಯ ಮುಖದಲ್ಲಿ ಮುಗುಳ್ನಗೆ ಉಕ್ಕುತ್ತಿತ್ತು. ಆಕೆ ಇನ್ನೂ ಇದೆ ಎನ್ನುವಂತೆ ಹಾಡುಹಾಡುತ್ತಲೇ ತುಂಟತನದಿಂದ ಕೈಸನ್ನೆ ಮಾಡುತ್ತಿದ್ದಳು. ನನಗೆ ಏನೂ ಅರ್ಥವಾಗದೆ ಎರಡು ತ್ರಿಪದಿಗಳನ್ನು ಮಾತ್ರ ಬರೆದುಕೊಂಡು ಉಳಿದುದ್ದನ್ನು ಹಾಗೆಯೇ ನಿಲ್ಲಿಸಿಬಿಟ್ಟೆ. ಆ ಸಾಲುಗಳು ಬರೆದುಕೊಳ್ಳುತ್ತಿದ್ದವನನ್ನು ಕುರಿತವುಗಳೆಂದು ನನಗೆ ಆಗ ಹೊಳೆಯಿತು. ಅವು, ಆಳದಲ್ಲಿ ಕೀಳರಿಮೆಯನ್ನು ಹೊತ್ತ ಮನಸ್ಸುಗಳು ಸಹಜವಾಗಿಯೆನ್ನುವಂತೆ ತಮ್ಮ ಧಣಿಯನ್ನು ಕುರಿತು ಹಾಡುವ ಪದಗಳಿರಬೇಕೆಂದು ನಾನು ಕ್ಷಣಕಾಲ ನಡುಗಿದೆ ; ನನ್ನಿಂದ ಯಾವ ಫಲಾಪೇಕ್ಷೆಯೂ ಇಲ್ಲದೆ ಆ ಅಪರಿಚಿತ ಹಾಡುಗಾರ್ತಿ ನಾನು ಎಂದೂ ಮರೆಯಲು ಸಾಧ್ಯವಾಗದಂತೆ




ಸುಂದರವಾದ ಆತ್ಮೀಯ ನಗೆ ನಕ್ಕು ಹಾಡುತ್ತಿದ್ದಳು. ಈ ಬಗೆಯ ಸನ್ನಿವೇಶಗಳು ಕ್ಷೇತ್ರಕಾರ್ಯದ ನಡುವೆ ಸಂಭವಿಸುವ ಉದಾಹರಣೆಗಾಗಿ ಇರಲಿ ಎನ್ನುವ ಏಕೈಕ ಕಾರಣದಿಂದ ಮಾತ್ರ ನಾನು ಈ ಕೃತಿಯಲ್ಲಿ ಆ ತ್ರಿಪದಿಗಳನ್ನು ಉಳಿಸಿಕೊಂಡಿದ್ದೇನೆ.

ಜನಪದ ಕಲಾವಿದರೊಡನೆ ಆತ್ಮೀಯವಾದ ಸಂಬಂಧವನಿಟ್ಟುಕೊಳ್ಳುತ್ತಾ-ನಿರಾಳವಾಗಿ ಹಾಡಿಸಿ, ವಿವರ ಪಡೆಯುತ್ತಾ; ಒಟ್ಟು ಬದುಕನ್ನು ಕುರಿತ ದೃಷ್ಟಿಕೋನದ ಬಗ್ಗೆಯೂ ಚರ್ಚಿಸಿ ಪರಸ್ಪರ ಬೆರೆಯುವ ಕ್ಷಣಗಳು ಮಧುರವಾಗಿರುತ್ತವೆ. ನಮ್ಮ ಒಣಹಮ್ಮು, ದರ್ಪಡೌಲು, ಅಕ್ಷರದ ದೌಲತ್ತುಗಳನ್ನು ಬದಿಗೊತ್ತಿ, ಕೇವಲ ಮನುಷ್ಯತ್ವದ ಎಚ್ಚರಿಕೆಯ ತೆರೆದ ಕಣ್ಣುಗಳಿಂದ ನಾವಲ್ಲಿ ಮುಳುಗಿದಲ್ಲಿ ಮಾತ್ರ ಜನ ಸಮುದಾಯದ ಮುಕ್ತ ಹಾಗೂ ಸುಪ್ತ ಮನಸ್ಸಿನ ಸಾಕ್ಷಾತ್ ದರ್ಶನಕ್ಕೆ ಅವಕಾಶವಾಗುತ್ತದೆ.

**- ಕಾಳೇಗೌಡ ನಾಗವಾರ**

(೧೯೭೯)





## ಜನಪದ ಹಾಡುಗಾರ್ತಿ ದಾನಮ್ಮನ ಜತೆಯ ಸಂದರ್ಶನ

ಹದಿನೇಳು ಭಾಗಗಳ ಮದಗದ ಕೆಂಚವ್ವ ಕಥನಗೀತೆಯನ್ನು ಹಾಡಿವಳು ದಾನಮ್ಮ. ಬೋವಿ ಜನಾಂಗದ ದಾನಮ್ಮನ ಸ್ಥಳ ಚಿತ್ರದುರ್ಗದ ಕೆಳಗೋಟೆ. ದಾನಮ್ಮನ ಪತಿಯ ವೃತ್ತಿ ಕಲ್ಲುಕುಟ್ಟುವುದು ಮತ್ತು ಗಾರೆ ಕೆಲಸ. ಒಂಬತ್ತು ಮಕ್ಕಳ ತಾಯಿಯಾದ ದಾನಮ್ಮ, ತನ್ನ ಕುಟುಂಬದ ದಾರುಣವಾದ ಬಡತನದ ನಡುವೆಯೂ ಅಪರಿಮಿತ ಜೀವನೋತ್ಸಾಹದಿಂದ ಹತ್ತಾರು ಧೀರ್ಘ ಕಥನಗೀತೆಗಳನ್ನು ನಿರಂತರವಾಗಿ ಹಾಡುತ್ತಾಳೆ. ಇಂಥ ಅಪರೂಪದ ಜಾನಪದ ಪ್ರತಿಭೆ ದಾನಮ್ಮನನ್ನು ಜಾನಪದ ವಿದ್ವಾಂಸ ಕೃಷ್ಣಮೂರ್ತಿ ಹನೂರು ಸಂದರ್ಶನ ಮಾಡಿದ್ದಾರೆ. ದಾನಮ್ಮನ ಆತ್ಮಕಥೆಯಂತಿರುವ ಈ ಸಂದರ್ಶನ, ನಮ್ಮ ಜನಪದ ಕಲಾವಿದರ ನೋವು-ನಲಿವು ಹಾಗೂ ಅವರ ಅಂತರಾಳದಲ್ಲಿರುವ ಅಸಾಧಾರಣ ಪ್ರತಿಭೆಯನ್ನು ತೆರೆಯುತ್ತದೆ.

**ದಾನಮ್ಮ ನಿನ್ನ ಮತ ಯಾವ್ದು?**

ಬೋವಿ ಮತಸ್ತ್ರ ಸ್ವಾಮಿ ನಮುದು. ಕಂಸಾಳ್ರ ಮಲ್ಲಪ್ಪ ನಮ್ಮಪ್ಪ. ನಮ್ಮನಿಯವ್ರೆಸ್ರು ತಿಮ್ಮಪ್ಪಂತ. ಅವ್ರು ಕಲ್ಲುಗಾರೆ ಕೆಲ್ಸಾವ ಮಾಡ್ಕಂಡಿದ್ರು ಸ್ವಾಮಿ.

**ನಿವ್ ಸಂಸಾರ್ದಲ್ಲಿ ಯಾರ್‍ಯಾರು ಇದ್ದೀರಿ ?**

ವಂಬತ್‌ಜನ ಮಕ್ಳು, ಯೋಳು ಗಂಡು, ಎರ್‍ಡು ಎಣ್ಮಕ್ಳು. ಎರ್‍ಡು ತೀರ್ಕಂಡೊ. ಈಗ ಐದ್ಗಂಡವೆ. ಎರ್ಡೆಣ್ಣವೆ. ಕೂಲಿಮಾಡದೊಂದೇಗತಿ ಸ್ವಾಮಿ. ಆಸ್ತಿಲ್ಲ ಪಾಸ್ತಿಲ್ಲ ಏನ್ಮಾಡನ ? ಕೂಲಿ ನಾಲಿ ಮಾಡಿ ವಟ್ಟೆವರಿಯದು...

**ನೀನು ಸಂಸಾರಸ್ಥ್ಳಾಗಿ ಎಸ್ಟ್‌ದಿನ ಆಯ್ತು ದಾನಮ್ಮ?**

ಅನ್ನೆರ್‍ಡು ವರ್ಸಕ್ಕೆ ನಂಗೆಲಗ್ನ ಆಯ್ತು. ಆಗಿನ್ನು ನೆರ್‍ತಿರ್‍ಲಿಲ್ಲ. ಆಮೇಲ್ ಮೂರ್‍ನಾಕ್ ತಿಂಗ್ಳಗೆ ನೆರ್‍ತೆ. ನೆರ್‍ತ್ ಆದ್ನಾರ್ನೆ ದಿನ್ಕೆ ಆಸ್ಗೆ ಕೊಟ್ರು. ಆಸ್ಗೆ ಕೊಟ್ಮೇಲೆ ಒಂದ್ ಸೂತ್ಕ ಆದೆ. ಒಂದ್ಮಗ ಆಯ್ತು ಸ್ವಾಮಿ. ಆವುನ್ಗೆ ಈಗ ಇಪ್ಪತ್ತೆರ್‍ಡು ವರ್ಸ.

**ಆ ಮೇಲೆ ಎಂಟ್ಜನ ಮಕ್ಳಾದ್ರಲ್ವೆ ?**

ಊಕಣ್‌ಸ್ವಾಮಿ. ಒಂದು, ಎರ್‍ಡು, ವರ್ಸಕ್ಕೊಂದೊಂದ್ ಸಲ ತೊಟ್ಲು ತೂಗ್ದೆ. ಕೂಸು ತ್ವಡೆಬುಟ್ಟ ಆಡಂಗಾದ್ರೆ ವಟ್ಯಾಕೊಂದು ಕೂಸು ಬೀಳ್ತಿತ್ತು! ಅಂಗೇ ಮಕ್ಳಾಗಿ ಎರ್‍ಡ್ ಮಾತ್ರ ದಡಾರ ಆಗಿ ತೀರೋಗ್ಬುಟ್ವು...

**ದಾಸಮ್ಮ ಆ ಎರ್‍ಡುಮಕ್ಳು ತೀರ್ಕಂಬಾರ್ದಿತ್ತು ಅಲ್ವ ? ಇದ್ದಿದ್ರೆ ಚೆನ್ನಾಗಿತ್ತು.**

ಅವುದು ಸ್ವಾಮಿ, ನೀವೇನ್ ತಿಳಿದೋರು ! ಎತ್ತವ್ನ ಕಣ್ಮುಂದೆ ವುಟ್ಟುದು ಕೂಸು ಸಾಯದು ಅಂದ್ರ ತಡ್ಕಮದೆಂಗ್ ಸ್ವಾಮಿ. ಒಂದ್ ಗುಬ್ಬಚ್ಚಿ ಸೈತ ಮಕ್ಳ ಸಾಯದ ಕಂಡು ಬಾಯಿ ಬಾಯಿ ಬಡ್ಕಮ್‌ತೈತೆ. ನಮ್ಮಕ್ಳು ಸಾಯದ ನಾವೆಂಗ್ ನೋಡಾನ ?

**ನಿಂಗೂ ಮಕ್ಳುಳ್ಗು ನಿಮ್ಮೆಜಮಾನ್ರು ದುಡುದು ತಂದಾಕ್ತದ್ರಲ್ವಾ ?**

ಅಯ್ಯೋ ಅದ್ಯಾಕ್ಕೇಳ್ತೀರಿ ಸ್ವಾಮಿ, ಏಳ್ಕಂಡೋದ್ರೆ ಎಂಟ್ರಾತ್ರಿ ಕತೆಯಾಗ್ತವು. ನಿಮುಗ್ಯಾಕ್ ಬುಡಿ, ನನ್ಮಕ್ಳ ನನ್ಗಂಡ ಸಾಕಿಸಲವಿದ್ ಕತೆ...

**ಇರ್‍ಲಿ ಹೇಳು ದಾನವ್ವ ನೀನು ಇಸ್ಟೆಲ್ಲ ಪದ ಹೇಳಿದ್ದಿಯಲ್ಲ. ನಿನ್ಕತೆನು ಇರ್‍ಲಿ ಹೇಳು.**

ಅಯ್ಯ ನನ್ಗಂಡ ತೀರ್ಕಂಡು ಇವತ್ಗೆ ಐದಾರ್‍ತಿಂಗ್ಳು ಆಯ್ತು ಸ್ವಾಮಿ. ಎಲ್ಲ ನೆನಿಸ್ಕೊಂಡ್ರೆ ವಟ್ಯಾಕು, ಮಂಡ್ಯಾಕು ಕೆಂಡ ಬೀಳ್ತವೆ. ನಮ್ಮಾಯಪ್ಪಂದು ಗಾರೆ ಕೆಲ್ಸ ಅಂದ್ನೆ. ದಿನನೂ ಎಂಟು ವಂಬತ್ತು ಇಂಗೆ ಸಂಪಾದ್ನೆ ಮಾಡವ್ನು. ಯಲ್ಲನೂ ಯಂಡದ್ ಬುಂಡೇಗಾಕವ್ನು. ಸೂಳೇರ ಬಾಯಾಕ್‌ತುರ್ಕವ್ನು. ಏನ್ಮಾಡದು ಸ್ವಾಮಿ ನನ್ನಣೆಲಿಬರದ್ದು.



**ನೀನೇನು ಅದನ್ನು ಕೇಳ್ತಿರ್‍ಲಿಲ್ವ ದಾನಮ್ಮ? ದುಡುದು ತಂದಾಕದ ಬಿಟ್ಟು ಕುಡುದು ಸಿಕ್ದವ್ರ ಸಾವಾಸಮಾಡಿ ಹಿಂಗ್ಮಾಡ್ತಿಯೆ ಅಂತ.**

ಅಯ್ ನನಕಣ್ಣುನ್ ಬಿದ್ರಲ್ವಾ ಏಳದು. ಬ್ಯಾರೆ ಬ್ಯಾರೆ ಊರಾಗೆಲ್ಲ ಕೆಲ್ಸ ಒಪ್ಕಂತ್ತಿದ್ದ. ತಿಂಗ್ಳಾನ್ಗಟ್ಲೆ ಅಲ್ಲಿಕೋಗಿ ಇದ್ಕತಿದ್ದ. ದಿನಕೂಲಿ ತಕ್ಕಮದು. ಯಂಡ ಚತ್ಸಿಡದು. ಯಾವಾಳತವ್ಕಾನ ವೋಗಿ ಬಿದ್ಕಮದು. ಇಂಗಿಂಗೇ ಮಾಡಿ ಕಾಲನೆಲ್ಲ ಕಳುದ್ಬುಟ್ನಲ್ಲ ಸ್ವಾಮಿ. ಯಾವಾಗ್ಲೂ ತಿಂಗ್ಳಿಗೊಂದಪ ರಾತ್ರಿ ಸಮರಾತ್ರಿವೊತ್ನಾಗೆ ಗುಡ್ಲಾಕೆ ಬರುವ್ನು. ಬಂದವ್ನೇ ದಡಾರಂತ ಕಡ್ಡಿಕೀಚವ್ನು. ಯಾವನ್ನಾರ ಎಳಕಂಡು ಮನುಗವ್ನೋ ಯಂಗೊ ಅಂತ. ದೇವುರ ಸಾಕ್ಸಿಯಾಗೂ, ನನ ಮಕ್ಳ ಸಾಕ್ಸಿಯಾಗೂ ನಾನು ಆ ಕೆಲ್ಸ ಮಾಡ್ಲಿಲ್ಲ ಸ್ವಾಮಿ. ದೇವ್ರು ಕುಂತಂಗದೀರಿ ಮುಂದೆ, ನನ್ಗಂಡ ಆ ತರದಲ್ಲಿ ಪರೀಕ್ಸೆನ ಮಾಡ್ತಿದ್ದ!

**ಮಕ್ಕಳ್ನ ನೋಡ್ಕತ್ತಿದ್ದವ್ರು ಯಾರು ಮತ್ತೆ ?**

ಆಗ ನಮ್ತಾಯಿ ಗಟ್‌ಮುಟ್ಟಾಗಿದ್ಲು ಸ್ವಾಮಿ. ನಾನು ಅವ್ಳುನು ಕೂಡಿ ಕೂಲಿಮಾಡಿ ಮಕ್ಳಸಾಕ್ತಿದ್ದೋ.

**ನಿನ್ಗಂಡ ಲಗ್ನವಾದ್ಮೇಲೆ ಕುಡಿಯದು, ಆಡದು ಕಲಿತ್ನೋ ಇಲ್ಲ ಮೊದ್ಲೇ ರೂಡಿ ಮಾಡ್ಕಂಡಿದ್ನೋ.**

ಅಯ್ಯೋ ಮದ್ಲಿಂದ್ಲೆ ಇತ್ತು. ಏನ್ಮಾಡರು. ನಂಗೂ ಏನೂ ತಿಳಿಯಂಗಿರ್‍ಲಿಲ್ಲ. ನನ್ಗಂಡನ್ನೂ ನಂಗೂ ಸ್ವಂತಸ್ವಾದೀನ ಆಗದಿತ್ತು. ಆಗ್ಲ ಮಾಡುಪ್ರು. ಅದಾದ ಮ್ಯಾಲನ್ನು ಜ್ಯಾಸ್ತಿನೇ ಮಾಡ್ಕಂಡ.

**ನಿಮ್ಮವುರ್‍ದುಲಗ್ನ ಯಾವ್ತರ ?**

ಯಾವ್ತರಂದ್ರ ಏನೇಳನ ಸ್ವಾಮಿ. ಲೋಕಾರೂಡಿಯಂಗೆ ಗಂಡಾ ಎಂಡ್ರಾಯ್ತರೆ. ಎಣ್ಣು ಗಂಡು ಸೇರದು ಸೋಬಾನ ಪದನೇಳದು. ಸ್ಯಾಸ್ತ್ರ ಸೂಸ್ತ್ರ ಆಯ್ತವೆ. ಬಾಳ ಕಟ್ನಿಟ್ಟು ಸ್ವಾಮಿ ನಮ್‌ಮತಸ್ತ್ರ ಲಗ್ನ ! ಬಡೂರಾದ್ರು ಬಲ್ಗಾರಾದ್ರು ಒಂದೇತರ. ಮದ್ಲನೆ ದಿನ ವೊರಳಕ್ಕಿ ಸ್ಯಾಸ್ತ್ರಮಾಡ್ತಾರೆ. ಆ ಮೇಲೆ ಗಂಡ್ಮಗನ್ನ ಕರ್‍ದುಗಂಧ ಆಕ್ತರೆ. ಎಣ್ಮಗುಳ್ನ ಕುಂದ್ರುಸಿ ಗಂಧ ಆಕ್ತರೆ. ಎಣ್ಣು ಗಂಡೂ ಇದ್ದೂರಾಗೆ ಆದ್ರೆ ಗುಡಿಗವಾರ್‍ದಾಗೆ ಕರ್ಕಂಡೋಗಿ ಆಕ್ತರೆ. ಬ್ಯಾರೆ ಊರಾಗಾದ್ರೆ ಗಂಡನ್ಮನೆಯಾಗೆ ಅವನ್ಗೆ ಗಂಧನಾಕಿ ತಿರ್‍ಗಿದಿಬ್ಬವೋಗಿ ಅಲ್ಲಿ ಎಣ್ಯಾಕ್ತರೆ. ಅದಾದ್ ಮೇಲೆ ಅರಣಿತತ್ತರೆ. ಅರಿಸ್ನೆ ಎಣ್ಣೆ ಸ್ನಾನ ಮಾಡಿಸ್ತರೆ. ಮೂರ್‍ತರ್ಕ್ ಕುಂಡ್ರುಸ್ತರೆ ಕತ್ತಿಗ್‌ತಾಲಿಬಿದ್ಮ್ಯಾಲೆ ದಾರೆವುಯ್ತರೆ. ಅವತ್ತು ಎಣ್ಣೆದ್ದವ್ಳು ತಾಯಿ ಮನೆದೀಪ ನೋಡ್ಬಾರ್‍ದು. ಎಣ್ಣ ಕರ್ಕಂಡು ಗಂಡನ್ಮನೇಕ್ ಬಂದ್ಬಿಡ್ತಾರೆ. ಮೂರ್‍ನಾಕ್ ದಿನದಮ್ಯಾಲೆ ತಿರ್‍ಗಿನು ಎಣ್ಣು

ತಾಯಿಮನೆ ಗೊಯ್ತದೆ. ಪ್ರಸ್ತಮೂರ್ತಿಂಗ್ಯಾದ್ಮೇಲೆನೆ.

**ದಾನಮ್ಮ ನೀವು ಮಾಡಾಂತ ಹಬ್ಬ ಯ್ಯಾವ್ಯಾವು ?**

ಅಯ್ಯೋ ನಾವು ಯಾವಬ್ಬ ಮಾಡನ ದೇವ್ರು, ಗರೀಬರು. ಅದೆಲ್ಲ ಏನಿದ್ರು ಕಾಸುಳ್ಳಾದೆಂತುವ್ರಿಗೆ. ವುಗಾದಿ ಮಾಡ್ತಿವಿ. ದಸರ್ದಬ್ಬ ಮಾಡ್ತೀವಿ. ಆ ಮೇಲಿಂದ ನಾಗೆಪ್ನಬ್ಬ, ಇಂತಿಂತವೇನೋಮೂರ್ನಾಕಬ್ಬ ಮಾಡಂಗದಿವಿಸ್ವಾಮಿ.

**ದೊಡ್ಡಬ್ಬಯಾವ್ದು. ಆ ಮೇಲೆ ನಿಮ್ ಮನೇದೇವ್ರು ?**

ವುಗಾದಿನೆ ಸ್ವಾಮಿ, ಮನೆದೇವ್ರು ಅಂತಂದ್ರೆ ಕೊಲ್ಲಾಪುರದಮ್ಮ, ರಾಮದೇವ್ರುಸ್ವಾಮಿ.

**ಕೊಲ್ಲಾಪುರದಮ್ಮ ಎಲ್ಲವಳೇ ? ಬಾಳದೂರನ ? ಪೂಜೆಗೀಜೆ ಮಾಡ್ಕಂಡುಬತ್ತೀರಾ ?**

ಬಾಳದೂರನೇ ಸ್ವಾಮಿ. ನಾವೇನೂ ವೋಗಿ ನೋಡಿಲ್ಲ. ಆಯಮ್ನೆಸ್ರೇಳಿ ಇಲ್ಲೇನೆ ನವಟ್ಟ್ಯಯಾಗೆ ಒಂದ್ಗುಡಿಕಟ್ಟ್ಯದೀವಿ. ಅದ್ಕೆಪೂಜೆ ನೆರವೇರಿಸ್ತೀವಿ. ಆ ಮೇಲೆ ರಾಮದೇವ್ರ ಗುಡಿನೂ ಅಟ್ಯಾಗೆ ಐದನೆ ಸ್ವಾಮಿ.

**ದಾನಮ್ಮ ನಿಮ್ಮ ಮನೆದೇವ್ರೆಸ್ರ ಮಕ್ಳಿಗೆಲ್ಲನೂ ಇಡ್ತೀರಲ್ವೆ ?**

ಅವುದು ಸ್ವಾಮಿ. ಎಣ್ಣಾದ್ರೆ ಕೊಲ್ಲಾರಮ್ಮ ಅಂತ ಕರಿತಿವಿ. ಗಂಡಾದ್ರೆ ರಾಮಾಬೋಯಿ ಅಂತ ಕರ್ಕಂಬ್ತಿವಿ. ದೇವ್ರ ಯಂಗ್ಬಿಡಕಾಯ್ತವೆ ಸ್ವಾಮಿ.

**ದೇವ್ರ ಯಾರ್ ಬಿಡಕ್ಕಾಯ್ತವೆ ಏಳು. ಅದ್ಸರಿ ನಿನ್ಗಂಡ ಐದಾರು ತಿಂಗ್ಳ ಇಂದೆ ತೀರ್ಕಂಡ ಅಂತಂದ್ಯಲ್ಲ. ವಯ್ಸೀನಾದ್ರೂ ಆಗಿತ್ತಾ ? ಇಲ್ಲ ಇನ್ನೇನಾದ್ರು ಆಗಿತ್ತಾ?**

ಅಯ್ಯೋ ಅದಿನ್ನೇನ್ಕೇಳಿರಿಸ್ವಾಮಿ ? ಹೇಳ್ಕಂತ ವೋದಂಗೆಲ್ಲ ವಟ್ಟೆವುರ್ಕಂತ ಬತ್ತವೆಸ್ವಾಮಿ. ಆಪ್ಲೇಸನ್ ಅಂತರಲ್ಲ, ನರಕುಯ್ಸಿಕಂಡು ಸತ್ತೋದ ಸ್ವಾಮಿ. ಆಯಪ್ನ ಸಾಯಾಗ ನೋಡಂಗಿತ್ತ. ದಿನ ದಿನ ಆಯ್ತು ಬೀಜ ಊದ್ಕೊಂಬಿಟ್ಟು ಇಸ್ಬಾಗೊಯ್ತು ಸ್ವಾಮಿ. ನವ್ವತಡೀಲಾರ್ದೆ ಲಬೊಲಬೋ ಅಂತವೊಯ್ಕಳವ್ನು. ನಾವೇನ್ಮಾಡಂಗಿದ್ದತು ಸ್ವಾಮಿ. ಸರಿ ಆಸ್ಪತ್ರಿಗೋದು. ಅವ್ರು ಅದೇನೋ ಕುರ್ತುನೊ, ಪರ್ತುನೋ ಆದೆಲ್ಲಿ ಆಪ್ಲೆಸನ್ ಮಾಡಸ್ಕೊಂಡದಿಯೋ ಅಲ್ಲಿಂದ ತಕ್ಕಂಬಾ ಅಂತಂದ್ರು. ಅಲ್ಲೆಲ್ಲೋ ಓಗಿ ತರನ ಅಂತಂದ್ರೆ ಕಾಸು ದುಡ್ಡು ಎಲ್ಲಿಂದ ತರನ? ಈ ಕಾಲದಲ್ಲಿ ದುಡ್ಡುದುಗ್ಗಾಣಿ ಅಂಬುದು ಚಿನ್ನ. ಕೊಡವ್ರ್ಯಾರ್ ನಮ್ಗೆಲ್ಲ. ಬೀದಿನಾಯಿಗಿಟ್ಟಾಕದು ಒಂದೆ, ಉಳ್ಳಾದವ್ರು ನಮ್ಗಣ ಕೊಡದು ಒಂದೆ. ನವ್ ತಿಂದೂ ತಿಂದೂ ಸತ್ತೋದ ತ್ವಾಮಿ. ನನಗಂಡ



ಸತ್ತೋದ ರಾತ್ರಿ ನಂತವ ಅತ್ ಪೈಸ ಇತ್ತು. ಅವ್ರು ಇವ್ರು ಸೇರ್ಕಂಡು ಅಕ್ಕಿ, ವಸ್ತ್ರ, ಲೋಬಾನ ತಂದಾಕಿ ಯಣವೊತ್ರು ಸ್ವಾಮಿ. ನಾನಿನ್ನೇನೇಳನ ದೇವ್ರೆ.

**ರವಸ್ಟು ಸರಿಯಾಗೇಳು ದಾನವ್ಮ. ನಿನ್ಗಂಡ ಎಲ್ಲಿ ಯಾವಾಗ ಆಪ್ರೇಷನ್ ಮಾಡಿಸ್ಕಂಡಿದ್ದಿದ್ದು. ಅವನೇ ಹೋಗಿ ಮಾಡಿಸ್ಕಂಡಿದ್ನೇ. ಇಲ್ಲಾ ಯಾರಾದ್ರು ಕರ್ಕಂಡೋಗಿ ಮಾಡಿಸ್ಕಳಯ್ಯ ಅಂತ ಹೇಳಿದ್ರೆ ಎಂಗೆ ಅಂತ?**

ಅಯ್ಯೋ ಇಲ್ಲೇ ಜಾನ್ಕೊಂಡ ಅಂತ ಊರದಲ್ಲ, ಅಲ್ಲಿ ನಮ್ಮಟ್ಟೆಯವ್ನು ಕೆಲ್ಸಕ್ ಹೋಗಿದ್ದ. ರಂಗಸ್ವಾಮಿ ಗುಡಿ ಕಟ್ತಿದ್ರು. ಇಂಗಿಂಗೆನೆ ಕಲ್ ಕಟ್ಟವಾಗ ಈ ನರಕುಯ್ಯವ್ರು ಬಂದಿದ್ರಂತೆ ಸ್ವಾಮಿ. ಸರಿ, ಅಲ್ಲಿ ಗಾರೆ ಕೆಲ್ಸ ಮಾಡಿಸ್ತಿದ್ ಕಂತ್ರಾಟುದಾರ್ರು ನಮ್ಮಟ್ಟೆಯವ್ನ್ಗೆ ಬಾಳ ಬಾಳ ಕೇವ್ಲವಾಗಿದ್ರಂತೆ. "ಲೇ ತಿಮ್ಮಾ ಇನ್ನೆಸ್ಟ್ ಮಕ್ಳ ಮಾಡ್ಬೇಕು ಅನ್ಕಂಡಿದೀಯಲೇ, ವಂಬತ್ತೇ ಸಾಕು ಬಾರಲೇ ಆಪ್ಲೇಷನ್ ಮಾಡಿಸ್ಕ...," ಅಂತ ಯಳಕಂಡೋಗಿ ಮಾಡಿ ಕಳಿಸ್ಬಿಟ್ರಂತೆ ಸ್ವಾಮಿ. ಆಗ್ಲೆ ಬಂದು ಅಟ್ಯಾಕ್ ಬಿದ್ಕಂಡ ನನ್ನೆಜಮಾನ. ತಿರ್ಗಿ ಕೆಲ್ಸ-ಬವ್ಸ ಅಂತ ವೋಗ್ನಿಲ್ಲ. ಆಯ್ಕಂಡ್ ತಿನ್ನ ವುಂಜುನ್ನಿಡುದು ಬಿತ್ತ ಬಡುದ್‌ಬಿಟ್ರು.

**ನಿನ್ಗಂಡ ಮನೇಗ್ ಬಂದು ಬಿದ್ ಮೇಲೆ ಎಸ್ಟದಿನ ಇದ್ದ ದಾನಮ್ಮ?**

ಆರೇಳ್ತಿಂಗ್ಳು ಇದ್ದಾ. ಅಂಗು ಇಂಗು ನಳ್ಯಾಡ್ಕಂಡು.

**ಮನೇಲಿ ಇದ್ನ, ಎಲ್ಲೂ ಹೋಗ್ತಿರ್ಲಿಲ್ವ? ಆಗ್ಲೂ ಕುಡಿಯಾದ್ ಗಿಡಿಯಾದ್ ಇತ್ತ?**

ಇಲ್ಲ ಸ್ವಾಮಿ, ಯಲ್ಲ ಬಿಟ್ಕಂಡು ಗುಡ್ಲಾಗೆ ಇದ್ದ. ಸೂಳೇರತಾವುಕ್ ವೋಗಿ ಆಡದ್ನ ನಿಲ್ಲುಸ್‌ಬಿಟ್ಟಿದ್ದ. ನನ ವಂಬತ್ನೆ ಮಗ ಹುಟ್ಟಿ ಒಂದೆರ್ಡೊರ್ಸ ಆಗಿತ್ತು. ನನ್ನಾಸೆಗೂ ಬರ್ತಿರ್ಲಿಲ್ಲ. ಬಂದು ಮಕ್ಕಂಡ್ರುನು "ಯಲೇ ಪದ ಏಳೆ ಕೇಳ್ತೀನಿ" ಅನ್ನವ್ನು, ಅಯ್ಯೋ ನನ್ಗಂಡ ಅಪ್ರೂಪದಲ್ಲಿ ಬಂದು ವ್ಯೆ ಕೇಳ್ದನೆ ಪದ ಕೇಳ್ತಾನಲ್ಲ ಅಂತ ಸಮರಾತ್ರಿಗಿಲು ಪದ ಹೇಳ್ತಿದ್ದೇ ಸ್ವಾಮಿ. ಕೇಳ್ಕಂಡು ನಿದ್ದೊಯ್ತಿದ್ದ. ಆವ್ಯಾಲೆ "ತೊಟ್ಲು ತೂಗದು ಇನ್ನು ಬ್ಯಾಡವೇನ" ಅಂದ್ರ "ಬ್ಯಾಡಕಣಲೇ" ಅಂಬ್ತಿದ್ದ. ಅಂಗೇ ಸತ್ತೋದ ಸ್ವಾಮಿ.

**ಇಲ್ಲಿ ದುರ್ಗದಾಗೆ ಅವನ ಆಸ್ಪತ್ರೆಗ್ ಕರ್ಕಂಡೋಗ್ಲಿಲ್ವ ದಾನಮ್ಮ?**

ಅಯ್ಯೋ ವೋಗಿದ್ದೆ ಸ್ವಾಮಿ, ಅವ್ರು ಕೇಳಿದ್ರು "ಇದೇನಯ್ಯ" ಅಂತ. ಆಪ್ಲೇಸನ್ ಮಾಡಿಸ್ಕಂಡಿದ್ದು ಅಂತಂದ. ಎಲ್ಲಿ ಮಾಡಿಸ್ಕಂಡಯ್ಯ

ಅಂದ್ರು. ಜಾನ್ಕೊಂಡ್ವಾಗೆ ಅಂತಂದುದಕ್ಕೆ, ಅಲ್ಲೋಗಿ ಒಂದು ಸರ್ಕಿಪೇಟ್ನ ಬರಸ್ಕಂಬಾ ಅಂದ್ರು. ನಾವೆಲ್ಲೋಗಿ ತರನ? ಆ ಮೇಲೆ ಆದ್ಯಾತುರ್ದೊ ಅವುಸ್ತಿ ಕೊಟ್ಟಿದ್ರು. ಅದೇನ್ ಗುಣ ಕಾಣ್ಲಿಲ್ಲ. ಸರಿ ಆದಾದ ಮೂರ್ನೆ ದಿನ್ಕೆ ನಾನು ಮುಂಡ್ಯಾದೆ. ಆದರ ಮಾಡವ್ನೊ, ಎಂಡ ಮುಟ್ಟವ್ನೊ, ಅವ್ನೆಂಗಿದ್ರು ಕಟ್ಕಂಡ್ ಮ್ಯಾಲೆ ಗಂಡ್ನೆ, ಅವ್ನೊದ. ನಾನು ಮುಂಡ್ಯಾದೆ.

**ಆದದ್ದಾಯ್ತು ದಾನವ್ಮ್ಮ, ನಿನ್ಗಂಡ ಏನ್ಮಾಡುದ್ರ ದೇವ್ರೆ ಆಗಿದ್ದ. ಅದ್ಸರಿ ನಿನ್ಗಂಡ ಮಕ್ಳು ಬ್ಯಾಡ ಅಂದ್ನಲ್ಲ, ಆಗ ನಿಂಗೇನನ್ನಿಸ್ತಿತ್ತು. ಬೇಕು ಅಂತನ್ಸಿತ್ತೋ ಬ್ಯಾಡೆನ್ಸಿತ್ತೋ ?**

ಅಯ್ಯೋ ಮಕ್ಳು ಬ್ಯಾಡ ಅನ್ನಕಾಯ್ತದ ಸ್ವಾಮಿ. ನಂಗೇನೊ ಮಕ್ಳಾಗದು ಬೇಕಿತ್ತು. ದೇವ್ರು ಅಕ್ಸಿ-ಪಕ್ಸಿಗೆಲ್ಲ ಅನ್ನ ಆಕ್ತಾನೆ. ವುಟ್ಟಿದ್ ಮಕ್ಳಗಾಕಲ್ಲ ಅಂಬ್ತನ? ಪರಮಾನ್ನ ಮಾಡ್ಕಂಡು ತಿಂಬಕ್ಕಿಲ್ಲ ಅಂದಾಗ ಗಂಜಿ ಕಾಯಿಸ್ಕಂಡು ಕುಡಿಯಂಬ್ತನೆ ಸ್ವಾಮಿ. ದೇವ್ರು ವುಟ್ಟಿವ್ರ ಸಾಯ್ಸಲ್ಲ.

**ಸರಿ ದಾನಮ್ಮ ನಿನ್ಗಂಡ ಕೊನೆ ಕೊನೆಲಿ ಬಂದಾಗೆಲ್ಲಾ ಮಲಿಕಂಡು ಪದ ಹೇಳು ಅಂತಿದ್ನಲ್ಲ, ನೀನೇಳಿದ್ರೆ ಬಾಳ ಇಷ್ಟಪಟ್ಟು ಕೇಳ್ತಿದ್ನ ?**

ಅವುದು, ಬಂದ್ ಬಂದಾಗೆಲ್ಲ "ದರಮ್ಯಮ್ಮನ್ ಕತೆನೇಳೆ" "ಕೆಂಚಮ್ಮನ್ ಕತೆನೇಳೆ", ಕಾಡ್ಸಿದ್ದೆಮ್ನ ಮ್ಯಾಗಳನೇಳೆ ಅಂಬ್ತಿದ್ದ. ಕೆಂಚಮ್ಮ ನೀರಾಗ್ ಮುಳುಗಾಗ ಕಣ್ಣಾಗ್ ನೀರಾಕಳವ್ನು. ಕಾಡ ಸಿದ್ದಮ್ಮನ್ ಕತೆ ಕಸ್ಟದ ಕತೆ. ಚೆಂದಕವೆ ಇನ್ನೊಂದ್ಸವೇಳೆ ಅಂತಿದ್ದ. ನನ್ ಪದನ ನನಗಂಡನೇ ಕೇಳ್ತನಲ್ಲ ಅಂತ ಹೇಳಾನೇಳಾನೇಳ್ತಿದ್ದೆ ಸ್ವಾಮಿ.

**ನೀನು ಈ ಪದನೆಲ್ಲ ಯಾರತ್ರ ಕಲ್ತೆ? ಹೆಂಗೆ ಕಲ್ತೆ?**

ಸ್ವಾಮಿ ಇಲ್ಲೇ ಇಪ್ಪತ್ ಮೈಲಿ ದೂರ್ದಾಗೆ ರಾಮ್‌ಗಿರಿ ಅಂತ ಒಂದಳ್ಳಿ ಐತೆ, ಅಲ್ಲಿ ಎಲ್ಲಮ್ಮಾಂತ ಒಂದಜ್ಜಿ ಇತ್ತು. ಅವಳ್ತಾವ ಹೇಳಿಸ್ಕಂಡೆ. ಅವ್ಳು ನಮ್ ಬೋವಿ ಕುಲಕ್ಕೇ ಸೇರ್ದವುಳು. ಇಲ್ಲಿ ಬಂದು ನಮ್ ಕೆಳಕೋಟ್ಯಾಗೆ ಬಾಳ ದಿವ್ಸ ಇದ್ಲು. ಅವ್ಳ ಗುಡ್ಲು ನಮ್ ಗುಡ್ಲು ಒಂತಕೇ ಇತ್ತು. ಸರಿ, ದಿನನು ಸಮರಾತ್ರಯಾಗತಕ್ಕನ ಹೇಳಿಸ್ಕಯ್ತಿದ್ದೆ. ದರಣ್ಯಮ್ಮನ್ ಪದ, ಕಾಡಸಿದ್ದವ್ನು ಪದ ಅವ್ಳಿಂದ ಕಲ್ತುದ್ದು. ನಮ್ಮಜ್ಜಿಲಿಂದ ಮದಗದ ಕೆಂಚವ್ವ ಕಲ್ತೆ. ನಮ್ಮವ್ವ ನಾನು ಚಿಕ್ಕುಡುಗಿಲಿದ್ದಾಗ್ಳಿಂದ "ಲೇ ಪದ ಕಲ್‌ತ್ಕಳೆ, ಪದ ಕಲ್‌ತ್ಕಳೆ" ಅಂತ ಹೇಳ್ತಿದ್ಲು. ನಂಗೂನು ಕಲ್ತು ಪದನ ಎಲ್ರು ಮುಂದೆ ಏಳ್ಬೇಕು ಅಂದನ್ನುಸ್ತಿತ್ತು. ಅದ್ಕೆ ಏಳ್ಕೊಟ್ಟವ್ನ ಬಾಯಾಕಾಕಂಬಿಟ್ಟಿದ್ದೆ.

**ಎಲ್ರುಮುಂದೆ ಪದ ಏಳ್ಬೇಕು ಅಂತನ್ನಿಸ್ತಿತ್ತು ಅಂದ್ಯಲ್ಲ ಹೇಳಿದ್ರೆ**



**ನಿಂಗೇನ್ ಸಿಕ್ತಿತ್ತಜ್ಜಿ?**

ನಂಗೇನ್ ಸಿಕ್ಬೇಕಿ ಸ್ವಾಮಿ, ಸಿವರಾತ್ರಿ ಅಬ್ಬ ಬಂತು ಅಂತಂದ್ರೆ ಯಾರಾದ್ರು ಕರಿಸ್ತರೆ ಸ್ವಾಮಿ. ಕರ್ಸಿ ಕಾಡ್ಸಿದ್ದಮ್ನ ಪದ ಏಳು ಅಂತಾರೆ. ನಾನು ಹೇಳ್ತೇನ್ ಸ್ವಾಮಿ. ಆ ಪದ ಪೂರೈಸೊಗಂಟ ಎಲ್ಲರು ದೇವ್ರ ತಟ್ಟೆಗ್ ಕಾಸಾಕ್ತಾರೆ. ಆ ಕಾಸೆಲ್ಲ ನಂಗೆ ಕೊಡ್ತರೆ ಪದ ಏಳಿಸ್ತವ್ರು.

**ಅಂತು ಪದ ಕಲ್ತದ್ದಕ್ಕೆ ಅಷ್ಟಷ್ಟು ದುಡ್ಡಾದ್ರು ಸಿಗ್ತಾದಲ್ಲ ದಾನಮ್ಮ?**

ದುಡ್ಗಂತ ನಾನು ಯಾವತ್ತೂ ಪದ ಏಳ್ಲಿಲ್ಲ ಸ್ವಾಮಿ. ಕೊಟ್ರೆ ಈಸ್ಕಂಲ್ತೀನಿ, ಇಲ್ಲಾಂದ್ರಿಲ್ಲ. ಇಂತಾ ಸತ್ಯಾತ್ಮರ ಪರ್ಸಂಗನ ಏಳ್ತಿನಲ್ಲ ಅಂತ ಅಸ್ಟೇ ಸಂತೋಸ.

**ದಾನಮ್ಮ ನೀನು ಕಲ್ತಿರಂತ ಪದದಲ್ಲೆಲ್ಲ ನಿಂಗೆ ಯಾವ್ದು ಇಷ್ಟ?**

ನಂಗೆಲ್ಲಾನೂ ಇಷ್ಟ.

**ಅಂಗಲ್ಲ ಈಗ "ಪದ ಹೇಳು ದಾನಮ್ಮ" ಅಂದ್ ತಕ್ಷಣವೇ ನೀನು ಯಾವ್ದೇಳ್ತಿ?**

ಕಾಡ್‌ಸಿದ್ದಮ್ಮಂದೇಳ್ತಿನಿ ಸ್ವಾಮಿ.

**ಅದನ್ನೇ ಯಾಕೇಳ್ತಿ?**

ಬಾಳ ಕಸ್ಟದ ಕತೆ ಸ್ವಾಮಿ ಅದು. ಸಿದ್ದಮ್ಮ ಚೆದುರಂಗ ಮಾರಾಜ್ರ ಲಗ್ನವಾಗಿ ಅನುಬಗುಸಬಾರ್ದ ಕಸ್ಟನೆಲ್ಲ ಅನುಬೋಗುಸುದ್ಲು. ಅದ್ಕೆ ಅದ್ನೆ ಏಳ್ತಿನಿ.

**ಅಂತೂ ಅವ್ಳು ಕಸ್ಟಪಟ್ಲು ಅಂದನ್ನತ್ರಿಂದ ನಿಂಗಿಷ್ಟ?**

ಅವುದು, ಅವ್ಳು ಕಸ್ಟಪಡ್ತಳೆ, ಆ ಯಮ್ನೆ ಅಂತ ಕಸ್ಟಪಟ್ಲಿಲ್ಲ ಅಂತ ನಾವು ತಿಳ್ಕಳದು ಸುಮ್ನಿರದು.

**ಸರಿ ದಾನಮ್ಮ ದರಣಿಯನ್ನು ಕ್ಯಾಟೆಗೆ ಬಲಿ ಕೊಟ್ರಲ್ಲ. ಅಂಗೇ ಕೆಂಚಮ್ಮ ಕೆರೆಗೆ ಬಲಿ ಕೊಟ್ರಲ್ಲ ಅದು ಸರಿಯಾ?**

ಸರಿ ಸ್ವಾಮಿ, ಕೆರೆ ಕಟ್ಟೆ ನಿಂತ್ಕಬೇಕಿತ್ತು ಬಲಿ ಕೊಟ್ರು.

**ನೀನೆಲ್ಲಾರ ಅದನ್ನ ಕೇಳಿದಿಯೇನು? ನೋಡಿದಿಯೇನು ಬಲಿ ಕೊಡದ್ನ?**

ಇನ್ನೂ ಇಪ್ಪತ್ತೊರ್ಸ ಅಗಿಲ್ಲ ಸ್ವಾಮಿ, ಇಲ್ಲಿ ಇರಿಯೂರಾ ನಾಗೇನಳ್ಳಿ ಅಂತಿದೆ. ಅಲ್ಲಿ ಉಳ್ಳಾದವ್ರಿಬ್ರು ಗಂಡ ಹೆಂಡ್ತಿ ಒಂದು ಕೆರೆ ಕಟ್ಟಿಸ್‌ದ್ರಂತೆ ಆ ಕೆರೆ ಗಂಗಮ್ಮ ಅತ್ತೊರ್ಸದ ಮಗನ್ನ ಬಲಿ ಕೇಳ್ತಂತೆ. ಸರಿ ಅಲ್ಲಿ ಕೆರೆ ಕಟ್ತಿದ್ದವ್ನು ನಮ್ ಬೋವಿನೆ. ಅವುನ್ಗತ್ತೊರ್ಸದ ಮಗನಿದ್ದ. ಆ ಮಗನ್ನ ಗಂಗಮ್ಗೆ ಬಲಿಕೊಟ್ರು. ಆ ಮೇಲಾ ಬೋವಿ ಕೈಗ್ ಅಷ್ಟಣ



ಕೊಟ್ರು ಸ್ವಾಮಿ.

**ಹಿಂಗೆಲ್ಲ ಕೆರೆ ಕಟ್ಟೆ ಬಲಿ ಕೇಳ್ತವೆ ಅಂತ ಬಲಿ ಕೊಡದು ಸರಿಯು ದಾಸಮ್ಮ?**

ಸರಿ ಸ್ವಾಮಿ, ಯಾವತ್ತಿದ್ರು ನಾವು ಸಾಯದೇ. ಆಮ್ಯಾಲೆ ಸಾಯದ ಈಗೆ ಸತ್ರಾತು. ಕೆರೆ ಕಟ್ಟೆಕ್ ಬಲಿಯಾಗದು ಅಂದ್ರೆ ಸತ್ಯಾತ್ಮರಾಯ್ತಿವ್ರಿ. ಎಲ್ರೂ ಕೊಂಡಾಡ್ತರೆ. ಈಗ ದರಣ್ಯಮ್ಮನ್ನೂ, ಕೆಂಚಮ್ಮನ್ನೂ ಕೊಂಡಾಡಲ್ವೆ ನಾವು.

**ನೀನು ಮದಗದ ಕೆರೆ ನೋಡಿದ್ದೀಯಾ?**

ನೋಡಿಲ್ಲ ಸ್ವಾಮಿ. ಆ ಅರವೋ ದಾವಣ್ಗೆರೆಗೊ ಅದ್ಯೇತಂತೆ ನಮ್ಮಟ್ಟಿ ಬೋವಿಗೋಳೆಲ್ಲಾ ಅತ್ಲಾಕಡೆ ಕೆಲ್ಸಕ್ಕೋಗಿ ಆಕೆರೆನೂ, ಆಯಮ್ಮನ ಗುಡಿಗೂ ನೋಡ್ಕಂಡ್ ಬಂದು ಇಲ್ಲಿ ನಂಗೇಳವ್ರು.

**ದಾಸಮ್ಮ ನೀನು ಸಿನಿಮಾ, ನಾಟ್ಕ, ನೋಡಿದಿಯೇನು?**

ಇಲ್ಲ. ಅವ್ನೆಲ್ಲ ನಾವೆಲ್ಲಿ ನೋಡಾನ ಸ್ವಾಮಿ. ನಮ್ಮಟ್ಟಿಯಾಗೆ ಬಯ್ಲ್‌ನಾಟ್ಕ ಆಡುದ್ರೆ ನೋಡವ್ಳು. ಇಲ್ಲೇ ಸುತ್‌ಮುತ್ಲು ನಾಟ್ಕ ಆಡಿದ್ರು ನೋಡ್ಕಂಬತ್ತಿವಿ.

ಡಾ. ಕೃಷ್ಣಮೂರ್ತಿ ಹನೂರು

(೧೯೮೧)



## ಫಕೀರವ್ವ ಗುಡಿಸಾಗರ

ಈಕೆ ಅನಕ್ಷರಸ್ಥೆ ಆದರೂ ಆಶುಕವಿತೆ ಸೃಷ್ಟಿಸುವಲ್ಲಿ ಪ್ರವೀಣೆ. 'ಡಪ್ಪು' (ಹಲಗೆ) ಹಿಡಿದು ವೇದಿಕೆ ಏರಿ ಹಾಡತೊಡಗಿದರೆ ಎಂಥ ಪ್ರೇಕ್ಷಕನೂ ಇವಳ ಕಂಠ ಸಿರಿಗೆ ತಲೆದೂಗಬೇಕು. ಶಾಸ್ತ್ರೀಯ ಸಂಗೀತಕ್ಕೂ ಇವಳ ಹಾಡುಗಾರಿಕೆಗೂ ಗಾವುದ ದೂರ. ಜಾನಪದ ಧಾಟಿ ಹಿಡಿದು ಈಕೆ ಹಾಡುವ ಹಾಡಿಗೆ ಮರುಳಾಗದವರು ವಿರಳ. ಈ ಪರಿಯ ಮೋಡಿಗೆ ಮತ್ತೊಂದು ಹೆಸರೇ ಫಕೀರವ್ವ ಗುಡಿಸಾಗರ.

'ಗೀಯ... ಗೀಯ... ಗಾಗಿಯ... ಗೀಯ' ಪಲ್ಲವಿಯೊಂದಿಗೆ ಲಾವಣಿ ಹಾಡವ ಮೂಲಕ ಪ್ರಸಿದ್ಧಿ ಪಡೆದ ಮೇಳಗಳು ಉತ್ತರ ಕರ್ನಾಟಕದಲ್ಲಿ ಹಲವು. ಇಂಥ ಮೇಳಗಳಲ್ಲಿ ಇಂತಿಷ್ಟೇ ಪುರುಷರು, ಇಂತಿಷ್ಟೇ ಮಹಿಳೆಯರು ಇರಬೇಕೆಂಬ ನಿಯಮವೇನೂ ಇಲ್ಲ. 'ಡಪ್ಪು' (ಹಲಗೆ) ಹಿಡಿದು ಹಾಡುವ ಗಾಯಕ/ ಗಾಯಕಿಯದು ಮೇಳದಲ್ಲಿ ಪ್ರಧಾನ ಪಾತ್ರ. ಉಳಿದವರು ಏಕತಾರಿ ವಾದ್ಯ ನುಡಿಸುತ್ತ ಹಾಡನ್ನು ಅನುಕರಿಸುತ್ತ ಪ್ರತಿ ವಾಕ್ಯದ ಕೊನೆಗೂ 'ಗೀಯ' ಹೇಳುತ್ತಾರೆ. ಮಧ್ಯೆ ಮಧ್ಯೆ 'ಹಾಂ....ಮುಂದೇನಾತ್ರಿ?' 'ಹಾಂ ಹೇಳವ್ವ' ಎಂದು ಪ್ರಶ್ನಿಸುತ್ತ ಕಥೆ ಮುಂದುವರೆಸಲು ಪ್ರಧಾನ ಗಾಯಕನಿಗೆ ಸಹಕಾರಿ ಆಗುತ್ತಾರೆ. ಈ ಪ್ರಕಾರದಲ್ಲಿ 'ಕಲ್ಗಿ' (ಹರದೇಶಿ) ಎಂದರೆ ಪುರುಷಪ್ರಧಾನ ತಂಡ. 'ತುರಾಯಿ' (ನಾಗೇಶಿ)ಯಲ್ಲಿ ಮಹಿಳಾ ಪ್ರಧಾನ. 'ಕಲ್ಗಿ' (ಹರದೇಶಿ) ತಂಡದವರು ಸವಾಲು ಹಾಕಿದರೆ 'ತುರಾಯಿ' (ನಾಗೇಶಿ) ತಂಡದವರು ಪ್ರತಿ ಸವಾಲು ಒಡ್ಡುತ್ತಾರೆ. 'ಸವಾಲು-ಜವಾಬ್' ಮಾದರಿಯಲ್ಲಿ ನಡೆಯುವ ಈ ಕಾರ್ಯಕ್ರಮಗಳು ಉತ್ತರ ಕರ್ನಾಟಕದ ಪ್ರಮುಖ ಆಕರ್ಷಣೆ. ಇಂತಹ ಕಾರ್ಯಕ್ರಮ ನಡೆಸಿಕೊಡುವಲ್ಲಿ ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಗುಡಿಸಾಗರದ ಫಕೀರವ್ವ ಸಿದ್ಧಹಸ್ತರು. ಒಂದು ಕೈ ಮೇಲೆತ್ತಿ ಮತ್ತೊಂದು ಕೈಯಲ್ಲಿ ಡಪ್ಪಿನಿಂದ ದನಿ ಹೊಮ್ಮಿಸುತ್ತ ಹೆಜ್ಜೆಗಳನ್ನು ಹಿಂದಕ್ಕೆ ಮುಂದಕ್ಕೆ ಇಡುತ್ತಾ ಎಡ-ಬಲದ ಜನರಿಗೆ ಹಾಡಿನ ಮೂಲಕ ಉತ್ತರಿಸುವ ಎಪ್ಪತ್ತನಾಲ್ಕರ ಹರೆಯದ ಫಕೀರವ್ವ ಗುಡಿಸಾಗರ ಅವರ ಗಾಯನದ ವೈಖರಿ ನೋಡಿಯೇ ಸವಿಯಬೇಕು.

ಫಕೀರವ್ವ ಜನಿಸಿದ್ದು ಧಾರವಾಡ ಜಿಲ್ಲೆಯ ಹೆಬ್ಬಾಳದ ಬಡ ಕುಟುಂಬವೊಂದರಲ್ಲಿ. ಹರಿಜನ ಮರಿಯಪ್ಪ-ನೀಲವ್ವ ತಂದೆ-ತಾಯಿ. ತನ್ನ ಜನಾಂಗದಲ್ಲಿ ಇರುವ ಗಾಯನದ ಅಪಾರ ಪ್ರತಿಭೆಗೆ ಬಾಲ್ಯದಲ್ಲೇ ಮರುಳಾಗಿದ್ದ ಫಕೀರವ್ವ, ಹತ್ತು ವರ್ಷದವಳಿದ್ದಾಗ ಒಮ್ಮೆ ತಾಯಿಯ ತೌರೂರಾದ ಹೆಬ್ಬಾಳಿಗೆ ಹೋಗಿದ್ದಳು. ಅಲ್ಲಿ ಮನ್ನೀಕಟ್ಟಿ ಗಂಗೂಬಾಯಿ ಎಂಬವರ ಹಾಡು ಕೇಳಿ, ತಾನೂ ಹಾಗೆ ಹಾಡಬೇಕೆಂಬ ಛಲ ತೊಟ್ಟಳು. ಬಾಲಕಿಯ ಈ 'ಛಲ'ಕ್ಕೆ ಪ್ರೋತ್ಸಾಹ ನೀಡಿ 'ಗುರು' ಸ್ಥಾನದಲ್ಲಿ ನಿಂತು ಹಾಡನ್ನು ಧಾರೆಯೆರೆದವರು ಸೋದರಮಾವ ಹೆಬ್ಬಾಳದ ಹನುಮಂತಪ್ಪ. ಸ್ವತಃ ದೇವದಾಸಿ ಪದ್ಧತಿಗೆ ಈಡಾಗಿದ್ದರೂ ಆ ಪದ್ಧತಿಯನ್ನು ಧಿಕ್ಕರಿಸಿ ನಿಂತ ಫಕೀರವ್ವ, ಗದುಗಿನ ಶ್ರೀ ಶಿವಾನಂದ ಸ್ವಾಮಿಗಳಿಂದ ಲಿಂಗದೀಕ್ಷೆ ಪಡೆದರು. ಮದುವೆ ಆಗದ ಅವರಿಗೆ ಬಾಳ ಸಂಗಾತಿ ಎಂದರೆ ಜಾನಪದ ಗಾಯನ.

ಸೋದರಮಾವನ ಜೊತೆಗೂಡಿ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡ ಫಕೀರವ್ವ ಸ್ವಾತಂತ್ರ್ಯ ನಂತರ ಸರ್ಕಾರಗಳ ಪ್ರಗತಿಪರ ರಾಷ್ಟ್ರೀಯ ವಿಚಾರಧಾರೆಯನ್ನು ಪ್ರಸಾರ ಮಾಡುವಲ್ಲೂ ಪ್ರಮುಖ ಪಾತ್ರ ವಹಿಸಿದ್ದರು. ಸರ್ಕಾರದ 20 ಅಂಶಗಳ ಕಾರ್ಯಕ್ರಮ, ಕುಟುಂಬ ಕಲ್ಯಾಣ ಯೋಜನೆ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ, ಧೂಮಪಾನ- ಹೀಗೆ ಸಮಾಜದ ಹಲವು ಅನಿಷ್ಟಗಳ ವಿರುದ್ಧ ಫಕೀರವ್ವ ಹೋರಾಟದ ಹಾಡು ಹಾಡಿದವರು. ಕೇವಲ ಸರ್ಕಾರಿ ಕಾರ್ಯಕ್ರಮ ಏರ್ಪಡಿಸಿದ ಜನ ಕೊಟ್ಟಷ್ಟು ಹಣ ಪಡೆದು ಕೈಮುಗಿದು ಹೊರಟಿದ್ದೇ ಹೆಚ್ಚು.

ಬದುಕಿನುದ್ದಕ್ಕೂ ಸಮಾಜದ ಒಳಿತಿಗಾಗಿ ಹಾಡುತ್ತಾ ಬಂದ ಈ ಜಾನಪದ ಗಾಯಕಿಯ ಆರ್ಥಿಕ ಪರಿಸ್ಥಿತಿ ಮಾತ್ರ ಎಂದಿಗೂ ಸುಧಾರಿಸಲಿಲ್ಲ. ಕಳೆದ ಇಪ್ಪತ್ತೈದು ವರ್ಷಗಳಿಂದಲೂ ನವಲುಗುಂದ ತಾಲೂಕಿನ ಹೆಬ್ಬಾಳ ಗ್ರಾಮದಲ್ಲಿರುವ ತಂಗಿ ಮರಿಯಮ್ಮ ಹಾಗೂ ಆಕೆಯ ಮಕ್ಕಳೊಂದಿಗೆ ವಾಸಿಸುತ್ತಿರುವ ಫಕೀರವ್ವನಿಗೆ ಸಂದ ಪ್ರಶಸ್ತಿ-ಗೌರವಗಳು ಹಲವಾರು. ಜಾನಪದ ಅಕಾಡೆಮಿ ಪ್ರಶಸ್ತಿ (1984), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (1994), ಜಾನಪದಶ್ರೀ ಪ್ರಶಸ್ತಿ (1998) ಅವುಗಳಲ್ಲಿ ಪ್ರಮುಖವಾದವು.

"ಒಂಬತ್ತು ಸಾವಿರಕ್ಕೂ ಹೆಚ್ಚು ಹಾಡನ್ನು ಹಾಡಬಲ್ಲೆ" ಎನ್ನುವ ಫಕೀರವ್ವ ಜಾನಪದ ಪರಂಪರೆಯನ್ನು ಮುಂದುವರೆಸುವ ದೃಷ್ಟಿಯಿಂದ ಈಗಾಗಲೇ ಐವರಿಗೆ ತನ್ನ ಜಾನಪದ 'ಗೀಗೀ' ಪದಗಳನ್ನು ಕಲಿಸಿದ್ದಾರೆ. ಈ





ಕಾರ್ಯಕ್ಕೆ ರಾಜ್ಯ ಸರ್ಕಾರ ಅವರಿಗೆ ಸಹಾಯಧನ ನೀಡಿದೆ. ಕಳೆದ ಹದಿಮೂರು, ಹದಿನಾಲ್ಕು ವರ್ಷಗಳಿಂದ ರಾಜ್ಯ ಸರ್ಕಾರ ಪ್ರಶಸ್ತಿ ರೂಪದಲ್ಲಿ ನೀಡಿದ್ದ ಬಂಗಾರದ ಪದಕ ಮಾರಿ ಔಷಧಿ ಕೊಂಡು ತಂದರು.

"ರೊಕ್ಕ ಹೆಚ್ಚು ಮಾಡಿ ಅಂತ ನಾನು ಸರ್ಕಾರಕ್ಕೆ ಯಾವತ್ತೂ ಕೇಳಿಲ್ಲ" ಎನ್ನುವ ಫಕೀರವ್ವ, "ಸಾವಳಗಿ ಶಿವಲಿಂಗೇಶ್ವರ ಕೃಪೆಯಿಂದ ಆರಾಮಾದೆ" ಎಂದು ಫಕೀರವ್ವ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಾ ಭಾವುಕರಾಗಿ ನುಡಿಯುತ್ತಾರೆ.

- ಶಶಾಂಕ



## ಹಿರಿಯಡ್ಕ ಗೋಪಾಲರಾವ್

ಈ ವರ್ಷದ ಜಾನಪದ ಶ್ರೀ ಪ್ರಶಸ್ತಿಗೆ ಭಾಜನರಾಗಿರುವ ಎಪ್ಪತ್ತೊಂಬತ್ತರ ಹರೆಯದ ಹಿರಿಯಡ್ಕ ಗೋಪಾಲರಾವ್ ಯಕ್ಷಗಾನ ರಂಗದ ಭೀಷ್ಮಾಚಾರ್ಯ ಎಂದೇ ಪ್ರಸಿದ್ಧರಾದವರು. ಬದುಕಿನ ಹೆಚ್ಚಿನ ಭಾಗವನ್ನು ಯಕ್ಷಗಾನ ಮೇಳದ ನಂಟನ್ನೇ ಉಸಿರಾಗಿಸಿಕೊಂಡಿರುವ ಗೋಪಾಲರಾಯರ ಜೊತೆ ಮಾತನಾಡುತ್ತ ಹೋದರೆ ತೆರೆದುಕೊಳ್ಳುವುದು ಯಕ್ಷಗಾನ ಇತಿಹಾಸ ಪುಟಗಳ ರಮ್ಯಲೋಕ.

ಉಡುಪಿ ಜಿಲ್ಲೆಯ ಹಿರಿಯಡ್ಕ ಗೋಪಾಲರಾವ್ (ಜನನ: 1919) ಅವರ ಹುಟ್ಟೂರು. ತಂದೆ : ಶೇಷಗಿರಿರಾವ್. ತಾಯಿ : ಲಕ್ಷ್ಮಿ. ಮನೆತನದ ಹಿರಿಯರಿಂದ ಬಂದದ್ದು ಬಂಟಸಾಲೆ ವೃತ್ತಿ (ಅಕ್ಕಿ, ಸೀಗೆ, ಮೆಣಸು, ಅರಿಶಿನ, ಕಾಸರಕನ ಬೀಜ ಇತ್ಯಾದಿಗಳ ವ್ಯಾಪಾರ). ಅಜ್ಜ ಗೋವಿಂದಯ್ಯನವರ ಕಾಲದ ಶ್ರೀಮಂತಿಕೆಯ ದಿನಗಳು, ಗೋಪಾಲರಾವ್ ಅವರ ಬಾಲ್ಯದ ಮೇಲೆ ಬೀರಿದ ಪ್ರಭಾವ ಅಪಾರ. ಹಬ್ಬ-ಹರಿದಿನ, ಮದುವೆ-ಮುಂಜಿ ಮುಂತಾದ ವಿಶೇಷ ಸಂದರ್ಭಗಳಲ್ಲಿ ಮನೆಯಲ್ಲಿ ದಿನಗಟ್ಟಲೆ ನಡೆಯುತ್ತಿದ್ದ ತಾಳಮದ್ದಳೆ ಕಾರ್ಯಕ್ರಮದ ನೆನಪು ರಾಯರ ಮನದಲ್ಲಿ ಇಂದಿಗೂ ಅಚ್ಚ ಹಸರು. ಆಗ ಗದ್ದೆ ಬಯಲುಗಳಲ್ಲಿ ಅಪರೂಪಕ್ಕೆ ನಡೆಯುತ್ತಿದ್ದ ಯಕ್ಷಗಾನವೆಂದರೆ ಬಾಲಕ ಗೋಪಾಲನ ಪಾಲಿಗೆ ಮೃಷ್ಟಾನ್ನ ಭೋಜನ.

ತಂದೆ ಮನೆಯ ಶ್ರೀಮಂತಿಕೆ ಕರಗಿ ಬಡತನ ಪ್ರಾಪ್ತವಾದಾಗ, ಬಾಲಕ ಗೋಪಾಲ ತಾಯಿ ಜೊತೆ ಉಡುಪಿಯಲ್ಲಿದ್ದ ಅಜ್ಜ ಕೃಷ್ಣಯ್ಯನ ಮನೆಗೆ



ಬಂದ. ತಾಯಿಯ ತಂದೆ ಕೃಷ್ಣಯ್ಯ ಉಡುಪಿಯ ರಥಬೀದಿಯಲ್ಲಿ ತಾಮ್ರದ ವ್ಯಾಪಾರಿಗಳಾಗಿದ್ದರು. (ಉಡುಪಿಯಲ್ಲೇ ಒಂದೂ ಹೋಟೆಲ್ ಇರದ ಕಾಲ ಅದು!) ಉಡುಪಿ ಅನಂತೇಶ್ವರ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ. ಸೋದೆಮಠದ ಎದುರಿನ ಅಂಗಳ ಆಗ ಯಕ್ಷಗಾನ ಪ್ರದರ್ಶನಕ್ಕಾಗಿ ಪ್ರಸಿದ್ಧ ಪಡೆದ ಸ್ಥಳ. ಉಡುಪಿಯಲ್ಲೂ ಗೋಪಾಲನನ್ನು ಬಿಡದೆ ಆಕರ್ಷಿಸಿದ್ದು ಯಕ್ಷಗಾನದ ಸೆಳೆತ.

ವಿದ್ಯಾಭ್ಯಾಸ ನಿಲ್ಲಿಸಿ ಉಡುಪಿಯಿಂದ ಹಿರಿಯಡ್ಕಕ್ಕೆ ಮರಳಿದ ಗೋಪಾಲ ಸ್ವಾತಂತ್ರ ಚಳವಳಿಯಲ್ಲೂ ಭಾಗಿಯಾದ. ತಂದೆಗೆ ಯಕ್ಷಗಾನದ ಗುರುಗಳಾಗಿದ್ದ ಕಾರ್ಕಳದ ನಾಗಪ್ಪ ಕಾಮತ್, ರುಕ್ಮಯ್ಯ ಕಾಮತ್ ನುಡಿಸುತ್ತಿದ್ದ ಮದ್ದಳೆ ವಾದನವನ್ನು ಕಂಬದ ಮರೆಯಲ್ಲೇ ನಿಂತು ವೀಕ್ಷಿಸುತ್ತ, ಸತತ ಅಭ್ಯಾಸ ನಡೆಸಿ ಗೋಪಾಲ ಮದ್ದಳೆ ಬಾರಿಸುವ ಕಲೆಯಲ್ಲಿ ಪ್ರಾವೀಣ್ಯತೆಗಳಿಸುವಲ್ಲಿ ಯಶಸ್ವಿಯಾದ!

ತಂದೆ ಶೇಷಗಿರಿರಾವ್ ಅವರಿಂದ ಮದ್ದಳೆ, ಗುರು ನಾಗಪ್ಪ ಕಾಮತ್ ಅವರಿಂದ ನೃತ್ಯ, ಹರಿಕಂಡಿಗೆ ಮುಕುಂದನಾಯ್ಕರಿಂದ ಚೆಂಡೆ ಕಲಿತು ಪೆರ್ಡೂರು ಮೇಳದ ಮೂಲಕ ಯಕ್ಷರಂಗ ಪ್ರವೇಶಿಸಿದ ಗೋಪಾಲರಾವ್, ಮೊದಲು ನಟಿಸಿದ್ದು ಸ್ತ್ರೀ ವೇಷಧಾರಿಯಾಗಿ. 'ರತ್ನಾವತಿ ಕಲ್ಯಾಣ'ದ ಸೌರಂಭೆ ಪಾತ್ರ. ಎರಡನೆಯ ಪ್ರಸಂಗ 'ಕೃಷ್ಣಾರ್ಜುನ ಕಾಳಗ'. ಅದರಲ್ಲಿ ನಾರದನ ವೇಷ. ದಕ್ಷಿಣ ಕನ್ನಡದ ಉದ್ದಗಲ ಮೇಳ ಸಂಚರಿಸಿ, ಪ್ರಸಂಗ ಪ್ರದರ್ಶಿಸುವ ಮೂಲಕ ಗೋಪಾಲರಾಯರು ಕಲಾವಿದರಾಗಿ ಹೆಸರು ಗಳಿಸಿದರು.

1935ರಲ್ಲಿ ಹಿರಿಯಡ್ಕ ಮೇಳದಲ್ಲಿ ಸೇರ್ಪಡೆಯಾದ ಗೋಪಾಲರಾಯರು, ಪಾತ್ರಧಾರಿಯಾಗಿ ಪ್ರಸಿದ್ಧಿ ಪಡೆದರೂ, ಮರುವರ್ಷ ಒತ್ತು ಮದ್ದಳೆಗಾರರಾಗಿ (ಪ್ರಸಂಗ ಪೂರ್ವಾರ್ಧಕ್ಕೆ ಮದ್ದಳೆ ಬಾರಿಸುವುದು) ಬಡ್ತಿ ಪಡೆದರು. ಆಗ ಅವರು ಪಡೆಯುತ್ತಿದ್ದ ಸಂಬಳ ಐದು ತಿಂಗಳಿಗೆ ತ್ತೊಂಬತ್ತು ರೂ!

ಮರುವರ್ಷ ಅಮೃತೇಶ್ವರಿ ಮೇಳ ಸೇರಿದ ರಾಯರು ಅನಂತರ ಸೇರಿದ್ದು ಮಂದರ್ತಿ ಮೇಳ. ಹಾರಾಡಿ ರಾಮು, ಹಾರಾಡಿ ಕುಷ್ಟ, ಹಾರಾಡಿ ಮಹಾಬಲ, ಶೇಷಗಿರಿ ಭಾಗವತರು ಮುಂತಾದ ಅತಿರಥ ಮಹಾರಥರಿದ್ದ ಮಂದರ್ತಿ ಮೇಳದಲ್ಲಿ ಗೋಪಾಲರಾವ್ ಪಡೆದ ಅನುಭವ ಅಪಾರ. ಸಂಬಳದ ವಿಷಯದಲ್ಲಿ ಬೇಸರಗೊಂಡು ಮೇಳ ತೊರೆದ ಗೋಪಾಲರಾಯರು ಯಕ್ಷಗಾನಕ್ಕೆ ವಿದಾಯ ಹೇಳಿ 1942 ರಲ್ಲಿ


ಮುಂಬೈಗೆ ಹೋದರು. ಅಲ್ಲಿ ರಾತ್ರಿ ಶಾಲೆ ಸೇರಿ ಏಳನೆಯ ತರಗತಿವರೆಗೆ ಕಲಿತರು. 1945 ರಲ್ಲಿ ಮರಳಿ ಬಂದು ಮತ್ತೆ ಮಂದರ್ತಿ ಮೇಳ ಸೇರಿದ ರಾಯರು, ನಿವೃತ್ತರಾಗುವವರೆಗೂ (1978) ಆ ಮೇಳದಲ್ಲೇ ಮದ್ದಳೆಗಾರರಾಗಿ ಪ್ರಸಿದ್ಧಿ ಪಡೆದರು. ಶೇಷಗಿರಿ ಭಾಗವತ ಹಾಗೂ ಜಾನುವಾರುಕಟ್ಟೆ ಗೋಪಾಲ ಕಾಮತ್ ಅವರ ಭಾಗವತಿಕೆಯಲ್ಲಿ ಹೆಚ್ಚು ಕಾಲ ತಾವು ಮದ್ದಳೆಗಾರರಾಗಿ ದುಡಿದದ್ದು ತಮ್ಮ ಬಾಳಿನ ಪುಣ್ಯವೆಂಬುದು ರಾಯರ ನಂಬಿಕೆ.

ಬಡಗುತಿಟ್ಟಿನ ಯಕ್ಷಗಾನದಲ್ಲಿ ಹಿರಿಯ ಸ್ಥಾನ ಪಡೆದಿರುವ ಈ ಹಿರಿಯ ಕಲಾವಿದ ಡಾ. ಶಿವರಾಮ ಕಾರಂತರ ಜೊತೆಗೂಡಿ ಅವರ ಪ್ರಯೋಗಗಳಲ್ಲಿ ನಿಕಟವರ್ತಿಯಾಗಿದ್ದು ಮದ್ದಳೆಗಾರರಾಗಿ ಸಹಕರಿಸಿದರು. ಪ್ರಪ್ರಥಮ ಬಾರಿಗೆ ಉಡುಪಿಯಲ್ಲಿ ಯಕ್ಷಗಾನ ಕೇಂದ್ರ ಸ್ಥಾಪನೆಯಾದಾಗ (1970) ವೀರಭದ್ರ ನಾಯಕ್, ನೀಲಾವರ ರಾಮಕೃಷ್ಣಯ್ಯ ಅವರೊಂದಿಗೆ ಅಧ್ಯಾಪಕರಾಗಿ ದುಡಿದ ಗೋಪಾಲರಾಯರು, ಆಧುನಿಕ ಯಕ್ಷಗಾನ ಕಲಿಕಾ ಪದ್ಧತಿಗೆ ಅಸ್ತಿಭಾರ ಹಾಕಿದರು. ಈ ತ್ರಿಮೂರ್ತಿಗಳು ಹಾಕಿಕೊಟ್ಟ ಮಾರ್ಗದರ್ಶನ, ಅನಂತರ ಸ್ಥಾಪನೆಯಾದ ಇನ್ನಿತರ ಯಕ್ಷಗಾನ ಕೇಂದ್ರಗಳಿಗೂ ಶಿಕ್ಷಗರಿಗೂ ಅನುಕರಣೀಯವಾದವು.

ಕಾರಂತರ ಮೂಲಕ ಪರಿಚಯವಾದ ಮಾರ್ಥಾ ಆ್ಯಷ್ಟನ್ ಮತ್ತು ದಕ್ಷಿಣ ಕನ್ನಡದ 'ಅಳಿಯನ ಸಂತಾನ'ದ ಬಗ್ಗೆ ಅಧ್ಯಯನ ಮಾಡಲು ಬಂದಿದ್ದ ಪೀಟರ್ ಕ್ಲಾಸ್–ಈ ಇಬ್ಬರಿಗೂ ಗೋಪಾಲರಾಯರು ಯಕ್ಷಗಾನದ ಬಗ್ಗೆ ಮಾರ್ಗದರ್ಶನ ಮಾಡಿದರು. ಮಾರ್ಥಾ ಆ್ಯಷ್ಟನ್, ರಾಯರಿಂದ ಯಕ್ಷಗಾನದ ಮೇಲೆ ಮಹಾಪ್ರಬಂಧ ಬರೆದು ಡಾಕ್ಟರೇಟ್ ಪದವಿ ಪಡೆದರು. ಈ ಇಬ್ಬರು ಶಿಷ್ಯರ ಕರೆಯ ಮೇರೆಗೆ ಅಮೆರಿಕಾಕ್ಕೆ ಭೇಟಿ ನೀಡಿದ ರಾಯರು (1979) ಅಲ್ಲಿ ನಾಲ್ಕು ತಿಂಗಳ ಕಾಲ ಪ್ರಾತ್ಯಕ್ಷಿಕೆ ಶಿಬಿರಗಳನ್ನು ನಡೆಸಿಕೊಟ್ಟರು.

ಬ್ರಹ್ಮಾವರದ 'ಅಜಪುರ ಗಣಪತಿ ಸಂಘ'ದ ಯಕ್ಷಗಾನ ತಂಡ ಬಿ ವಿ ಆಚಾರ್ಯರ ನೇತೃತ್ವದಲ್ಲಿ ಅಮೆರಿಕಾ, ಜರ್ಮನಿಗಳಿಗೆ ಭೇಟಿ ನೀಡಿದಾಗ ಅವರ ಜೊತೆಗೂಡಿ ರಾಯರು (1980-81) ಮತ್ತೊಮ್ಮೆ ವಿದೇಶ ಪ್ರವಾಸ ಮಾಡಿದರು. ಅಲ್ಲಿ ಪ್ರದರ್ಶಿಸಿದ 'ಅಭಿಮನ್ಯು', 'ಲವ ಕುಶ ಕಾಳಗ' ಪ್ರಸಂಗಗಳಿಗೆ ಮದ್ದಳೆ ನುಡಿಸಿ ವಿದೇಶಿಯರ ಮೆಚ್ಚುಗೆಗೆ ಪಾತ್ರರಾದರು. ತಮ್ಮ ಯಕ್ಷಗಾನ ಚಟುವಟಿಕೆಗಳಲ್ಲಿ





ಪ್ರೊ. ಕು ಶಿ ಹರಿದಾಸಭಟ್ಟರು ನೀಡುವ ಸಹಕಾರವನ್ನು ರಾಯರು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಾರೆ.

1972 ರಲ್ಲಿ ಕರ್ನಾಟಕ ರಾಜ್ಯ ಸಂಗೀತ ಅಕಾಡೆಮಿ ಪ್ರಶಸ್ತಿ ಗಳಿಸಿದ ರಾಯರು ಕಳೆದ ವರ್ಷ ಕರ್ನಾಟಕ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಪಡೆದರು.

ಮದ್ದಳೆಯ ಮಾಯಾಲೋಕ ಗೋಪಾಲರಾಯರ ಆತ್ಮಚರಿತ್ರೆ. (ನಿರೂಪಣೆ: ಕೆ ಎಂ ರಾಘವ ನಂಬಿಯಾರ್, ಪ್ರಕಾಶಕರು: ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ) ಇದರಲ್ಲಿ ತಮ್ಮ ಬಾಳಿನ ಏಳು-ಬೀಳಿನ ಚಿತ್ರಣ ಮಾತ್ರವಲ್ಲ, ಈ ಶತಮಾನದ ಆದಿಯಿಂದ ಯಕ್ಷಗಾನ ಬೆಳೆದು ಬಂದ ಬಗೆ, ಜೊತೆಗೆ ಕರ್ನಾಟಕದ ಕರಾವಳಿ ಜನರ ಸಾಂಸ್ಕೃತಿಕ- ಸಾಮಾಜಿಕ ಬದಲಾವಣೆಯ ಸ್ಪಷ್ಟ ಗುರುತುಗಳನ್ನು ದಾಖಲಿಸಿರುವುದು ಈ ಕೃತಿಯ ವೈಶಿಷ್ಟ್ಯ.

- ಶಶಾಂಕ

## ಸುಕ್ರಿ ಬೊಮ್ಮಗೌಡ

ಗಿರಿಜನರಿಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟು ಅವರಿಗಾಗಿ ದುಡಿದ ವೆರಿಯರ್ ಎಲ್ವಿನ್ ಒಮ್ಮೆ ಮಧ್ಯಪ್ರದೇಶದ ಗೊಂಡರ ಕಲಾವಿದನೊಂದಿಗೆ ಮಾತಾಡುತ್ತಿರುತ್ತಾರೆ. ತನ್ನ ಹಾಡಿಯ ಹತ್ತಿರದಿಂದ ಹಾದುಹೋದ ಹೊಸ ರೈಲು ಹಳಿಗಳನ್ನು ಕುರಿತು ಆ ಕಲಾವಿದ ಹೀಗೆ ಹೇಳುತ್ತಾನೆ–'ಮೊದಲಿಗೆ ನಾವೆಲ್ಲಾ ನಮ್ಮ ದೇವರ ಕೃಪೆಯಿಂದ ತುಂಬಾ ಸಿರಿವಂತರಾಗಿದ್ದೆವು. ಆರೋಗ್ಯವಾಗಿದ್ದೆವು. ಅಷ್ಟರಲ್ಲಿ ರೈಲು ಬಂತು. ಆ ರೈಲಿನ ಚಂದ ನೋಡಿ ನಮ್ಮ ದೇವರು ಕೂಡ ಅದನ್ನು ಹತ್ತಿ ಪಟ್ಟಣಕ್ಕೆ ಹೊರಟುಹೋದ. ಈಗ ನಾವೆಲ್ಲ ಬಡವರಾಗಿದ್ದೇವೆ. ಪಟ್ಟಣದವರು ಸಿರಿವಂತರಾಗಿದ್ದಾರೆ'. ಆಧುನಿಕತೆ ಗಿರಿಜನರ ಬದುಕಿನ ಮೇಲೆ ಹೇಗೆ ಪರಿಣಾಮ ಬೀರುತ್ತಿದೆ ಎಂಬುದಕ್ಕೆ ಇದೊಂದು ಉದಾಹರಣೆ.

ಜಾನಪದ ಕ್ಷೇತ್ರದಲ್ಲಿನ ತನ್ನ ಕಲಾ ಸೇವೆಗಾಗಿ ಕರ್ನಾಟಕ ಸರ್ಕಾರದ ಅತ್ಯುನ್ನತ 'ಜಾನಪದಶ್ರೀ' ಪ್ರಶಸ್ತಿ ಪಡೆದ ಸುಕ್ರಿ ಬೊಮ್ಮಗೌಡ ಅವರನ್ನು ಮಾತಾಡಿಸಿ ಬರಬೇಕೆಂದು ಹೊರಟ ನನಗೆ ಇದೇ ರೀತಿಯ ಪ್ರಶ್ನೆಗಳು ಎದುರಾದವು. ಉತ್ತರ ಕನ್ನಡಕ್ಕೆ ಕೊಂಕಣ ರೈಲ್ವೆ ಬಂತು. ಸೀಬರ್ಡ್ ನೌಕಾ ನೆಲೆ ಬಂತು. ಕೈಗಾ ಬಂತು ಹಾಗೂ ವಿದ್ಯುತ್ತಿನ ಅನೇಕ ಅಣೆಕಟ್ಟೆಗಳು ನಿರ್ಮಾಣವಾದವು. ಉತ್ತರ ಕನ್ನಡ ಜಿಲ್ಲೆ ಅಭಿವೃದ್ಧಿಯ ದಾಪುಗಾಲಿನಲ್ಲಿದೆ ಎಂಬುದು ನಮ್ಮೆಲ್ಲರ ನಂಬಿಕೆ. ಆಧುನಿಕ ಭಾರತದ ನಿರ್ಮಾಣಕ್ಕೆ ಇವೆಲ್ಲವೂ ಬೇಕೆಂಬುದು ನಿಜ.

ಆದರೆ ದೊಡ್ಡ ದೊಡ್ಡಯೋಜನೆಗಳು ಸಣ್ಣ ಸಮುದಾಯಗಳ ಕನಸುಗಳನ್ನು ಹೇಗೆ ನಾಶಗೊಳಿಸುತ್ತವೆ ಎಂಬುದರ ಕಡೆಗೂ ನಮ್ಮ ಲಕ್ಷ್ಯವಿರಬೇಕಾಗುತ್ತದೆ. "ಇದರಿಂದ ನಮಗೆ ಒಳ್ಳೆಯದಂತೂ ಆಗಲಿಲ್ಲ. ನಮ್ಮ ಜಮೀನು ಹೋಯಿತು. ಮನೆ ಮಠ ಹೋದವು. ಭೂಮಿಯನ್ನೇ ನಂಬಿಧ ನಮ್ಮ ಸಮಾಜಕ್ಕೆ ಇದರಿಂದ ಕೆಡುಕೇ ಹೆಚ್ಚಾಯಿತು" ಎಂದು ಕೊಂಕಣ ರೈಲ್ವೆ ಬಗ್ಗೆ ಹೇಳುವ ಸುಕ್ರಿ, ಅರಣ್ಯ ನಾಶ ಮಾಡುತ್ತಿರುವವರ ವಿರುದ್ಧ ತೀವ್ರ ನೋವಿನಿಂದ ಕಿಡಿ ಕಾರುತ್ತಾಳೆ. "ಆಗ ಅರಣ್ಯ ಹೇಗಿತ್ತು? ನಿಮಗೆ ಗೊತ್ತಿಲ್ಲ! ಸುತ್ತಲ ಏಳೇಳು ಲೋಕವೂ ಅರಣ್ಯವೇ. ಅರಣ್ಯ ಬಿಟ್ಟರೆ ಸಮುದ್ರ ಅಷ್ಟೆ. ಈಗ ಬರೇ ಎಕ್ಕೇಸನ್(ಅಕೇಶಿಯಾ)ಗಿಡ. ಅದರ ಅಡಿಯಲ್ಲಿ ಹುಲ್ಲೂ ಹುಟ್ಟುವುದಿಲ್ಲ. ಬರೀ ಬೆಂಕಿ". ಇದು ಸುಕ್ರಿಯ ಅನುಭವದ ಮಾತು.



ಉತ್ತರ ಕನ್ನಡ ಜಿಲ್ಲೆ ಪ್ರಕೃತಿಗೆ ಹೆಸರಾದ ತಾಣ. ಕಡಲು ಮತ್ತು ಪರ್ವತಗಳ ನಿರಂತರ ಚುಂಬನ ಇಲ್ಲಿ ನಡೆಯುತ್ತದೆ. ಗುಡುಗುಡಿಸಿ ಹರಿದು ಬರುವ ನದಿಗಳು ಕ್ರಮೇಣ ಪ್ರಶಾಂತವಾಗಿ ವಿಶಾಲವಾಗಿ ಬೆಟ್ಟ ಪಂಕ್ತಿಗಳನ್ನು ತಬ್ಬಿಕೊಳ್ಳುತ್ತಾ ಸಮುದ್ರದಲ್ಲಿ ಲೀನಾವಾಗುವ ರೀತಿಯಂತೂ ಅಸದೃಶ್ಯ ಅಂಕೋಲಾದಿಂದ ನಾಲ್ಕೈದು ಕಿ.ಮೀ. ಪಶ್ಚಿಮಕ್ಕೆ ಮೊರೆವ ಸಾಗರದಿಂದ ಕೆಲವೇ ಅಡಿಗಳ ಈಚೆ ಇರುವ ಒಂದು ಸುಂದರ ತಾಣ ಬಡಗೇರಿ. ಉತ್ತರ ಕನ್ನಡದ ಹಾಲಕ್ಕಿ ಒಕ್ಕಲಿಗರ ಅನೇಕ ಕೊಪ್ಪಗಳಲ್ಲಿ ಬಡಗೇರಿಯೂ ಒಂದು. ಬಡಗೇರಿಯ ಪುಟ್ಟ ರಸ್ತೆಯಲ್ಲಿನ ಇಕ್ಕೆಲಗಳಲ್ಲಿ ತೆಂಗಿನ ತೋಟಗಳ ನಡುವೆ ಗೊಪ್ಪೆ ಗೊಪ್ಪೆಯಾಗಿ ಕಟ್ಟಿಕೊಂಡ ನೂರಾರು ಗುಡಿಸಲುಗಳು, ಗುಡಿಸಲ ಮುಂದೆ ಕನ್ನಡಿಯಂತೆ ಸಾರಿಸಿ ಅಂದಗೊಳಿಸಿದ ಅಂಗಳ. ಅಂಗಳ ಮತ್ತು ಗುಡಿಸಲ ಗೋಡೆಯು ತುಂಬ ರಂಗೋಲಿ ಚಿತ್ತಾರ. ಹಾಲಕ್ಕಿ ಹೆಣ್ಣುಮಕ್ಕಳು ಪ್ರಕೃತಿಯ ಒಡಲಿನ ಸೌಂದರ್ಯವತಿಯರು. ಮುಗ್ಧತೆಯೇ ಮೈವೆತ್ತ ಎಣ್ಣೆಗೆಂಪಿನ ಮಂದಹಾಸದ ತುಟಿಗಳು. ಕುಪ್ಪಸವಿಲ್ಲದ ಬತ್ತಲು ಎದೆಗೆ ಇಳಿಬಿಟ್ಟ ರಂಗುರಂಗಿನ ಹತ್ತಾರು ಮಣಿಸರಗಳ ಮಾಲೆ. ನೀಳ ತೋಳಿಗೆ ತೋಳಬಂದಿ. ಕಾಲಿಗೆ ಕಡಗ. ಎಲೆ ಅಡಿಕೆಯ ರಂಗಿಗೆ ಕೆಂಪಾದ ಹಲ್ಲು, ಸದಾ ಬಿಸಿಲಿಗೆ ತೆರೆದುಕೊಂಡ ಬತ್ತಲೆ ಬೆನ್ನಿನ ಕಡುಗಪ್ಪು ಬಣ್ಣ ಅವರ ಶ್ರಮದ ಸಂಕೇತ. ಅವರ ದಷ್ಟಪುಷ್ಟ ಮೈಕಟ್ಟು ಮತ್ತು ಮಂದಹಾಸ ಅವರ ನಿರಂತರ ದುಡಿಮೆಯನ್ನು ಆರೋಗ್ಯಕರ ಮನಸ್ಸನ್ನು ಪ್ರತಿನಿಧಿಸುತ್ತದೆ. ಇಂಥ ಹಾಲಕ್ಕಿ ಹೆಂಗಸರಲ್ಲಿ ತಾನು ಒಬ್ಬಳಾಗಿ ವಾಸಿಸುತ್ತಿರುವ ಕಲಾವಿದೆ ಸುಕ್ರಿ. ಕೂತಲ್ಲಿ ನಿಂತಲ್ಲಿ ನೂರು ಹಾಡುಗಳನ್ನು ಚೆಲ್ಲಬಲ್ಲ ಮಾಟಗಾತಿ. ಸೋಬಾನೆ, ಜೋಗುಳ, ದೇವರ ಪದಗಳು, ಕಥನ ಕವನಗಳು ಮುಂತಾಗಿ ಹೇರಳ ಸಂಪತ್ತನ್ನೇ ತನ್ನೆದೆಯಲ್ಲಿ ತುಂಬಿಕೊಂಡಿರುವ ಸುಕ್ರಿ ಹಾಡಲು ಕುಳಿತಳೆಂದರೆ ಹಲವು ರಾತ್ರಿಗಳು ಹಗಲಾಗುತ್ತವೆ. ಕೇಳಲು ಕುಳಿತ ಮನಸ್ಸುಗಳು ಮುದಗೊಳ್ಳುತ್ತವೆ.

ಇಂಥ ಸಮೃದ್ಧ ಹಾಡುಗಾರ್ತಿ ಸುಕ್ರಿ ಕೇವಲ ಪದ ಹಾಡುವವಳಷ್ಟೇ ಅಲ್ಲ. ಹರಳು ಹುರಿದಂತೆ ನಿರರ್ಗಳವಾಗಿ ಮಾತನಾಡುತ್ತಾ ಎಂಥವರ ಜೊತೆಗೂ ವಾದಕ್ಕೂ ಇಳಿಯಬಲ್ಲ ಛಲಗಾತಿ. ಹಾಲಕ್ಕಿ ಒಕ್ಕಲಿಗರ ಬಡತನ, ಉತ್ತರ ಕನ್ನಡದ ಆರ್ಥಿಕ ಸಾಮಾಜಿಕ ಅಸಮಾನತೆ, ಪರಿಸರ ನಾಶ, ಮದ್ಯಪಾನ ಪಿಡುಗು ಮುಂತಾಗಿ ತನ್ನದೇ ಅನಿಸಿಕೆಗಳನ್ನು ನಿರ್ಭೀತಿಯಿಂದ ಬಿಚ್ಚಿಡುತ್ತಾಳೆ ಸುಕ್ರಿ. ಒಂದಕ್ಷರವನ್ನೂ

ಕಲಿಯದ ಈ ನಿರಕ್ಷರ ಕುಕ್ಕಿಯ ಎದೆಯಲ್ಲಿ ಬಹುದೊಡ್ಡ ಜ್ಞಾನಜ್ಯೋತಿಯಂತೂ ಇದೆ. ಅದರ ಪ್ರಭೆ ಅಕ್ಷರ ಕಲಿತವರನ್ನು ಮಣಿಸುತ್ತದೆ. ಮಹಾಕವಿಯೊಬ್ಬನ ಸಾನಿಧ್ಯದಂತೆ ಅಲ್ಲಿ ಅವರ್ಣನೀಯ ಅನುಭವ ಉಂಟಾಗುತ್ತದೆ. ಪ್ರತಿಯೊಂದನ್ನೂ ಕಥೆಯ ಮೂಲಕ, ಹಾಡಿನ ಮೂಲಕ ಅಥವಾ ದುಷ್ಟಾಂತಗಳ ಮೂಲಕವೇ ವರ್ಣಿಸಿ ಹೇಳುವ ಸುಕ್ರಿ ಹುಟ್ಟು ಕಲಾವಿದೆ ಎಂಬುದಂತೂ ನಿರ್ವಿವಾದ.

ಸುಮಾರು 65ವರ್ಷಗಳನ್ನು ಕಳೆದಿರುವ ಸುಕ್ರಿಯ ಜೀವನ ಕೂಡ ಒಂದು ಕಾದಂಬರಿಗೆ ವಸ್ತುವಾಗುವಂಥದ್ದು. ತನ್ನ ಹನ್ನೆರಡನೇ ವರ್ಷಕ್ಕೆ ಮದುವೆಯಾದ ಸುಕ್ರಿಯನ್ನು ಗಂಡನ ಮನೆಗೆ ಹೆಗಲ ಮೇಲೆ ಕೂರಿಸಿಕೊಂಡು ಹೊತ್ತು ತರುತ್ತಾರೆ. ಮದುವೆಯಾದ ಬೊಮ್ಮಗೌಡನಿಗೆ ಆಗ 48 ವರ್ಷಗಳಂತೆ! ಹೆಣ್ಣುಗಳು ಸಿಗುವುದೇ ಅಪರೂಪವಾಗಿದ್ದ ಆ ಕಾಲದಲ್ಲಿ ಬೊಮ್ಮಗೌಡ ಕಾದು ಕಾದು 12 ವರ್ಷದ ಬಾಲೆ ಸುಕ್ರಿಯನ್ನು ವರಿಸಿದ್ದ! "ಅಮ್ಮನೋರು ಮೈನೆರೆದಾಗ ಅಯ್ಯನೋರು ದಂಡಿಗೆ ಏರುದ್ರು" ಎಂದೂ "ಮುದುಕನ ಹೆಂಡತಿ" ಎಂದೂ ಜನ ಕೀಟಲೆ ಮಾಡಿದ್ದುಂಟು. ಕೂಲಿಯೇ ಜೀವನ. ಕಟ್ಟಿಕೊಂಡವನೆ ದೈವ ಎಂದು ಸುಕ್ರಿ ಬಾಳಿದಳು. ಗಂಡ ತೀರಿಕೊಂಡಾಗ ಸುಕ್ರಿಗೆ ಇನ್ನೂ ಹರೆಯ. ಅಂಕೋಲಾ ತಾಲ್ಲೂಕಿನ ಅಂಬಾರಕೊಡ್ಲಿನ ಶಿರ್ಕುಲಿಯಲ್ಲಿ ಜನ್ಮತಾಳಿದ ಸುಕ್ರಿ ತಾನು ಹುಟ್ಟಿದಾಗಿನಿಂದಲೂ ಕೂಲಿ ಮಾಡಿ ಬದುಕಿದವಳೇ. 'ಅವರೆಲ್ಲ ಎರಡು ಸಿದ್ದೆ ಅಕ್ಕಿ ತಂದರೆ ನಾನು ಒಂದು ಸಿದ್ದೆಯನ್ನಾದ್ರೂ ತರುತ್ತಿದ್ದೆ' ಎನ್ನುವ ಸುಕ್ರಿಗೆ ಮಹಾ ಸ್ವಾಭಿಮಾನ. ಅಷ್ಟೆಲ್ಲ ಕಷ್ಟದಲ್ಲಿ ಬೆಳೆದುಬಂದ ಅನುಭವವಿದ್ದುದರಿಂದಲೇ ವಿಧವೆಯಾಗಿಯೂ ಸ್ವಾಭಿಮಾನಿ ಬದುಕನ್ನೇ ಸುಕ್ರಿ ನೀಸಿದ್ದಾಳೆ. ಇವತ್ತಿಗೂ ಕೂಲಿಯೇ ಜೀವನಾಧಾರ. ಹಾಲಕ್ಕಿ ಸಮಾಜದಲ್ಲಿ ವಿಧವಾ ವಿವಾಹಕ್ಕೆ ಅವಕಾಶವಿದೆ. ಹಾಗೆ ಆಗಬಹುದಿತ್ತಲ್ಲಾ ಎಂಬ ಪ್ರಶ್ನೆ ಹಾಕಿದ್ದೇ ತಡ, ಸುಕ್ರಿ ಒಂದು ಹಾಡಿನ ಮೂಲಕ ಕಥೆ ಹೇಳಲು ಆರಂಭಿಸಿದಳು. ಅದು ಒಂದು ನವಿಲಿನ ಕಥೆ. ಗಂಡು ನವಿಲಿಗೆ ಬಾಣ ಬಿದ್ದು ಸಾಯುತ್ತದೆ. ಬಾಣ ಬಿಟ್ಟ ಬೇಟೆಗಾರ ಇನ್ನೊಂದು ಗಂಡನ ತರಿಸಿಕೊಡುವ ಎನ್ನುತ್ತಾನೆ. ಇದ್ದ ಪತಿಯೇ ಹೋದ ಮ್ಯಾಲೆ ಮತ್ತೊಂದು ಗಂಡನ ಗೊಡವೆಯಾಕೆ? ಬೇಡ ಎಂದು ಹೆಣ್ಣು ನವಿಲು ತಿರಸ್ಕರಿಸುತ್ತದೆ. ನವುಲಕ್ಕಿಯೇ ಹಾಗೆ ಮಾಡಿದಾಗ ನರಮನುಷ್ಯೆಯಾದ ನಾನು ಯಾಕೆ ಹಾಗೆ ಮಾಡಬೇಕು? ಇದು ಸುಕ್ರಿಯ ಅಂತರಾಳದ ನೈತಿಕ ನಂಬಿಕೆ.



ಸುಕ್ರಿ ಇಷ್ಟೆಲ್ಲ ಕತೆ ಕಾವ್ಯಗಳನ್ನು ಹೇಗೆ ಕಲಿತಳು? ಹಾಗೆ ನೋಡಿದರೆ ಇಡೀ ಹಾಲಕ್ಕಿ ಸಮಾಜವೇ ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತವಾದದ್ದು. ಶಿವ ಮತ್ತು ಪಾರ್ವತಿಯರು ಕೊಟ್ಟ ಹಾಲು-ಅಕ್ಕಿಯಿಂದಲೂ ಬಲೀಂದ್ರದೇವ ನೀಡಿದ ಭೂಮಿ ಮತ್ತು ಬೆಳೆಯಿಂದಲೂ ನಾವು ಬದುಕಿದ್ದೇವೆ ಎಂದು ನಂಬುವ ಈ ಜನರ ಇಡೀ ಬದುಕು ಬಣ್ಣ ಬಣ್ಣದ್ದು. ಸುಗ್ಗಿಹಬ್ಬ, ತೊಳಸಿಹಬ್ಬ, ಹೊಸತಿನ ಹಬ್ಬ, ಬೂರೆ ಹಬ್ಬ, ಗದ್ದೆ ಗಂಡನ ಹಬ್ಬ, ಬಲೀಂದ್ರನ ಹಬ್ಬ ಮುಂತಾಗಿ ತಮ್ಮದೇ ವೈಶಿಷ್ಟ್ಯದ ಹಬ್ಬಾಚರಣೆಗಳನ್ನುಮಾಡುವ ಇವರಲ್ಲಿ ಅಳೆದಷ್ಟೂ ಹಾಡುಗಳ ಬಳ್ಳ. ಮೊಗೆದಷ್ಟೂ ಕಥೆಗಳ ಸಾಗರ. ಗುಮಟೆಯ ಸದ್ದಿಗೆ ತಕ್ಕಂತೆ ಕುಣಿಯುತ್ತಾ ಹಾಡುವ ಗಂಡಸರ ಲೆಕ್ಕವಿಲ್ಲದಷ್ಟು ಸುಗ್ಗಿ ಹಾಡುಗಳಿಗೆ ಸರಿಸಮನಾಗಿ ಹೆಂಗಸರ ಹಾಡುಗಳೂ ಇವೆ. ತಮ್ಮದೇ ನ್ಯಾಯಪದ್ಧತಿ, ತಮ್ಮದೇ ವೈವಾಹಿಕ ಪದ್ಧತಿ ಹಾಗೂ ತಮ್ಮದೇ ಆದ ಹಲವು ಪರಂಪರಾಗತ ಜ್ಞಾನ ಪದ್ಧತಿಗಳನ್ನು ಈಗಲೂ ಉಳಿಸಿಕೊಂಡು ಬಂದಿದ್ದಾರೆ ಹಾಲಕ್ಕಿಗಳು. ಇಂಥ ಹಾಲಕ್ಕಿಗಳ ಸುಂದರ ಸಮಾಜದಲ್ಲಿ ಅರಳಿದ ಕಾಡಿನ ಕುಸುಮ ನಮ್ಮ ಸುಕ್ರಿ. ತನ್ನ ತಾಯಿ ದೇವಿ ಮತ್ತು ಅಜ್ಜಿಯಿಂದ ಆರಂಭದಲ್ಲಿ ಕಲಿತು ನಂತರ ತನ್ನ ಪರಿಸರದಿಂದ ಹಾಡು ಕಲಿತ ಸುಕ್ರಿ, ತನ್ನ ಪ್ರತಿಭಾಶಕ್ತಿಯನ್ನು ಅದಕ್ಕೆ ಬೆರೆಸಿ ಹೊಸ ಹೊಸ ಜನಪದ ಹಾಡುಗಳ ಉದಯಕ್ಕೆ ಕಾರಣಳಾದವಳು. ತನ್ನ ಮುಂದೆ ನಿಂತ ಯಾರನ್ನು ಕುರಿತು ಬೇಕಾದರೂ ತಟ್ಟನೆ ಹಾಡುಕಟ್ಟಿ ಹಾಡಬಲ್ಲ ಜಾಣ್ಮೆಯುಳ್ಳ ಸುಕ್ರಿ ಪರಂಪರೆಯನ್ನು ಕೂಡ ಬಿಟ್ಟವಳಲ್ಲ. ಮೂಲ ಧಾಟಿ, ಬನಿ ಹಾಗೂ ದನಿಗಳನ್ನು ಕಾಪಾಡಿಕೊಂಡು ಬಂದದ್ದಲ್ಲದೆ ತನ್ನ ಸುತ್ತಲ ಬಳಗಕ್ಕೂ ಅದನ್ನು ಕಲಿಸುವ ಹಠ ಮತ್ತು ಔದಾರ್ಯ ಅವಳದು. ಮಾದೇವರಾಯ. ಚಂದನರಾಯ, ರಾಮ - ಲಕ್ಷ್ಮಣ. ಐರಾವತ. ಕುಂತಿಕಥೆ, ಸಿರಿಕವುಲಿ ಮುಂತಾದ ಕಾವ್ಯಗಳನ್ನು ಹಾಡುವ ಸುಕ್ರಿ ಬಲಿಂದ್ರರಾಯ. ಗೋವಿಂದರಾಯ. ತಂಗಿ ತುಳಸಮ್ಮ ಹಾಗೂ ಕರಿದೇವರ ಬಗೆಗಿನ ಕಥನ ಕವನಗಳನ್ನು ಹಾಡುತ್ತಾಳೆ. ಕಳೆ, ನಾಟಿ, ಮದವೆ, ಸೋಬಾನೆ, ಸುಗ್ಗಿ, ಮುಂತಾದ ಬಿಡಿ ಹಾಡುಗಳಂತೂ ಲೆಕ್ಕವಿಲ್ಲ.

ಆಧುನಿಕ ವ್ಯವಸ್ಥೆ ಹಾಗೂ ಕಲುಷಿತಗೊಂಡ ಮನಸ್ಸುಗಳ ಬಗ್ಗೆ ಸುಕ್ರಿಗೆ ಎಲ್ಲಿಲ್ಲದ ಕೋಪ. ತಮ್ಮ ಸಮಾಜದ ಗೌಡ - ಬುಧವಂತರ 'ಸೀಮೆ ಹಾಗೂ ಚಪ್ಪರಕೂಟ'ದ ನ್ಯಾಯಪದ್ಧತಿಯೇ ಸರಿಯಾದದ್ದು ಎಂದು ನಂಬಿರುವ ಸುಕ್ರಿಗೆ ಕಿತ್ತಾಡಿ ಕೋರ್ಟು ಕಚೇರಿ ಹತ್ತುವವರ ಬಗ್ಗೆ



ತೀವ್ರವಾದ ಮರುಕವಿದೆ. ಮದ್ಯಪಾನದಿಂದಾಗಿ ಇಡೀ ಸಮಾಜಕ್ಕೆ ಸಮಾಜವೇ ನಾಶವಾಗುತ್ತಿದೆ ಎಂದು ಮರುಗುವ ಸುಕ್ರಿ, ಮದ್ಯಪಾನ ವಿರುದ್ಧದ ಚಳವಳಿಯಲ್ಲಿ ಮುಂಚೂಣಿ ನಾಯಕತ್ವ ವಹಿಸಿದ್ದಾಳೆ. ಡಿ. ಕುಸುಮಾ ಸೊರಬ ಅವರ ಮಾರ್ಗದರ್ಶನದಲ್ಲಿ ಸಾವಿರಾರು ಹಾಲಕ್ಕಿ ಮಹಿಳೆಯರನ್ನು ಒಟ್ಟುಗೂಡಿಸಿ, ಅಂಕೋಲಾ, ಕಾರವಾರ, ಶಿರ್ಶಿ ಹಾಗೂ ಬೆಳಗಾವಿ ಜಿಲ್ಲಾಧಿಕಾರಿ ಕಚೇರಿಗಳ ಮುಂದೆ ಧರಣಿ ನಡೆಸಿದ್ದಾಳೆ. ತನ್ನ ಪ್ರಯತ್ನದಿಂದಾಗಿಯೇ ಬಡಗೇರಿ ಕೊಪ್ಪದಲ್ಲಿ ಇಂದು ಯಾವ ಗಂಡಿಗೂ ಮದ್ಯಪಾನ ಮಾಡುವ ಧೈರ್ಯ ಇಲ್ಲ ಎಂದು ಸುಕ್ರಿ ಹೆಮ್ಮೆಯಿಂದ ಹೇಳಿಕೊಳ್ಳುತ್ತಾಳೆ.

ಬಡಗೇರಿಯ ಹಾಲಕ್ಕಿ ಹೆಣ್ಣುಮಕ್ಕಳನ್ನು ಒಂದುಗೂಡಿಸಿ ಅವರಿಗೆ ಪ್ರಾಚೀನ ಕುಣಿತಗಳೆನಿಸಿದ 'ತಾರ್ಲೆ, ಪಗಡೆ, ಬಿದರಂಡೆ' ಮುಂತಾದ ಕಲೆಗಳನ್ನು ಕಲಿಸುತ್ತಿರುವ ಸುಕ್ರಿಗೆ ಅವುಗಳನ್ನು ಉಳಿಸುವ ಅಪಾರ ಆತ್ಮವಿಶ್ವಾಸವಿದೆ. ತನಗೆ ಬಂದ ಜಾನಪದಶ್ರೀ ಪ್ರಶಸ್ತಿ ಇಡೀ ನಮ್ಮ ಹಾಲಕ್ಕಿ ಸಮಾಜಕ್ಕೇ ಬಂದದ್ದು ಎಂದು ವಿನಯದಿಂದ ಹೇಳುತ್ತಾಳೆ. ಇಂಥ ಮಹಾನ್ ವ್ಯಕ್ತಿತ್ವದ ಬುಡಕಟ್ಟು ಕಲಾವಿದೆಯನ್ನು ಗುರುತಿಸಿ ಜಾನಪದ ಶ್ರೀ ಪ್ರಶಸ್ತಿ ನೀಡುವ ಮೂಲಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸರ್ಕಾರ ತನ್ನನ್ನು ಗೌರವಿಸಿಕೊಂಡಿದೆ.

- ಹಿ ಚಿ ಬೋರಲಿಂಗಯ್ಯ



## ಪಿ. ಕಾಳಿಂಗರಾವ್

'ಕಿನ್ನರ ಕಂಠದ ಕನ್ನಡದ ಕೋಗಿಲೆ' ಎಂಬ ಅಭಿಧಾನಕ್ಕೆ ಪಾತ್ರರಾಗಿದ್ದ ಖ್ಯಾತ ಗಾಯಕರಾಗಿ ಕರ್ನಾಟಕದ ಮನೆಮಾತಾಗಿರುವ ಪಿ. ಕಾಳಿಂಗರಾವ್ ಕನ್ನಡ ಸುಗಮ ಸಂಗೀತದ ಆದ್ಯ ಪ್ರವರ್ತಕ ಎಂಬ ಕೀರ್ತಿಗೂ ಭಾಜನರಾದವರು. ದಕ್ಷಿಣ ಕನ್ನಡ (ಈಗಿನ ಉಡುಪಿ) ಜಿಲ್ಲೆಯ ಆರೂರಿನಲ್ಲಿ ೧೯೧೪ ರಲ್ಲಿ ಜನಿಸಿದ ಕಾಳಿಂಗರಾವ್ ಅವರ ತಂದೆ ನಾರಾಯಣರಾವ್. ತಾಯಿ ನಾಗರತ್ನಮ್ಮ. ಪಾಂಡೇಶ್ವರ ಪುಟ್ಟಯ್ಯ ಎಂಬ ಅಡ್ಡ ಹೆಸರಿನಲ್ಲೆ ಪ್ರಸಿದ್ಧರಾಗಿದ್ದ ನಾರಾಯಣರಾವ್ ಯಕ್ಷಗಾನದ ಕಲಾವಿದರು. ಯಕ್ಷಗಾನ ಕ್ಷೇತ್ರದಲ್ಲಿ ರಾಷ್ಟ್ರಮಟ್ಟದಲ್ಲಿ ಖ್ಯಾತಿಗಳಿಸಿದ್ದ ಹಾರಾಡಿ ರಾಮಗಾಣಿಗರ ಗುರುಗಳು.

ಬಾಲಕನಾಗಿದ್ದಾಗಲೇ ಕಾಳಿಂಗರಾವ್ ಅವರಿಗೆ ಕಲೆಯ ಬಗ್ಗೆ ವಿಶೇಷ ಆಸಕ್ತಿ. ಶಾಲಾ ದಿನಗಳಲ್ಲೇ ರಂಗಭೂಮಿಯ ಪ್ರವೇಶ. ಬಾಲಕನಲ್ಲಿ ಅಡಗಿದ್ದ ಕಲೆಯ ಪ್ರತಿಭೆಗೆ ಪ್ರೋತ್ಸಾಹ ನೀಡಿ ಬೆಳಗಿವರು ಸೋದರಮಾವ ಸೂರಾಲ್ ಮಂಜಯ್ಯ. ಕಾಳಿಂಗನಲ್ಲಿದ್ದ ಸಂಗೀತಾಸಕ್ತಿಯನ್ನು ಕಂಡ ಅವರು. ಸಂಸ್ಕೃತ ಶ್ಲೋಕ, ದೇವರನಾಮ ಹಾಗೂ ಭಕ್ತಿಗೀತೆಗಳನ್ನು ಹೇಳಿಕೊಟ್ಟರು. ಸಂಗೀತದ ಜೊತೆ ಜೊತೆಗೆ ಯಕ್ಷಗಾನ - ನಾಟಕದ ಗೀಳೂ ಅಂಟಿಕೊಂಡಿತು.

ಸೂರಾಲ್ ಅರಮನೆಯಲ್ಲಿ ಪಾರುಪತ್ಯ ಮಾಡುತ್ತಿದ್ದ ಸಂಬಂಧಿಯೊಬ್ಬರು ಕಾಳಿಂಗರಾಯರನ್ನು ಸೂರಾಲ್ ಅರಮನೆಯ ರಾಯಲ್ ಸ್ಕೂಲ್‌ಗೆ ಸೇರಿಸಿದರು. ಶಾಲೆಯ ಪಠ್ಯಪುಸ್ತಕಗಳಲ್ಲಿದ್ದ ಪದ್ಯಗಳೆಲ್ಲ ರಾಯರಿಗೆ ಕಂಠಪಾಠ. ಆದರೆ ಗದ್ಯ ಮಾತ್ರ ತಲೆಗೆ ಹತ್ತುತಲೆ ಇರಲಿಲ್ಲ. ಶಾಲಾ ವಾರ್ಷಿಕೋತ್ಸವದ ಸಂದರ್ಭ 'ಚಂದ್ರಹಾಸ' ನಾಟಕ ಪ್ರದರ್ಶನ. ಕಾಳಿಂಗನೇ ಚಂದ್ರಹಾಸ. ಬ್ರಿಟಿಷ್ ಅಧಿಕಾರಿಯೊಬ್ಬ ಅಂದಿನ ಕಾರ್ಯಕ್ರಮದ ಅಧ್ಯಕ್ಷ. ಚಂದ್ರಹಾಸನ ಪಾತ್ರಾಭಿನಯ ಕಂಡು ಬೆರಗಾದ ಅವರು ಚಿನ್ನದ ಪದಕ ನೀಡಿ ಪುರಸ್ಕರಿಸಿದರು. ಈ ವಿಷಯ ಆಗ ಪ್ರಸಿದ್ಧವಾಗಿದ್ದ 'ಅಂಬಾ ಪ್ರಸಾದಿತ ನಾಟಕ ಮಂಡಲಿ'ಯ ಮುಂಡಾಜೆ ರಂಗನಾಥ ಭಟ್ಟರ ಕಿವಿಗೆ ಬಿತ್ತು. ಹುಡುಗನನ್ನು ಅವರು ತಮ್ಮ ಕಂಪನಿಗೆ ಆಹ್ವಾನಿಸಿದರು. ಐದನೇ ತರಗತಿಗೆ ವಿದಾಯ ಹೇಳಿದ ಕಾಳಿಂಗ ನಾಟಕ ಕಂಪನಿ ಸೇರಿ - ಕೃಷ್ಣ, ಲೋಹಿತಾಶ್ವ, ಧ್ರುವ ಮುಂತಾದ ಬಾಲ ಪಾತ್ರಗಳಲ್ಲಿ ಮಿಂಚಿದ ಅಭಿನಯದ ಜೊತೆಗೆ ಮುಂಡಾಜೆ ರಂಗನಾಥ ಭಟ್ಟರು ಹುಡುಗನಿಗೆ ಕರ್ನಾಟಕ ಸಂಗೀತದ ಶಿಕ್ಷಣವನ್ನು ನೀಡಿದರು.

ಹದಿನಾರರ ಹರೆಯದಲ್ಲಿ ಒಮ್ಮೆ ಕಾಳಿಂಗರಾವ್ ಶಿವಮೊಗ್ಗದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ ನೀಡಿದರು. ಹುಡುಗನ ಪ್ರತಿಭೆಗೆ ಬೆರಗಾದ ಜನ ಶಲ್ಯ,ಉಂಗುರ ನೀಡಿದರಲ್ಲದೆ ಚಿನ್ನದತೋಡ ತೊಡಿಸಿ ಗೌರವಿಸಿದರು. ಕರ್ನಾಟಕದ ಸಂಗೀತದ ಜೊತೆಗೆ ಕಾಳಿಂಗರಾವ್, ರಾಮಚಂದ್ರ ಬುವ, ಮಳೇಕರ್, ವೆಂಕಟರಾವ್ ರಾಮ್‌ದುರ್ಗ ಅವರುಗಳಲ್ಲಿ ಹಿಂದೂಸ್ತಾನಿ ಸಂಗೀತವನ್ನು ಅಭ್ಯಾಸ ಮಾಡಿದರು. ಜೊತೆಗೆ ನಾಟಕದ ಕಂಪನಿಯಲ್ಲಿ ಬಾಲಕನ ಪಾತ್ರಗಳಿಂದ ಸ್ತ್ರೀ ಪಾತ್ರಕ್ಕೆ ಬಡ್ತಿ ಪಡೆದರು !

ಮುಂದೆ ಗುಬ್ಬಿ ಕಂಪನಿ ಸೇರಿದ ಕಾಳಿಂಗರಾಯರು 'ದಶಾವತಾರ' ನಾಟಕಕ್ಕೆ ಸಂಗೀತ ನೀಡಿದರು. ಸದಾ ಹೊಸ ದಿಕ್ಕುಗಳತ್ತ ಅನ್ವೇಷಣೆಯ ತವಕದಿಂದ ದುಡಿಯುತ್ತಿದ್ದ ರಾಯರನ್ನು ಮುಂದೆ ಆಕರ್ಷಿಸಿದ್ದು ಚಲನಚಿತ್ರರಂಗ. ಹಾಗಾಗಿ ಮದ್ರಾಸಿಗೆ ಪ್ರಯಾಣ.

'ರಾಯರ ಸೊಸೆ', 'ವಸಂತ ಸೇನಾ', 'ಕೃಷ್ಣಲೀಲಾ', 'ಜೀವನ ನಾಟಕ', 'ಮಹಾನಂದ', - ಮೊದಲಾದ ಚಿತ್ರಗಳಲ್ಲಿ ನಟನೆ ಜೊತೆಗೆ ಕೆಲವಕ್ಕೆ ಸಂಗೀತವನ್ನೂ ನೀಡಿದರು. ಸಂಗೀತದ ಬಗ್ಗೆ ರಾಯರಿಗಿದ್ದ ಅಸಾಧಾರಣ ಪ್ರತಿಭೆ ಗುರುತಿಸಿ ಮದ್ರಾಸಿನ ದಕ್ಷಿಣ ಹಿಂದಿ ಪ್ರಚಾರ ಸಭೆಯವರು ತಮ್ಮ ಹಿಂದಿ ಸಂಗೀತ ಕಾಲೇಜಿಗೆ ರಾಯರನ್ನು ಪ್ರಾಂಶುಪಾಲರನ್ನಾಗಿ ನೇಮಿಸಿಕೊಂಡರು. ಅಲ್ಲಿಯ ಶಿಷ್ಯವೃಂದದಲ್ಲಿ ರಾಯರಿಗೆ ದೊರಕಿದವರು ಸೋಹನ್‌ಕುಮಾರಿ ಹಾಗೂ ಮೋಹನ್‌ಕುಮಾರಿ ಸಹೋದರಿಯರು.

ಸೋಹನ್‌ಕುಮಾರಿ, ಮೋಹನ್‌ಕುಮಾರಿ ಜೋಡಿ ಕಾಳಿಂಗರಾಯರ ಜೊತೆಗೂಡಿ ಹಾಡುವುದರೊಂದಿಗೆ ಸುಗಮ ಸಂಗೀತಕ್ಕೆ ಜಾನಪದ ಗೀತೆಗಳಿಗೆ ಹೊಸ ಬೆಡಗು ನೀಡುವುದರಲ್ಲಿ ಯಶಸ್ವಿಯಾದರು. 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಹುಯಿಲಗೋಳ ನಾರಾಯಣ ರಾಯರ ಕವನವನ್ನು ಕನ್ನಡ ನಾಡಿನ ಉದ್ದಗಲವೂ ಹಾಡುವ ಮೂಲಕ 'ಕರ್ನಾಟಕ ಏಕೀಕರಣ'ಕ್ಕೆ ರಾಯರು ನೀಡಿದ ಕೊಡುಗೆ ಅಮೂಲ್ಯ, ಅಪಾರ.

'ಬಾರಯ್ಯ ಬೆಳದಿಂಗಳೇ', 'ಮೂಡಲ್ ಕುಣಿಗಲ್ ಕೆರೆ', 'ಅದು ಬೆಟ್ಟ ಇದು ಬೆಟ್ಟ' ಮುಂತಾದ ಜಾನಪದ ಗೀತೆಗಳಿಗೆ ಹೊಸ ಧಾಟಿ ಹಾಕಿ ಹಾಡುವ ಮೂಲಕ ಅವುಗಳನ್ನು ಜನಪ್ರಿಯ ಗೊಳಿಸಿದ ರಾಯರು ದಾಸರ ಪದ, ವಚನ ಹಾಗೂ ಭಾವಗೀತೆಗಳಿಗೂ ಹೊಸ ರೀತಿಯಲ್ಲಿ ಸ್ವರ ಸಂಯೋಜಿಸಿ ಜನರನ್ನು ಆಕರ್ಷಿಸುವುದರಲ್ಲಿ ಯಶಸ್ವಿಯಾದರು.





ಸಂಗೀತದ ನೆಲೆಯಲ್ಲಿ ಮಾತ್ರ ಗೀತೆಗಳನ್ನು ಗ್ರಹಿಸದೆ, ಸಾಹಿತ್ಯದ ಜವಾಬ್ದಾರಿಯಿಂದ ಕವಿತೆಯ ಅರ್ಥಕ್ಕೆ ಪ್ರಾಧಾನ್ಯತೆ ಕೊಟ್ಟು ಹಾಡುತ್ತಿದ್ದುದು ರಾಯರ ಹೆಚ್ಚುಗಾರಿಕೆ.

ದೆಹಲಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ರಾಯರ ಗಾಯನವನ್ನು ಆಲಿಸಿದ ಜವಾಹರ್‌ಲಾಲ್ ನೆಹರು, ರಾಯರ ಬೆನ್ನತಟ್ಟಿ "ಯು ಹ್ಯಾವ್ ಗಾಟ್ ಗೋಲ್ಡ್ ಮೈನ್ ಇನ್ ಯುವರ್ ವಾಯ್ಸ್" ಎಂಬ ನುಡಿಗಳು ರಾಯರ ಪ್ರತಿಭೆಯ ಕಿರೀಟಕ್ಕೆ ಮೂಡಿಸಿದ ಚಿನ್ನದ ಗರಿ.

'ಕಿತ್ತೂರು ಚೆನ್ನಮ್ಮ', 'ಅಬ್ಬಾ ಆ ಹುಡುಗಿ', 'ಅಣ್ಣ ತಂಗಿ' , "ತುಂಬಿದ ಕೊಡ' ಮುಂತಾದ ಚಲನ ಚಿತ್ರಗಳಲ್ಲೂ ರಾಯರು ಹಾಡಿದ್ದಾರೆ. ಅದರಲ್ಲೂ 'ತಾಯಿ ದೇವಿಯನು ಕಾಣ ಹಂಬಲಿಸಿ ಕಾಯುತಿಹೆ ಭ್ರಮೆಯಾವರಿಸಿ', 'ಇಳಿದು ಬಾ ತಾಯಿ ಇಳಿದು ಬಾ', 'ಅಂತಿಂಥ ಹೆಣ್ಣು ನೀನಲ್ಲ', 'ಬ್ರಹ್ಮ ನಿನಗೆ ಜೋಡಿಸ್ತೀನಿ ಹೆಂಡ ಮುಟ್ಟಿದ ಕೈನ'.- ಹಾಡುಗಳು ಇಂದಿಗೂ ರಸಿಕರ ಮನಸೂರೆಗೊಳ್ಳುವಂಥದ್ದು. ರಾಜರತ್ನಂ ಅವರ 'ರತ್ನನ್ ಪದ'ಗಳಿಗೆ ಪಾಶ್ಚಿಮಾತ್ಯ ಸಂಗೀತದ ಧಾಟಿ ಬಳಸಿರುವುದು ರಾಯರ ಪ್ರಯೋಗಶೀಲತೆಗೆ ಹಿಡಿದ ಕೈಗನ್ನಡಿ.

ಮೀನಾಕ್ಷಮ್ಮ ರಾಯರ ಪತ್ನಿ. ಪ್ರೇಮ, ವಸಂತ್, ಶರತ್ ಹಾಗೂ ಸಂತೋಷ್- ರಾಯರ ಮಕ್ಕಳು. ತಮ್ಮ ಚಿನ್ನದ ಕಂಠದ ಮೂಲಕ ಕನ್ನಡಿಗರ ಮನೆ-ಮನಗಳಲ್ಲಿ ಸದಾ ಹಚ್ಚ ಹಸಿರಾಗಿರುವ ಕಾಳಿಂಗರಾಯರು ೧೯೮೧ ರಲ್ಲಿ ಇನ್ನಿಲ್ಲವಾದರು.

- ಶಶಾಂಕ

## ಬಾಳಪ್ಪ ಹುಕ್ಕೇರಿ

'ಸಾವಿರ ಹಾಡಿನ ಸರದಾರ' ಎಂದೇ ಕರ್ನಾಟಕದ ಉದ್ದಗಲವೂ ಪರಿಚಿತರಾಗಿದ್ದ ಬಾಳಪ್ಪ ಹುಕ್ಕೇರಿ ಅವರು ಕಂಠಸಿರಿಗೆ, ಹಾಡಿನ ವೈವಿಧ್ಯಕ್ಕೆ ಹೆಸರಾಗಿದ್ದವರು. ಜಾನಪದ ಗೀತೆ, ವಚನ ಹಾಗೂ ಮತ್ತಿತರ ಕವನಗಳನ್ನು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಹಾಡಿ, ಶಬ್ದಗಳಿಗೆ ವಿಶೇಷ ಭಾವಸಂಚಾರ ಮೂಡಿಸುತ್ತಿದ್ದರು ಬಾಳಪ್ಪ ಹುಕ್ಕೇರಿ. ಅವರು ಜನಿಸಿದ್ದು (೧೯೧೧) ಬೆಳಗಾವಿ ಜಿಲ್ಲೆಯ ಮುರಗೋಡದಲ್ಲಿ. ಹುಟ್ಟಿದೂರಿನಲ್ಲೇ ಕನ್ನಡ ಐದನೆಯ ತರಗತಿಯವರೆಗೆ ಕಲಿತ ಬಾಳಪ್ಪನವರು ಆಗಿನ ಕಾಲದ ಇಂಗ್ಲೀಷ್ ನಾಲ್ಕನೆಯ ಇಯತ್ತೆಯನ್ನು ಅಭ್ಯಾಸ ಮಾಡಿದ್ದು ಬೈಲಹೊಂಗಲದಲ್ಲಿ. ವಿದ್ಯಾಭ್ಯಾಸಕ್ಕಿಂತಲೂ ಸಂಗೀತದಲ್ಲೇ ಬಾಲಕ ಬಾಳಪ್ಪನಿಗೆ ಮೊದಲಿನಿಂದಲೂ ವಿಶೇಷ ಆಸಕ್ತಿ.

ಆತ್ಮಾಭಿಮಾನಕ್ಕೆ ಕುಂದುಬಾರದ ಯಾವುದೇ ಕೆಲಸವಾದರೂ ಸರಿ ಮಾಡಲು ಸಿದ್ಧ- ಇದು ಬಾಲ್ಯದಿಂದ ಹಿಡಿದು ಬಾಳಿನ ಉದ್ದಕ್ಕೂ ಬಾಳಪ್ಪನವರು ಬದುಕಿದ ರೀತಿ. ಹೀಗಾಗಿ ಚಿಕ್ಕ ವಯಸ್ಸಿನಲ್ಲೇ ಕಾಗದದ ಹೂಗಳನ್ನು ತಯಾರಿಸಿ ಮಾರುವುದರಿಂದ ಹಿಡಿದು ಹತ್ತು ಹಲವು ಬಗೆಯ ಕೆಲಸಮಾಡಿ ಜೀವನ ನಡೆಸಿದರು. ಈ ಕಷ್ಟಗಳ ನಡುವೆಯೂ ಸಂಗೀತದ ಬಗ್ಗೆ ಆಸಕ್ತಿ ಕಳೆದುಕೊಳ್ಳಲಿಲ್ಲ. ಬದಲಾಗಿ ಆ ಬಗ್ಗೆ ಒಲವು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಹೋಯಿತು. ಸಂಗೀತ ಕ್ಷೇತ್ರದಲ್ಲಿ ಬಾಳಪ್ಪನಿಗೆ ಹೆಚ್ಚು ಆಸಕ್ತಿ ಮೂಡಿಸಿ, ಪ್ರೋತ್ಸಾಹಿಸಿದವರು ಶಿವಲಿಂಗಯ್ಯಸ್ವಾಮಿ ಹಾಗೂ ಮಲ್ಲಯ್ಯನವರು.

ಸಂಗೀತ ಹಾಗೂ ವಿದ್ಯಾಭ್ಯಾಸಗಳ ನಡುವೆ ಮನಸ್ಸು ಉಯ್ಯಾಲೆ ಆಡತೊಡಗಿದ್ದ ಬಾಲಕ ಬಾಳಪ್ಪನನ್ನು ಹೆಚ್ಚಾಗಿ ಸೆಳೆದದ್ದು ಸ್ವಾತಂತ್ರ್ಯ ಸಂಗ್ರಾಮ ಚಳವಳಿ. ಆಗ ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯ ಚಳವಳಿ ಮುಖ್ಯ ಆಕರ್ಷಣೆ. ಬಾಳಪ್ಪನವರು ಅದರಲ್ಲಿ ಸಕ್ರಿಯವಾಗಿ ಪಾಲುಗೊಂಡರು. 'ಕಾಯಿದೆ ಭಂಗ ಚಳವಳಿ' ಸಮಯದಲ್ಲಿ ಅವರು ಲಾವಣಿ ಹಾಡಿ, ಪ್ರಭಾತ್ ಫೇರಿಗಳನ್ನು ನಡೆಸಿ ಜನತೆಗೆ ಸ್ವಾತಂತ್ರ್ಯದ ಬಗ್ಗೆ ತಿಳುವಳಿಕೆ



ಮೂಡಿಸುವಲ್ಲಿ ಮಹತ್ತರವಾದ ಪಾತ್ರವಹಿಸಿದರು. ಇದರ ಪರಿಣಾಮವಾಗಿ ಆಳರಸರಾಗಿದ್ದ ಬ್ರಿಟಿಷರ ಕೋಪಕ್ಕೆ ಗುರಿಯಾಗಿ ಕಠಿಣ ಕಾರಾಗೃಹವಾಸ ಅನುಭವಿಸಬೇಕಾಯಿತು (೧೯೪೨ರಲ್ಲಿ).

ಸ್ವಾತಂತ್ರ್ಯ ಚಳವಳಿಯ ಅರಿವನ್ನು ಜನರಲ್ಲಿ ಮೂಡಿಸುವ ಸಲುವಾಗಿ ಬಾಳಪ್ಪನವರು 'ಮಹಾತ್ಮ ಸೇವಾ ಸಂಗೀತ ನಾಟಕ ಮಂಡಳಿ'ಯನ್ನು ಆರಂಭಿಸಿ ತಾವೇ ನಾಟಕಗಳನ್ನು ರಚಿಸಿ ಪ್ರದರ್ಶಿಸತೊಡಗಿದರು. ಸಂಗೀತವೇ ಪ್ರಧಾನವಾದ ಈ ನಾಟಕಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಸಂದೇಶ ಅಡಗಿರುತ್ತಿತ್ತು. ನಾಟಕಗಳ ಮೂಲಕ ಮಾತ್ರವಲ್ಲ, ಜಾನಪದ ಗೀತೆ, ಭಕ್ತಿಗೀತೆ, ಭಾವಗೀತೆಗಳನ್ನು ಹಾಡುತ್ತ ಭಾರತದ ಉದ್ದಕ್ಕೂ ಸಂಚರಿಸಿದ ಬಾಳಪ್ಪನವರು ಜನರ ಮನವನ್ನು ಗೆದ್ದದ್ದು ಮಾತ್ರವಲ್ಲ: ಸ್ವಾತಂತ್ರ್ಯ ಕಹಳೆ ಮೊಳಗಿಸುವುದರಲ್ಲೂ ಯಶಸ್ವಿ ಆದರು.

ಸ್ವಾತಂತ್ರ್ಯ ಬಂದಮೇಲೆ ಬಾಳಪ್ಪನವರು ವ್ಯವಸಾಯ ಇಲಾಖೆಯಲ್ಲಿ (೧೯೪೭-೧೯೭೪) ಕ್ಷೇತ್ರ ಪ್ರಚಾರಕರಾಗಿ ಕಾರ್ಯ ನಿರ್ವಹಿಸಿದರು. ನಾಡಿನ ಹಳ್ಳಿಯ ಮೂಲೆ ಮೂಲೆಗಳಲ್ಲೂ ಕೃಷಿ ಮೊದಲಾದ ಬೋಧಪ್ರದ ವಿಷಯಗಳನ್ನು ಹಾಡುತ್ತ ಜನರಿಗೆ ಮನದಟ್ಟು ಮಾಡಿಕೊಡುವ ಕಾರ್ಯದಲ್ಲಿ ಶಕ್ತಿಮೀರಿ ಶ್ರಮಿಸಿದರು. ಇವರ ಹಾಡು ಆಕಾಶವಾಣಿ, ದೂರದರ್ಶನಗಳಲ್ಲೂ ಪ್ರಸಾರವಾಗಿದೆ.

ಬಾಳಪ್ಪನವರ ವ್ಯಕ್ತಿತ್ವದ ವಿಶೇಷವೆಂದರೆ ದೇಶಭಕ್ತಿ. ಪಾಕಿಸ್ತಾನ ಹಾಗೂ ಚೀನ ಭಾರತದ ಮೇಲೆ ಆಕ್ರಮಣ ನಡೆಸಿದ ಸಮಯದಲ್ಲಿ ತಮ್ಮ ಲಾವಣಿ, ಗಾಯನಗಳ ಮೂಲಕ ಯುವಜನಾಂಗದಲ್ಲಿ ಹೊಸ ಉತ್ಸಾಹ ಮೂಡಿಸುವಲ್ಲಿ ಸಫಲರಾದರು. ತಮಗೆ ಬಂದಿದ್ದ ಬಂಗಾರದ ಪದಕವನ್ನು ಸೈನಿಕನಿಧಿಗೆ ದಾನ ಮಾಡಿದ್ದು ಬಾಳಪ್ಪನವರ ದೇಶ ಭಕ್ತಿಗೆ ಹಿಡಿದ ಕೈಗನ್ನಡಿ. ಇವರು ರಚಿಸಿರುವ 'ವಿಶೇಷ ಗೀತೆ', 'ಭಕ್ತಿಗೀತೆ' ಕೃತಿಗಳು ಪ್ರಕಟಗೊಂಡಿವೆ.

ಕವಿ ಸಿದ್ದಯ್ಯಪುರಾಣಿಕರ 'ಏನಾದರೂ ಆಗು ನೀ ಬಯಸಿದಂತಾಗು, ಏನಾದರೂ ಸರಿಯೆ ಮೊದಲು ಮಾನವನಾಗು!' ಈ ಕವನವನ್ನು ಹೆಚ್ಚು ಜನಪ್ರಿಯಗೊಳಿಸಿದ ಹಿರಿಮೆ ಬಾಳಪ್ಪ ಹುಕ್ಕೇರಿಯವರಿಗೆ ಸಲ್ಲುತ್ತದೆ. ಹಾಗೆಯೇ ಬಸವಣ್ಣ, ಅಲ್ಲಮ, ಅಕ್ಕಮಹಾದೇವಿ ಮೊದಲಾದ ಶರಣರ ವಚನಗಳನ್ನು, ಜಾನಪದ ಗೀತೆಗಳನ್ನು ಹಾಡುವ ಮೂಲಕ ಬಾಳಪ್ಪನವರು, ಅವುಗಳ ಸವಿಯನ್ನು ಜನರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದರು. ಯಾವುದೇ ವಿಷಯವಾದರೂ ರಸವತ್ತಾಗುವಂತೆ



ANUGRAHA, BDCC BANK COLONY
SADASHIVANAGAR, A.S. GUDI
HOSPET - 583 201
PHONE : 08394 - 24861

ಸಾಹಿತ್ಯ ಸಿದ್ಧಪಡಿಸಿ ಸೊಗಸಾಗಿ ಹಾಡುವ ಸಿದ್ಧಿ ಬಾಳಪ್ಪನವರಿಗೆ ರಕ್ತಗತವಾಗಿತ್ತು. ಕನ್ನಡದ ಪ್ರಸಿದ್ಧ ಕವಿಗಳ ಅನೇಕ ಗೀತೆಗಳಿಗೆ ತಮ್ಮದೇ ಆದ ರಾಗ ಸಂಯೋಜನೆ ಮಾಡಿ ಹಾಡುತ್ತಿದ್ದುದು ಬಾಳಪ್ಪನವರ ಪ್ರತಿಭೆಯ ಮತ್ತೊಂದು ಮುಖ.

ಹುಬ್ಬಳ್ಳಿಯ ನಾಗರೀಕರು ಬಾಳಪ್ಪನವರಿಗೆ 'ಸಭಾ ಭೂಷಣ' ಎಂಬ ಬಿರುದನ್ನಿತ್ತು ಗೌರವಿಸಿದ್ದರು. ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಬಾಳಪ್ಪನವರಿಗೆ ಸಂದ ಪ್ರಶಸ್ತಿ-ಬಿರುದು ಹಲವಾರು. ಕೇಂದ್ರ ಸಂಗೀತ ನಾಟಕ ಅಕಾಡೆಮಿ, ಕರ್ನಾಟಕ ಸಂಗೀತ ಅಕಾಡೆಮಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಅವುಗಳಲ್ಲಿ ಪ್ರಮುಖವಾದವು. ಮಧ್ಯಪ್ರದೇಶ ಸರ್ಕಾರ 'ಕಾಳಿದಾಸ ಸುಮ್ಮಾನ್' ಪ್ರಶಸ್ತಿ ನೀಡಿ ಗೌರವಿಸಿದ್ದು ಬಾಳಪ್ಪನವರ ಕಿರೀಟದಲ್ಲಿದ್ದ ಪ್ರಮುಖ ಗರಿ.

'ಸಾವಿರ ಹಾಡಿನ ಸರದಾರ' ಎಂದೇ ಖ್ಯಾತಿ ಪಡೆದಿದ್ದ ಬಾಳಪ್ಪ ಹುಕ್ಕೇರಿ ಅವರು 1992ರಲ್ಲಿ ಅಗಲಿ ದೂರಸರಿದರು. ಆದರೆ ಅವರು ಹಾಡಿದ ಹಾಡುಗಳಿಗೆ ಸಾವಿಲ್ಲ.

- ಶಶಾಂಕ



## ಬಣ್ಣದ ಮಾಲಿಂಗ

ರಂಗಸ್ಥಳಕ್ಕೆ ವೇಷದ ಪ್ರವೇಶ ನಡಿರುಳು ತಳೆದ ಬಳಿಕ. ಆದರೆ ಪ್ರೇಕ್ಷಕರು ಬರುವ ಮುನ್ನವೇ ವೇಷಕ್ಕೆ ತಯಾರಿ ! ಆರೇಳು ಗಂಟೆಗಳ ಸಿದ್ಧತೆ. ಅದಕ್ಕಾಗಿ ಅಕ್ಕಿಹಿಟ್ಟು ಮತ್ತು ಸುಣ್ಣದ ಮಿಶ್ರಣ. ಪಾತ್ರಕ್ಕೆ ಅನುಗುಣವಾಗಿ ಮೋರೆಯಲ್ಲಿ ಚುಟ್ಟಿಯ ಬೊಟ್ಟುಗಳು. ಸಮಾಯಾಂತರದಲ್ಲಿ ಬೊಟ್ಟಿನ ಮೇಲೆ ಪುನಃ ಬೊಟ್ಟು. ಹಲವು ಬೊಟ್ಟುಗಳು ಸೇರಿ ಉದ್ದದ ಮುಳ್ಳುಗಳಾಗುತ್ತವೆ. ಉದ್ದುದ್ದದ ಮುಳ್ಳುಗಳು ನಿರ್ಧರಿತ ವಿನ್ಯಾಸ ಬಂದಾಗಲೇ ವಿಶ್ರಾಂತಿ. ಇದಕ್ಕೆ ಸಹನೆ, ಏಕಾಗ್ರತೆ. ಕಲಾತ್ಮಕತೆ ಬೇಕು. ಎಚ್ಚರ ತಪ್ಪಿತೋ ಚುಟ್ಟಿ ತುಂಡು. ಶ್ರಮ ವ್ಯರ್ಥ. ಸಮಯ ಹಾಳು. ತೆಂಕುತಿಟ್ಟು ಯಕ್ಷಗಾನ ಬಣ್ಣದ ವೇಷದ (ರಾಕ್ಷಸ ವೇಷ) ಸಿದ್ಧತೆಯ ಪೂರ್ವ ಪೀಠಿಕೆಯಿದು.

ಬಣ್ಣದ ಮಾಲಿಂಗ-ತೆಂಕುತಿಟ್ಟು ಯಕ್ಷಗಾನದ ಅಗ್ರಮಾನ್ಯ ಬಣ್ಣದ ವೇಷಧಾರಿ. ಯಕ್ಷರಂಗದ ದೈತ್ಯ ಕಲಾವಿದ. ಅವರು ಬಣ್ಣದ ಮನೆಗೆ (ಚೌಕಿಗೆ) ಪ್ರವೇಶಿಸಿದರೆ ಸಾಕು. ಬಣ್ಣದ ಲೋಕದಲ್ಲಿ ಲೀನವಾಗುತ್ತಾರೆ. ಕನ್ನಡಿ ಹಿಡಿದು ಮೇಕಪ್‌ಗೆ ಕೂತರೋ, ಮಾತಿಲ್ಲ. ಹರಟೆಯಿಲ್ಲ. ರಾಕ್ಷಸ ಪಾತ್ರಕ್ಕೆ ಒಪ್ಪುವ ನೀಳಕಾಯ. ತುಂಬು ಶರೀರ. ಬೀಸು ನಡೆ. ರಂಗತುಂಬುವ ತಂತ್ರ, ಮುಖಕ್ಕಿಡುವ ಚುಟ್ಟಿಗಳಲ್ಲಿ ವೈವಿಧ್ಯ. ರಂಗಕ್ಕೆ ವಂಚನೆ ಮಾಡದ ನಿರ್ವಹಣೆ-ಇದು ಮಾಲಿಂಗರ ವೇಷದ ವೈಶಿಷ್ಟ್ಯ. ರಂಗಪ್ರವೇಶದಿಂದ ಅಂತ್ಯದ ತನಕ ಅವರ ವೇಷ ಎಲ್ಲೂ ಸೋಲುವುದಿಲ್ಲ; ಬಸವಳಿಯುವುದಿಲ್ಲ. ಮಾಲಿಂಗರ ಕಲೆಗಾರಿಕೆ ಅನುವಂಶಿಕ. ಯಕ್ಷಗಾನದ್ದೇ ತಲೆಮಾರು. ಅವರ ಹಿರೇಮಗ ಮೊದಲು ವೇಷಧಾರಿ. ಕೃಷ್ಣ ಹವ್ಯಾಸಿ ಕಲಾವಿದ. ಸುಬ್ರಾಯ ಕಟೀಲು ಮೇಳದಲ್ಲಿ ಬಣ್ಣದ ವೇಷಧಾರಿ. ಮಾಲಿಂಗರ ಹುಟ್ಟು ಕೇರಳದ ಕಾಸರಗೋಡು ಜಿಲ್ಲೆಯ ಮುಳ್ಳೇರಿಯಾ ಸನಿಹದ ಕಾರಡ್ಕ ಚೆನ್ನಂಗೋಡು. ಓದಿದ್ದು ಕೇವಲ ಒಂದು ವರ್ಷ. ಚೆಂಡೆ-ಮದ್ದಲೆಗಳ ಸದ್ದು ಜೋರಾಗಿದ್ದ ಸಮಯವದು. ತಂದೆಯ ಪೆಟ್ಟಿನಿಂದ ತಪ್ಪಿಸಿ ದೂರವಿದ್ದಾರು. ಆದರೆ ಚೆಂಡೆಯ ಪೆಟ್ಟಿನಿಂದ ದೂರವಿರಲಾಗಲಿಲ್ಲ. ಆಗಲೇ ಬಣ್ಣದ

ವೇಷವೆಂದರೆ ಒಲವು. ಹದಿಮೂರರ ಹರೆಯಕ್ಕೆ ವೇಷಧಾರಿಯಾಗಬೇಕೆಂಬ ತುಡಿತ. ಆರ್ಥಿಕವಾಗಿ ಸೋತ ಕಾಲ. ತುತ್ತಿಗೂ ತತ್ವಾರ.

ತನ್ನ ಮಾವನ ಸಹಕಾರದಿಂದ ಕೊರಕ್ಕೋಡು ಮೇಳದಿಂದ ಕಲಾಜೀವನ ಆರಂಭ. ಈಗಿದ್ದಂತೆ ನಾಟ್ಯ ಶಾಲೆಗಳಿರಲಿಲ್ಲ. ಮೇಳಕ್ಕೆ ಸೇರಿ ನೋಡಿ ಕಲಿಯಬೇಕು. ಮೇಳದಲ್ಲಿ ಮಂಜಪ್ಪ ಹಾಸ್ಯಗಾರರು ಗುರುವಾದರು. ನಿತ್ಯವೇಷ, ಷಣ್ಮುಖ ಸುಬ್ರಾಯ ಕುಣಿತಗಳ ಮೂಲಕ ಪ್ರಕಾಶಕ್ಕೆ. ಆರು ತಿಂಗಳಲ್ಲಿ ನಾಟ್ಯಾರ್ಜನೆ ನಿತ್ಯವೇಷ, ಏಳನೇ ಕಟ್ಟು ವೇಷಧಾರಿ ಆಗಿ ಬೆಳವಣಿಗೆ. ಕೂಡ್ಲು ಮೇಳದಿಂದ ಎರಡನೇ ಬಣ್ಣದ ವೇಷಧಾರಿಯಾಗಿ ಎರಡನೇ ವರುಷದ ತಿರುಗಾಟ. ಅದೇ ಮೇಳದಲ್ಲಿದ್ದ ಕಾಸರಗೋಡು ಸುಬ್ಬಯ್ಯ ಶೆಟ್ಟಿಯವರಾಗ ಒಂದನೇ ಬಣ್ಣದ ವೇಷಧಾರಿ. ಅವರಿಂದ ಮುಖವರ್ಣಿಕೆ, ಆಂಗಿಕಾಭಿನಯ ಪಾತ್ರ ಚಿತ್ರಣಗಳನ್ನೆಲ್ಲಾ ಕಲಿತರು.





ಅಮರಕಂಡ ಅಯ್ಯಪ್ಪನವರ ವೇಷದ ನಡೆ, ಗತ್ತುಗಾರಿಕೆ ಆಗ ಪ್ರಸಿದ್ಧಿ. ಜೊತೆಕಲಾವಿದರಾಗಿದ್ದುಕೊಂಡೇ ಅಯ್ಯಪ್ಪನವರ ಪಾತ್ರವನ್ನು ಮನಸ್ಸಿನಲ್ಲಿ ಕಡೆದುಕೊಂಡು ಪ್ರಯತ್ನಿಸಿದರು. ಸ್ವಂತಿಕೆಯನ್ನು ಸೇರಿಸಿ ರಂಗದಲ್ಲಿ ತಂದರು. ಯಶ ಪಡೆದರು. ಹೀಗೆ ರಾಕ್ಷಸ ಪಾತ್ರಕ್ಕೆ ಇಬ್ಬರು ಪ್ರಸಿದ್ಧರ ಕೊಡುಗೆಗಳು ಮಾಲಿಂಗ ಅವರಿಗೆ ವರವಾಯಿತು. ಬಳಿಕ ಮೂಲ್ಕಿ ಮೇಳದಲ್ಲಿ ಒಂದನೇ ಬಣ್ಣದ ವೇಷಧಾರಿಯಾಗಿ ಬಡ್ತಿ. ಕದ್ರಿ, ಧರ್ಮಸ್ಥಳ, ಸುರತ್ಕಲ್ ಮತ್ತು ಕಟೀಲು ಮೇಳಗಳೂ ಸೇರಿದಂತೆ ಸುಮಾರು ಆರು ದಶಕಗಳಿಗಿಂತಲೂ ಹೆಚ್ಚು ಕಾಲ ರಂಗದಲ್ಲಿ ಓಡಾಡಿದ್ದಾರೆ. ಮಾಲಿಂಗರು ಒಮ್ಮೆಲೇ ಬಣ್ಣದ ವೇಷಧಾರಿಯಾದುದಲ್ಲ. ಮೊದಲಿಗೆ ನಿತ್ಯವೇಷ, ಸ್ತ್ರೀವೇಷ ನಂತರ ಬಣ್ಣದ ವೇಷ.

'ಮೈರಾವಣ' ಪಾತ್ರ ಮಾಲಿಂಗರ ಮಾಸ್ಟರ್‌ಪೀಸ್. ಮಹಿಷಾಸುರ, ವೀರಭದ್ರ, ಅಜಮುಖಿ, ಶೂರ್ಪನಖಿ, ಪೂತನಿ, ರಾವಣ, ಕುಂಭಕರ್ಣ, ಹಿರಣ್ಯಕಶ್ಯಪು, ತಾರಾಕಾಸುರ-ಪಾತ್ರಗಳಲ್ಲಿ ಎತ್ತಿದ ಕೈ. ಅದನ್ನಿಳಿಸುಲು ಯಾರಿಗೂ ಸಾಧ್ಯವಾಗಿಲ್ಲ. ನಿರ್ವಹಿಸುವ ಪಾತ್ರಗಳು ಒಂದರಂತೆ ಒಂದಿರುವುದಿಲ್ಲ; ಎಲ್ಲವೂ ವೈವಿಧ್ಯ

ಅವರ ಬಾಲ್ಯದ ಮೇಳದ ಸಹಪಾಠಿ ಚಂದ್ರಗಿರಿ ಅಂಬು. ಮಾಲಿಂಗರ ಮತ್ತು ಅಂಬು-ಅವರ 'ರಾವಣ-ಮೈರಾವಣ', 'ಸಂಶಪ್ತಕ' ಜೋಡಿಗಳನ್ನು ಇಂದಿಗೂ ಹಿರಿಯರು ಜ್ಞಾಪಿಸುತ್ತಾರೆ. ಕಂಸ, ಭೀಮ, ಬಕಾಸುರ, ಯಮ, ವೀರವರ್ಮ, ಕಿರಾತ-ಭೂಮಿಕೆಗಳು ಬಿಸಿರಕ್ತದ ಸಮಯದಲ್ಲಿ ಬಿಸಿಯೇರಿವೆ. ದುಶ್ಯಾಸನನನ್ನು ಕೊಲ್ಲುವ ರುದ್ರಭೀಮ, ದಕ್ಷಾಧ್ವರ ಪ್ರಸಂಗದ ವೀರಭದ್ರ, ಮಹಿಷಾಸುರ ಪಾತ್ರಗಳು ಬಣ್ಣದ ಲೋಕದ ಮೂರ್ತಶಿಲ್ಪಗಳು. ಅವರ ರುದ್ರಭೀಮನ ವೇಷ ನೋಡುವುದಕ್ಕಾಗಿಯೇ ಮೇಳಕ್ಕೆ 'ವೀಳ್ಯ' ಕೊಡುತ್ತಿದ್ದರಂತೆ.

ರಾಕ್ಷಸ ವೇಷಗಳ ತೆರೆಕ್ಲಾಸು. ತೆರೆಪರ್ಪಟಗಳು (ಪೊರಪ್ಪಾಟ್) ಮಾಲಿಂಗರದ್ದು ವಿಶಿಷ್ಟ. ಇದರಲ್ಲಿ ದಂತಧಾವನ, ಸಂಧ್ಯಾವಂದನೆ, ಶಿವಪೂಜೆ ಇತ್ಯಾದಿ. ಹೆಣ್ಣು ಬಣ್ಣದ (ಪೂತನಿ, ಶೂರ್ಪನಖಿ) ವೇಷದ ತಲೆ ಬಾಚುವುದು. ಹೇನು ಹೆಕ್ಕುವುದು. ಜಡೆ ಹೆಣೆಯುವುದು. ಹೂ ಅಲಂಕಾರ ಕ್ರಿಯೆಗಳನ್ನು ಮಾಲಿಂಗರೇ ಮಾಡಬೇಕು. ಯಕ್ಷರಾತ್ರಿಗಳನ್ನು ನಡುಗಿಸಿದ ಮಾಲಿಂಗರು ಸೋಲುವುದು ಮಾತ್ರ ಶೃಂಗಾರ ರಸದಲ್ಲಿ. "ಪ್ರಯತ್ನಿಸಿದ್ದೇನೆ. ಆದರೆ ಪರಿಣಾಮದಲ್ಲಿ ಸಪ್ಪೆ" ಎನ್ನುತ್ತಾರೆ.

ಮಾಲಿಂಗರು ರಂಗ ಪ್ರವೇಶಿಸುವಾಗ ದೊಂದಿಯುಗ ಮುಗಿದಿತ್ತು. ಮೈಕ್‌ಬಂದಿರಲಿಲ್ಲ. ಸಾರಿಗೆಯಿರಲಿಲ್ಲ. ಊರಿಂದೂರಿಗೆ ಕಾಲ್ನಡಿಗೆ. ತಲೆ ಮೇಲೆ ಪರಿಕರ. ಸರಸರ ನಡೆಯಲಾಗದ ಬಿಸಿಲು. ಬಿಡುವು ಸಿಕ್ಕಾಗ ಊಟ. ನಿದ್ದೆಯಂತೂ ದೂರದ ಮಾತು. ರಾತ್ರಿ ವೇಷದ ಕಸುಬು. ದಕ್ಷಿಣೆಯಷ್ಟು ಸಂಬಳ. ಅದೂ ಸಿಕ್ಕಿದರೆ ಸಿಕ್ಕಿತು. ಇಲ್ಲದಿದ್ದರೆ ಇಲ್ಲ.

“ಕ್ರಮೇಣ ಸುಧಾರಣೆ ಬಂತು. ಕಾಲ್ನಡಿಗೆಯ ಬದಲಿಗೆ ಸಾರಿಗೆ ವ್ಯವಸ್ಥೆಯಾಯಿತು. ಧ್ವನಿವರ್ಧಕ ಬಂತು. ಕಲಾವಿದರ ಆರೋಗ್ಯ ಸುಧಾರಿಸತೊಡಗಿತು” ಎನ್ನುತ್ತಾ ಮಾಲಿಂಗರು ಹಳೆ ಬುತ್ತಿಯನ್ನು ಬಿಚ್ಚುತ್ತಾರೆ. ಬುತ್ತಿ ಹಳತಾದರೂ ಅದರಲ್ಲಿ ಸತ್ವವಿದೆ. ಜತೆಗೆ ಸತ್ಯವಿದೆ. ಅದೆಂದೂ ಹಳಸುವುದಿಲ್ಲ. ಯಕ್ಷಗಾನದ ಗತಜೀವನವನ್ನು ಸಾರುತ್ತದೆ. ವರುಷ ಎಂಬತ್ತಮೂರು. ಅವರ ದೇಹ ಕೇಳುತ್ತಿಲ್ಲ. ನಿವೃತ್ತಿಯಾಗಿ ಆರೇಳು ವರ್ಷಗಳು ಕಳೆಯಿತು.

ಅವರದು ಸದಾ ಖಾದಿ ಉಡುಪು. ‘ಗಾಂಧಿ ಮಾಲಿಂಗ’ ಎಂಬ ಅಡ್ಡ ಹೆಸರಿದೆ. ಸರಳ ಜೀವನ, ನಿಗರ್ವಿ. ಮೃದು ಸ್ವಭಾವ. ಅವರೀಗ ಸುಳ್ಯ ಸನಿಹದ ಸಂಪಾಜೆಯಲ್ಲಿ ವಾಸ. ಕಲಾ ಜೀವನದಲ್ಲಿದ್ದಾಗ ಪ್ರಶಸ್ತಿ-ಪುರಸ್ಕಾರಗಳ ಮಹಾಪೂರವೇ ಹರಿದು ಬಂದಿದೆ. ಸಾಗರದಲ್ಲಿ ಅವರ ‘ಮಹಿಷಾಸುರ’ ಪಾತ್ರಕ್ಕೆ ನೋಟಿನ ಹಾರ ಕೊರಳಿಗೆ ಬಿದ್ದಿದೆ. ದೂರದರ್ಶನದಲ್ಲೂ ಕಾಣಿಸಿಕೊಂಡಿದ್ದಾರೆ. ವಿದೇಶಕ್ಕೂ ಹೋಗಿಬಂದಿದ್ದಾರೆ. ಸುಳ್ಯದ ತೆಂಕುತಿಟ್ಟು ಯಕ್ಷಗಾನ ಹಿತರಕ್ಷಣಾ ವೇದಿಕೆಯವರು ಸನ್ಮಾನ ಸ್ಮರಣಿಕೆಯಾಗಿ ಬಣ್ಣ ಎಂಬ ಕೃತಿಯನ್ನೂ ಮಾಲಿಂಗರಿಗೆ ಅರ್ಪಿಸಿದ್ದಾರೆ. ಇದು ಮಾಲಿಂಗರನ್ನು ಹತ್ತಿರದಿಂದ ಕಾಣಲು ಸಹಾಯಕ. ಮಾಲಿಂಗರ ವೇಷಗಳ ವೈವಿಧ್ಯ ಮತ್ತು ಬದುಕಿನ ಕ್ಷಣಗಳ ದಾಖಲಾತಿಯ ಧ್ವನಿ ಸುರುಳಿಯೊಂದು ಬಿಡುಗಡೆಯಾಗಿದೆ. ಅಲ್ಲದೆ ಹಲವಾರು ಕಡೆ ಪ್ರಾತ್ಯಕ್ಷಿಕೆ ಕಮ್ಮಟಗಳಿಗೆ ಈಗಲೂ ಮಾಲಿಂಗರೇ ಬೇಕು.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಬಣ್ಣದ ಮಾಲಿಂಗರನ್ನು ಪ್ರಶಸ್ತಿ ನೀಡಿ ಗೌರವಿಸಿದೆ. ಅಲ್ಪ ಪ್ರಮಾಣದ ಮಾಸಾಶನವೂ ಲಭಿಸುತ್ತಿದೆ.

ನಾ. ಕಾರಂತ ಪೆರಾಜೆ





## ಕೆರೆಮನೆ ಶಿವರಾಮ ಹೆಗಡೆ

ಯಕ್ಷಗಾನ ದೇಶ-ವಿದೇಶಗಳಲ್ಲಿ ಕರಾವಳಿ ಕರ್ನಾಟಕಕ್ಕೆ ವಿಶಿಷ್ಟ ಸ್ಥಾನ-ಮಾನ ದೊರಕಿಸಿಕೊಟ್ಟ ಜಾನಪದ ಕಲೆ. ಯಕ್ಷಗಾನ ಕಲೆಯ ಬಡಗುತಿಟ್ಟಿನ ಪ್ರಕಾರದಲ್ಲಿ ‘ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ’ ಬಹುಪ್ರಸಿದ್ಧವಾದ ಮೇಳ. ಸುಮಾರು ೬೫ ವರ್ಷಗಳ ಇತಿಹಾಸವಿರುವ ಈ ಮೇಳದ ಸ್ಥಾಪಕರು ಕೆರೆಮನೆ ಶಿವರಾಮ ಹೆಗಡೆ ಅವರು (೧೯೦೭-೧೯೮೨).

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಗುಣವಂತೆಯಲ್ಲಿ ಜನಿಸಿದ ಶಿವರಾಮ ಹೆಗಡೆಯವರ ತಂದೆ ಶಂಭು ಹೆಗಡೆ, ತಾಯಿ ಸುಬ್ಬಮ್ಮ. ಅಜ್ಜ ರಾಮ ಹೆಗಡೆ. ತಂದೆ-ಅಜ್ಜ ಇಬ್ಬರೂ ಪ್ರಸಿದ್ಧ ಯಕ್ಷಗಾನ ಕಲಾವಿದರು. ಆದರೆ ಕಲಾವಿದ ಶಿವರಾಮ ಹೆಗಡೆ ವ್ಯಕ್ತಿತ್ವದ ಮೇಲೆ ತಾಯಿ ಸುಬ್ಬಮ್ಮ ಬೀರಿದ ಪ್ರಭಾವ ಅಪಾರ. ಸುಬ್ಬಮ್ಮ ಅವರಿಗೆ ಮಧುರವಾದ ಕಂಠದ ಜೊತೆಗೆ ಯಕ್ಷಗಾನದಲ್ಲೂ ವಿಶೇಷ ಆಸಕ್ತಿ. ‘ಕಾರ್ತವೀರ್ಯಾರ್ಜುನ ಕಾಳಗ’, ‘ಶ್ರೀಕೃಷ್ಣ ಸಂಧಾನ’ ಮುಂತಾದ ಪ್ರಸಂಗಗಳ ಪದ್ಯಗಳು ಸುಬ್ಬಮ್ಮನವರಿಗೆ ಕಂಠಪಾಠ.

ತಾಯಿ-ತಂದೆ-ಅಜ್ಜ ಈ ಮೂವರ ಜೊತೆಗೆ ಶಿವರಾಮ ಹೆಗಡೆ ಅವರಿಗೆ ಬಾಲ್ಯದಲ್ಲಿ ಕಲೆಯಲ್ಲಿ ಆಸಕ್ತಿ ಮೂಡುವಲ್ಲಿ ಕಾರಣರಾದ ಇನ್ನೊಬ್ಬರು

ಸೋದರಮಾವ ಗಜನೀಮಠದ ಗಣಪತಿ ಭಟ್ಟರು. ಭಟ್ಟರು ಯಕ್ಷಗಾನದಲ್ಲಿ ಆಸಕ್ತರು ಮಾತ್ರವಲ್ಲ; ಪ್ರಭಾವಿ ವ್ಯಕ್ತಿ ಹಾಗೂ ತಾಳಮದ್ದಲೆಯ ಪ್ರಸಿದ್ಧ ಅರ್ಥಧಾರಿ. ಒಟ್ಟಿನಲ್ಲಿ ಶಿವರಾಮ ಹೆಗಡೆ ಅವರಿಗೆ ಬಾಲ್ಯದಲ್ಲೇ ದೊರೆತದ್ದು ಯಕ್ಷಗಾನದಲ್ಲಿ ಆಸಕ್ತಿ ಮೊಳೆಸುವಂತಹ ಪರಿಸರ.

ಯಕ್ಷಗಾನದಲ್ಲಿ ವಿಶೇಷ ಆಸಕ್ತಿ ತಳೆದ ಬಾಲಕ ಶಿವರಾಮ ಓದಿದ್ದು ನಾಲ್ಕನೆಯ ತರಗತಿಯವರೆಗೆ ಮಾತ್ರ. ಹನ್ನೆರಡನೆಯ ವಯಸ್ಸಿನಲ್ಲೇ ಗೆಜ್ಜೆಕಟ್ಟಿ ಯಕ್ಷಗಾನ ರಂಗಕ್ಕೆ ಪಾದಾರ್ಪಣೆ ಮಾಡಿದ ಹೆಗಡೆಯವರ ಮೇಲೆ ಅತ್ಯಂತ ಪ್ರಭಾವ ಬೀರಿದ ಇನ್ನಿಬ್ಬರು ಯಕ್ಷಗಾನ ಕಲಾವಿದರೆಂದರೆ ಅಣ್ಣಿಹಿತ್ತಲು ಸದಾನಂದ ಹೆಗಡೆ ಹಾಗು ಶೃಂಗೇರಿಯ ಶಾಸ್ತ್ರಿಗಳು. ಅಣ್ಣಿಹಿತ್ತಲು ಸದಾನಂದ ಹೆಗಡೆ, ಗಜನೀಮಠದ ಗಣಪತಿ ಭಟ್ಟರ ಸ್ನೇಹಿತರು. ತಾಳಮದ್ದಲೆಯ ಕಾರ್ಯಕ್ರಮಗಳಲ್ಲಿ ಬಾಲಕನ ಪ್ರತಿಭೆ ಗುರುತಿಸಿದ ಸದಾನಂದ ಹೆಗಡೆ ಅವರು, ಶಿವರಾಮನ ರಂಗ ಪ್ರವೇಶಕ್ಕೂ ಕಾರಣರಾದರು. ಮನೆಮಠವಿಲ್ಲದ ಅಲೆಮಾರಿ ಶೃಂಗೇರಿ ಶಾಸ್ತ್ರಿಗಳು, ಶಿವರಾಮನ ರಂಗದ ಪಾತ್ರಗಳಿಗೆ ಒಪ್ಪನೀಡುವ ಕಾರ್ಯದಲ್ಲಿ ಕೆಲವು ಕಾಲ ನೆರವಾಗಿ, ಇದ್ದಕ್ಕಿದ್ದಂತೆ ಮರೆಯಾಗಿ ಹೋದ ಮತ್ತೊಬ್ಬ ವ್ಯಕ್ತಿ.

ಯಕ್ಷಗಾನವನ್ನೇ ನಂಬಿದರೆ ಬದುಕು ನಡೆಯುವುದಿಲ್ಲ ಎಂಬ ಕಟುವಾಸ್ತವದ ಅರಿವು ಶಿವರಾಮ ಹೆಗಡೆ ಅವರಿಗೆ ಆಗಲು ಬಹಳ ದಿನಗಳು ಬೇಕಾಗಲಿಲ್ಲ. ಬದುಕುವ ಸಲುವಾಗಿ ಅಂಗಡಿ ಇಟ್ಟರು. ಬಸ್ಸಿನ ಡ್ರೈವರು ಆದರು. ದೇವಸ್ಥಾನದಲ್ಲಿ ಪಡಿಚಾಕರಿ ಕೆಲಸ ಮಾಡಿದರು. ವೃತ್ತಿ ಏನೇ ಮಾಡಿದರೂ ಯಕ್ಷಗಾನದ ವ್ಯಾಮೋಹ ಮಾತ್ರ ಬಿಡಲಿಲ್ಲ.

ಬಾಲಕಲಾವಿದ, ಕೋಡಂಗಿ, ಸ್ತ್ರೀವೇಷ, ಎರಡನೇ ವೇಷ, ನಾಯಕನ ವೇಷ-ಹೀಗೆ ಎಲ್ಲ ಬಗೆಯ ಪಾತ್ರಗಳನ್ನು ನಿರ್ವಹಿಸಿದ ಶಿವರಾಮ ಹೆಗಡೆಯವರು ವಹಿಸಿದ ಪಾತ್ರಗಳ ಸಂಖ್ಯೆ ನೂರಾ ಎಂಭತ್ತಕ್ಕೂ ಹೆಚ್ಚು ಎಂಬುದು ಒಂದು ಅಂದಾಜು. ನಟನೆಯ ಜೊತೆಗೆ ಭಾಗವತಿಕೆ, ಚಂಡೆ-ಮದ್ದಲೆ ವಾದನವನ್ನು ಅವರು ಬಲ್ಲವರಾಗಿದ್ದರು. ಯಕ್ಷಗಾನದ ಎಲ್ಲ ಪ್ರಕಾರಗಳಲ್ಲೂ ಪ್ರಾವೀಣ್ಯ ಪಡೆದಿದ್ದರು.

ಹೆಗಡೆ ಅವರು ನಿರ್ವಹಿಸಿದ ಕೌರವ, ಹರಿಶ್ಚಂದ್ರ, ಮಾಗಧ, ಮಾರ್ತಾಂಡ ತೇಜ, ಕಾರ್ತವೀರ್ಯ ಮೊದಲಾದ ಪಾತ್ರಗಳು



ಯಕ್ಷಗಾನ ಪ್ರಿಯರ ಮನದಲ್ಲಿ ದಂತಕಥೆಗಳಾಗಿ ನೆಲೆಯೂರಿ ನಿಂತಿವೆ. 'ಗದಾಪರ್ವ'ದ ಕೌರವನ ಪಾತ್ರ ಅವರಿಗೆ 'ನಟರತ್ನಾಕರ' ಎಂಬ ಬಿರುದುನ್ನು ತಂದುಕೊಟ್ಟಿದೆ. ಹಾಡಿನ ಬಾಳದಲ್ಲಿ ಹೆಗಡೆ ಅವರು ನಿರಂತರವಾಗಿ ಏಳುದಿನಗಳ ಕಾಲ ಗದಾಪರ್ವ ಆಡಿದ್ದು, ಹಾರೂರಿನಲ್ಲಿ ಅವರು ಗದಾಪರ್ವದ 'ನೋಡಿರೀ ಧರ್ಮಜನ' ಪದ್ಯಕ್ಕೆ ಮೂರು ಗಂಟೆ ಕಾಲ ಕುಣಿದದ್ದು-ಅವರ ಹೆಸರಿನಲ್ಲಿರುವ ದಾಖಲೆ. ನರ್ತನ ಶೈಲಿ, ಮುಖವರ್ಣಿಕೆ. ರಂಗವನ್ನು ಪೂರ್ತಿಯಾಗಿ ದುಡಿಸಿಕೊಳ್ಳುವ ಚಮತ್ಕೃತಿ- ಈ ನಿಟ್ಟಿನಲ್ಲಿ ಹೆಗಡೆಯವರ ಸಾಧನೆ ಅನನ್ಯ.

ಹದಿನೆಂಟನೇ ವರ್ಷದಲ್ಲೇ ಮೂಕಾಂಬೆ ಅವರನ್ನು ಬಾಳ ಸಂಗಾತಿಯನ್ನಾಗಿ ಪಡೆದ ಶಿವರಾಮ ಹೆಗಡೆ ಅವರಿಗೆ ಮೂರು ಜನ ಮಕ್ಕಳು. ಶಂಭು ಹೆಗಡೆ, ಗಣಪತಿ ಹೆಗಡೆ ಮತ್ತು ಪಾರ್ವತಿ. ಕೆರೆಮನೆ ಶಂಭು ಹೆಗ್ಡೆ ತಮ್ಮ ತಂದೆಯವರು ಸ್ಥಾಪಿಸಿದ ಮೇಳವನ್ನು ಇಂದಿಗೂ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಅಲ್ಲದೆ ಶಂಭು ಹೆಗಡೆಯವರು  ವೇಷಧಾರಿಯಾಗಿ, ಸಂಘಟಕರಾಗಿ, ಪ್ರಜ್ಞಾವಂತ ಚಿಂತಕರಾಗಿ ಹೆಸರು ಪಡೆದಿರುವವರು. ಅಲ್ಲದೆ 'ಕೋರಿಯಾಗ್ರಫಿ' ಯಂತಹ ಆಧುನಿಕ ರಂಗಶಿಕ್ಷಣ ಪಡೆದು ಅನುಭವವುಳ್ಳವರು.

ಎರಡನೆಯ ಮಗ ಗಜಾನನ ಹೆಗಡೆ ಅವರೂ ಯಕ್ಷಗಾನದ ವೇಷಧಾರಿಯಾಗಿ ಪ್ರಸಿದ್ಧರಾಗಿದ್ದರು. ಪುರುಷವೇಷ ನಿರ್ವಹಿಸಿದ್ದರೂ ಸ್ತ್ರೀ ವೇಷಧಾರಿಯಾಗಿ ಅವರು ಹೆಸರು ಗಳಿಸಿದ್ದರು. ಕಿರಿಯ ವಯಸ್ಸಿನಲ್ಲಿ ಅವರ ಅಕಾಲಿಕ ಮರಣ ಶಿವರಾಮ ಹೆಗಡೆಯವರ ಬಾಳಿಗೆ ಅಪಾರವಾದ ನೋವನ್ನುಂಟು ಮಾಡಿತು.

೧೯೩೪ರಲ್ಲಿ ಇಡಗುಂಜಿ ಮೇಳವನ್ನು ಆರಂಭಿಸಿದ ಶಿವರಾಮ ಹೆಗಡೆ ಅವರು ಸುಮಾರು ಇಪ್ಪತ್ತೈದು ವರ್ಷಗಳ ಕಾಲ ಆ ಮೇಳವನ್ನು ನಡೆಸಿಕೊಂಡು ಬಂದು ಬಡಗು ತಿಟ್ಟು ಯಕ್ಷಗಾನಕ್ಕೆ ಹೊಸ ಆಯಾಮವನ್ನೇ ನೀಡಿದರು. ೧೯೫೮-೫೯ರ ಸಮಯದಲ್ಲಿ ಕೆಲಕಾಲ ಅದನ್ನು ಸ್ಥಗಿತಗೊಳಿಸಿದರು. (ಈಗ ಇಡಗುಂಜಿ ಮೇಳವು ಶಿವರಾಮ ಹೆಗಡೆ ಅವರ ಮಗ ಶಂಭು ಹೆಗಡೆಯವರ ನೇತೃತ್ವದಲ್ಲಿ ಮುಂದುವರಿಯುತ್ತಿದೆ.) ಮೇಳ ಅಸ್ತಿತ್ವದಲ್ಲಿ ಇದ್ದಷ್ಟು ವರ್ಷವೂ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತ, ಯಕ್ಷಗಾನಕ್ಕೆ ಹೊಸ ಆಯಾಮವಿತ್ತ ಕೀರ್ತಿ ಶಿವರಾಮ ಹೆಗಡೆಯವರಿಗೆ ಸಲ್ಲುತ್ತದೆ.

ತಮ್ಮ ಮೇಳದ ಪ್ರದರ್ಶನ ಸ್ಥಗಿತಗೊಂಡ ಮೇಲೂ, ಹೆಗಡೆ ಅವರು




ಬೇರೆ ಬೇರೆ ಮೇಳಗಳಲ್ಲಿ ಭಾಗವಹಿಸಿ ವೇಷ ಹಾಕಿ ಜನಮನವನ್ನು ಸೂರೆಗೊಂಡರು. ಮೂರೂರಿನ 'ಮಹಾವಿಷ್ಣು ಪ್ರಸಾದಿಕ ಯಕ್ಷಗಾನ ಮಂಡಳಿ', ಕೊಲ್ಲೂರಿನ ಮೇಳ. ಉತ್ತರ ಕನ್ನಡದಲ್ಲೇ ಆರಂಭಗೊಂಡಿದ್ದ ಸಂಯುಕ್ತ ಮೇಳ-ಇವು ಶಿವರಾಮ ಹೆಗಡೆಯವರು ತಮ್ಮ ಬದುಕಿನ ಕೊನೆಯ ವರ್ಷಗಳಲ್ಲಿ ಪಾಲ್ಗೊಂಡ ಕೆಲವು ಮೇಳಗಳು.

೧೯೭೩ರಲ್ಲಿ ಮಗ ಶಂಭು ಹೆಗಡೆಯವರು ಇಡಗುಂಜಿ ಮೇಳವನ್ನು ಮತ್ತೆ ಸಂಘಟಿಸಿದಾಗಲೂ, ಶಿವರಾಮ ಹೆಗಡೆಯವರು ವಿಶೇಷ ಸಂದರ್ಭಗಳಲ್ಲಿ ಭೀಷ್ಮ. ಕೌರವ, ಋತುಪರ್ಣ, ದೇವೇಂದ್ರ, ಅತಿಕಾಯ-ಮೊದಲಾದ ಪಾತ್ರಗಳನ್ನು ಮಾಡಿದ್ದರು.

ತೆಂಕು-ಬಡಗು ಎರಡು ಸೃಷ್ಟಿಗಳ ಕಲಾವಿದರನ್ನೂ ಸಮಾನ ಮನೋಭಾವದಿಂದ ಕಂಡು ಗೌರವಿಸುತ್ತಿದ್ದ ಈ ಹಿರಿಯ ಕಲಾವಿದರಿಗೆ ಸಂದ ಗೌರವ -ಪ್ರಶಸ್ತಿ ಹಲವಾರು. ಕರ್ನಾಟಕ ರಾಜ್ಯ ಸಂಗೀತ ಅಕಾಡೆಮಿ ಪ್ರಶಸ್ತಿ (೧೯೬೫), ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ (೧೯೭೦) ಅವುಗಳಲ್ಲಿ ಪ್ರಮುಖವಾದವು. ಯಕ್ಷಗಾನಕ್ಕೆ ಹೊಸ ಆಯಾಮ ನೀಡಿ, ಜನಮನ್ನಣೆಗೆ ಪಾತ್ರರಾದ ಈ ಹಿರಿಯ ಕಲಾವಿದ ೧೯೯೨ರಲ್ಲಿ ಇನ್ನಿಲ್ಲವಾದರು.

ಶಶಾಂಕ





## ಹಾದಿ ಬದಿಯ ಜಾದೂಗಾರ

**ಹಾ**ಸನದ ಸಯ್ಯದ್ ಹುಸೇನ್ ವೃತ್ತಿಯಲ್ಲಿ ಮೋಡಿಗಾರ. ತನ್ನ ಯಕ್ಷಿಣಿಯ ಮೂಲಕ ಸಾವಿರಾರು ಜನರನ್ನು 'ಮೋಡಿ' ಮಾಡುತ್ತಲೇ ಬಂದಿರುವ ಸಯ್ಯದ್ ಹುಸೇನ್‌ಗೆ 'ಯಕ್ಷಿಣಿಗಾರ' ಎಂಬ ಪದದಂತೆಯೇ 'ಜನರ ಮೋಡಿಗಾರ' ಎಂಬುದೂ ಅನ್ವರ್ಥವಾಗುತ್ತದೆ. ಯಕ್ಷಿಣಿ ಮತ್ತು ಹಾವಾಡಿಸುವ ಕಲೆಯಲ್ಲಿ ತನ್ನ 82 ವಸಂತಗಳನ್ನು ಕಳೆದಿರುವ ಹುಸೇನ್ ಶಾಲೆಯ ಹೊಸ್ತಿಲು ತುಳಿದವರಲ್ಲ. ಆದರೆ, ಆರು ಭಾಷೆಗಳಲ್ಲಿ ಲೀಲಾಜಾಲವಾಗಿ ಮಾತನಾಡುವ ಅವರು ಯಕ್ಷಿಣಿಯ ಮೋಡಿಯಂತೆಯೇ ಎರಡು ತಂತಿಯನ್ನು ಹೊಂದಿರುವ ಪುಟ್ಟ ತಂಬೂರಿಯಲ್ಲಿ ಸಂಗೀತದ 'ಜಾದೂ'ವನ್ನೂ ಉಣಬಡಿಸಬಲ್ಲರು.

ಕಳೆದ 43 ವರುಷಗಳಿಂದ ಊರೂರು ಸುತ್ತಿ ಯಕ್ಷಿಣಿ ಮಾಡುವುದು, ಹಾವಾಡಿಸುವುದು ಮುಂತಾದ ಕಲೆಯನ್ನು ಬೀದಿ ಬೀದಿಗಳಲ್ಲಿ ಪ್ರದರ್ಶಿಸುತ್ತಿರುವ ಈ ಅಪರೂಪದ ಕಲಾವಿದನಿಗೆ ಈ ಬಾರಿ (1998) ಕರ್ನಾಟಕ ರಾಜ್ಯದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ 'ಜಾನಪದ ಜಾದು'ವಿಗಾಗಿ ಸನ್ಮಾನ ಮಾಡಿ, ಪ್ರಶಸ್ತಿ ನೀಡಿ ಗೌರವಿಸಿದೆ.

ಸಯ್ಯದ್ ಹುಸೇನರ ತಂದೆ ಸಯ್ಯದ್ ಮೌಲಾನಾ ಮತ್ತು ತಾಯಿ ಸಯ್ಯುದ್ಬಿ ಮೂಲತಃ ಹಾವಾಡಿಗರು. ಹಾಸನದ ಸುತ್ತಮುತ್ತಲ ಹಳ್ಳಿಗಳಲ್ಲಿ ಹಾವಾಡಿಸುವುದನ್ನೇ ಹೊಟ್ಟೆಪಾಡಿಗಾಗಿ ಕಂಡು ಕೊಂಡವರು. ಸಯ್ಯದ್ ಹುಸೇನ್‌ಗೆ ಹಾವಾಡಿಸುವುದು ತಂದೆಯಿಂದ ಬಂದ ಬಳುವಳಿ. 1955 ರಲ್ಲಿ ಖ್ಯಾತ ಯಕ್ಷಿಣಿಗಾರ ಪಿ.ಸಿ. ಸರ್ಕಾರ್ ಹಾಸನಕ್ಕೆ ಬಂದ ಸಂದರ್ಭ. ಅದು ಹ್ಯಾಗೋ ಅವರ ಜಾದೂ ಪ್ರದರ್ಶನ ನೋಡಿ

ಅದರೆಡೆ ಆಕರ್ಷಿತರಾದ ಸಯ್ಯದ್ ಹುಸೇನ್ ಸರ್ಕಾರ್‌ರನ್ನು ಕಾಡಿ-ಬೇಡಿ ಅವರೊಂದಿಗೆ ಕಲ್ಕತ್ತಾಕ್ಕೆ ಪಯಣಿಸಿದರು. ಅಲ್ಲಿ, ಸರ್ಕಾರ್ ಅವರ ಜಾದೂ ಶಾಲೆಯಲ್ಲಿ ವಿದ್ಯಾರ್ಥಿಯಾಗಿ ಸೇರಿದ ಸಯ್ಯದ್ ಹುಸೇನ್‌ರ ಪ್ರತಿಭೆ ಗುರುತಿಸಿದ ಸರ್ಕಾರ್, ತಮ್ಮೆಲ್ಲ ಪ್ರತಿಭೆಯನ್ನು ಕಲಾ ಪ್ರಕಾರಗಳನ್ನು ಹುಸೇನರಿಗೆ ಧಾರೆ ಎರೆದರು. ಈ ಜಾದೂ ಪಾಠಶಾಲೆಯಲ್ಲಿ ಉಡುಪಿಯ ಕೃಷ್ಣಭಟ್ ಎಂಬುವವರು ಹುಸೇನ್‌ಗೆ ಜಾದೂ ಶಿಕ್ಷಕರಾಗಿದ್ದರಂತೆ. ಸುಮಾರು ಆರು ವರುಷಗಳ ಕಾಲ ಪಿ.ಸಿ. ಸರ್ಕಾರ್ ತಂಡದೊಂದಿಗೆ ಸುತ್ತಿ ಅಲ್ಲಿ ಹಲವು ರೀತಿಯ ಕಲೆಗಳನ್ನು ಕಲಿತ ಹುಸೇನ್ ಅನಂತರ ಹಾಸನಕ್ಕೆ ಮರಳಿದರು. ಇಲ್ಲಿ ಮತ್ತೆ ಊರಿಂದೂರಿಗೆ ತಿರುಗಿ ಜಾದು ಪ್ರದರ್ಶನ ಮಾಡುವ, ಆ ಮೂಲಕ ಜನರನ್ನು ರಂಜಿಸುವ ಕೆಲಸ ಆರಂಭ. ಆಗಿನ ಕಾಲಕ್ಕೆ ಜನ ನೀಡುತ್ತಿದ್ದದ್ದು ಎರಡಾಣೆ-ಮೂರಾಣೆ ಮಾತ್ರ. ಇದರಲ್ಲೇ ಹೊಟ್ಟೆಪಾಡು ನೋಡಿಕೊಳ್ಳುತ್ತಿದ್ದ ಸಯ್ಯದ್, ತಮ್ಮ ಕಲೆಯಲ್ಲೇ ಖುಷಿ ಕಂಡವರು, ತೃಪ್ತಿ ಪಟ್ಟವರು.

ಈ ಯಕ್ಷಣಿಗಾರನಿಗೆ ಒಟ್ಟು ಒಂಬತ್ತು ಮಕ್ಕಳು. ಆರು ಗಂಡು ಮಕ್ಕಳಲ್ಲಿ ಎಲ್ಲರೂ ಜಾದೂಗಾರರು ಎಂಬುದೊಂದು ವಿಶೇಷ. ಮೈಸೂರಿನ ಲಲಿತ ಮಹಲ್, ಸದರನ್ ಸ್ಟಾರ್ ಸೇರಿದಂತೆ ವಿವಿಧ ಹೋಟೇಲುಗಳಲ್ಲಿ ಹುಸೇನರ ಮಕ್ಕಳು ಜಾದೂಗಾರರಾಗಿ ಹೋಟೇಲಿಗೆ ಬರುವ ವಿದೇಶಿ ಪ್ರವಾಸಿಗರೂ ಸೇರಿದಂತೆ ಇತರರನ್ನು ತಮ್ಮ ಯಕ್ಷಿಣಿಯಿಂದ ರಂಜಿಸುತ್ತಿದ್ದಾರೆ. ಯಾರಿಗೂ ಹೊಟ್ಟೆಬಟ್ಟೆಗೆ ಕಮ್ಮಿಯಿಲ್ಲ. ಪುತ್ರರಿಗೆಲ್ಲ ತನ್ಮೂಲಕ ಯಕ್ಷಿಣಿಯನ್ನು ಧಾರೆಯೆರೆದು ಅವರೆಲ್ಲ ತಮ್ಮ ಪ್ರತಿಭೆಯಿಂದ ಮೇಲೆ ಬರುತ್ತಿರುವುದನ್ನು ನೋಡಿ ಹುಸೇನ್ ಮತ್ತಷ್ಟು ತೃಪ್ತಿಪಟ್ಟುಕೊಂಡಿದ್ದಾರೆ. ಸಯ್ಯದ್ ಹುಸೇನ್ ಕೂಡ ಹಾಸನದ ಅಶೋಕಾ ಹೋಟೇಲಿನಲ್ಲಿ ಪ್ರತಿನಿತ್ಯ ಜಾದೂ ಪ್ರದರ್ಶನ ನೀಡುತ್ತಾರೆ. 'ಹೋಟೇಲಿಗೆ ಬರುವ ಮಂತ್ರಿಗಳು, ಅಧಿಕಾರಿಗಳು, ವಿದೇಶಿ ಪ್ರವಾಸಿಗರು ನನ್ನ ಯಕ್ಷಿಣಿಗೆ ತಲೆದೂಗಿದ್ದಾರೆ. ನನ್ನ ಖುಷಿಗೆ ಮತ್ತೇನು ಬೇಕು ?' ಎಂದು ಮುಗ್ಧವಾಗಿ ಪ್ರಶ್ನಿಸುತ್ತಾರೆ ಹುಸೇನ್. ಈ ರೀತಿ ಹುಸೇನರ ಯಕ್ಷಿಣಿ ನೋಡಿ ತಲೆದೂಗಿ, ಪ್ರಶಂಸಾ ಪತ್ರ ನೀಡಿದವರಲ್ಲಿ ಶ್ರೀಲಂಕಾದ ಖ್ಯಾತ ವಿಚಾರವಾದಿ ಅಬ್ರಾಹಂ ಕೋವೂರ್, ಪ್ರಸಿದ್ಧ ಸಂಗೀತಗಾರ ರವಿಶಂಕರ್, ಹಲವಾರು ಸಂಸತ್ ಸದಸ್ಯರು. ವಿವಿಧ ದೇಶಗಳ ರಾಯಭಾರಿಗಳೂ ಸೇರಿದ್ದಾರೆ. ಇವರೆಲ್ಲರ ಪ್ರಶಂಸಾ ಪತ್ರಗಳು ಹುಸೇನರ ಪುಟಾಣಿ ಚೀಲದಲ್ಲಿ ಸದಾ ಅಡಕ.



ಬಾಯಿಯಿಂದ ಹೊಗೆ ಉಗುಳುವುದು, ಬೆಂಕಿ ಬರಿಸುವುದು, ಅನಂತರ ನೂರಾರು ಮೊಳೆಗಳನ್ನು ಬಾಯಿಯಿಂದ ಹೊರ ತೆಗೆಯುವ ಚಮತ್ಕಾರ ಹುಸೇನರ ಯಕ್ಷಿಣಿಯಲ್ಲಿ ಅಗ್ರಸ್ಥಾನ ಪಡೆದಿದೆ. 'ರೋಪ್ ಟ್ರಿಕ್'ನ್ನು ತನ್ನದೇ ಆದ ಚಮತ್ಕಾರಿಕ ವಿಧಾನದಲ್ಲಿ 25ರ ಜಾದೂಗಾರರಿಗಿಂತ ಭಿನ್ನವಾಗಿ ಮಾಡುವ ಹುಸೇನ್ ಅವರಂತೆಯೇ 25ಕ್ಕೂ ಮಿಕ್ಕು ಹಲವಾರು ಚಮತ್ಕಾರಗಳನ್ನು ತನ್ನಲ್ಲಿರುವ ಕೆಲವೇ ಕೆಲವು ವಸ್ತುಗಳ ಸಹಾಯದಿಂದ ಆಕರ್ಷಕವಾಗಿ ಮಾಡುತ್ತಾರೆ. ಮಾತಿನ ಮೋಡಿ ಇವರ ಮತ್ತೊಂದು ಆಸ್ತಿ. ಸುಮಾರು ಒಂದು-ಒಂದೂವರೆ ಗಂಟೆಗಳ ಯಕ್ಷಿಣಿ ಪ್ರದರ್ಶನಕ್ಕೆ ಪುಟ್ಟ ತಂಬೂರಿಯ ಸಂಗೀತ 'ಸಾಥಿ'. ನಾಟಿ ವೈದ್ಯವೂ ಹುಸೇನ್‌ರಿಗೆ ಗೊತ್ತು. ವಯಸ್ಸು ಇಳಿಯುತ್ತಿದ್ದರೂ ಪ್ರಚಲಿತ ವಿದ್ಯಮಾನಗಳನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿ ಅದನ್ನೆಲ್ಲ ಯಕ್ಷಿಣಿಯ ನಿರೂಪಣೆಯ ಮಾತಿನ ಮೋಡಿಗೆ ಬಳಸುವುದರಲ್ಲೂ ಹುಸೇನ್ ನುರಿತವರು. ಹೋಟೇಲ್‌ನಲ್ಲಿ ಯಕ್ಷಿಣಿ ಪ್ರದರ್ಶಿಸಿ ದಿನಕ್ಕೆ 200 ರೂಪಾಯಿಗೆ ಕಮ್ಮಿ ಇಲ್ಲದಂತೆ ದುಡಿಯುವ ಹುಸೇನ್ ಇದೀಗ ಹೊಸ ಕೈಂಕರ್ಯಕ್ಕೆ ಕೈ ಹಾಕಿದ್ದಾರೆ. ಹಾಸನದ ಸ್ಲಂ ಒಂದರಲ್ಲಿ ಈಶ್ವರ ದೇವಾಲಯ ನಿರ್ಮಿಸುವುದು ಹುಸೇನರ ಸದ್ಯದ ಬಯಕೆ. ಇಚ್ಛೆ ಪೂರೈಸಿದರೆ 'ಈಶ್ವರ ಅಲ್ಲಾ ತೇರೇ ನಾಮ್' ಎಂಬ ನುಡಿಗೆ ವಾಸ್ತವಿಕ ಮೌಲ್ಯ ದೊರಕಬಹುದು. ಬೇರೆ ಹಲವು ಕಲಾವಿದರಂತೆ ಏನನ್ನೂ ಕೇಳದ ಹುಸೇನ್ 'ಈಶ್ವರ ದೇವಾಲಯ ನಿರ್ಮಿಸುವ ತನ್ನ ಬಯಕೆ ಈಡೇರಿಸಿದರೆ ಸಾಕು. ಸರಕಾರ ಸಹಾಯ ಮಾಡುವುದಿದ್ದರೆ ಮಾಡಲಿ' ಎನ್ನುತ್ತಾರೆ. ತಮಗಾಗಿ ಸರಕಾರದಿಂದ ಏನೂ ಕೋರಿಕೆ ಇವರ ಬಳಿಯಿಲ್ಲ. 'ನಂಗೆ ಹಣ ಮುಖ್ಯವಲ್ಲ. ಒಳ್ಳೆಯ ಹೆಸರು ಮುಖ್ಯ. ಅದನ್ನು ಪಡೆದಿದ್ದೇನೆ. ಕೊನೇ ಉಸಿರು ಇರುವವರೆಗೂ ಯಕ್ಷಿಣಿ ಪ್ರದರ್ಶನ ಮಾಡುತ್ತಲೇ ಇರಬೇಕು ಎಂಬುದು ನನ್ನಾಸೆ' ಎನ್ನುವ ಹುಸೇನ್ ಸರಳ ವ್ಯಕ್ತಿತ್ವದ ನಿಗರ್ವಿ. ಕಳೆದ ವರುಷ ಉಡುಪಿಯಲ್ಲಿ ನಡೆದ 'ಗಿಲಿ ಗಿಲಿ' ಜಾದೂ ಸ್ಪರ್ಧೆಯಲ್ಲಿ ಹುಸೇನ್ 'ಬೀದಿ ಬದಿಯ ಜಾದೂಗಾರರು' ವಿಭಾಗದಲ್ಲಿ ಪ್ರಥಮ ಬಹುಮಾನವನ್ನು ತಮ್ಮದಾಗಿಸಿಕೊಂಡರು. ಅವರ ಒಟ್ಟು 'ಯಕ್ಷಿಣಿ' ಬದುಕನ್ನು ಗಮನಿಸಿ ಈ ಜಾದೂಗಾರನಿಗೆ ಮಡಿಕೇರಿಯಲ್ಲಿ ಈ ಬಾರಿ ಜಾನಪದ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ.

- ಎಚ್ ಟಿ ಅನಿಲ್



## ಮಹಾಕಾವ್ಯದ ಪ್ರತಿಭೆ

ಚೈತ್ರಮಾಸದ ಉರಿಬಿಸಿಲು, ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶಾಲ ಬಯಲಿನ ಮೇಲೆ ಬೇರುಬಿಟ್ಟಿದ್ದ ದಣಿದ ಬಂಡೆಗಳ ಮೇಲೆ ಇಳಿದು, ಗಿರಿಸೀಮೆಯ ಉದಿಬಾಗಿಲಿನ ಮೂಲಕ ನುಸುಳಿ, ಬುಡಕಟ್ಟು ವಿಭಾಗದ ಹಟ್ಟಿಯಲ್ಲಿ ಮಂದಲಿಗೆ ಮೇಲೆ ಕುಳಿತು ಕಾಡುಗೊಲ್ಲರ ದಾಸಪ್ಪ ಗಣೆ ಊದುತ್ತಿದ್ದ ತನ್ನ ಸಾಥಿಯೊಂದಿಗೆ ಹಾಡುತ್ತಿದ್ದ ಜುಂಜಪ್ಪನ ಮಹಾಕಾವ್ಯದ ದನಿಗೆ ಕಿವಿಗೊಟ್ಟು ನಿಂತಿತು. ಇಡೀ ಗಿರಿಸೀಮೆಯ ಕಾವಲಿನಲ್ಲಿ ಅಂದು ಮಹಾಕಾವ್ಯದ ಹಬ್ಬದ ಸಂಭ್ರಮ ತುಳುಕಾಡುತ್ತಿತ್ತು.

ಸಿದ್ಧರು ಬೆಟ್ಟದೊಳಮ್ಮ
ನಿದ್ದುರಗಣ್ಣಿನ ಬಿದುರಮ್ಮ
ಸೋಬಾನ ಪಾಡಮ್ಮ
ಸ್ವಾಮಿ ಒಡ್ಡು ಪಾಲಗದೊಳಗೆ
ಧ್ವನಿಗೂಡಿ ಬಾರಮ್ಮ
ಸರಸ್ವತಿಯೇ ನೀನು । ಪಾದ ನೆನೆದೇವಮ್ಮೋ




ಎಂದು ದಾಸಪ್ಪ ಆರಂಭಿಸಿದ ಕಾಡುಗೊಲ್ಲರ ಸಾಂಸ್ಕೃತಿಕ ನಾಯಕ ಜುಂಜಪ್ಪ ಮಹಾಕಾವ್ಯದ ಗಾಯನ ನಾಲ್ಕುದಿನಗಳ ಹಗಲು-ರಾತ್ರಿಗಳನ್ನು ಒಂದು ಮಾಡಿ, ಕೇಳುಗರನ್ನು ಪುರಾಣ-ಇತಿಹಾಸಗಳ ಸ್ಮೃತಿಕೋಶದ ಹೊಸದೊಂದು ಮಾಯಾಲೋಕಕ್ಕೆ ಅರಿವಿಗೆ ಬಾರದಂತೆ ಕರೆದೊಯ್ಯಿತು.

ಕನ್ನಡ ಮೌಖಿಕ ಕಾವ್ಯಪರಂಪರೆ ಕಂಡ ಶ್ರೇಷ್ಠ ಪ್ರತಿಭೆಗಳಲ್ಲಿ ಮಾಡ್ಡಾನಹಟ್ಟಿ ದಾಸಪ್ಪ ಕೂಡ ಒಬ್ಬರು. ಅಕ್ಷರ ಸಂಸ್ಕೃತಿಯ ಸೋಂಕಿಲ್ಲದ ಇವರು ತುಮಕೂರು ಜಿಲ್ಲೆ ಮಧುಗಿರಿಗೆ ಕೂಗಳತೆಯಲ್ಲಿರುವ ಮಾಡ್ಡಾನಹಟ್ಟಿ ಗ್ರಾಮದವರು. ಇವರ ತಂದೆ ಬಸವ ಚಿಕ್ಕಣ್ಣ. ತಾಯಿ ಗೊಲ್ಲಗಾತಿ ಚಿಕ್ಕನಾಗಮ್ಮ. ಚಿಕ್ಕಣ್ಣ ಆ ಸುತ್ತಿಗೆ ಹೆಸರುವಾಸಿಯಾದ 'ಗಣೆ' ಕಲಾವಿದ. ಏಳು ಹಗಲು, ಏಳು ರಾತ್ರಿ ನಿರಂತರವಾಗಿ 'ಗಣೆ' ಊದಬಲ್ಲೆ ಎಂದು ಹೇಳುವ ಚಿಕ್ಕಣ್ಣ. ಕಾಡುಗೊಲ್ಲರ ಪುರಾಣ ಮತ್ತು ಜನಾಂಗದ ನಾಗರೀಕತೆಯ ವಿಕಾಸವನ್ನು ತನ್ನ ಸ್ಮೃತಿಕೋಶದಲ್ಲಿರಿಸಿಕೊಂಡಿರುವ ದೇಸಿ ಪರಂಪರೆಯ ಅನಧಿಕೃತ ಚರಿತ್ರೆಕಾರ.

ನಮ್ಮ ಕುಲನಾಯಕ ಜುಂಜಪ್ಪನ ಪದವನ್ನು ನಮ್ಮ ತಾತ, ನಮ್ಮಪ್ಪನಿಗೆ ಕಲಿಸಿದನಂತೆ, ನಮ್ಮಪ್ಪನಿಂದ ನಾನು ಕಲಿತೆ ಎಂದು ಹೇಳುವ ಮಹಾಕಾವ್ಯದ ಹಾಡುಗಾರ ದಾಸಪ್ಪ ಸಿತ್ತಯ್ಯ ಕಾಟುಮಲಿಂಗರ ಹುಟ್ಟಿನ ಸಂದುನಿಂದ ಮಾವುಗಳ ಕೊಂದ ಸಂದುವರೆಗಿನ ಹದಿಮೂರು ಸಂದುಗಳಲ್ಲಿ ಸುಮಾರು 28,364 ಪಾದಗಳಲ್ಲಿ ಹರಡಿಕೊಂಡಿರುವ ತನ್ನ ಜನಾಂಗದ ಹುಟ್ಟು, ನಾಗರೀಕತೆ, ದೈವ, ಹೋರಾಟ, ಪಶುಪಾಲನೆ ಮುಂತಾದ ಕಾಡುಗೊಲ್ಲರ ಜೀವನದ ಸಂಕೀರ್ಣವೂ ಹಾಗೂ ವೈವಿಧ್ಯವೂ ಆದ ಸಾಂಸ್ಕೃತಿಕ ಮಹತ್ವದ ಕಾವ್ಯವನ್ನು 'ಗಣೆ'ಯ ಹಿತವಾದ ನಾದದೊಂದಿಗೆ, ತನ್ನ ಎಡಗೈಯನ್ನು ಎಡಕಿವಿಯ ಮೇಲೆ ಆನಿಸಿಕೊಂಡು. ಜುಂಜಪ್ಪನ ಕಥಾಧಾರೆ ಹರಿದ ಹಾಗೆ, ಬಲಗೈಯನ್ನು ಗಾಳಿಯಲ್ಲಿ ತೇಲಿಸುತ್ತಾ ಹಾಡುವ ದನಿಗೆ, ಬಿಸಿಲು, ಬೀಸುವ ಗಾಳಿ, ಇರುಳಿನ ಸಾಥಿಗಳಾದ ಚಂದ್ರ, ತಾರೆಗಳೂ ನಿಂತು ಮೈಮರೆಯುತ್ತವೆ.

ಜುಂಜಪ್ಪ ಕಾಡುಗೊಲ್ಲರ ಸಾಂಸ್ಕೃತಿಕ ವೀರ. ಅಲೆಮಾರಿ ಜನಾಂಗವಾದ ಕಾಡುಗೊಲ್ಲರು ಮುಖ್ಯವಾಗಿ ಪಶುಪಾಲನೆಯನ್ನೇ ಕಸುಬಾಗಿವುಳ್ಳವರು. ತಮ್ಮ ಹುಲ್ಲುಗಾವಲು ಕೃಷಿಭೂಮಿಯಾಗಿ ಪರಿವರ್ತಿತವಾಗುತ್ತಿದ್ದರ ವಿರುದ್ಧ ನಿರಂತರ ಸೆಣಸಾಡಿದವರು.




ಆದ್ದರಿಂದಲೇ ಜುಂಜಪ್ಪನ ಕಾವ್ಯದಲ್ಲಿ ಅಲೆಮಾರಿ, ಕೃಷಿ ಸಂಸ್ಕೃತಿಗಳ ನಡುವಿನ ಸಂಘರ್ಷ ಹಲವು ಸ್ತರಗಳಲ್ಲಿ ಸಾಗುತ್ತದೆ.

ಅಂದಾಜಿನಂತೆ 45ರ ಪ್ರಾಯದ ಜಾನಪದ ಪರಂಪರೆಯ ಹೆಮ್ಮೆಯ ಸೊತ್ತಾದ ದಾಸಪ್ಪ, ಜುಂಜಪ್ಪನ ಕಾವ್ಯದ ಸಮಸ್ತ ವಿವರಗಳನ್ನೂ ತನ್ನ ತುದಿನಾಲಗೆಯ ಮೇಲೆ ಧರಿಸಿಕೊಂಡು ವೃತ್ತಿಗಾಯಕರಾಗಿದ್ದಾರೆ. 'ಗಣೆ', 'ಜುಂಜಪ್ಪ'ನ ಕಾವ್ಯದ ಅವಿಭಾಜ್ಯ ಅಂಗ. ಬಿಸಿಲನ್ನು ಕರಗಿಸಿ, ಗಾಳಿಯನ್ನು ಹಗುರಾಗಿ ತೇಲಿಸಬಲ್ಲ 'ಗಣೆ'ಯ ನಾದದಿಂದ 'ಜುಂಜಪ್ಪ'ನ ಮಹಾಕಾವ್ಯ ಪರಿಮಳಿಸುತ್ತಾ ಸಂಸ್ಕೃತಿಯ ಅನೇಕ ಪಾತಳಿಗಳಿಗೆ ನಮ್ಮ ಪ್ರಜ್ಞೆಯನ್ನು ಎಳೆದೊಯ್ಯುತ್ತದೆ.

ಮಾರ್ಗ ಪರಂಪರೆಯ ಮಹಾಕಾವ್ಯಗಳ ಮೀಮಾಂಸೆಯನ್ನೇ ಬುಡಮೇಲು ಮಾಡುವ, ನಮ್ಮ ನೆಲದ ಮರೆಯ ನಿಧಾನದಂತಿರುವ ಮೌಖಿಕ ಪರಂಪರೆಯ ಜಾನಪದ ಮಹಾಕಾವ್ಯಗಳು ಭಾರತೀಯ ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಒಳ ಸಂಸ್ಕೃತಿಗಳಲ್ಲಿರುವ ಅವೈದಿಕ ದರ್ಶನವನ್ನು ಅಗಾಧವಾಗಿ ತೆರೆಯುತ್ತವೆ. ಈ ಕಾವ್ಯಗಳ ನಿರಂತರ ಅಧ್ಯಯನದಿಂದ ಸಂಸ್ಕೃತಿ - ಸಾಹಿತ್ಯ ಕುರಿತಾದ ಹೊಸಬಗೆಯ ಚಿಂತನೆಗಳು ಆರಂಭಗೊಳ್ಳಬೇಕಿದೆ.

- ಜಿ ವಿ ಆನಂದ ಮೂರ್ತಿ





## ಗೋಡೆ ನಾರಾಯಣ ಹೆಗಡೆ

ಯಕ್ಷಗಾನ ರಂಗಸ್ಥಳದಲ್ಲಿ ಪ್ರವೇಶ ಮಾತ್ರದಿಂದ ಮಿಂಚನ್ನು ಮೂಡಿಸುವ ಸಾಮರ್ಥ್ಯವಿರುವ, ಸ್ವಂತಿಕೆಯ ಅಭಿನಯ ಮತ್ತು ನಟನಾ ಕೌಶಲ್ಯವಿರುವ ಗೋಡೆ ನಾರಾಯಣ ಹೆಗಡೆ ಅಸಂಖ್ಯ ಅಭಿಮಾನಿಗಳನ್ನು ಹೊಂದಿರುವ ಸ್ಟಾರ್ ಕಲಾವಿದ. ಯಕ್ಷಗಾನ ರಂಗಭೂಮಿಯಲ್ಲಿ ಅರ್ಧಶತಕವನ್ನು ಕಳೆದಿರುವ ಈ ನಟ ಈ ವರ್ಷದ (1999) ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತರು.

ರಾಷ್ಟ್ರ ಪ್ರಶಸ್ತಿ ವಿಜೇತ ಕಲಾವಿದ ಕೆರೆಮನೆ ಶಿವರಾಮ ಹೆಗಡೆಯವರ ಯಕ್ಷಗಾನ ಪರಂಪರೆಯ ಯಕ್ಷನಟರಾಗಿರುವ ಗೋಡೆ ತಮ್ಮ ಅಭಿನಯದಲ್ಲಿ ನಟನೆಯಲ್ಲಿ ಅದೇ ರೀತಿಯ ಸದಭಿರುಚಿಯನ್ನು ಬೆಳಸಿಕೊಂಡವರು. ಅಭಿನಯ, ನೃತ್ಯ, ನಟನೆ ಮತ್ತು ಮಾತುಗಾರಿಕೆಯಲ್ಲಿ ಸಂಪ್ರದಾಯ ಶುದ್ಧತೆ ಮತ್ತು ಅದರೊಡನೆ ಹೊಸ ಆವಿಷ್ಕಾರಕ್ಕೆ ಒಡ್ಡಿಕೊಳ್ಳುವ ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭು ಹೆಗಡೆ ಮತ್ತು ಚಿಟ್ಟಾಣಿ ರಾಮಚಂದ್ರ ಹೆಗಡೆಯವರಿಂದ ಮೂಲಪಾಠ ಕಲಿತ ಗೋಡೆಯವರು, ನಂತರ ತಮ್ಮದೇ ಕುಣಿತದ ವೈಶಿಷ್ಟ್ಯವನ್ನು ರೂಪಿಸಿಕೊಂಡರು. ಯಕ್ಷಗಾನದ ಹಲ ಕೆಲವು ಪಾತ್ರಗಳಿಗೆ ಗೋಡೆಯವರು ಮಾತ್ರ ಸೈ ಎಂಬ ಅಭಿಮಾನಿಗಳ ಪ್ರಶಂಸೆಗೆ ಪಾತ್ರರಾದರು. ಬ್ರಹ್ಮಕಪಾಲದ ಬ್ರಹ್ಮ, ರಾಮಯಣದ ಲಕ್ಷ್ಮಣ,

ಹರಿಶ್ಚಂದ್ರದ ವಿಶ್ವಾಮಿತ್ರ ಮುಂತಾದ ಅನೇಕ ಪಾತ್ರಗಳಿಗೆ ತಮ್ಮದೇ ಕಲ್ಪನೆಯ ರೂಪುಕೊಟ್ಟರು. ನಾಯಕ ಮತ್ತು ಪ್ರತಿನಾಯಕ ಎರಡೂ ಪಾತ್ರಗಳಲ್ಲಿ ಮಿಂಚಿದರು. ತಮ್ಮ ಆರಂಭದ ದಿನಗಳಲ್ಲಿ ಸ್ತ್ರೀವೇಷವನ್ನು ಹಾಕಿ ಅಭಿನಯಿಸಿದರು. ಹೀಗೆ ಅವರ ಅರ್ಧಶತಕದ ಕಲಾಜೀವನ ಅತ್ಯಂತ ವೈವಿಧ್ಯಪೂರ್ಣ ಮತ್ತು ವಿಸ್ತಾರವಾದದ್ದು.


ಗೋಡೆ ನಾರಾಯಣ ಹೆಗಡೆ ತಮ್ಮ 15ನೇ ವಯಸ್ಸಿನಲ್ಲಿ ಕೊಳಗಿಯ ಸೀತಾರಾಮ ಭಾಗವತರ ಶಿಷ್ಯರಾಗಿ ಯಕ್ಷರಂಗಕ್ಕೆ ಪ್ರವೇಶ ಮಾಡಿದರು. ಮೊಟ್ಟಮೊದಲ ಪಾತ್ರವೇ ವಾಲಿವಧೆಯ ತಾರೆ. ಸಿದ್ದಾಪುರ ತಾಲ್ಲೂಕಿನ ಶಿರಳಗಿಯ ಅಗಸೆ ಬಾಗಿಲಲ್ಲಿ ಹಣಜಿಬೈಲು ಮೇಳದಲ್ಲಿ ಅವರ ರಂಗ ಪ್ರವೇಶ.

ಸ್ವಲ್ಪ ಗಿಡ್ಡವೇ ಎನ್ನುಬಹುದಾದ ಸದೃಢ ಶರೀರದ, ಮುಖ ಮೈ ತುಂಬಿಕೊಂಡಿದ್ದ ಈ ಸ್ಫುರದ್ರೂಪಿ ನಟನಿಗೆ ಸ್ತ್ರೀವೇಷವೇ ಯೋಗ್ಯ ಎಂಬುದು ಅಂದಿನ ಯಕ್ಷಗಾನ ಕಲಾರಸಿಕರ ಅಭಿಮತ. ಅದಕ್ಕೆ ವ್ಯತ್ಯಯವಾಗದಂತೆ ಸುಮಾರು 10 ವರ್ಷಗಳ ಕಾಲ ಗೋಡೆಯವರು ಮಾಡಿದ್ದು ಸ್ತ್ರೀವೇಷಗಳನ್ನು, ಹಣಜಿಬೈಲು ಮೇಳದಿಂದ ಹೊರಬಿದ್ದ ತರುವಾಯ ಮಿತ್ರ ಅನಂತ ಹೆಗಡೆ ಕೊಳಗಿಯವರೊಂದಿಗೆ ಸೇರಿ ಸಿದ್ಧಿವಿನಾಯಕ ಯಕ್ಷಗಾನ ಕಲಾ ಸಂಘ, ಕೊಳಗಿ ಇದನ್ನು 1956 ರಲ್ಲಿ ಸ್ಥಾಪಿಸಿದರು.

ಅವರು ಮೊಟ್ಟಮೊದಲು ಪುರುಷ ವೇಷ ಹಾಕಿದ್ದು ಶಿರಳಗಿಯ ನರಸಿಂಹ ಜನಾರ್ದನ ದೇವಾಲಯದ ಎದುರು ಹಾಕಿದ್ದ ಯಕ್ಷ ರಂಗಸ್ಥಳದಲ್ಲಿ. ಅದು ಗದಾಯುದ್ಧದ ಕೌರವನ ಪಾತ್ರ. ಕೆರೆಮನೆ ಶಿವರಾಮ ಹೆಗಡಯವರ ಅಪಾರ ಜನಮೆಚ್ಚುಗೆ ಗಳಿಸಿದ್ದ ಗದಾಯುದ್ಧದ ಕೌರವನ ವೇಷವನ್ನು ಅಂದು ಗೋಡೆಯವರು ಪಾತ್ರ ಹಾಕಿದರು. ಜನರು ಈ ಹುಡುಗ ಅಡ್ಡಿಯಿಲ್ಲ ಎಂದರು. ಅಲ್ಲಿಂದ ಅವರು ಹಿಂದೆ ತಿರುಗಿ ನೋಡಿದ್ದೇ ಇಲ್ಲ.

ಯಕ್ಷಗಾನರಂಗದ ಅತಿರಥ- ಮಹಾರಥರಾದ ಕೆರೆಮನೆ ಮಹಾಬಲ ಹೆಗಡೆ, ಶಂಭು ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ ಮುಂತಾದವರೊಡನೆ ವ್ಯವಸಾಯ ಮೇಳಗಳಲ್ಲಿ ಪಾತ್ರ ಮಾಡಿದ ಗೋಡೆಯವರು ತಮ್ಮ ಮೇಲೆ ಅತ್ಯಂತ ಪ್ರಭಾವ ಬೀರಿದವರು ಕೆರೆಮನೆ ಶಿವರಾಮ ಹೆಗಡೆಯವರು ಎಂದು ನೆನೆದುಕೊಳ್ಳುತ್ತಾರೆ. ಮೂರೂರು ದೇವರು ಹೆಗಡೆಯವರ ಮೇಳದಲ್ಲಿ, ತಾವು ಸೈರಂಧ್ರಿ





ಪಾತ್ರ ವಹಿಸಿದ್ದನ್ನು ಅಂದು ತಮ್ಮೊಡನೆ ಪ್ರಖ್ಯಾತ ಕಲಾವಿದ ಶಿವರಾಮ ಹೆಗಡೆ ಕೆರೆಮನೆ ಇದ್ದುದನ್ನು ನೆನಪು ಮಾಡಿಕೊಳ್ಳುತ್ತಾರೆ.

ಇಂದು ಕೂಡ ತಾವು ಯಕ್ಷರಂಗ ಭೂಮಿಯಲ್ಲಿ ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭು ಹೆಗಡೆ ಮತ್ತು ಚಿಟ್ಟಾಣಿ ರಾಮಚಂದ್ರ ಹೆಗಡೆಯವರನ್ನು ಸಮಾನವಾಗಿ ಮೆಚ್ಚುವುದಾಗಿ ಹೇಳುವ ಗೋಡೆ ನಾರಾಯಣ ಹೆಗಡೆ ಈಗ ವ್ಯವಸಾಯ ಮೇಳಗಳಲ್ಲಿ ಪಾತ್ರ ಹಾಕುವದನ್ನು ಬಿಟ್ಟಿದ್ದಾರೆ. ಆದರೆ ಕುಣಿಯುವ ಉಮೇದು ಬಂದರೆ ಅಲ್ಲಲ್ಲಿ ಪಾತ್ರ ಹಾಕುತ್ತಾರೆ. ಈಗಲೂ ಅಂದಿನ ತಮ್ಮ ಯೌವನದ ದಿನಗಳಲ್ಲಿ ಮಿಂಚಿದಂತೆ ಮಿಂಚುತ್ತಾರೆ.

- ರವೀಂದ್ರ ಭಟ್ ಬಳಗುಳಿ

## ಜುಂಜಪ್ಪನ ಪದಗಳ ಗಿಡ್ಡಜ್ಜ

**ಜುಂ**ಜಪ್ಪ ಕಾಡುಗೊಲ್ಲರ ಒಬ್ಬ ಸಾಂಸ್ಕೃತಿಕ ವೀರ. ಆ ಜನಾಂಗದ ಆರಾಧ್ಯದೈವ. ಒಂದು ಕಾಲಕ್ಕೆ ಜುಂಜಪ್ಪ ಎಲ್ಲರಂತೆ ಬಾಳಿ ಬದುಕಿದವನು. ಪಶುಪಾಲಕ ವೃತ್ತಿ ಮಾಡಿಕೊಂಡೇ ಮಹಾಭಾರತದ ಕೃಷ್ಣನಂತೆ ಅಪೂರ್ವತೆಯಿಂದ ಮೆರೆದವನು. ಅಳಿಯಂದಿರ ಏಳಿಗೆಯನ್ನು ಕಂಡು ಸಹಿಸದ 'ಕಂಬೇರ ಕುಲ'ದ ತನ್ನ ಸೋದರ ಮಾವಂದಿರಿಗೆ ಸಿಂಹಸ್ವಪ್ನವಾಗಿ ಕಾಡಿದವನು. ಕುಲದ ಶ್ರೇಷ್ಠತೆ, ಪಾವಿತ್ರ್ಯಗಳನ್ನು ಎತ್ತಿ ಹಿಡಿಯಲು ಸದಾ ಹೋರಾಡಿದವನು. ತಾನು ಸತ್ತರೂ ಪವಾಡ ಸದೃಶ ರೀತಿಯಲ್ಲಿ ಮತ್ತೆ ಬದುಕಿಬಂದು ಸೋದರ ಮಾವಂದಿರ ಹಟ್ಟಿಯನ್ನೇ ನಾಶ ಮಾಡಿದವನು. ತನ್ನ ಶೀಲ-ಶೌಚ, ವೀರ-ಧೀರ, ಆದರ್ಶ ನಡವಳಿಕೆಗಳ ಮೂಲಕ ಆ ಜನಾಂಗದ ಕಣ್ಮಣಿಯಾಗಿ ಪುರಾಣವಾದವನು. ಹೀಗೆ ಜನ- ಮನದಲ್ಲಿ ನೆಲೆ ನಿಂತ ಈತನ ಬದುಕು ಹಾಡಾಯಿತು, ಹಾಡು ಮಹಾಕಾವ್ಯವಾಗಿ ಬೆಳೆಯಿತು.

ಮಧ್ಯಕರ್ನಾಟಕದ ಪೂರ್ವಭಾಗದ ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ದಟ್ಟವಾಗಿ- ಊರಿನಿಂದ ಹೊರಗೆ 'ಹಟ್ಟಿ'ಗಳಲ್ಲಿ ನೆಲಸಿರುವ ಕಾಡುಗೊಲ್ಲರಲ್ಲಿ ಜುಂಜಪ್ಪನ ಹೆಸರು, ಕತೆ ಮನೆ ಮಾತಾಗಿದೆ. ಹಟ್ಟಿಗೆ ಹತ್ತೆಂಟು ಜನ ಜುಂಜಪ್ಪನನ್ನು ಕುರಿತು ಒಂದೊಂದು 'ಸಂದು' ಹಾಡುವ ಮಂದಿ 'ಹಿಡಿ-ಹಿಡಿ' ಸಿಗುತ್ತಾರೆ. ಆದರೆ ಜುಂಜಪ್ಪನ ಕಾವ್ಯದ ಬೀಸು ಮಹಾಕಾವ್ಯದ ವಿಸ್ತಾರವುಳ್ಳದ್ದು. ಇದೊಂದು ಜನಪದ ಮಹಾಕಾವ್ಯ. ಜುಂಜಪ್ಪನ ಕತೆ ಒಂದೆರಡು ಗಂಟೆಗಳಲ್ಲಿ ಹಾಡಿ ಮುಗಿಸುವಂತಹುದಲ್ಲ, ಇದಕ್ಕೆ ನಿರಂತರವಾದ ಹಲವು ರಾತ್ರಿಗಳೇ ಬೇಕು!

ದಕ್ಷಿಣ ಕರ್ನಾಟಕದ ಜನ-ಮನದಲ್ಲಿ ಮಲೆಮಹದೇಶ್ವರನಿಗೆ ಇರುವ ಸ್ಥಾನ, ಉತ್ತರ ಕರ್ನಾಟಕದಲ್ಲಿ ಮೈಲಾರಲಿಂಗನಿಗೆ ಇರುವ ಸ್ಥಾನವನ್ನು -ಮಧ್ಯಕರ್ನಾಟಕದಲ್ಲಿ ಜುಂಜಪ್ಪ ಪಡೆದಿದ್ದಾನೆ. ಈ ಮೂವರನ್ನೂ ಕುರಿತು ಜನಪದ ಮಹಾಕಾವ್ಯಗಳೇ ಹುಟ್ಟಿಕೊಂಡಿವೆ.



ಮಲೆಮಹದೇಶ್ವರನೂ ಜುಂಜಪ್ಪನಂತೆ ಒಬ್ಬ ಸಾಂಸ್ಕೃತಿಕ ವೀರನಾದರೆ, ಮೈಲಾರಲಿಂಗ ಮಾತ್ರ ಒಬ್ಬ ಪುರಾಣವ್ಯಕ್ತಿ. ಮಲೆಮಹದೇಶ್ವರನಿಗೆ 'ಗುಡ್ಡ'ರು ಇದ್ದಂತೆ, ಮೈಲಾರಲಿಂಗನಿಗೆ 'ಗೊರವಯ್ಯ'ಗಳು ಇದ್ದಂತೆ- ಜುಂಜಪ್ಪನಿಗೆ 'ಜುಂಜಪ್ಪ ಕಾಣಿಕೆಯೋರು ಮತ್ತು ಜುಂಜಪ್ಪ ಬಸವ್ನೋರು' ಎಂಬ ಗಣೆ ಹಿಡಿದು ಹಾಡುವ 'ವೃತ್ತಿಗಾಯಕ'ರಲ್ಲದೆ ಅಸಂಖ್ಯ ಬಿಡಿ ಹಾಡುಗಾರರೂ, ಮಹಿಳಾ ಹಾಡುಗಾರರೂ ಉಂಟು. ಆದರೆ ಬಿಡಿ ಹಾಡುಗಾರರಲ್ಲಿ ಇಡೀ ಜುಂಜಪ್ಪನ ಮಹಾಕಾವ್ಯವನ್ನೇ ಕರತಲಾಮಲಕ ಮಾಡಿಕೊಂಡು ನಾಲಗೆ ಮೇಲೆ ಕಾಣಿಸುವ ಮಂದಿ ಸಾವಿರಕ್ಕೆ ಒಬ್ಬರು!

ಅಂಥ ಅಪರೂಪದ ಕಲಾವಿದರಲ್ಲಿ ಗಿಡ್ಡಜ್ಜನದು ಅಗ್ರಸ್ಥಾನ. ಈತನದು ಸಾವಿರ ಮಂದಿಯಲ್ಲಿ ಎದ್ದು ಕಾಣುವಂತಹ ಕಲೆಗಾರಿಕೆ. ಹುಟ್ಟಿದ್ದು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಪಟ್ಟಣಕ್ಕೇ ಅಂಟಿಕೊಂಡಂತೆ ಇರುವ ಕಾಟಪ್ಪನ ಹಟ್ಟಿಯಲ್ಲಿ. ನಗರದ ನಾಗರೀಕತೆಯ ಸೋಂಕು ಎಳ್ಳಷ್ಟೂ ಆತನನ್ನು ಬದಲಿಸಲಿಲ್ಲ.

ಆರಡಿ ಎತ್ತರದ ಆಳು, ದಷ್ಟಪುಷ್ಟವಾಗಿ ಮೈತುಂಬಿಕೊಂಡ ದೇಹ, ಮೊಣಕಾಲಿನಿಂದ ಕೆಳಕ್ಕೆ ಇಳಿದ ಹಳೆಯ ಕಾಲದ 'ಸೆಳ್ಳ' (ನಿಕ್ಕರ್), ಮೊಣಕೈ ದಾಟುವ ಅರ್ಧತೋಳಿನ ಷರಟು,ತಲೆಗೆ ಬಿಳಿಯ ಭಾರೀ ರುಮಾಲುಪೇಟ, ಹೆಗಲ ಮೇಲೆ ಕರಿಯ ಕಂಬಳಿ. ಇದು ಗಿಡ್ಡಜ್ಜ ಧರಿಸುತ್ತಿದ್ದ ಸಾಮಾನ್ಯ ವೇಷ.

ಕಂಬಳಿ ಹಾಸಿ, ಹಣೆಗೆ ವಿಭೂತಿ ಹಚ್ಚಿ, ಊದಿನ ಕಡ್ಡಿ ಬೆಳಗಿ, 'ಗಣೆ' (ಇದು 4-5 ಅಡಿ ಉದ್ದದ ನಾಲ್ಕು ರಂಧ್ರಗಳಿರುವ ದೊಡ್ಡ ಕೊಳಲನ್ನು ಹೋಲುವ ಬಿದಿರ ಕೋಲು, ಗಣೆಯನ್ನು ಸಾಕ್ಷಾತ್ ಜುಂಜಪ್ಪನೆಂದೇ ಭಾವಿಸಿ ಜನ ಭಯ-ಭಕ್ತಿಯಿಂದ ಪೂಜಿಸುತ್ತಾರೆ) ವಾದ್ಯಕ್ಕೆ ನಮಸ್ಕರಿಸಿ, ಕಿವಿಗಳನ್ನು ಹಸ್ತದಿಂದ ಮುಚ್ಚಿಕೊಂಡು, ಅರ್ಧ ಕಣ್ಣು ಮುಚ್ಚಿ, ತಾರಕ ಸ್ವರದಲ್ಲಿ 'ದೊಡ್ಡೊಬ್ಬೇಲಿರುವ-' (ಜುಂಜಪ್ಪ ಸಮಾಧಿಯಾಗಿರುವ ಕಳುವೋರಹಳ್ಳಿಯನ್ನು ಹೀಗೆ ಕರೆಯುತ್ತಾರೆ. ಇದು ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿದೆ.) ಕಲಿವೀರ ಜುಂಜಪ್ಪನನ್ನು ಕುರಿತು ಹಾಡತೊಡಗಿದನೆಂದರೆ ಕಲಿಯುಗ ಜನಪದ ಯುಗವಾಗಿಬಿಡುತ್ತಿತ್ತು. ಗಣೆಯ ನಾದದ ಓಂಕಾರ, ಭೃಂಗದ ಬೆನ್ನೇರಿ ಬಂದ ಕಲ್ಪನಾವಿಲಾಸದಲ್ಲಿ ತೇಲಿಸುತ್ತಿತ್ತು. ಯಾವುದೋ ಕಾಲಾತೀತ ನಾದದ ಜಾನಪದ ಪ್ರಪಂಚದಲ್ಲಿ ಸಾಗುತ್ತಿರುವ ರೋಮಾಂಚಕಾರೀ ಅನುಭವ ರಸದೂಟವನ್ನು ಬಡಿಸುತ್ತಿತ್ತು.

ಅತ್ತ ಪದ್ಯವೂ ಅಲ್ಲದ, ಇತ್ತ ಗದ್ಯವೂ ಅಲ್ಲದ 'ಪದ್ಯಗಂಧಿ'ಯಾದ ಗಣೆಯ ಹಾಡಿನ ಪದ್ಯಶೈಲಿ ಆತ್ಮೀಯ ಧಾಟಿಯಿಂದ ಕೂಡಿದುದು. ಗಿಡ್ಡಜ್ಜನಿಗೆ ವರದಾನವಾಗಿ ಬಂದಿರುವ ಕಂಚಿನ ಕಂಠದಲ್ಲಿ ಹಾಡುತ್ತಿದ್ದರೆ ಗಂಟೆಯ ಠೇಂಕಾರದ ಅನುಭವ ಆಗುತ್ತದೆ. ಗಣೆನಾದದ ಹಿನ್ನೆಲೆಗೆ ಉಸಿರುಕಟ್ಟಿ ಹಾಡುತ್ತಾ- ಹಾಡುತ್ತಾ ಶೃಂಗಸ್ಥಿತಿಯನ್ನು ತಲುಪುವ ಪರಿ ಅಪೂರ್ವವಾದುದು.

ಗಣೆನಾದದ ಒಂಟಿಧ್ವನಿಯ ಏಕತಾನತೆಯಿಂದ ಕೂಡಿದ ಈ ಕಾವ್ಯಕ್ಕೆ ಮಿಂಚಿನಂತಹ ಧ್ವನಿಯ ಏರಿಳಿವುಗಳು, ಕಣ್ಣಿಗೆ ಕಟ್ಟುವ ವರ್ಣನೆ, ನಾಟಕೀಯ ಉಚ್ಚಾರಗಳ ಮೂಲಕ ಜೀವತುಂಬಿ ವೈವಿಧ್ಯಗೊಳಿಸುತ್ತಾ; ತನ್ನನ್ನೇ ಮರೆತು ಹಾಡುತ್ತಾ ಇರವನ್ನೇ ಮರೆಸಿಬಿಡುವ ಅಪೂರ್ವ ತನ್ಮಯತೆ ಅನನ್ಯವಾದುದು. ಮುದ್ರಿಸಿದರೆ ಸಾವಿರಾರು ಪುಟಗಳಾಗುವ ಗಣೆಪದಗಳನ್ನು ನೆನಪಿನ ಶಕ್ತಿಯಿಂದಲೇ ಹಾಡುವ ರೀತಿ ಆಶ್ಚರ್ಯ ಹುಟ್ಟಿಸುತ್ತದೆ.

ಬಡತನದಲ್ಲಿ ಹುಟ್ಟಿದ ಗಿಡ್ಡಜ್ಜ ತನ್ನ ಕುಲಕ್ಕೆ ಸಹಜವಾದ ಪಶುಪಾಲಕ ವೃತ್ತಿಯಲ್ಲಿ ಸಾರ್ಥಕ್ಯ ಕಂಡವನಿಗೆ ಆಕಸ್ಮಾತ್ತಾಗಿ ಒಲಿದು ಬಂದ ಈ ಪದ ಜೀವನದ ಪರಮಾರ್ಥವನ್ನೂ ಕಾಣಿಸಿತು. ಬಾಲ್ಯದ ಗೆಳೆಯನಾಗಿ ಗಂಟುಬಿದ್ದ ಈ ಪದವನ್ನು ಮಡಿಲಿಗೆ ಕಟ್ಟಿಕೊಂಡೇ ಬೆಳೆದು ದೊಡ್ಡವನಾದ ಗಿಡ್ಡಜ್ಜನೊಂದಿಗೆ ಈ ಪದವೂ ಬೆಳೆದು ಹೆಮ್ಮರವಾಯಿತು. ಅಷ್ಟರಲ್ಲಿ ಮನೆಯ ಹಿರಿಯರು ದೇವರ ಪಾದ ಸೇರಿದ್ದರಿಂದ, ತಮ್ಮ ಮನೆಯ ಸಂಪ್ರದಾಯದಂತೆ ಮನೆಯ ಹಿರಿಯನಾದ ಗಿಡ್ಡಜ್ಜನಿಗೆ ತಮ್ಮ ಹಟ್ಟಿಯಲ್ಲಿನ ಎತ್ತಪ್ಪನ ದೇವಸ್ಥಾನದ 'ಗುಡಿಗೌಡಿಕೆ'ಯ ದೊಡ್ಡಸ್ಥಿಕೆ ಕೊರಳಿಗೆ ಬಿತ್ತು. ಒಣ ಮರ್ಯಾದೆಯ ಈ ಗೌಡಿಕೆ ಬಡತನದಿಂದ ಜೀವನ ದುರ್ಭರವಾದಾಗ ಜುಂಜಪ್ಪನ ಪದಗಳು ಎಲ್ಲವನ್ನೂ ಮರೆಸುವ 'ಸಂಜೀವಿನಿ'ಯಾದವು. ಹೀಗೆ ಹಟ್ಟಿಯ ಜನಗಳೊಂದಿಗೆ ಬೆಳದಿಂಗಳ ರಾತ್ರಿಯಲ್ಲಿ ಹಾಡುತ್ತಲೇ ವಯಸ್ಸು ಕಳೆದು ಅರವತ್ತು ಮುಟ್ಟಿದವನು ಗಿಡ್ಡಜ್ಜ. ಆದರೇನು ಹುಟ್ಟಿದ ಮಕ್ಕಳಿಂದ ಸುಖವೂ ಕಾಣಲಿಲ್ಲ. ಬಡತನವೂ ಹೋಗಲಿಲ್ಲ.

ಹೀಗೆ ಕಾಡಿನ ಕುಸುಮವಾಗಿ ಹಾಡಿಗೆ ಕಚ್ಚಿಕೊಂಡೇ ಬದುಕುತ್ತಿದ್ದ ಗಿಡ್ಡಜ್ಜ ನನ್ನ ಕಣ್ಣಿಗೆ ಬಿದ್ದುದು- ಚಿತ್ರದುರ್ಗ ಪಾಳೆಯಗಾರರ ನೇರವಂಶಸ್ಥರಾದ, ಅದೇ ಕಾಟಪ್ಪನ ಹಟ್ಟಿಯ ವಾಸಿಗಳಾಗಿರುವ ನನ್ನ ಗೆಳೆಯ ಪಿ.ಆರ್. ವೀರಭದ್ರನಾಯಕ ಅವರ ಮೂಲಕ. ಈತನ ಅದ್ಭುತ ಪ್ರತಿಭೆಯನ್ನು ಭದ್ರಾವತಿ ಆಕಾಶವಾಣಿಗೆ ಪರಿಚಯಿಸಿದ ನಂತರ ಇವರ ಜುಂಜಪ್ಪನ



ಹಾಡುಗಳು ಆಕಾಶವಾಣಿಯಲ್ಲಿ ಮೂಡಿಬರತೊಡಗಿದವು. ಉಡುಪಿಯ ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರದ ಸಂಶೋಧಕ ಎಸ್.ಎ. ಕೃಷ್ಣಯ್ಯ ಈ ಕಲಾವಿದನ ಹಾಡುಗಾರಿಕೆಗೆ ಬೆರಗಾಗಿ ಅವರನ್ನು ಉಡುಪಿಗೆ ಕರೆಸಿಕೊಂಡು ಜುಂಜಪ್ಪನ ಪದಗಳ 'ಆಡಿಯೊ ವೀಡಿಯೊ' ಮಾಡಿದರು. ಚಿತ್ರದುರ್ಗದ ಜಿಲ್ಲಾ ಪರಿಷತ್ ನಡೆಸಿದ ರಾಜ್ಯಮಟ್ಟದ ಜನಪದ ಕಲಾಮೇಳದಲ್ಲಿ ಈ ಕಲಾವಿದನನ್ನು ಕರೆಸಿ ಪ್ರಶಸ್ತಿ ಕೊಟ್ಟು ಗೌರವಿಸಲಾಯಿತು. ರಾಜ್ಯ ಜಾನಪದ ಅಕಾಡೆಮಿಯ ಪ್ರಶಸ್ತಿ ಕೂದಲೆಳೆಯ ಅಂತರದಲ್ಲಿ ತಪ್ಪಿಹೋಯಿತು!

ಇಷ್ಟರಲ್ಲಿ ಅರವತ್ತು ದಾಟಿ ಎಪ್ಪತ್ತರಕ್ಕೆ ದಾಪುಗಾಲು ಹಾಕುತ್ತಿದ್ದ ಗಿಡ್ಡಜ್ಜನಿಗೆ ರಕ್ತದ ಒತ್ತಡ ಗಂಟು ಬಿತ್ತು. ಕಲ್ಲಿನಂತಿದ್ದ ವ್ಯಕ್ತಿ ಕುಸಿಯತೊಡಗಿದ. ರಾಜ್ಯ ಜಾನಪದ ಅಕಾಡೆಮಿಯಿಂದ ಎರಡು ಬಾರಿ ವೈದ್ಯಕೀಯ ನೆರವು ದೊರೆಯಿತು. ಸಣ್ಣ-ಪುಟ್ಟದಕ್ಕೂ ಪರದಾಡುತ್ತಿದ್ದ ಗಿಡ್ಡಜ್ಜ ಶಾಶ್ವತ ಆರ್ಥಿಕ ವ್ಯವಸ್ಥೆಗಾಗಿ ಮಾಸಾಶನಕ್ಕೆ ಅರ್ಜಿ ಹಾಕಿದರು. ಸಂದರ್ಶನವೂ ನಡೆಯಿತು. ಮಾಸಾಶನಕ್ಕೆ ಇವರ ಆಯ್ಕೆಯೂ ಆಯಿತು. ಆದರೆ ಮಾಸಾಶನ ಮಾತ್ರ ಬರಲೇ ಇಲ್ಲ! ಅಶಕ್ತ ವಯೋವೃದ್ಧ ಕಲಾವಿದರಿಗೆ ಕೊಡುತ್ತಿದ್ದ ಮಾಸಾಶನ ಯೋಜನೆಯನ್ನು ಯಾವ ಕಾರಣವನ್ನೂ ಕೊಡದೆ ಸರ್ಕಾರ 1986 ರಿಂದ ನಿಲ್ಲಿಸಿಬಿಟ್ಟಿದೆ.

ತಮ್ಮ ಜೀವಮಾನವಿಡೀ ಕಲೆಗೆ ಬದುಕು ತೇಯ್ದು, ಜನರನ್ನು ರಂಜಿಸಿದ ಬಾಳಸಂಜೆಯಲ್ಲಿರುವ ಕಲಾವಿದರ ನೆರವಿಗೆ ಬರುವುದು ಸರ್ಕಾರದ ಕರ್ತವ್ಯ.

ಆದರೆ ಒಂದು ದಿನ ಇದ್ದಕ್ಕಿದ್ದಂತೆ ಗಿಡ್ಡಜ್ಜ ರಕ್ತದ ಒತ್ತಡಕ್ಕೆ ಬಲಿಯಾದರು. ಮಾಸಾಶನಕ್ಕಾಗಿ ಚಾತಕಪಕ್ಷಿಯಂತೆ ನಾಲ್ಕೈದು ವರ್ಷ ಕಾದ ಈ ಜನಪದ ಕೋಗಿಲೆ ಕಾಯುವುದರಲ್ಲೇ ಕಣ್ಣುಮುಚ್ಚಿತು. ಮಾಸಾಶನ ದೊರೆತಿದ್ದರೆ ಇನ್ನೂ ನಾಲ್ಕಾರು ವರ್ಷ ಬದುಕುತ್ತಿದ್ದನೇನೋ!

ಸಾವಿನ ಅಂಚಿನಲ್ಲಿರುವ ಸಾವಿರಾರು ಕಲಾವಿದರು ಸರ್ಕಾರದತ್ತ ಸಹಾಯಕ್ಕಾಗಿ ನೋಡುತ್ತಿದ್ದಾರೆ. ಗಿಡ್ಡಜ್ಜನಂತಹ ಅಪೂರ್ವ ಕಲಾವಿದನ ಸಾವಾದರೂ ಸರ್ಕಾರದ ಕಣ್ಣು ತೆರಸೀತೇ?

- ಮೀರಾಸಾಬಿಹಳ್ಳಿ ಶಿವಣ್ಣ

## ಸಂಪಾದಕರು



ಪ್ರೊ. ಕಾಳೇಗೌಡ ನಾಗವಾರ

ಕಾಳೇಗೌಡ ನಾಗವಾರ ಕನ್ನಡ ಸಾಂಸ್ಕೃತಿಕ ಲೋಕದ ಮಾನವೀಯ ಕತೆಗಾರ, ಅಪಾರ ಅಂತಃಕರಣದ ಕವಿ ಹಾಗೂ ದೇಶೀಸಂಸ್ಕೃತಿಗಳ ಬಗ್ಗೆ ತುಂಬು ಹೆಂಗರುಳುಳ್ಳ ಜಾನಪದ ತಜ್ಞ. ಕರ್ನಾಟಕದ ಉದ್ದಗಲಕ್ಕೂ ಅವಿರತವಾಗಿ ಸಂಚರಿಸುತ್ತಾ ಅಪಾರವಾದ ಲೋಕಾನುಭವವನ್ನು ಪಡೆದಿರುವ ಇವರು, ತಮ್ಮೊಳಗಿನ ಜನಪರ ಆಲೋಚನೆಯ ಸೂಕ್ಷ್ಮ ಸೃಜನಶೀಲ ಮನಸ್ಸನ್ನು ಎಚ್ಚರದಿಂದ ಕಾಯ್ದುಕೊಂಡು ಬಂದಿರುವ ಪ್ರತಿಭಾವಂತ ಲೇಖಕ. ಅಚ್ಚಗನ್ನಡದ ಗ್ರಾಮೀಣ ಸತ್ವದಿಂದ ರೂಪುಗೊಂಡ ನಾಗವಾರ ಅವರು ಎಪ್ಪತ್ತರ ದಶಕದಿಂದೀಚಿನ ಕನ್ನಡ ಸೃಜನಶೀಲಪ್ರಜ್ಞೆಯ ಅವಿಭಾಜ್ಯ ಅಂಗವಾಗಿದ್ದಾರೆ.

ಕ್ರಿಯಾಶೀಲ ಸಂಘಟಕರಾದ ಕಾಳೇಗೌಡ ನಾಗವಾರ (೧೯೪೭) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚನ್ನಪಟ್ಟಣ ತಾಲ್ಲೂಕಿನ ನಾಗವಾರ ಗ್ರಾಮದವರು. ಕನ್ನಡದ ಪ್ರಗತಿಪರ ಚಳವಳಿಗಳೊಂದಿಗೆ ಬೆಳೆದುಬಂದ ಡಾ. ನಾಗವಾರರ ಎಲ್ಲ ಬರವಣಿಗೆಗಳೂ ಸಮಾಜವಾದಿ ಆಶಯಗಳ ನೆಲೆಗಟ್ಟಿನ ಮೇಲೆ ನಿಂತಿವೆ. ಈಗ ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ.

ರಾಮಮನೋಹರ ಲೋಹಿಯಾ ಅವರ ಚಿಂತನೆಯಿಂದ ಪ್ರಭಾವಿತರಾಗಿರುವ ಇವರು ಕನ್ನಡದ ಸಾಂಸ್ಕೃತಿಕ ಇತಿಹಾಸದಲ್ಲಿ ಪ್ರಮುಖ ಘಟ್ಟವಾದ ಬಂಡಾಯ ಸಾಹಿತ್ಯ



ಚಳವಳಿಯ ಸ್ಥಾಪಕ ಸಂಚಾಲಕರಲ್ಲೊಬ್ಬರು. ಭಾರತೀಯ ಭಾಷೆಗಳಲ್ಲೇ ಮೊದಲ ಬಾರಿಗೆ ಲೋಹಿಯಾ ಅವರ ಸಮಾಜವಾದಿ ವಿಚಾರಗಳನ್ನು ಸಮಗ್ರವಾಗಿ ಕನ್ನಡಕ್ಕೆ ತರುವ ಕರ್ನಾಟಕ ಸರ್ಕಾರದ ಮಹತ್ವದ ಯೋಜನೆಯ ಸಾಂಸ್ಕೃತಿಕ ಹೊಣೆಗಾರಿಕೆಯನ್ನು ಪ್ರೊ. ಕಾಳೇಗೌಡ ನಾಗವಾರ ಅವರು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ.

ವಸಾಹತುಶಾಹಿ ಮತ್ತು ನಮ್ಮ ಜಾನಪದ ವಯ್ಯಾಕರಣಿಗಳ ಸಿದ್ಧಮಾರ್ಗವನ್ನು ನಿರಾಕರಿಸಿ, ಜಾನಪದ ಸಂಗ್ರಹ ಹಾಗೂ ವಿಮರ್ಶೆಗಳಿಗೆ ಸೃಜನಶೀಲತೆಯ ಪ್ರಾಣಶಕ್ತಿಯನ್ನು ತುಂಬಿದವರು. ನಿರ್ಲಕ್ಷಿತ ಒಳಸಂಸ್ಕೃತಿಗಳ ಜ್ಞಾನಪರಂಪರೆಯ ಮಹಾಪ್ರಭೆಯನ್ನು ಶೋಧಿಸುತ್ತಾ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಮರ್ಶಾ ನೆಲೆಯಿಂದ ಹೊರಡುವ ನಾಗವಾರ ಅವರ ಜಾನಪದ ವಿಮರ್ಶೆಯ ಮಾದರಿಯು ಕನ್ನಡಕ್ಕೆ ಇಂದು ಹೆಚ್ಚು ಪ್ರಸ್ತುತವಾಗಿದೆ. ವಿವಿಧ ಬಗೆಯ ಜಾನಪದ ಅಭಿವ್ಯಕ್ತಿಗಳು ಮತ್ತು ದೇಶೀಸಂಸ್ಕೃತಿಯ ಸೂಕ್ಷ್ಮಗಳ ಹರಿಕಾರರಾದ ಜನಪದ ಕಲಾವಿದರ ಬಗ್ಗೆ ಸದಾ ಕಟ್ಟೆಕ್ಕರೆಯಿಂದಿರುವ ಡಾ. ನಾಗವಾರರು ಪ್ರಸ್ತುತ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಕ್ರಿಯಾಶೀಲ ಅಧ್ಯಕ್ಷರಾಗಿದ್ದಾರೆ. ಜಿಲ್ಲಾ ಕಲಾವಿದರ ಸಮಾವೇಶ, ಕರಾವಳಿ ತೀರದ ಒಂದುನೂರು ಜನ ಶ್ರೇಷ್ಠ ಯಕ್ಷಗಾನ ಕಲಾವಿದರಿಗೆ ಗೌರವ–ಸನ್ಮಾನ, ದೇಶೀ ಚಿಂತನೆಯ ಕಾರ್ಯಕ್ರಮಗಳು, ಜನಪದ ಕಲಾವಿದರ ಆತ್ಮಕತೆಗಳನ್ನು ನಿರೂಪಿಸಿ ಪ್ರಕಟಿಸುವ ಹೊಣೆಗಾರಿಕೆಯೇ ಮುಂತಾದ ಸಾಂಸ್ಕೃತಿಕ ಮಹತ್ವದ ಅರ್ಥಪೂರ್ಣ ಕಾಯಕಗಳ ಮೂಲಕ ಜನಪದ ಕಲಾವಿದರಲ್ಲಿ ಇನ್ನಿಲ್ಲದಂತಹ ಆತ್ಮಸ್ಥೈರ್ಯವನ್ನು ಮೂಡಿಸುವ ತುಂಬು ಚಟುವಟಿಕೆಗಳನ್ನು ನಾಡಿನಾದ್ಯಂತ ಕೈಗೊಳ್ಳುವುದರ ಮುಖೇನ ಜಾನಪದ ಅಕಾಡೆಮಿಯ ಕಾರ್ಯಶೈಲಿಯನ್ನು ವಿಸ್ತರಿಸಿದ್ದಾರೆ.

ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೫೭೦ ೦೦೬

# ಸಂಪಾದಕರು



ಜಿ ವಿ ಆನಂದಮೂರ್ತಿ

ತುಮಕೂರು ಜಿಲ್ಲೆಯ ತಿಗಳರ ಗೊಲ್ಲಹಳ್ಳಿಯವರಾದ ಜಿ ವಿ ಆನಂದಮೂರ್ತಿ ಅವರ ವಿದ್ಯಾಭ್ಯಾಸ ತುಮಕೂರು ಮತ್ತು ಬೆಂಗಳೂರಿನಲ್ಲಿ. ಬೆಂಗಳೂರು ವಿಶ್ವವಿದ್ಯಾಲಯದಿಂದ ಚಿನ್ನದ ಪದಕದೊಂದಿಗೆ ಕನ್ನಡ ಎಂ.ಎ. ಪದವಿ. ರಾಜ್ಯಾದ್ಯಂತ ಕ್ಷೇತ್ರಕಾರ್ಯ ಮಾಡಿ ಮೌಖಿಕ ಪರಂಪರೆಯಲ್ಲಿದ್ದ ಅನೇಕ ಅನುಭಾವಿ ಕವಿಗಳ ತತ್ತ್ವಪದಗಳನ್ನು ಸಂಗ್ರಹಿಸಿದ್ದಾರೆ. ತುಮಕೂರಿನ ಎಲ್ಲ ಬಗೆಯ ಪ್ರಗತಿಪರ ಸಾಂಸ್ಕೃತಿಕ ಸಂಘಟನೆಗಳೊಂದಿಗೆ ಕ್ರಿಯಾಶೀಲರಾಗಿ ಬೆಳೆದು ಬಂದ ಆನಂದಮೂರ್ತಿ ಪ್ರಸ್ತುತ ತುಮಕೂರು ಜಿಲ್ಲೆಯ ಕೊರಟಗೆರೆ ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದಾರೆ.

ಸೃಜನಶೀಲ ಸಾಹಿತ್ಯ ಮತ್ತು ಜಾನಪದ ಕ್ಷೇತ್ರಕಾರ್ಯದೊಂದಿಗೆ ಪರಿಸರ ಕುರಿತಾದ ಅಧ್ಯಯನಕ್ಕೂ ತಮ್ಮ ಆಸಕ್ತಿಯನ್ನು ವಿಸ್ತರಿಸಿಕೊಂಡಿದ್ದಾರೆ. ಇವರು ರೂಪಾಂತರಿಸಿದ ದೇವನೂರ ಮಹಾದೇವರ ಡ್ಯಾವನೂರು, ದೇವರುಗಳ ರಾಜ್ಯದಲ್ಲಿ ಮತ್ತು ಕರ್ನಾಟಕ ಇತಿಹಾಸ ಮತ್ತು ಸಾಹಿತ್ಯಿಕ ಪರಂಪರೆಯನ್ನು ಕುರಿತಾದ ಸಂಪದ ರಂಗ ರೂಪವನ್ನು ರಂಗಭೂಮಿಯ ಖ್ಯಾತ ರಂಗನಿರ್ದೇಶಕರುಗಳು ಪ್ರಯೋಗಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮುತ್ತಿನಹಾರ ಪುಸ್ತಕ ಮಾಲೆಯ ಸಂಚಾಲಕರಾಗಿ ಕಾರ್ಯ ನಿರ್ವಹಿಸಿರುವ ಆನಂದಮೂರ್ತಿ ಪ್ರಸ್ತುತ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಪ್ರಕಟಣೆಯಾದ ಜಾನಪದ ಸಮಾಚಾರ ಪತ್ರಿಕೆಯ ಸಂಪಾದಕರಾಗಿದ್ದಾರೆ.



ಪ್ರಕಟಿತ ಕೃತಿಗಳು: ಬುದ್ಧ ತೋರಿದ ದಾರಿ, ತತ್ತ್ವಪದಕಾರರು (ಆಯ್ಕೆ), ಸಂಪಾದಿತ ಕೃತಿಗಳು: ಶಾಂತವೇರಿ ಗೋಪಾಲಗೌಡ ನೆನಪಿನ ಸಂಪುಟ, ಮೂರು ದಲಿತ ಕಮ್ಮಟಗಳು, ಮಹಾಯಾನ, ಸಂಪಾದಿತ ಜಾನಪದ ಕೃತಿಗಳು: ಗಂಧರ್ವಲೋಕದ ಗೆಣೆಕಾರರು, ಕರಾವಳಿ ಯಕ್ಷಗಾನ, ಹಲವು ತೋಟದ ಹೂಗಳು, ಸಾಲುಸಂಪಿಗೆ ನೆರಳು, ಆಡಿ ಬಾ ನನಕಂದ, ಒಗಟಿನ ಗಂಟು, ಜನಪದ ಕಥೆಗಳು, ಕಲಾವಿದರೊಂದಿಗೆ ಒಡನಾಟ ಹಾಗೂ ನವಸಾಕ್ಷರರಿಗಾಗಿ ಬರೆದಿರುವ ಹಲವಾರು ಪುಸ್ತಕಗಳನ್ನು ರಾಜ್ಯ ಸಂಪನ್ಮೂಲ ಕೇಂದ್ರ, ಮೈಸೂರು ಇವರು ಪ್ರಕಟಿಸಿದ್ದಾರೆ. ಗ್ರಾಮೀಣ ಭಾಗದ ಅಜ್ಞಾತ ಜನಪದ ಕಲಾವಿದರನ್ನು ಕುರಿತು ಇವರು ಬರೆದಿರುವ ಹತ್ತಾರು ಲೇಖನಗಳು ನಾಡಿನ ಪತ್ರಿಕೆ ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ೧೯೯೮ರಿಂದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಅಧ್ಯಾಪಕ, ವಾಟರ್‌ಟ್ಯಾಂಕ್ ಹಿಂಭಾಗ, ವಿದ್ಯಾನಗರ, ತುಮಕೂರು - ೫೭೨ ೧೦೩

## ಸಹಸ್ರಮಾನ ಜಾನಪದ ಸಂಪುಟಗಳು

೧. ಗಂಧರ್ವಲೋಕದ ಗೆಣೆಕಾರರು

೨. ಕರಾವಳಿ ಯಕ್ಷಗಾನ

೩. ಕರ್ನಾಟಕ ಬುಡಕಟ್ಟುಗಳು : ಸಂಪುಟ ಎರಡು

೪. ಗಿರಿಜನ ಕಾವ್ಯ
(ಪ್ರಾತಿನಿಧಿಕ ಗಿರಿಜನ ಕಾವ್ಯ)

೫. ಗಿರಿಜನ ಸಂಸ್ಕೃತಿ
(ಕರ್ನಾಟಕ ಗಿರಿಜನ ಸಂಸ್ಕೃತಿಯ ಬಗೆಗಿನ ಪ್ರಾತಿನಿಧಿಕ ಲೇಖನಗಳು)

೬. ಹಲವು ತೋಟದ ಹೂಗಳು
(ಪ್ರಾತಿನಿಧಿಕ ಜನಪದ ತತ್ತ್ವಪದಗಳು)

೭. ನಡುನೀರ ತಂಪು
(ಪ್ರಾತಿನಿಧಿಕ ಜನಪದ ಕಾವ್ಯ)

೮. ಜಾನಪದದ ತುಂಬುಹೊಳೆ
(ವಿವಿಧ ಜಾನಪದ ತಜ್ಞರ ಅಧ್ಯಯನ ಟಿಪ್ಪಣಿಗಳು)

೯. ಜೀಶಂಪ ಅವರ ಜಾನಪದ ಬರಹಗಳು

೧೦. ಕಲಾವಿದರ ಒಡನಾಟ

೧೧. ಎಳೆಯರಿಗಾಗಿ ಜಾನಪದ ಸಂಪುಟಗಳು

ನಾಡಿನ ಜನಪದ ಕಲೆ, ಸಾಹಿತ್ಯ, ಪರಂಪರೆಯಿಂದ ಬಂದಿರುವ ಜ್ಞಾನ ಹಾಗು ಒಟ್ಟು ನಮ್ಮ ಜನಸಮುದಾಯದ ಸಂಸ್ಕೃತಿಯ ಉದಾತ್ತ ಮೌಲ್ಯಗಳ ಪುನರುತ್ಥಾನದ ಹಾದಿಯಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ತನ್ನ ಪಯಣವನ್ನು ಆರಂಭಿಸಿದೆ.

ಸತ್ಯ ಮತ್ತು ಸೌಂದರ್ಯಕ್ಕಾಗಿ ನಿರಂತರವಾಗಿ ಹಾರೈಸಿದ ಮತ್ತು ಆ ಮೂಲಕ ತಮ್ಮ ಸಮಸ್ತ ಬದುಕನ್ನೇ ಆನಂದಮಯವಾಗಿಸಿಕೊಂಡ ನಮ್ಮ ಜನಪದ ಕಲಾವಿದರು ವಾಸ್ತವವಾಗಿ ಗಂಧರ್ವಲೋಕದ ಗೆಣೆಕಾರರಾಗಿದ್ದಾರೆ. ತಾಯಿಯ ಮಡಿಲಿನ ತುಂಬು ಅಕ್ಕರೆ ನೀಡಿರುವ ಇವರ ಸುತ್ತಣ ಜಾನಪದ ಜಗತ್ತು ಗಂಧವತಿ ಪೃಥ್ವಿಯ ಸಕಲ ಸಲ್ಲಕ್ಷಣಗಳನ್ನು ಒಳಗೊಂಡಿರುವ ಪಂಚಭೂತಗಳ ವಂಚನೆರಹಿತ ಗುಣಧರ್ಮದ ಆಗರವಾಗಿದೆ. ನೂರಾರು ವರ್ಷಗಳಿಂದಲೂ ಬಾಯಿಂದ ಬಾಯಿಗೆ ಹರಿದು ಬರುತ್ತಿರುವ ಈ ಕಲಾವಿದರ ಸಾಹಿತ್ಯ ಸಂಪತ್ತು ನಮ್ಮ ಸುತ್ತಲೂ ತುಂಬುಹೊಳೆಯಂತೆ ಹರಿಯುತ್ತಾ ಬಂದಿದೆ. ನಮ್ಮ ಅರಿವಿನ ಎಲ್ಲೆಗಳನ್ನು ಇನ್ನಿಲ್ಲದಂತೆ ವಿಸ್ತರಿಸಬಲ್ಲ ಸೂಕ್ಷ್ಮತಮ ವೈವಿಧ್ಯತೆ ಮತ್ತು ಅಪಾರ ಚೈತನ್ಯವನ್ನು ಹೊಂದಿರುವ ಈ ಹೃದಯವಂತ ಲೋಕದ ಬಗೆಗೆ ನಮ್ಮ ಹೊಸ ಕಾಲದ ಲೇಖಕರು, ವಿದ್ವಾಂಸರು ಮತ್ತು ಜಾನಪದದ ಅಕ್ಕರಿಗರ ಚಿಂತನೆ ಹಾಗೂ ಒಳನೋಟಗಳ ಅಪರೂಪದ ಟಿಪ್ಪಣಿಗಳು ಈ ಜಾನಪದದ ತುಂಬುಹೊಳೆ ಗ್ರಂಥದಲ್ಲಿ ಇಡಿಕಿರಿದಿವೆ.

ಪ್ರೊ. ಕಾಳೇಗೌಡ ನಾಗವಾರ
ಅಧ್ಯಕ್ಷರು

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು ೫೬೦ ೦೦೨